



ಜಯಪ್ರಕಾಶ್ ನಾರಾಯಣ್ ಅವರ

ಸೆರೆಮನೆ ದಿನಚರಿ



ಕನ್ನಡಕ್ಕೆ:

ಡಿ.ಎಸ್. ನಾಗಭೂಷಣ

ಜಯಪ್ರಕಾಶ್ ನಾರಾಯಣ್‌ರ

ಸೆರೆಮನೆಯ ದಿನಚರಿ

ಅನುವಾದ

ಡಿ.ಎಸ್. ನಾಗಭೂಷಣ

ರೂಪ
ಪ್ರಕಾಶನ
ಮೈಸೂರು

SEREMANEYA DINACHARI :
Prison diary by **Jayaprakash Narayan,**
Translated By **D.S. Nagabhushana,** H.I.G.-5, 'Nudi',
KHB Colony, Kallahalli Extention, Vinoba Nagar
Shimoga - 577 204. Mobile: 94492 42284.
Published by **Roopa Prakashana**
No.2406, 2407/K-1, 1st Cross, Hosabandikeri,
Mysore - 570 004. Mob : 93422 74331
e-mail: roopaprakashana@gmail.com
Inner Pages: Maplitho. Size: 1/8 th Demmy
First impression : 1977, Second impression : 2009
Pages : 192 **Rs.100**
Translation **© : D.S. Nagabhushana**



ಸೆರೆಮನೆಯ ದಿನಚರಿ, ಮೊದಲನೆಯ ಮುದ್ರಣ : 1977, ಪರಿಷ್ಕೃತ ಆವೃತ್ತಿ : 2009
ಪುಟಗಳು : 192, ಬೆಲೆ: ರೂ. **100**
ಹಕ್ಕುಗಳು : ಲೇಖಕರವು, ಮುಖಪುಟ, ಪುಸ್ತಕ ವಿನ್ಯಾಸ : ಮಂಜುನಾಥ್‌ಲತಾ
ಪ್ರಕಾಶನ : ರೂಪ ಪ್ರಕಾಶನ, ನಂ.2406, 2407/ಕೆ-1, 1ನೇ ಕ್ರಾಸ್, ಹೊಸಬಂಡಿಕೇರಿ,
ಮೈಸೂರು - 570 004, ಮೊಬೈಲ್: 93422 74331
ಮುದ್ರಣ : ಧರಣಿ ಪ್ರಿಂಟರ್ಸ್, ಬೆಂಗಳೂರು

ಅನುವಾದಕನ ಮಾತು

32 ವರ್ಷಗಳ ಹಿಂದೆ ಮೊದಲ ಬಾರಿಗೆ ಪ್ರಕಟವಾದ ಈ ಕೃತಿ ಈಗ ಇನ್ನೊಂದು ಮುದ್ರಣ ಕಾಣುತ್ತಿದೆ. 1977-78 ರಲ್ಲಿಯೇ ಇದು ಆ ಜನತಾ ಆಂದೋಲನದ ಕಾವಿನಲ್ಲಿ 2ನೇ ಮುದ್ರಣವನ್ನು ಕಂಡಿತ್ತು. ಹಾಗೆ ನೋಡಿದರೆ ಇದು ಇನ್ನೊಂದು ಮುದ್ರಣವಷ್ಟೇ ಅಲ್ಲ, ಪರಿಷ್ಕೃತ ಆವೃತ್ತಿ ಕೂಡಾ ಹೌದು. ಕಳೆದ ಮೂರು ದಶಕಗಳಲ್ಲಿ ಒಂದೆರಡು ತಲೆಮಾರುಗಳೇ ಅಸ್ತಂಗತವಾಗಿ, ಇನ್ನೊಂದೆರಡು ಹೊಸ ತಲೆಮಾರುಗಳು-ಪುಸ್ತಕಗಳು ಓದುಗರ ನೆಲೆಯಲ್ಲಿ- ಉದಯವಾಗಿವೆ. ಈ ಹೊಸ ತಲೆಮಾರುಗಳ ಓದುಗರ ನೆರವಿಗಾಗಿ ಪುಸ್ತಕವನ್ನು ಪರಿಷ್ಕರಿಸಲಾಗಿದೆ: ಜೆ.ಪಿ.ಯವರ ಸಚಿತ್ರ ಪರಿಚಯ ಲೇಖನ, ಸೆರೆಮನೆಯಲ್ಲಿದ್ದಾಗ ನೊಂದಾಯಿಸಿದ ಒಂದು ರಾಜಕೀಯ ಇಷ್ಟಪತ್ರದ ಪ್ರತಿ ಹಾಗೂ ಚಿತ್ರ ಸಂಪುಟವನ್ನು ಹೊಸದಾಗಿ ಸೇರಿಸಲಾಗಿದೆ. ಹಾಗೇ ಅನುವಾದವನ್ನು ಅಲ್ಲಲ್ಲಿ ತಿದ್ದಿ ಪರಿಷ್ಕರಿಸಲಾಗಿದೆ. ಇದೆಲ್ಲವನ್ನು ನಾನು ಮಾಡುವಂತಾದ್ದು, ಈ ಪರಿಷ್ಕೃತ ಆವೃತ್ತಿಯನ್ನು ಪ್ರಕಟಿಸುತ್ತಿರುವ ರೂಪ ಪ್ರಕಾಶನದ ಕಿರಿಯ ಗೆಳೆಯ ಮಹೇಶ್‌ರಿಂದಾಗಿ. ಅವರು ಈ ಪುಸ್ತಕಕ್ಕೆ ಹೊಸ ಓದುಗರು ಸೃಷ್ಟಿಯಾಗಿದ್ದಾರೆಂದು ಭಾವಿಸಿ, ಈ ಪರಿಷ್ಕರಣೆಗೆ ಒತ್ತಾಯಿಸಿ ಪ್ರಕಟಿಸುತ್ತಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.

ನಾನು ಈ ಕೃತಿಯನ್ನು ಅನುವಾದ ಮಾಡಿದಾಗ ಏರು ಯೌವನದಲ್ಲಿದ್ದೆ. ಅದಕ್ಕೆ ತಕ್ಕ ಹಾಗೆ ರಾಷ್ಟ್ರಜೀವನದಲ್ಲಿ ಅದು ಹೊಸ ಕನಸುಗಳ ಕಾಲ ಕೂಡ. ಬಹುಶಃ ರಾಷ್ಟ್ರ ಕಂಡ ಕೊನೆಯ ರಾಷ್ಟ್ರೀಯ ಚಳುವಳಿಯ ಕಾಲ ಕೂಡಾ ಅದು ಹೌದು. ನಾನಾಗ ಈ ರಾಷ್ಟ್ರೀಯ ಚಳುವಳಿಯ ಕೆಂದ್ರಸ್ಥಾನವೆನಿಸಿದ್ದ ದೆಹಲಿಯಲ್ಲಿದ್ದೆ. ರಾಷ್ಟ್ರ ರಾಜಧಾನಿಯ ಆ ಕಾವಿಗೆ ಸಿಕ್ಕಿಯೇ ನಾನು ಈ ಅನುವಾದವನ್ನು ಕೈಗೊಂಡದ್ದು. ಆಗ ದೆಹಲಿ ಆಕಾಶವಾಣಿಯ ಕನ್ನಡ ವಾರ್ತೆಗಳಲ್ಲಿ ತುರ್ತುಪರಿಸ್ಥಿತಿ ಘೋಷಣೆಯ ಸುದ್ದಿಯನ್ನು ಓದಿದವನು ನಾನೇ! (ಹಾಗೇ ಎರಡು ವರ್ಷಗಳ ನಂತರ ಅದನ್ನು ಭಾಗಶಃ ಹಿಂತೆಗೆದುಕೊಂಡಿದ್ದನ್ನು, ಆನಂತರ ಮಹಾಚುನಾವಣೆಗಳಲ್ಲಿ ಇಂದಿರಾಗಾಂಧಿಯವರ ಸೋಲಿನ ವಾರ್ತೆಗಳನ್ನು ಕೂಡಾ- ಕಾಕತಾಳಿಯವೆಂಬಂತೆ-

ಓದಿದವನು ನಾನೇ!) ಆದರೆ ತುರ್ತು ಪರಿಸ್ಥಿತಿ ಘೋಷಣೆಯ ಸುದ್ದಿಯನ್ನು ಓದಿದಾಗ(ಬಹುಶಃ ಮಧ್ಯಾಹ್ನದ ವಾರ್ತೆಗಳಲ್ಲಿ) ನನಗೆ ತುರ್ತುಪರಿಸ್ಥಿತಿ ಎಂಬುದು ಅಷ್ಟೊಂದು ಭೀಕರ ಮತ್ತು ಮಾರಕ ಎಂದು ತಿಳಿದಿರಲಿಲ್ಲ. ಆದರೆ ಮುಂದಿನ ದಿನಗಳಲ್ಲಿ ಸ್ವತಃ ಆಕಾಶವಾಣಿ ಕೇಂದ್ರದಲ್ಲಿ ಮತ್ತು ದೆಹಲಿಯ ಬೀದಿಗಳಲ್ಲಿ ನಾನು ಕಂಡ ಬೆಳವಣಿಗೆಗಳು ಮತ್ತು ದೃಶ್ಯಗಳು ನನ್ನನ್ನು ತುರ್ತುಪರಿಸ್ಥಿತಿಯ ಒಬ್ಬ ಕಟುವಿರೋಧಿ ಕಾರ್ಯಕರ್ತನನ್ನಾಗಿ ಮಾಡಿತು. ಇದಕ್ಕೆ ದೀರ್ಘ ರಾಜಕೀಯ ಕೌಟುಂಬಿಕ ಹಿನ್ನೆಲೆಯಿದ್ದ ನನ್ನ ಗುಜರಾತಿ ಸಹೋದ್ಯೋಗಿ ಗೆಳೆಯ ದೀಪಕ್ ಧೋಲಕಿಯಾ ಕೂಡಾ ಕಾರಣವಾಗಿರಬಹುದು.

ಈ ಪುಸ್ತಕದ ಮೊದಲ ಮುದ್ರಣಕ್ಕೆ ಬರೆದ ನಾಲ್ಕು ಮಾತುಗಳಲ್ಲಿ ಹೇಳಿದ ಹಾಗೆ, ಈ ಪುಸ್ತಕ ನನ್ನ ತುರ್ತು ಪರಿಸ್ಥಿತಿ ವಿರೋಧಿ ಚಟುವಟಿಕೆಯ ಮಾರ್ಗದಲ್ಲಿ ನನಗೆ ಸಿಕ್ಕಿತು. ಅದರ ಅನುವಾದವನ್ನು ಆಗ ಮೈಸೂರಿನಲ್ಲಿ ತುರ್ತುಪರಿಸ್ಥಿತಿ ವಿರೋಧಿ ಆಂದೋಲನದಲ್ಲಿ ನಿರತರಾಗಿದ್ದ ಸಮಾಜವಾದಿ ಗೆಳೆಯರು, ದಿವಂಗತ ಕೆ. ದೇವೇಗೌಡರ 'ನೆಲಮನೆ ಪ್ರಕಾಶನ'ದ ಮೂಲಕ ಪ್ರಕಟಿಸಿದರು. ಇದಕ್ಕೆ ದೇವನೂರ ಮಹಾದೇವ ಅವರೇ ರಕ್ಷಾಪುಟವನ್ನು ವಿನ್ಯಾಸ ಮಾಡಿದ ನೆನಪು. ಅದು ನನ್ನ ಮೊದಲ(ಸ್ವತಂತ್ರವಲ್ಲದಿದ್ದರೂ) ಕೃತಿಯಾಗಿತ್ತು. ಈಗ ಹತ್ತಾರು ಸ್ವತಂತ್ರ ಕೃತಿಗಳನ್ನು ಪ್ರಕಟಿಸಿರುವೆನಾದರೂ, ಆ ಪುಸ್ತಕ ಬಂದಾಗ ಆದ ಸಂತೋಷ, ಸಂಭ್ರಮ, ಉತ್ಸಾಹ ಈಗಿಲ್ಲ. ಆ ಸಂತೋಷ-ಸಂಭ್ರಮ-ಉತ್ಸಾಹಗಳಿಗೆ ಕಾರಣವಾಗಿದ್ದ ಸಮಾಜವಾದಿ ಕೂಟವೂ ಇಲ್ಲ; ಅಂತಹ ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯ ಪರಿಸ್ಥಿತಿಯ ಕಾವೂ ಇಲ್ಲ. ಒಂದು ದೊಡ್ಡ ಪ್ರವಾಹ ಬಂದು ಇಳಿದು ಹೋದಂತೆ ಈ ನೆನಪು ನನಗೆ. ಆನಂತರ ಅನೇಕ ಚಳುವಳಿಗಳೇನೋ ನಡೆದವು. ಅಥವಾ ಬಂದು ಹೋದವು ಎಂದು ಹೇಳಿದರೆ ಸರಿಯೇನೋ! ದಲಿತ, ರೈತ, ಕನ್ನಡ, ಪರಿಸರ, ಮಂಡಲ್ ಇತ್ಯಾದಿ. ಆದರೆ ಅವಾವುವೂ ಹಾಗೆ ನಮ್ಮ ಇಡೀ ಅಸ್ತಿತ್ವವನ್ನು ಬುಡಸಮೇತ ಆವರಿಸಿಕೊಂಡ, ಅಲ್ಲಾಡಿಸಿದ ಚಳವಳಿಗಳಾಗಲಿಲ್ಲ. ಅದಕ್ಕೆ ಕಾರಣ ಅದರ ನೇತೃತ್ವ ವಹಿಸಿದ್ದವರು, ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಕೊನೆಯ ಮಹಾಯೋಧರೆನಿಸಿದ್ದ ಜಯಪ್ರಕಾಶ್ ನಾರಾಯಣರು. ಗಾಂಧೀಜಿಯೊಂದಿಗೆ ಜಗಳಾಡಿದ್ದುಕೊಂಡೇ ಅವರಿಗೆ ಶರಣಾಗಿದ್ದ ಸಮಾಜವಾದಿ ಬಂಡುಕೋರ.

ಈ ಸಮಾಜವಾದಿ ಬಂಡುಕೋರ ಗಾಂಧಿ ಕಣ್ಮರೆಯಾದ ಕೆಲವೇ ವರ್ಷಗಳಲ್ಲಿ ರಾಜಕಾರಣವನ್ನು ತಮ್ಮ ಆಪ್ತ ಗೆಳೆಯರಲ್ಲೊಬ್ಬರಾದ ಡಾ. ರಾಮಮನೋಹರ ಲೋಹಿಯಾರಿಗೆ ಬಿಟ್ಟುಕೊಟ್ಟು, ತಾವು ಭೂದಾನ-ಸರ್ವೋದಯ-ಶಾಂತಿ ಸೇನೆ ಇತ್ಯಾದಿ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಲೋಕ ನಾಯಕರೆನಿಸಿಕೊಂಡರು. ಆದರೆ ತಮ್ಮ ಗೆಳೆಯ ಲೋಹಿಯಾ ತಮ್ಮ ಒಂಟಿ

ಹೋರಾಟದಲ್ಲಿ ಬಸವಳಿದು ಅಕಾಲಿಕ ಮರಣಕ್ಕೆ ತುತ್ತಾದ ಕೆಲವೇ ವರ್ಷಗಳಲ್ಲಿ ರಾಷ್ಟ್ರ ಎಲ್ಲ ಕ್ಷೇತ್ರಗಳಲ್ಲಿ ಪರಿಪೂರ್ಣ ಅವನತಿಯ ದಿಕ್ಕಿನಲ್ಲಿ ಸಿಕ್ಕಿಕೊಂಡಾಗ, ಜಯಪ್ರಕಾಶರು ತಮ್ಮ ಲೋಕನಾಯಕತ್ವವನ್ನು ರಾಷ್ಟ್ರೀಯ ಪುನರುಜ್ಜೀವನಕ್ಕಾಗಿ ಅರ್ಪಿಸಿಕೊಂಡರು. ತಾವು ಸಮಾಜವಾದಿ ರಾಜಕಾರಣಿಯಾಗಿ ಸಮಗ್ರವಾಗಿ ಕಲ್ಪಿಸಿಕೊಳ್ಳಲಾಗದಿದ್ದ 'ಸಂಪೂರ್ಣ ಕ್ರಾಂತಿ'ಯ ಕನಸನ್ನು ಈಗ ರಾಷ್ಟ್ರದ ಮುಂದಿರಿಸಿದರು. ಅದರ ಫಲವಾಗಿ ಅವರು, ತಮ್ಮ ಯಾವ ರಾಷ್ಟ್ರೀಯ ಹೋರಾಟದ ಪರಿಣಾಮವಾಗಿ ಅಧಿಕಾರಕ್ಕೆ ಬಂದಿದ್ದರೋ ಆ ತಮ್ಮ ಕಿರಿಯ ತಲೆಮಾರಿನ ರಾಜಕಾರಣಿಗಳ ಆಳ್ವಿಕೆಯಲ್ಲಿ ಅಶ್ರುವಾಯು, ಲಾಠಿ ಪ್ರಹಾರವನ್ನು ಎದುರಿಸಬೇಕಾಯಿತಲ್ಲದೆ, ಅಪಮಾನಕರ ಆರೋಪಗಳನ್ನು ಎದುರಿಸಬೇಕಾಯಿತು. ಕೊನೆಗೆ ಒಂಟಿ ಸೆರೆಮನೆವಾಸದ ಶಿಕ್ಷೆಯನ್ನೂ ಅನುಭವಿಸಬೇಕಾಯಿತು.

ಈ ಒಂಟಿ ಸೆರೆಮನೆವಾಸದ ಸಂದರ್ಭದಲ್ಲಿ ತಮ್ಮ ಹೋರಾಟದ ಜೊತೆಗೆ ಬದುಕನ್ನೂ ಒಮ್ಮೆ ಹಿನ್ನೋಡಿಕೊಂಡ ದಾಖಲೆಗಳಂತಿವೆ ಈ ಸೆರೆಮನೆಯ ದಿನಚರಿ. ಹಾಗೇ ಸ್ವಾತಂತ್ರ್ಯೋತ್ತರ ಭಾರತದ ಮೊದಲ ಮೂರು ದಶಕಗಳ ರಾಜಕಾರಣದ ಒಳಸುಳಿಗಳ ಮತ್ತು ಹಳೆಯ ಶೀತಲ ಸಮರಯುಗದ ಜಗತ್ತಿನ ಒಳರಾಜಕಾರಣದ ಪರಿಚಯವಾಗುವ ಸಂಗತಿಗಳೂ ಇಲ್ಲಿವೆ. ಯಾವ ಕಾರಣಕ್ಕಾಗಿ ಲೋಹಿಯಾರಿಂದ ಟೀಕೆಗೊಳಗಾಗಿ ಜೆ.ಪಿ. ರಾಜಕಾರಣವನ್ನು ತೊರೆದಿದ್ದರೋ, ಆ ಕಾರಣಗಳನ್ನು ಕುರಿತ ಒಂದು ರೀತಿಯ ಪಶ್ಚಾತ್ತಾಪದ-ಪುನರಾಲೋಚನೆಯ ಧ್ವನಿಗಳನ್ನು ಈ ದಾಖಲೆಗಳಲ್ಲಿ ಕಾಣಬಹುದು. ತಮ್ಮ ರಾಜಕೀಯ ಇಕ್ಕಟ್ಟುಗಳಿಗೆ, ಸಾರ್ವಜನಿಕ ಜೀವನದ ಕವಲುದಾರಿಗೆ ಕಾರಣವಾದ ನೆಹರೂ ಅವರೊಡನೆಯ ಸ್ನೇಹದ ಮೌಲ್ಯಮಾಪನವನ್ನು ಇಲ್ಲಿ ಜೆ.ಪಿ. ಪರೋಕ್ಷ ರೀತಿಯಲ್ಲಿ ಮಾಡಿದ್ದಾರೆನಿಸುತ್ತದೆ. ಮುಖ್ಯ ಸಂಗತಿ ಎಂದರೆ, ರಾಜಕೀಯವಾಗಿ ತೀವ್ರವಾದಿಯಾಗಿದ್ದರೂ, ವೈಯಕ್ತಿಕವಾಗಿ ಸಾರ್ವಜನಿಕ ಜೀವನದಲ್ಲಿ ಎಂದೂ ಕಟುವಾಗಿರದಿದ್ದ ಜೆ.ಪಿ., ಈ ದಾಖಲೆಗಳಲ್ಲಿ ನೆಹರೂ ಮಗಳಾದ ಇಂದಿರಾಗಾಂಧಿ ಬಗ್ಗೆ ವ್ಯಂಗ್ಯ-ಕಟಕಿ-ಜಿಗುಪ್ಸೆಗಳ ಸುರಿಮಳೆಯನ್ನೇ ಕರೆದಿದ್ದಾರೆ! ರಾಷ್ಟ್ರದ ಅತ್ಯುಚ್ಚ ಮತ್ತು ಹಿರಿಯ ನಾಯಕರೊಬ್ಬರನ್ನು ರಾಷ್ಟ್ರ-ಇಂದಿರಾಗಾಂಧಿಯೊಬ್ಬರಲ್ಲೇ ಅಲ್ಲ, ಆನಂತರದ 'ಜನತಾ' ನಾಯಕರೂ-ಅವರ ಕೊನೆಯ ದಿನಗಳಲ್ಲಿ ನಡೆಸಿಕೊಂಡ ರೀತಿಯ ಫಲವನ್ನು, ನಾವಿಂದು ಜಾಗತೀಕರಣದ ಬಿಡಿಸಲಾಗದ ದ್ವಂದ್ವಗಳ ರೂಪದಲ್ಲಿ ಅನುಭವಿಸುತ್ತಿದ್ದೇವೆ ಎನಿಸುತ್ತದೆ.

ಅಂದಮಾತ್ರಕ್ಕೆ ಜೆ.ಪಿ.ಯವರ 'ಸಂಪೂರ್ಣ ಕ್ರಾಂತಿ' ಸಮಗ್ರವೂ, ಸುಸ್ಥಿರವೂ ಆಗಿತ್ತೆಂದಲ್ಲ. ಈ ದಿನಚರಿಯಲ್ಲಿ ಕಾಣುವ ಹಾಗೆಯೇ, ಆ ಕಲ್ಪನೆ ಇನ್ನೂ ಪೂರ್ತಿ ಹರಳುಗಟ್ಟಿರಲಿಲ್ಲ, ಅದೊಂದು ಪ್ರಯೋಗದ ಹಂತದಲ್ಲಿತ್ತು. ಅವರಿಗೆ ದೇಶದಲ್ಲೆಡೆ ತೋರಿಬಂದ ಬೆಂಬಲವನ್ನು ಗಮನಿಸಿದಾಗ, ಈ ಪ್ರಯೋಗ ಅದರದೇ ಲಯದಲ್ಲಿ,

ವ್ಯವಧಾನದಲ್ಲಿ ಯಶಸ್ವಿಯಾಗುವ ಸಂಭವವೂ ಇತ್ತು. ಅವರನ್ನು ವಿರೋಧಿಸಿದ ಇಂದಿರಾ ಮತ್ತು ಅವರಿಂದ ಅಧಿಕಾರ ಪಡೆದ ಮೊರಾರ್ಜಿ ನೇತೃತ್ವದ ಸರ್ಕಾರಗಳು ಅವರ ತ್ಯಾಗ, ಅನುಭವ, ಬದ್ಧತೆ, ಹಿರಿತನಗಳನ್ನು ಗೌರವಿಸಿ, ಅರ್ಥಮಾಡಿಕೊಂಡು ಅವರೊಂದಿಗೆ ಸಹಕರಿಸಿದ್ದರೆ... ಜೆ.ಪಿ. ಬಹುಶಃ ಅದೇ ನೋವಿನಲ್ಲಿ, ನಿರಾಶೆಯಲ್ಲಿ ಕಣ್ಮುಚ್ಚಿದರು. ಆನಂತರ ರಾಷ್ಟ್ರ - ರಾಜಕೀಯ ಜಾಗೃತಿ ಎಂಬುದನ್ನೇ - ಬಹುಶಃ ವಿ.ಪಿ.ಸಿಂಗ್ ನೇತೃತ್ವದ ಸಂಕ್ಷಿಪ್ತ ಭ್ರಷ್ಟಾಚಾರ ವಿರೋಧಿ ಚಳುವಳಿಯ ಹೊರತಾಗಿ- ಕಂಡಿಲ್ಲ. ಹಾಗೇ ನಿಜವಾಗಿ ರಾಷ್ಟ್ರೀಯವೆನಿಸುವ ನಾಯಕರನ್ನು ಕಂಡಿಲ್ಲ. ಇದರ ಪರಿಣಾಮವೇ ಇಂದು ಎರಡಂಕಿ ಆಸುಪಾಸಿನ 'ಪ್ರಗತಿ'ಯ ನಡುವೆಯೂ ನಮ್ಮನ್ನು ಕಂಗೆಡಿಸುತ್ತಿರುವ ಕೋಮುವಾದಿ ರಾಜಕಾರಣ, ಭಯೋತ್ಪಾದನೆಯ ನಿರಂತರ ಆತಂಕ, ಹೆಚ್ಚುತ್ತಿರುವ ಅಸಮಾನತೆಯ ವಿರುದ್ಧ ಹಿಂಸಾತ್ಮಕವಾಗಿ ಭುಗಿಲೇಳುತ್ತಿರುವ ಚಟುವಟಿಕೆಗಳು, ಎಲ್ಲಕ್ಕಿಂತ ಹೆಚ್ಚಾಗಿ ತನ್ನ ಅಸ್ಮಿತೆಯನ್ನೇ, ಆ ಮೂಲಕ ರಾಷ್ಟ್ರ ತನ್ನ ಅಸ್ತಿತ್ವದ ಸ್ವಾಯತ್ತತೆಯನ್ನೇ ಕಳೆದುಕೊಳ್ಳಬಹುದಾದ ಅಪಾಯವನ್ನು ಎದುರಿಸುವಂತಾಗಿರುವುದು.

ಈ ಹಿನ್ನೆಲೆಯಲ್ಲಿ ಮೂರು ದಶಕಗಳ ನಂತರವೂ ಈ ದಿನಚರಿ ತನ್ನ ಪ್ರಸ್ತುತತೆಯನ್ನು ಪಡೆದುಕೊಳ್ಳಬಹುದು. ಇದರ ಕೆಲವು ವಿವರಗಳು ಆಧುನಿಕ ಭಾರತದ ಅಧಿಕೃತ ಇತಿಹಾಸದ ಕೆಲವು ಕಪ್ಪು ರಂಧ್ರಗಳ ಮೇಲೆ ಬೆಳಕು ಚೆಲ್ಲಬಹುದು. ಹಾಗೇ ಈ ಮುವ್ವತ್ತು ವರ್ಷಗಳ ಅಂತರ, ಸ್ವಾತಂತ್ರ್ಯೋತ್ತರ ಭಾರತದ ಅತಿ ದೊಡ್ಡ ಹಾಗೂ ಮಹತ್ವದ ಚಳುವಳಿಯೆನಿಸಿರುವ ಈ ನವ ನಿರ್ಮಾಣ ಚಳುವಳಿಯ ಒಳಗಿನ ಕೆಲವು ದೌರ್ಬಲ್ಯಗಳು ಮತ್ತು ವಿರೋಧಾಭಾಸಗಳನ್ನು ಗುರುತಿಸಲು ಸಹಾಯಕವಾಗಬಹುದು. ಅಲ್ಲದೆ, ತುರ್ತುಪರಿಸ್ಥಿತಿಯು ನಂತರದ ಭಾರತದ ರಾಜಕಾರಣದ ಮೇಲೆ ಮಾಡಿದ ಪರಿಣಾಮಗಳ ನಿರುದ್ವಿಗ್ನ ಮೌಲ್ಯಮಾಪನವೂ ಈಗ ಸಾಧ್ಯವಾದೀತು. ಈ ಪರಿಷ್ಕೃತ ಆವೃತ್ತಿಯ ಅವಶ್ಯಕತೆ ಹಾಗೂ ಮೌಲಿಕತೆ ಇಲ್ಲಿದೆ ಎಂದು ನಾನು ಭಾವಿಸಿದ್ದೇನೆ. ಹಾಗಾಗಿ ಕನ್ನಡ ಓದುಗರು ಈ ಕೃತಿಯನ್ನು ಕೊಂಡು ಓದಿ ಪ್ರೋತ್ಸಾಹಿಸಿತ್ತಾರೆ ಎಂದು ನಂಬಿದ್ದೇನೆ. ಇದರ ಜೊತೆಯಲ್ಲೇ, ಈ ಆವೃತ್ತಿ ಹೊರತರುತ್ತಿರುವ ಮಹೇಶ್, ಈ ಪುಸ್ತಕದ ವಿನ್ಯಾಸ ಮಾಡಿರುವ ಮಂಜುನಾಥ್‌ಲತಾ ಹಾಗೂ ಇತರ ಗೆಳೆಯರನ್ನು ಇಲ್ಲಿ ಅಭಿನಂದಿಸ ಬಯಸುತ್ತೇನೆ.

- ಡಿ.ಎಸ್. ನಾಗಭೂಷಣ

30-7-2009
ಶಿವಮೊಗ್ಗ

ನಾಲ್ಕು ಮಾತು

(ಮೊದಲನೇ ಮುದ್ರಣಕ್ಕೆ ಅನುವಾದಕರ ಮಾತು)

ಲೋಕನಾಯಕ ಜಯಪ್ರಕಾಶ್ ನಾರಾಯಣರು ಸ್ವತಂತ್ರ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಸೆರೆಮನೆಯಲ್ಲಿರಬೇಕಾದ ನಾಲ್ಕು ತಿಂಗಳುಗಳ ಅವಧಿಯಲ್ಲಿ ದಾಖಲು ಮಾಡಿದ ಈ ಆಲೋಚನೆಗಳು 'ಜೆ.ಪಿ. ಪ್ರಿಸನ್ ಡೈರಿ-1975 ಎಂದು ಈ ವರ್ಷದ ಜನವರಿಯಲ್ಲಿ ಪ್ರಕಟವಾದವು. ಜೆ.ಪಿ.ಯವರು ಪೆರೋಲ್ ಮೇಲೆ ಬಿಡುಗಡೆಯಾದ ನಂತರ ಹೊಸದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ, ಅವರು ಆವರೆಗೆ ಜೋಪಾನವಾಗಿ ಕಾದಿರಿಸಿಕೊಂಡು ಬಂದಿದ್ದ ಈ ಬರವಣಿಗೆಯನ್ನು ಅವರ ಕೆಲವು ಸ್ನೇಹಿತರು ಅತ್ಯಂತ ರಹಸ್ಯವಿಧಾನದ ಮೂಲಕ ಫೋಟೋಸ್ಟ್ಯಾಟ್ ಪ್ರತಿಯಾಗಿ ಮಾರ್ಪಡಿಸಿ, ಇದರ ಪ್ರಕಟಣೆಯ ಹಾದಿಯನ್ನು ಸುಗಮ ಮಾಡಿದರು. ಜೆ.ಪಿ.ಯವರ ಆಪ್ತ ಅಭಿಮಾನಿಗಳಾದ ಪ್ರೊ.ಎ.ಬಿ. ಶಾ ಅವರು ಮೂಲಪ್ರತಿಯಲ್ಲಿ ಕನಿಷ್ಠ 'ಎಡಿಟಿಂಗ್' ಮಾಡಿ ಅದನ್ನು ಪ್ರಕಟಿಸುವ ಧೈರ್ಯ ಮಾಡಿದರು. ಪ್ರೊ.ಶಾ ಅವರು ಈ ಸಾಹಸದಲ್ಲಿ ಯಶಸ್ವಿಯಾದದ್ದು ಹಲವಾರು ರೀತಿಯ ನಿರಾಶೆ ಹಾಗೂ ಆತಂಕಗಳನ್ನು ಎದುರಿಸಿದ ನಂತರವೇ. ಯಾವೊಬ್ಬ ಪ್ರಕಾಶಕನೂ ಈ ದಾಖಲೆಗಳನ್ನು ಪ್ರಕಟಿಸುವ ದಿಟ್ಟತನವನ್ನು ವ್ಯಕ್ತಪಡಿಸಲಿಲ್ಲ. ಕೊನೆಗೆ ಪುಣೆಯ ಶ್ರೀ ಜವಾಹರ್ ಕೋಟೇಚಾ ಎಂಬುವವರು ಅಸ್ತಿತ್ವವೇ ಇಲ್ಲದ 'ಅಭಯ ಪ್ರಕಾಶನ'ದ ಹೆಸರಿನಲ್ಲಿ ಇದನ್ನು ಪ್ರಕಟಿಸಲು ಮುಂದಾದರು. ಮುದ್ರಣ ಕಾರ್ಯದ ಸಂದರ್ಭದಲ್ಲಿ, ಬೇರೆ ಉದ್ದೇಶಗಳಿಗಾಗಿ ಪೊಲೀಸರು ಮಾಡಿದ ಹಠಾತ್ ದಾಳಿಯಿಂದಾಗಿ ಹಸ್ತಪ್ರತಿಯನ್ನು ಬೇರೆಡೆಗೆ ಸಾಗಿಸಬೇಕಾಯಿತು; 'ಕಂಪೋಸ್' ಆಗಿದ್ದ ವಿಷಯವನ್ನು ಹಲವಾರು ಸಾರಿ ಬಿಚ್ಚಿಡಬೇಕಾಗಿ ಬಂತು. ಇಂತಹ ಹಲವಾರು ತೊಂದರೆಗಳ ನಡುವೆಯೂ ಪುಸ್ತಕ ಪ್ರಕಟವಾಗಿ, 'ಗುಪ್ತ ಸಾಹಿತ್ಯ' ರೂಪದಲ್ಲಿ, ರಾಜಕೀಯ ವಿಮರ್ಶೆಯ ಸ್ವಾತಂತ್ರ್ಯವನ್ನು ಪ್ರೀತಿಸುವ ಹಲವಾರು ಜನರಿಗೆ ತಲುಪತೊಡಗಿತು. ಸುಪ್ರಸಿದ್ಧ ಮರಾಠಿ ಸಾಹಿತಿ ಶ್ರೀ ಪು.ಲ. ದೇಶಪಾಂಡೆಯವರು (ಇವರು ಲೋಕ ಸಭಾ ಚುನಾವಣೆಗಳ ಸಮಯದಲ್ಲಿ ಜನತಾ ಪಕ್ಷದ ಪರವಾದ ಪ್ರಚಾರದಲ್ಲಿ ಮಹತ್ವದ ಪಾತ್ರ ವಹಿಸಿದ್ದರು.)ಇದನ್ನು ಮರಾಠಿಗೆ ಅನುವಾದಿಸಿ, ಮತ್ತಷ್ಟು ಹೆಚ್ಚು ಜನರಿಗೆ ತಲುಪಿಸುವ ಪ್ರಯತ್ನ ಮಾಡಿದರು.

ಚುನಾವಣೆ ನಡೆದು, ತುರ್ತುಪರಿಸ್ಥಿತಿಯು ಚರಿತ್ರೆಯ ಒಂದು ಕಪ್ಪು(ಕೆಂಪು) ಪುಟವಾಗತೊಡಗಿದಾಗ ಈ 'ಗುಪ್ತ ಸಾಹಿತ್ಯ'ವು 'ಧೀರೋದಾತ್ತ ಸಾಹಿತ್ಯ'ವಾಗಿ ಪ್ರಕಾಶಿತವಾಯಿತು. ಇದು 'ಫ್ಯಾಷನ್ ಸಾಹಿತ್ಯ'ವಾಗಿ ಮಾರ್ಪಡುವ ಮುನ್ನ ಇದನ್ನು ಕನ್ನಡಕ್ಕೆ ಅನುವಾದಿಸುವ ಆಸಕ್ತಿ ನನ್ನಲ್ಲಿ ಮೂಡಿತು. ಇದಕ್ಕಾಗಿ ನಿರಾತಂಕವಾಗಿ ಮೂಲಪ್ರತಿಯನ್ನು ನನಗೆ ಒದಗಿಸಿದ ಗೆಳೆಯ ಶ್ರೀ ಬಾಲಚಂದ್ರನ್‌ಗೆ ನಾನು ಕೃತಜ್ಞ.

ಪ್ರೊ.ಎ.ಬಿ.ಶಾ ಅವರು ಮೂಲಪ್ರತಿಗೆ ಬರೆದಿರುವ ಮುನ್ನುಡಿಯಲ್ಲಿ ಹೇಳಿರುವಂತೆ "ಪ್ರಿಸನ್ ಡೈರಿಯು ಒಂದು ಐತಿಹಾಸಿಕ ದಾಖಲೆಯಾಗಿದ್ದು ಇದರ ಮಹತ್ವವು, ಇದನ್ನು ಬರೆಯಬೇಕಾಗಿ ಬಂದ ಸನ್ನಿವೇಶಗಳ ಆಚೆಗೂ ವಿಸ್ತರಿಸಿದೆ" ಮತ್ತು "ಇದರಲ್ಲಡಗಿರುವ ಅಂಶಗಳ ಸಮರ್ಪಕ ವಿಮರ್ಶೆ, ತುರ್ತುಪರಿಸ್ಥಿತಿಯು ಇತಿಹಾಸದ ಒಂದು ಭಾಗವಾಗಿ ಹೋದ ನಂತರ ಮಾತ್ರ ಸಾಧ್ಯವಾಗುತ್ತದೆ". ಆದುದರಿಂದ ಸದ್ಯಕ್ಕೆ ನಾವು ಮಾಡಬಹುದಾದದ್ದೆಂದರೆ, ಇದನ್ನು ಪೂರ್ವಾಗ್ರಹರಹಿತರಾಗಿ ಅರ್ಥ ಮಾಡಿಕೊಳ್ಳುವ ಪ್ರಯತ್ನವಷ್ಟೇ ಆಗಿದೆ. ತುರ್ತು ಪರಿಸ್ಥಿತಿಯ ಹೆಸರಿನಲ್ಲಿ ನಡೆದ ಅಸಂಖ್ಯಾತ ಅಮಾನುಷ ಕೃತ್ಯಗಳು ಕ್ರಮೇಣ ಬೆಳಕಿಗೆ ಬರುತ್ತಿದ್ದಂತೆ, ಜೀವಜಗತ್ತಿನ ಅಜನ್ಮಸಿದ್ಧ ಹಕ್ಕಾದ ಪೂರ್ಣ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದ ಏಕೈಕ ಅಪರಾಧಕ್ಕಾಗಿ (ಆಳುವ) ವ್ಯವಸ್ಥೆಯ ಭಯಂಕರ ಕ್ರೌರ್ಯಕ್ಕೊಳಗಾದ ಜನರ ಪ್ರತೀಕಾರದ ಸೊಲ್ಲು ಮೇಲಕ್ಕೇಳುತ್ತಿದ್ದಂತೆ ಮತ್ತು ಈ ಎಲ್ಲ ದೌರ್ಜನ್ಯಗಳಿಗಾಗಿ ವಿಷಾದವನ್ನಿರಲಿ, ಪಶ್ಚಾತ್ತಾಪವನ್ನೂ ಪ್ರಕಟಿಸದ ನಮ್ಮ ಮಾಜೀ ಸರ್ವಾಧಿಕಾರಿ ವ್ಯವಸ್ಥೆಯ ಕರಾಳ ಕ್ರಮಗಳು ಪರಿಷ್ಕರಣೆಗೆ ಒಳಪಡುತ್ತಿದ್ದಂತೆ, ಈ 'ಸಮರ್ಪಕ ವಿಮರ್ಶೆ'ಯ ದಿನಗಳು ನಮಗೆ ಹತ್ತಿರವಾಗುತ್ತಲಿವೆ ಎಂಬುದೂ ಗಮನಾರ್ಹ.

ಜೆ.ಪಿ.ಯವರ ಪ್ರಸ್ತುತ ಆಲೋಚನೆಗಳು ಪ್ರೊ.ಶಾ ಅವರು ಹೇಳಿರುವಂತೆ, "ಸರಪಳಿಗಳಲ್ಲಿರುವ ಧೀಮಂತ ವ್ಯಕ್ತಿಯೊಬ್ಬನ ಮೌಕ್ತಿಕಗಳಷ್ಟೇ ಆಗಿರದೆ, ಸಮಕಾಲೀನ ಭಾರತದ ಕೆಲವು ಅತ್ಯುತ್ತಮ ಮನಸ್ಸುಗಳ ಯೋಚನಾಲಹರಿ, ಸ್ಥಿತಿ ಹಾಗೂ ನೈತಿಕ ಸೂಕ್ಷ್ಮತೆಯನ್ನು ಪ್ರತಿನಿಧಿಸುತ್ತವೆ". ಡೈರಿಯ ಮೊದಲ ವಾಕ್ಯವಾದ "ನನ್ನ ಜಗತ್ತು ನನ್ನ ಸುತ್ತ ಛಿದ್ರ ಛಿದ್ರವಾಗಿ ಬಿದ್ದಿದೆ" ಎಂಬ ಮಾತು ಹತಾಶೆಯ ಪ್ರತೀಕವಾಗಿರದೆ, ತನ್ನೆದುರಿಗೆ ಹೊಸ ರೂಪದಲ್ಲಿ ಎದ್ದು ನಿಂತಿರುವ ರಾಕ್ಷಸ ಸದೃಶ ಸಮಸ್ಯೆಯ ಬಗ್ಗೆ ಪೂರ್ವಾಲೋಕನ ಮಾಡುವ ಮತ್ತು ಮುಂದಿನ ಹೋರಾಟಕ್ಕೆ ಸಜ್ಜಾಗುವ ಸೂಚನೆಯಾಗಿದೆ ಎಂಬುದು. ಅವರು (ಮಾಜಿ) ಪ್ರಧಾನ ಮಂತ್ರಿಗೆ ಬರೆದ ಮೊದಲ ಪತ್ರದಲ್ಲಿ, "ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿ ಅವರ ಸೊಕ್ಕಡಗಿಸಿದ ಜನಾಂಗ ಬಹಳ ಕಾಲ ಈ ದಮನ ಹಾಗೂ ಅವಮಾನವನ್ನು ಸಹಿಸಲಾರದು...ಭಾರತೀಯ ಪ್ರಜಾಪ್ರಭುತ್ವ ಸಮಾಧಿಯಿಂದ ಎದ್ದೇಳುವುದು ಖಂಡಿತ"

ಎಂದು ಹೇಳಿರುವ ಆತ್ಮವಿಶ್ವಾಸದ ಮಾತಿನಲ್ಲಿ ವ್ಯಕ್ತವಾಗಿದೆ. ಜೆ.ಪಿ.ಯವರು ತಮ್ಮ ಇಡೀ ಆಂದೋಲನವನ್ನು ನಿರ್ಲಿಪ್ತಿಯಿಂದ ಸಿಂಹಾವಲೋಕನ ಮಾಡಿರುವುದನ್ನು ಡೈರಿಯಲ್ಲಿ ಕಾಣಬಹುದಾಗಿದೆ. ಹಲವಾರು ಬಾರಿ, 'ನಾನೆಲ್ಲಿ ತಪ್ಪು ಮಾಡಿದೆ?' ಎಂದು ಆತ್ಮಪರೀಕ್ಷೆ ಮಾಡಿಕೊಂಡಿದ್ದಾರೆ. ಶ್ರೀಮತಿ ಗಾಂಧಿಯ ಮತ್ತು ಆಕೆಯ ಪಕ್ಷದ ಘನತೆ ಹಾಗೂ ಪ್ರಜಾಸತ್ತಾತ್ಮಕ ಗುಣವನ್ನು ಬಹಳಷ್ಟು ಉದಾರವಾಗಿ ಒಪ್ಪಿಕೊಳ್ಳುತ್ತಾರೆ. ಆದರೆ ಈ ಅವನತಿಗೆ ಕಾರಣವಾದ ವ್ಯಕ್ತಿ ಮತ್ತು ಆ ವ್ಯಕ್ತಿಯ ಸುತ್ತಲಿನ ವ್ಯವಸ್ಥೆಯ ಬಗ್ಗೆ ಅವರಿಗೆ ಸಹಜ ಸಿಟ್ಟಿದೆ. ಆದರೆ ಈ ಸಿಟ್ಟು ವೈಯುಕ್ತಿಕವಾಗಿರದೆ, ಇಡೀ ಇಂಡಿಯಾದ ಜನರ ಬಗ್ಗೆ ಅವರಿಗಿರುವ ತೀವ್ರ ಕಳಕಳಿಯಿಂದ ಹುಟ್ಟಿದುದು ಎಂಬುದನ್ನು, "ದೇಶಾಭಿಮಾನ ಕೇವಲ ನಿಮ್ಮೊಬ್ಬರ ಹಕ್ಕಲ್ಲ; ನೀವು ಬಂಧಿಸಿಟ್ಟಿರುವ ಹಲವಾರು ಜನರು, ದೇಶಕ್ಕೆ ನಿಮಗಿಂತ ಹೆಚ್ಚು ದುಡಿದಿದ್ದಾರೆ...ದೇಶದ ಬಗ್ಗೆ ನಮಗೆ ಭಾಷಣ ಬಿಗಿದು, ನಮ್ಮ ಗಾಯಗಳಿಗೆ ಉಪ್ಪು ಹಚ್ಚಬೇಡಿ" ಎಂದು ಸೂಚಿಸಿದ ನಂತರವೇ, "...ದಯವಿಟ್ಟು, ದಯವಿಟ್ಟು ಭಾರತವನ್ನು ಅಂತಹ ದುರ್ಗತಿಗೆ ತಳ್ಳಬೇಡಿ" ಎಂದು ಕೋರುವ ಅವರ ಮನಃಸ್ಥಿತಿಯಲ್ಲಿ ಗಮನಿಸಬಹುದಾಗಿದೆ.

ಹೋರಾಟದ ಬಗ್ಗೆ, ಅರ್ಥಾತ್ ಅವರು ಪ್ರತಿಪಾದಿಸಿದ ಸಂಪೂರ್ಣ ಕ್ರಾಂತಿಯ ಬಗ್ಗೆ ಅವರಿಗೆ ಸ್ಪಷ್ಟ ಕಲ್ಪನೆಯೇ ಇರಲಿಲ್ಲ ಎಂದು ಗೊಣಗುತ್ತಿದ್ದ ಸಿನಿಕರಿಗೆ ಈ ಡೈರಿ ಸೂಕ್ತ ಉತ್ತರ ಕೊಡುತ್ತದೆ. ಸಂಪೂರ್ಣ ಕ್ರಾಂತಿಯ ನೀಲಿ ಪ್ರತಿಯನ್ನೇನೂ ಡೈರಿಯಲ್ಲಿ ಕಾಣಲಾಗದಾದರೂ, ಅವರ ಮನಸ್ಸಿನಲ್ಲಿ ಈ ಬಗ್ಗೆ ಸ್ಪಷ್ಟ ಚಿತ್ರಣವಿತ್ತು ಎಂಬುದನ್ನು ಡೈರಿಯ ಹಲವಾರು ಪುಟಗಳು (ಆಗಸ್ಟ್ 18, 21, 23, 31, ಸೆಪ್ಟೆಂಬರ್ 1, 6, 7, 9, ಅಕ್ಟೋಬರ್ 7) ಸ್ಪಷ್ಟಗೊಳಿಸುತ್ತದೆ. ಕೆಲವು ಹ್ಯಾಪಮೋರೆಯ ಬುದ್ಧಿಜೀವಿಗಳು, 'ಡೌಟಿಂಗ್ ಥಾಮಸ್'ಗಳಾದ ಮಾರ್ಕಿಸ್ಟರು ಮತ್ತು ವೈದಿಕ ಮನಸ್ಸಿನ ಗಾಂಧೀವಾದಿಗಳು ಸಂದೇಹಿಸಿದುದ್ದಕ್ಕೆ ವಿರುದ್ಧವಾಗಿ, ಅವರಿಗೆ ಹೋರಾಟದ ಮೂಲಭೂತ ಸ್ವರೂಪವನ್ನು ಕುರಿತು ಎಷ್ಟರಮಟ್ಟಿಗಿನ ಸಂಪೂರ್ಣ ಅರಿವಿತ್ತು ಎಂಬುದಕ್ಕೆ, ಅವರ ವಿಶ್ಲೇಷಣೆಯಲ್ಲಿ ಮೂಡಿರುವ ಕಾಣುಗಳೇ (observations) ಸಾಕ್ಷಿಯಾಗಿವೆ. ತಾವು ರಚಿಸಿದ ಜನಸಂಘರ್ಷ ಸಮಿತಿಗಳು, ಗ್ರಾಮಸ್ವರಾಜ್ಯ ವ್ಯವಸ್ಥೆಗಿಂತ ಬಹಳಷ್ಟು ವಾಸ್ತವಿಕವಾಗಿದ್ದುವೇಕೆ ಎನ್ನುವುದಕ್ಕೆ "ಕಾರಣ, ದೇಶದಲ್ಲಿ ಮೂಡಿದ್ದ ಹೋರಾಟದ ವಾತಾವರಣವೇ" ಎಂದು ಹೇಳುವ ಜೆ.ಪಿ., "ನಾಯಕತ್ವ ಹಾಗೂ ಸಂಸ್ಥೆಯ ಆಧಾರವಿಲ್ಲದ ಕ್ರಾಂತಿಕಾರಿ ವಾತಾವರಣದ ಅರಾಜಕತೆ ಅಥವಾ ಸರ್ವಾಧಿಕಾರವೊಂದರ ಸ್ಥಾಪನೆಯಲ್ಲಿ ಕೊನೆಗೊಳ್ಳಬಹುದು" ಎಂಬ ಎಚ್ಚರಿಕೆಯನ್ನೂ ಹೊಂದಿದ್ದಾರೆ (ಆಗಸ್ಟ್ 18). ಕ್ರಾಂತಿಗೂ ಹಿಂಸೆಗೂ ಅನಿವಾರ್ಯ ನಂಟಿದೆ ಎಂದು ವಾದಿಸುವವರಿಗೆ ಜೆ.ಪಿ. ಹೇಳುತ್ತಾರೆ: "ಹಿಂಸಾತ್ಮಕ ಕ್ರಾಂತಿ ಅಥವಾ ಆ ದಿಸೆಯಲ್ಲಿನ ಪ್ರಯತ್ನ, ಈಗಿರುವ ದುರಾಕ್ರಮಣಗಳನ್ನು

ಬಲಿಷ್ಠಗೊಳಿಸುತ್ತದಷ್ಟೆ. ಆಗ ಈ ಪಾಪಿದೇಶ ಹಲವಾರು ಆಫ್ರೋ-ಏಶ್ಯನ್ ದೇಶಗಳ ಅದೇ ಹಾದಿಯನ್ನು ಹಿಡಿಯುತ್ತದೆ...ಆ ನರಕದಿಂದ ದೇಶವನ್ನು, ದೇವರೇ ಪಾರು ಮಾಡಬೇಕು".

ಜೆ.ಪಿ.ಯವರ ಗುರಿ-ಕೆಲವರು ಸಾರುತ್ತಿದ್ದಂತೆ-ರಾಜಕೀಯ ಪ್ರಜಾಪ್ರಭುತ್ವ ಮಾತ್ರವಾಗಿರದೆ, ಅವರ ಗಮನ ಸಾಮಾಜಿಕ-ಆರ್ಥಿಕ ಪ್ರಜಾಪ್ರಭುತ್ವದ ಕಡೆಗೂ ಇತ್ತು-ವಾಸ್ತವವಾಗಿ ಅದೇ ಅವರ ಅಂತಿಮ ಗುರಿ-ಎಂಬುದನ್ನು, ಅವರು ಈ ದೇಶದ ವರ್ಗ ವ್ಯವಸ್ಥೆಯ ಬಗ್ಗೆ ಹೊಂದಿದ್ದ ಈ ವಾಸ್ತವಿಕ ಅರಿವಿನಲ್ಲಿ ಕಾಣಬಹುದಾಗಿದೆ: " ಈ ದೇಶದಲ್ಲಿ ವರ್ಗವ್ಯವಸ್ಥೆ ಎಂಬುದೇ ಖಚಿತವಾಗಿ ರೂಪುಗೊಂಡಿಲ್ಲ, ಇದೆಯೆಂದು ಹೇಳಲಾಗುವ ವ್ಯವಸ್ಥೆಯ ತತ್ವಾದರ್ಶಗಳೆಲ್ಲವೂ ಅಕ್ಷರ ಕಲಿತ ಮತ್ತು ಹಣ ಇಟ್ಟುಕೊಂಡ ಜನರ ತತ್ವಾದರ್ಶಗಳೇ ಆಗಿವೆ" (ಸೆಪ್ಟೆಂಬರ್ 5) ಯುವಜನರ ನಿಷ್ಠೆಯನ್ನು ಕಿಂಚಿತ್ತೂ ಸಂದೇಹಿಸದ (ಗೆಳೆಯರೇ ಗಮನಿಸಿ!) ಜೆ.ಪಿ., ಬುದ್ಧಿಜೀವಿಗಳೆನಿಸಿಕೊಂಡವರ ಕ್ಲೈಬ್ಯತನವನ್ನು ಮತ್ತು ವಿಶ್ವಾಸದ್ರೋಹವನ್ನು ನಿರೀಕ್ಷಿಸಿಯೇ ಇದ್ದರೆಂದು ಕಾಣುತ್ತದೆ. ಅವರ ಪೂರ್ಣ ಗಮನ, ಸಾಮಾನ್ಯ ಮನುಷ್ಯನ ಕಡೆಗೆ. ಸರ್ವಾಧಿಕಾರದ ದುರುದ್ದೇಶಪೂರಿತ ಪ್ರಚಾರಕ್ಕೆ ತಲೆಯಾಡಿಸಲಾರಂಭಿಸಿದ ಬುದ್ಧಿಜೀವಿಗಳಲ್ಲಿ ಹಲವರು, "ವಿರೋಧಪಕ್ಷಗಳದ್ದೂ ಅತಿಯಾಗಿತ್ತು:ಈಗ ಎಷ್ಟು ಶಿಸ್ತಿದೆ ನೋಡಿ" ಎಂದು ಹೇಳತೊಡಗಿದ್ದಾರೆಂದು ತಿಳಿದ ಜೆ.ಪಿ. ಕ್ರುದ್ಧರಾಗುತ್ತಾರೆ. ಆಗ "ಮುಳುಗುವ ಹಡಗಿನಿಂದ ಹೆಗ್ಗಣಗಳು ಹಾರತೊಡಗಿವೆ" ಎಂಬ ಕ್ರೂರ ವ್ಯಂಗ್ಯವನ್ನು ಬಳಸಲು ಸಹ (ಸೆಪ್ಟೆಂಬರ್ 21) ಅವರು ಹಿಂಜರಿಯುವುದಿಲ್ಲ (ಇಲ್ಲಿ ನಾವು ಗಮನಿಸಬೇಕಾದದ್ದು, ಜೆ.ಪಿ. ಕೇವಲ Gentleman ಆಗದೆ, ನಮ್ಮೆಲ್ಲರಂತೆ ಸಿಟ್ಟು, ವ್ಯಂಗ್ಯ ಮುಂತಾದ ಸಾಮಾನ್ಯ ಭಾವನೆಗಳಿಗೆ ಒಳಗಾಗಿ ಹೇಗೆ ಸಾಮಾನ್ಯರ ನಡುವೆ 'ಅಸಾಮಾನ್ಯ'ರಾಗಿ ನಿಲ್ಲುತ್ತಾರೆ ಎಂಬುದನ್ನು) ಅವರು ಹೇಗೆ ತಮ್ಮನ್ನು ಸಾಮಾನ್ಯ ಮನುಷ್ಯನ ಜೊತೆ ಗುರುತಿಸಿಕೊಂಡು, ಆತನ ಅನಿವಾರ್ಯ ಪರಿಮಿತಿಗಳನ್ನು ಎಷ್ಟು ಕಳಕಳಿಯಿಂದ ಅರಿತುಕೊಂಡಿದ್ದಾರೆ ಎಂಬುದನ್ನು, "ವೈರಾಗ್ಯವೇ ಆಧ್ಯಾತ್ಮಿಕ ಪರಿಪೂರ್ಣತೆ ಅಥವಾ ಆ ಗುರಿಯ ಕಡೆಗೆ ಸಾಗುವ ದಾರಿ ಎಂದು ಒಪ್ಪಿಕೊಂಡವರನ್ನುಳಿದು, ಸಾಮಾನ್ಯ ಮನುಷ್ಯನಿಗೆ, ನಮ್ಮೆಲ್ಲರಿಗೆ, ಪೂರ್ಣ ಲೌಕಿಕ ತೃಪ್ತಿಯೇ ಅಧ್ಯಾತ್ಮಿಕ ಬದುಕೂ ಆಗಿರುತ್ತದೆ. ಅತಿಯಾಸೆ, ದುರಾಸೆ, ಸಂಪತ್ತಿಗಾಗಿ ದುರ್ಮಾರ್ಗ ಹಿಡಿಯುವುದು... ಈ ಎಲ್ಲವೂ ಅಧ್ಯಾತ್ಮ ವಿರೋಧಿ" ಎಂಬ ಅವರ ಮಾತಿನಲ್ಲಿ ಗಮನಿಸಬಹುದಾಗಿದೆ.

ಡೈರಿಯ ಬರವಣಿಗೆಯಲ್ಲಿ ಪ್ರಕಟವಾಗಿರುವ ಜೆ.ಪಿ.ಯವರ ವಿಚಾರನಿಷ್ಠೆ, ಅವರ ವಿಚಾರ ಪ್ರಖರತೆಯಷ್ಟೇ ಅಪೂರ್ವವಾದದ್ದು, ಅನನ್ಯವಾದದ್ದು ಮತ್ತು ಹಸಿಹಸಿಯಾದದ್ದು. ಬಾಂಗ್ಲಾ ದೇಶ್ ಉದಯವಾದಾಗ ಮುಜೀಬರ ಬಗ್ಗೆ ಅಪಾರ ಅಭಿಮಾನ ತಳೆದಿದ್ದ ಜೆ.ಪಿ. (ಆನಂದ ಬಾಷ್ಪಗಳೊಡನೆ ಅವರಿಗೆ ಪತ್ರ ಬರೆದಿದ್ದರು.)

ಆತ ಸರ್ವಾಧಿಕಾರಿಯಾಗ ಹೊರಟು, ಭೀಕರ ರೀತಿಯಲ್ಲಿ ಕೊಲೆಯಾದ ಸುದ್ದಿ ತಿಳಿದಾಗ (ಆಗಸ್ಟ್ 16) 'ಇದು ವಿಷಾದದ ಸುದ್ದಿಯಾದರೂ ನನ್ನ ಹೃದಯವನ್ನು ಕಲಕಲಾರದು' ಎಂದು ಹೇಳುತ್ತಾರೆ. ನಿರ್ಭೀತ ಸಮಾಜದ ನಿರ್ಮಾಣಕ್ಕೆ ಅವರು ಅಷ್ಟು ಅಲಿಪ್ತವಾಗಿ ಬದ್ಧರಾದರು. 'ಭಯದ ಮೂಲಕ ದೇಶ ಕಟ್ಟಲಾಗುವುದಿಲ್ಲ. ಭಯದಿಂದ ಬೆಳೆಸಿದ ಮಗು ಮಾನಸಿಕ ರೋಗಿಯಾದ ಯುವಕನಾಗುವಂತೆ, ಅದು ರೋಗಿಷ್ಠ ದೇಶವಾಗುತ್ತದೆ' ಎಂಬ ಪರಮ ಸಾಮಾಜಿಕ-ರಾಜಕೀಯ ಸತ್ಯದ ಸಾಕ್ಷಾತ್ಕಾರವನ್ನು ಅವರಲ್ಲಿ ನಾವು ಕಾಣಬಹುದಾಗಿದೆ (ಆಗಸ್ಟ್ 22)

ಸಂಕೀರ್ಣ ಸಾಮಾಜಿಕ ಸಂದರ್ಭದಲ್ಲಿಯೂ ವ್ಯಕ್ತಿ ವೈಶಿಷ್ಟ್ಯತೆಯನ್ನು ಪೂರ್ಣರೀತಿಯಲ್ಲಿ ಆಗ್ರಹಿಸುವ ಜೆ.ಪಿ., ತಮ್ಮ ವೈಯಕ್ತಿಕ ಸ್ತರದ ಭಾವನೆಗಳನ್ನು ಸಾಮಾಜಿಕ ಸ್ತರದ ಭಾವನೆಗಳೊಂದಿಗೆ ಬೆರೆಸದೆ, ಹೇಗೆ ಸಮತುಲಿತವಾದ ಮತ್ತು ಸ್ಥಿರವಾದ ಮನಃಸ್ಥಿತಿಯನ್ನು ಕಾಪಾಡಿಕೊಂಡು ಬಂದಿದ್ದಾರೆ ಎನ್ನುವುದಕ್ಕೆ; ನೆಹರೂ ಬಗ್ಗೆ ಅಪಾರ ಅಭಿಮಾನವಿಟ್ಟುಕೊಂಡಿರುವ ಮತ್ತು ಅವರು ದೇಶಕಟ್ಟುವ ಕಾರ್ಯಕ್ಕೆ ಸಲ್ಲಿಸಿರುವ ಕೊಡುಗೆಯ ಬಗ್ಗೆ ಹೆಮ್ಮೆ ಪಡುವ ಜೆ.ಪಿ., ಆರ್ಥಿಕ ಕ್ಷೇತ್ರದಲ್ಲಿ ನೆಹರೂ ತಳೆದ-ಗಾಂಧೀಜಿಯನ್ನು 'ಸಂಪ್ರದಾಯವಾದಿ' ಎಂದು ಕರೆದ, ಪಾಶ್ಚಿಮಾತ್ಯ ದೇಶಗಳ ಶ್ರೀಮಂತಿಕೆಗೆ ಬೆರಗಾದ ಮೇಲ್ವರ್ಗದ ಹಿಂದೂಗಳ ಮೆಚ್ಚುಗೆಗೆ ಪಾತ್ರವಾದ- "ಆಧುನಿಕ" ದೃಷ್ಟಿಯ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ. (ಅಕ್ಟೋಬರ್ 2) ಡಾ.ರಾಜೇಂದ್ರ ಪ್ರಸಾದರ ಅಂತಿಮ ಕ್ರಿಯೆಗೆ ಹೋಗಲು ನಿರಾಕರಿಸಿದ ನೆಹ್ರೂ ಅವರನ್ನು ನೆನೆಸಿಕೊಂಡು, 'ನೆಹ್ರೂ ವಂಶದವರಿಗೆ ರಾಜಕಾರಣವೇ ಎಲ್ಲವನ್ನೂ ನಿರ್ಧರಿಸುತ್ತದೆ' ಎಂದು ಕಾಣುತ್ತದೆ ಎಂದು ಕಟಕಿಯಾಡುತ್ತಾರೆ.

ಸೆರೆಮನೆಯಲ್ಲಿದ್ದಾಗ ಬಂದ ತಮ್ಮ ಹುಟ್ಟುಹಬ್ಬದ ದಿನ(ಅಕ್ಟೋಬರ್ 11)ದಂದು, 'ನನ್ನ ಉಳಿದಿರುವ ಬದುಕನ್ನು ದೇಶ ಹಾಗೂ ಜನತೆಯ ಸೇವೆಗಾಗಿ ಮುಡುಪಾಗಿಡುವ ಸಾಮರ್ಥ್ಯ ಮತ್ತು ಛಲವನ್ನು ದೇವರು ನನಗೆ ನೀಡಲಿ. ದೇವರ ಸೇವೆಯ ಅದೊಂದೇ ಮಾರ್ಗ ನನಗೆ ತಿಳಿದಿರುವುದು' ಎಂದು ತಮ್ಮ ಮನಸ್ಸನ್ನು ಬಿಚ್ಚಿಡುವ ಜೆ.ಪಿ. ಅಸತ್ಯದೊಂದಿಗೆ, ಭಯದೊಂದಿಗೆ ಅಥವಾ ಇನ್ನಾವುದೇ ಹೀನಶಕ್ತಿಗಳೊಂದಿಗೆ ರಾಜಿ ಮಾಡಿಕೊಂಡ ಸಂದರ್ಭ ನಮಗೆ ಕಾಣುವುದೇ ಇಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಹಿಮಗಡ್ಡೆಯ ಮೇಲೆ ಮಲಗುವ ಶಿಕ್ಷೆ ಅನುಭವಿಸಿದ ಈ ಛಲವಾದಿಯನ್ನು, ಸೆರೆಮನೆಯ ಗೋಡೆಯನ್ನು ಹಾರಿ ಬಂದು ಚಳವಳಿಯನ್ನು ಪುನರಾರಂಭಿಸಿದ ಈ ಸಾಹಸಿಯನ್ನು, ಗಾಂಧಿ ವಿಚಾರದಿಂದ ಪ್ರಭಾವಿತರಾದ ಪತ್ನಿಯು ಬ್ರಹ್ಮಚರ್ಯೆಯ ಪಾಲನೆಯ ಸಲಹೆಯನ್ನು ಮಂಡಿಸಿದಾಗ ನಿರ್ಲಿಪ್ತಿಯಿಂದ ಒಪ್ಪಿಕೊಂಡ ಈ ಆದರ್ಶವಾದಿಯನ್ನು, ಈ ಹಿಂದಿನ ಅಧಿಕಾರಶಾಹಿ ವ್ಯವಸ್ಥೆಯು 'ದೇಶದ್ರೋಹಿ' ಎಂದು ಕರೆಯಿತು; 'ಫ್ಯಾಸಿಸ್ಟ್' ಎಂದು ಗುರುತಿಸಿತು. ಈ ಉದಾತ್ತಜೀವಿಗೆ ಬೆಂಬಲವಾಗಿ ಎತ್ತಿದ ಕೈಗಳನ್ನು ಕತ್ತರಿಸಿ ಹಾಕಲಾಯಿತು. ಈ ಸಂಬಂಧದಲ್ಲಿ

ನಡೆದ ಕ್ರೌರ್ಯ ಹೆಪ್ಪುಗಟ್ಟಿಸುವಂತಹುದು. ಇದನ್ನು ನಡೆಸಿದ ಪೋಲೀಸು ಜನ ನಮ್ಮಂತಹ ಜನಸಾಮಾನ್ಯರೇ, ನಮ್ಮ ಅಪ್ಪಂದಿರೋ ಅಥವಾ ಅಣ್ಣತಮ್ಮಂದಿರೋ ಆಗಿರುವಂತಹವರೇ ಎಂಬುದನ್ನು ನೆನೆಸಿಕೊಂಡಾಗ ನಮ್ಮ ವ್ಯವಸ್ಥೆಯ ವಿಲಕ್ಷಣ ಸ್ವರೂಪದ ಬಗ್ಗೆ ಗಾಬರಿಯಾಗುತ್ತದೆ. ನಮ್ಮ ಈ ಅಪ್ಪಂದಿರು ಮತ್ತು ಅಣ್ಣ ತಮ್ಮಂದಿರ ರಕ್ತದಲ್ಲಿ ಸಾರಾಸಗಟಾಗಿ ಬೆರೆತುಹೋಗಿರುವ, ಘನತೆ ಇಲ್ಲದ ವಿಧೇಯ ಗುಣ ಹಾಗೂ ಪ್ರತಿ-ಭಯ ಇನ್ನೆಂತಹ ದುರಂತಗಳೆಡೆ ನಮ್ಮನ್ನು ಕೊಂಡೊಯ್ಯುತ್ತದೆಯೋ ಹೇಳಲಾಗುವುದಿಲ್ಲ. ಇದಾಗುವ ಮುನ್ನ, ನಿಜವಾದ ಅಪರಾಧಿ ಯಾರು, ಸತ್ಯ ಯಾವುದು ಎಂದು ಅರಿಯಲು ಸಾಧ್ಯವಿರುವ ಈ ಸಂದರ್ಭದಲ್ಲಿ ನಮ್ಮೆಲ್ಲರಂತೆಯೇ ಆಳದಲ್ಲಿ ಮನುಷ್ಯತ್ವವನ್ನು ಹೊಂದಿರುವ, ನಮ್ಮೆಲ್ಲರಂತೆಯೇ ಹುಟ್ಟಿ ಸಾಯುವ ಈ ನಮ್ಮ ಅಪ್ಪಂದಿರು ಮತ್ತು ಅಣ್ಣತಮ್ಮಂದಿರು ಆಗಿ ಹೋದ ಎಲ್ಲದರ ಬಗ್ಗೆ ಪುನರಾಲೋಚನೆ ಮಾಡುತ್ತಾರೆ, ನಾವೆಲ್ಲರೂ ಹಂಚಿಕೊಂಡಿರುವ ಮನುಷ್ಯತ್ವವನ್ನು ಎತ್ತಿ ಹಿಡಿಯುತ್ತಾರೆ ಎಂಬ ಆಶಯ ಸಹಜವಾಗಿ ನಮ್ಮೆಲ್ಲರಿಗಿದೆ. ಆಗರೆ ಇದೆಲ್ಲದಕ್ಕೂ ಮೂಲಕಾರಣರಾದ ರಾಜರಾಣಿಯರೇ ಈಗಲೂ ನಿಶ್ಚಿಂತೆಯಿಂದ ಧಿಮಾಕು ಪ್ರದರ್ಶಿಸಲು ಸಾಧ್ಯವಿರುವ ಈ ವಿಚಿತ್ರ ವ್ಯವಸ್ಥೆಯಲ್ಲಿ ಇಂತಹ ಆಶಯ, ನಮ್ಮ ಮುಖಕ್ಕೇ ಹಿಂದಿರುಗಿ ಬಡಿಯುವ 'ಜೋಕ್' ಆಗುವ ಸಂದರ್ಭವೇ ಹೆಚ್ಚು. ಈ ಪರಿವೆ, ಈ ಜಾಗೃತಿಯ ಅಗತ್ಯವನ್ನು, ಈ ಪುಸ್ತಕದ ಹತ್ತು ಓದುಗರಲ್ಲಿ ಒಬ್ಬರಾದರೂ ಕಂಡುಕೊಂಡಲ್ಲಿ, ನನ್ನ ಶ್ರಮ ಸಾರ್ಥಕವಾಗುತ್ತದೆಂದು ಭಾವಿಸುತ್ತೇನೆ.

ದೂರದಲ್ಲಿದ್ದೂ ನನ್ನ ಈ ಅನುವಾದನ್ನು ಪ್ರಕಟಿಸಲು ಮುಂದೆ ಬಂದ ನೆಲಮನೆ ಪ್ರಕಾಶನದ ಶ್ರೀ ದೇವೇಗೌಡರಿಗೆ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ಹಾಗೆಯೇ ಈ ಕೆಲಸದಲ್ಲಿ ಉತ್ಸಾಹ ತೋರಿದ 'ಆಂದೋಲನ' ಬಳಗಕ್ಕೆ ನಾನು ಅಭಾರಿ. ನನ್ನ ಅನುವಾದ ಕಾರ್ಯಕ್ಕೆ ಸತತ ಪ್ರೋತ್ಸಾಹವಿತ್ತು ಮತ್ತು ಕೆಲವೆಡೆ ಅಮೂಲ್ಯ ಸಲಹೆಗಳನ್ನು ನೀಡಿದ ನನ್ನ ಗುಜರಾತೀ ಗೆಳೆಯ ಶ್ರೀ ದೀಪಕ್ ಧೋಲಕಿಯಾಗೆ ಕೂಡಾ ನಾನು ಅಭಾರಿ. ಪುಸ್ತಕವನ್ನು ಸಕಾಲದಲ್ಲಿ ಮುದ್ರಿಸಿಕೊಟ್ಟ ಸಿಬ್ಬಂದಿ ಹಾಗೂ ವ್ಯವಸ್ಥಾಪಕರಿಗೂ ನನ್ನ ವಂದನೆಗಳು.

ಮತ್ತೊಂದು ಮಾತು; ಕಾಲಮಿತಿಯ ಕಾರಣ ಅನುವಾದದಲ್ಲಿ ಉಳಿದುಹೋಗಿರಬಹುದಾದ ಕೆಲವು ಸಣ್ಣಪುಟ್ಟ ತಪ್ಪುಗಳನ್ನು, ಈ ಪುಸ್ತಕಕ್ಕೆ ಎರಡನೇ ಮುದ್ರಣದ ಭಾಗ್ಯವೇನಾದರೂ ದೊರೆತಲ್ಲಿ, ಸರಿಪಡಿಸುವ ಭರವಸೆ ನೀಡುತ್ತಾನೆ. ಟೀಕೆಗಳಿಗೆ ಸದಾ ಸ್ವಾಗತವಿದೆ.

ನಿಮ್ಮವ

ಡಿ.ಎಸ್. ನಾಗಭೂಷಣ

20.05.77

ಜೆ.ಪಿ. : ಒಂದು ಸಂಕ್ಷಿಪ್ತ ಜೀವನ ಚಿತ್ರ



ಜಯಪ್ರಕಾಶ್ ನಾರಾಯಣರು ಬಿಹಾರದ ಉತ್ತರದ ಗಡಿಯಲ್ಲಿನ ನಿತಾಬ್ದಿಯಾರ ಎಂಬ ಗಂಗಾ ಮತ್ತು ಸರಜೂ ನದಿಗಳ ನಡುವಿರುವ ಒಂದು ಪುಟ್ಟ ಗ್ರಾಮದಲ್ಲಿ ಹರ್ಷದಯಾಳ್‌ಬಾಬು ಮತ್ತು ಪೂಲ್‌ರಾಣಿ ದಂಪತಿಗಳ ಮಗನಾಗಿ, 1902ರ ಅಕ್ಟೋಬರ್ 11ರಂದು ಜನಿಸಿದರು. ತಂದೆ ಹರ್ಷದಯಾಳ್ ಬಿಹಾರದ ಕೆರೆ-ಕಾಲುವೆ ಇಲಾಖೆಯಲ್ಲಿ ನೌಕರರಾಗಿದ್ದರು. ಜಯಪ್ರಕಾಶ್ ಮಗುವಾಗಿ ಸ್ವಲ್ಪ 'ಪೆದ್ದು ಮಗು' ಎನಿಸಿಕೊಂಡೇ ಹೆಚ್ಚಿನ ಚಟುವಟಿಕೆ ಇಲ್ಲದೆ ಬೆಳೆದರಾದರೂ, ಶಾಲೆ ಸೇರಿದ ಮೇಲೆ ಚುರುಕಾದರು. ಆದರೂ 'ಅಂತರ್ಮುಖಿ ಮಗು' ಎಂದೇ ಗುರುತಿಸಲ್ಪಟ್ಟಿದ್ದ ಅವರು ಪ್ರೌಢಶಿಕ್ಷಣಕ್ಕಾಗಿ ರಾಜ್ಯದ ರಾಜಧಾನಿ ಪಟ್ನಾದ ವಿದ್ಯಾರ್ಥಿನಿಲಯಕ್ಕೆ ಸೇರಿದ ಮೇಲೆ ಬಾಹ್ಯ ಪ್ರಪಂಚಕ್ಕೆ ಹೆಚ್ಚು ತೆರೆದುಕೊಳ್ಳುತ್ತಾ ತಮ್ಮದೇ ವಿಶಿಷ್ಟ ವ್ಯಕ್ತಿತ್ವ ರೂಪಿಸಿಕೊಳ್ಳತೊಡಗಿದರು.

ಜಯಪ್ರಕಾಶರು ಪಟ್ನಾ ಸೇರಿದ ಕಳೆದ ಶತಮಾನದ ಎರಡನೇ ದಶಕವೆಂದರೆ, ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಕ್ಕೊಂದು ಆವೇಗ ದೊರೆತ ಕಾಲ. ಖುದಿರಾಮ್ ಬೋಸ್ ಪಟ್ನಾದಲ್ಲಿ ಬ್ರಿಟಿಷ್ ಪ್ರಭುತ್ವದ ವಿರುದ್ಧದ ಹೋರಾಟದ ಭಾಗವಾಗಿ ಬಾಂಬ್ ಸಿಡಿಸಿದ್ದ. ಇದರಿಂದ ಸ್ಫೂರ್ತಿ ಪಡೆದ ಬಂಗಾಳದ ಕ್ರಾಂತಿಕಾರಿಗಳು ಬಿಹಾರದಾದ್ಯಂತ ಬುಡಮೇಲು ಕೃತ್ಯಗಳನ್ನು ಆರಂಭಿಸಿದ್ದರು. ಹದಿಹರೆಯದ ಜಯಪ್ರಕಾಶರು ಭುಗಿಲೆದ್ದಿದ್ದ ರಾಷ್ಟ್ರೀಯತೆಯ ಚಳುವಳಿಗಿಂದ ಪ್ರಭಾವಿತರಾಗದಿರಲು ಸಾಧ್ಯವೇ ಇರಲಿಲ್ಲ. ಆದರೆ ಕುಟುಂಬದ ಪ್ರಭಾವದಿಂದಾಗಿ 'ಭಗವದ್ಗೀತೆ'ಯನ್ನು ನಿಯಮಿತವಾಗಿ ಓದುತ್ತಾ, ಅದರ ಅನುಯಾಯಿಯೂ ಆಗಿದ್ದ ಅವರು ಇವೆರೆಡರ

ನಡುವೆ ತಾತ್ವಿಕ ಸಂದಿಗ್ಧಕ್ಕೆ ಸಿಕ್ಕಿದ್ದಾಗ, ಅವರಿಗೆ ನೆರವಿಗೆ ಬಂದದ್ದು ಗಾಂಧೀಜಿಯ ಪಟ್ನಾ ಭೇಟಿ. ರಾಜಕಾರಣದ ಧಾರ್ಮಿಕತೆಯನ್ನು ಗಾಂಧಿಯವರ 'ಸತ್ಯಾಗ್ರಹ' ಪರಿಕಲ್ಪನೆಯಲ್ಲಿ ಕಂಡ ಜಯಪ್ರಕಾಶ್, ತಾವು ಕೇಳಿದ ಗಾಂಧಿಯವರ ಮೊದಲ ಭಾಷಣದಿಂದಲೇ ಅವರಿಗೆ ಮಾರುಹೋದರು. ಗಾಂಧಿ, ನಂತರದ ದಿನಗಳಲ್ಲಿ ಬಿಹಾರದ ಚಂಪಾರಣ್ಯದಲ್ಲೇ ಭಾರತದಲ್ಲಿನ ತಮ್ಮ ಮೊದಲ ಸತ್ಯಾಗ್ರಹವನ್ನು ಪ್ರಯೋಗಿಸಿ ಯಶಸ್ವಿಯಾದಾಗ, ಯುವ ಜಯಪ್ರಕಾಶ್ ಗಾಂಧೀಜಿಯಲ್ಲಿ ತಮ್ಮ ಭವಿಷ್ಯದ ನಾಯಕನನ್ನು ಕಂಡುಕೊಂಡರು.

ಜಯಪ್ರಕಾಶ್ ಪ್ರೌಢಶಿಕ್ಷಣವನ್ನು ಉತ್ತಮದರ್ಜೆಯಲ್ಲಿ ತೇರ್ಗಡೆಯಾಗಿ ಮುಗಿಸಿ, ಮುಂದಿನ ಶಿಕ್ಷಣಕ್ಕಾಗಿ ಸರ್ಕಾರದಿಂದ ವಿದ್ಯಾರ್ಥಿವೇತನ ಪಡೆದು ಅವರ ಕಾಯಸ್ಥ ಕುಲದಲ್ಲಿ ಭರವಸೆಯ ಯುವಕನೆನಿಸಿಕೊಂಡಾಗ, ಹದಿನೆಂಟನೇ ವಯಸ್ಸಿನಲ್ಲಿ ಅವರಿಗೆ ಮದುವೆಯೂ ನಿಶ್ಚಯವಾಯಿತು. ಬಿಹಾರದ ಹೆಸರಾಂತ ವಕೀಲರೂ, ಚಂಪಾರಣ್ಯ ಸತ್ಯಾಗ್ರಹದ ಸಮಯದಲ್ಲಿ ಗಾಂಧೀಜಿಯ ನಿಕಟವರ್ತಿಯಾಗಿ ಕಾಂಗ್ರೆಸ್ ನಾಯಕರೂ ಎನಿಸಿಕೊಂಡಿದ್ದ ಬ್ರಿಜ್‌ಕಿಶೋರ್ ಬಾಬು ಅವರ ಮಗಳು ಪ್ರಭಾವತಿಯವರೊಂದಿಗೆ 1920ರ ಮೇ 16ರಂದು ಅವರ ಮದುವೆಯಾಯಿತು. ಮುಂದೆ ಭಾರತದ ಮೊದಲ ರಾಷ್ಟ್ರಪತಿಯಾದ ಬಾಬು ರಾಜೇಂದ್ರಪ್ರಸಾದರ ಹತ್ತಿರದ ಬಂಧುವಾದ ಬ್ರಿಜಕಿಶೋರ್‌ರ ಅಳಿಯನಾದ ಜಯಪ್ರಕಾಶ್, ಈ ಮೂಲಕ ಭಾರತದ ಒಂದು ದೊಡ್ಡ ರಾಜಕೀಯ ಕುಟುಂಬದ ಸದಸ್ಯರೇ ಆದರು. ಹಾಗಾಗಿ ಅವರು ಆ ದಿನಗಳಲ್ಲಿ ದಿನೇ ದಿನೇ ಕಾವೇರುತ್ತಿದ್ದ ರಾಷ್ಟ್ರೀಯ ಹೋರಾಟದ ಒಳವಲಯವನ್ನೇ ಪ್ರವೇಶಿಸಿದ್ದರು.

ರೌಲೆಟ್ ಕಾಯಿದೆ ವಿರೋಧಿ ಚಳುವಳಿ, ಅದರ ಪರಿಣಾಮವಾದ ಜಲಿಯನ್ ವಾಲ್‌ಬಾಗ್ ಹತ್ಯಾಕಾಂಡ; ಅದರ ವಿರುದ್ಧ ಪ್ರತಿಭಟನೆಯಾಗಿ ಗಾಂಧೀಜಿ ಕರೆಕೊಟ್ಟ ನಾಗರಿಕ ಅಸಹಕಾರ ಸತ್ಯಾಗ್ರಹ, ಇವು ಪಟ್ನಾದ ಕಾಲೇಜೊಂದರಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿದ್ದ ಜಯಪ್ರಕಾಶರನ್ನು ತಮ್ಮ ವಿದ್ಯಾಭ್ಯಾಸದ ಬಗ್ಗೆ ದ್ವಂದ್ವಕ್ಕೆ ಸಿಲುಕಿಸಿದ್ದವು. ಆ ಸಂದರ್ಭದಲ್ಲಿ ಕೇಳಿದ ಮೌಲಾನಾ ಆಜ಼ಾದ್ ಅವರ ಭಾಷಣದಿಂದ ಪ್ರೇರಿತರಾಗಿ ಅವರು ತಮ್ಮ ಅನೇಕ ಸಹಪಾಠಿಗಳೊಂದಿಗೆ ಪರೀಕ್ಷೆ ಇನ್ನೇನು ಒಂದು ತಿಂಗಳಿದ್ದಂತೆಯೇ ಕಾಲೇಜು ತೊರೆದರು. 1922ರಲ್ಲಿ ಗಾಂಧೀಜಿಯ ಸತ್ಯಾಗ್ರಹ ಪರಿಕಲ್ಪನೆಗೆ ವಿರುದ್ಧವಾಗಿ ಜನ ಪೊಲೀಸರನ್ನು ಸುಟ್ಟ 'ಚೌರಿ ಚೌರ' ಹಿಂಸಾತ್ಮಕ ಘಟನೆ ನಡೆದು, ಗಾಂಧಿ ಅಸಹಕಾರ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳುವವರೆಗೂ ಜಯಪ್ರಕಾಶ್‌ರು ಶಿಕ್ಷಣದ ಬಗ್ಗೆ ಯೋಚಿಸಲಿಲ್ಲ. ನಂತರ ಬಿಹಾರ ವಿದ್ಯಾಪೀಠ ಸೇರಿ ಇಂಟರ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆದರೆ ಮುಂದೆ ವಿಜ್ಞಾನ ಪದವಿ ಪಡೆಯಲು; ಅಸಹಕಾರ ಸತ್ಯಾಗ್ರಹದ ಕರೆಗೆ

ವಿರುದ್ಧವಾಗಿ ಸರ್ಕಾರದಿಂದ ಅನುದಾನ ಪಡೆಯುತ್ತಿದ್ದ ಬನಾರಸ್ ಹಿಂದೂ ವಿಶ್ವವಿದ್ಯಾಲಯಕ್ಕೆ ಸೇರಲು ನಿರಾಕರಿಸಿದರು. ಕೊನೆಗೆ ಕುಟುಂಬದ ಹಿತೈಷಿಯೊಬ್ಬರ ಸಲಹೆಯಂತೆ 'ದುಡಿದು ಓದುವ' ಯೋಜನೆಯ ಮೇರೆಗೆ ಅಮೆರಿಕಾದಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲು, 1922ರ ಅಕ್ಟೋಬರ್ 8ರಂದು ಅಮೇರಿಕಾಕ್ಕೆ ಪ್ರಯಾಣ ಮಾಡಿದರು.

ಅಮೆರಿಕಾದಲ್ಲಿನ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯಕ್ಕೆ ಸೇರಿಕೊಂಡ ಜಯಪ್ರಕಾಶರು ಅಲ್ಲಿನ ಅತಿ ಆಧುನಿಕತೆ ಮತ್ತು ಕೆಲವರ ಅತಿ ಶ್ರೀಮಂತಿಕೆಯ ವಿರುದ್ಧ ಪ್ರತಿಭಟನೆಯಾಗಿ ಆರಂಭವಾಗಿದ್ದ ಎಡಪಂಥೀಯ ಚಳುವಳಿಯಿಂದ ಪ್ರಭಾವಿತರಾದರು. ಇದರ ಪರಿಣಾಮವಾಗಿ ಒಂದು ವರ್ಷದ ನಂತರ ವಿಜ್ಞಾನ ಅಧ್ಯಯನವನ್ನು ತೊರೆದು ಓಹಿಯೋ ವಿಶ್ವವಿದ್ಯಾಲಯದಲ್ಲಿ ಕಲಾ ಅಧ್ಯಯನದ ತರಗತಿಗಳಿಗೆ ಸೇರಿಕೊಂಡರು. ವಿದ್ಯಾಭ್ಯಾಸದ ಮತ್ತು ಇತರೆ ಖರ್ಚುಗಳಿಗಾಗಿ ತಾವು ದುಡಿಯುತ್ತಿದ್ದ ಕಡೆಗಳೆಲ್ಲೆಲ್ಲ ಆವರಿಸಿದ್ದ ಕಾರ್ಮಿಕ ಪರ ಚಿಂತನೆ ಮತ್ತು ಚಟುವಟಿಕೆಗಳಿಂದ ಅವರು ಆಕರ್ಷಿತರಾದರು. ಇದರ ಫಲವಾಗಿ ಅವರು ಅಂದಿನ ಯುವಜನತೆಯ ಬೌದ್ಧಿಕ ಆಕರ್ಷಣೆಯಾಗಿದ್ದ ಮಾರ್ಕ್ಸ್‌ವಾದದ ಆಳವಾದ ಅಧ್ಯಯನಕ್ಕೆ ತೊಡಗಿದರು. ಇವರ ಶ್ರದ್ಧೆಯನ್ನು ನೋಡಿದ ಅಲ್ಲಿನ ಕಮ್ಯೂನಿಸ್ಟ್ ಕಾರ್ಯಕರ್ತರು ಅವರನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮಾಸ್ಕೋಗೆ ಕಳಿಸುವ ಎಲ್ಲ ವ್ಯವಸ್ಥೆ ಮಾಡುತ್ತಿದ್ದಾಗಲೇ, ತಾಯಿಯ ಆರೋಗ್ಯ ಕೆಟ್ಟ ಸುದ್ದಿ ಬಂತು. ಹಾಗಾಗಿ ಜಯಪ್ರಕಾಶರು 1929ರಲ್ಲಿ ಸ್ನಾತಕೋತ್ತರ ಪದವಿ ಪಡೆದು ಭಾರತಕ್ಕೆ ವಾಪಸ್ಸಾಗಬೇಕಾಯಿತು.

ಜಯಪ್ರಕಾಶರು ಒಬ್ಬ ಕಮ್ಯೂನಿಸ್ಟ್‌ರಾಗಿ ಪರಿವರ್ತಿತರಾಗಿ ಭಾರತಕ್ಕೆ ವಾಪಸ್ಸಾಗಿದ್ದರು. ಖಾಸಗಿ ಆಸ್ತಿ ನಿಷೇಧ ಮತ್ತು ಕಾರ್ಮಿಕರ ಸರ್ವಾಧಿಕಾರಗಳಲ್ಲಿ ಅವರಿಗೆ ಬಲವಾದ ನಂಬಿಕೆ ಮೂಡಿತ್ತು. ಆದರೆ ಈ ಹೊತ್ತಿಗೆ ಅವರ ಹೆಂಡತಿ ಗಾಂಧೀಜಿಯ ಆಶ್ರಮ ಸೇರಿ ಗಾಂಧಿ ಆಪ್ತ ಪರಿವಾರದ ಕಾರ್ಯಕರ್ತೆಯಾಗಿ ಪರಿವರ್ತಿತರಾಗಿದ್ದರು! ಈಗ ತಮ್ಮ ಆಪ್ತರೆಲ್ಲರಿಂದ ಜೆ.ಪಿ. ಎಂದೇ ಎಲ್ಲರಿಂದ ಕರೆಯಲ್ಪಡುತ್ತಿದ್ದ ಜಯಪ್ರಕಾಶರು ತಮ್ಮ ಹೆಂಡತಿಯನ್ನು ಕಾಣಲು ಸಾಬರ್ಮತಿ ಆಶ್ರಮಕ್ಕೆ ಹೋದಾಗ, ಅವರ ಪತ್ನಿ ಗಾಂಧಿ ಪ್ರೇರಣೆಯಿಂದ ಬ್ರಹ್ಮಚರ್ಯದ ಪ್ರತಿಜ್ಞೆ ಸ್ವೀಕರಿಸಿರುವುದನ್ನು ಅವರಿಗೆ ತಿಳಿಸಿದರು. ಆಶ್ಚರ್ಯವೆಂದರೆ ಪತ್ನಿಯನ್ನು ಬಹುವಾಗಿ ಪ್ರೀತಿಸುತ್ತಿದ್ದ ಜೆ.ಪಿ. ತಮ್ಮ ಪತ್ನಿಯ ಪ್ರತಿಜ್ಞೆಯನ್ನು ಗೌರವಿಸಲು ತೀರ್ಮಾನಿಸಿದರು!* ಇಲ್ಲಿ ಆರಂಭವಾಯಿತು ಅವರ ರಾಜಕೀಯ ಜೀವನದ ದೊಡ್ಡ ದ್ವಂದ್ವ: ಮಾರ್ಕ್ಸ್‌ನೋ ಗಾಂಧಿಯೋ?

*** ಅನುಬಂಧ-೬ ನೋಡಿ**



ಪತ್ನಿ ಪ್ರಭಾವತಿ ಅವರೊಂದಿಗೆ ಜೆ.ಪಿ

ಬುದ್ಧಿಯಿಂದ ಮಾರ್ಕ್ಸ್‌ನಿಗೆ ಮಾರು ಹೋಗಿದ್ದ ಜೆ.ಪಿ. ಹೃದಯ ದಿಂದ ಗಾಂಧಿಗೆ ಮಾರು ಹೋಗಿದ್ದರು. ತಮ್ಮ ಪತ್ನಿಯ ಮೂಲಕ ಮುಂದೆ ಗಾಂಧೀಜಿಯ ನಿಕಟ ಸಂಪರ್ಕಕ್ಕೆ ಬಂದು, ಅವರಿಗೆ ಬಹು ಪ್ರಿಯನಾದ ಹೋರಾಟ ಗಾರನೇ ಆದ ಜೆ.ಪಿ., ಗಾಂಧಿ ಮತ ಮೂರ್ಖನೊಬ್ಬನ ಗುಂಡಿಗೆ ಬಲಿಯಾಗಿ ರಾಷ್ಟ್ರ ಜೀವನದಿಂದ ತೆರಳುವವರೆಗೆ, ಅವರ ತಾತ್ವಿಕ ಅನುಯಾಯಿಯಾಗಲು ನಿರಾಕರಿಸಿದರು! ಆದರೆ ಆವರೆಗೆ ಅವರು ಪೂರ್ಣ ಕಮ್ಯೂನಿಸ್ಟರೂ ಆಗಿರಲಿಲ್ಲ. ತೀವ್ರ ರಾಷ್ಟ್ರೀಯವಾದಿಯೂ ಆಗಿದ್ದ ಜೆ.ಪಿ, ಆಗ ಭಾರತದಲ್ಲಿ ಕಮ್ಯೂನಿಸ್ಟರು ರಾಷ್ಟ್ರೀಯ ಚಳುವಳಿಯನ್ನು ಅಗೌರವದ ಭಾಷೆಯಲ್ಲಿ ನಿಂದಿಸುತ್ತಾ, ವೈಯಕ್ತಿಕವಾಗಿ ತಾವು ಬಹುವಾಗಿ ಗೌರವಿಸುತ್ತಿದ್ದ ಗಾಂಧೀಜಿಯ ನಾಯಕತ್ವದ ಬಗ್ಗೆ ಅಪಮಾನಕಾರಿಯಾಗಿ ಮಾತನಾಡುತ್ತಿದ್ದುದರಿಂದ, ಕಾಂಗ್ರೆಸ್‌ನಲ್ಲಿಯೇ ಬಂಡುಕೋರರಾಗಿ ಉಳಿದರು. ಗಾಂಧಿ ಮತ್ತು ನೆಹರೂ ಅವರೊಂದಿಗೆ ಅವರು ಭಾಗವಹಿಸಿದ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಕೇಳಿಬಂದ 'ಇಂಕ್ವಿಲಾಬ್ ಜ಼ಿಂದಾಬಾದ್' ಮುಂತಾದ ಎಡಪಂಥೀಯ ಘೋಷಣೆಗಳು, ಅವರು ಕಾಂಗ್ರೆಸ್‌ನೊಳಗೇ ಎಡಪಂಥೀಯತೆಯನ್ನೂ, ಕ್ರಾಂತಿಕಾರತ್ವವನ್ನು ಪೋಷಿಸುವ, ಬೆಳೆಸುವ ಆಸೆಯನ್ನು ಅವರಲ್ಲಿ ಹುಟ್ಟಿಸಿದವು. ಅದಕ್ಕೆ ಪೂರಕವಾಗಿ ಸೋವಿಯತ್ ಒಕ್ಕೂಟದ ಪ್ರವಾಸ ಮಾಡಿ ಬಂದು ಅಲ್ಲಿನ ಕಾರ್ಮಿಕ ಪ್ರಭುತ್ವದ ಆರಂಭಿಕ ಉತ್ಸಾಹ ನೋಡಿ ಪುಳಕಿತರಾಗಿ ತಮ್ಮನ್ನು ಎಡಪಂಥೀಯುವನೆಂದು ಕರೆದುಕೊಳ್ಳುತ್ತಿದ್ದ ಕಾಂಗ್ರೆಸ್ಸಿನ ಯುವನಾಯಕ ಜವಾಹರ್‌ಲಾಲ್ ನೆಹರೂ, ಜೆ.ಪಿ. ಅವರಿಗೆ ಕಾಂಗ್ರೆಸ್ ಪಕ್ಷದ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಸ್ಥಾನ ನೀಡಿ, ನಂತರ ಪಕ್ಷದ ಶಾಶ್ವತ ಕಾರ್ಯದರ್ಶಿಯನ್ನಾಗಿ ಮಾಡಿ ತಮ್ಮ ಆಪ್ತರೊಬ್ಬರನ್ನಾಗಿಸಿಕೊಂಡರು.

ಈ ಮಧ್ಯೆ, ಬ್ರಿಟಿಷ್ ಸರ್ಕಾರ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ನೀಡುವ ಹಾದಿಯಲ್ಲಿನ ಮಾರ್ಗದಂತೆ ತೋರಿದ 'ಡೊಮಿನಿಯನ್' ಸ್ಥಾನಮಾನ ನೀಡುವ ವಾಗ್ದಾನವನ್ನು ಈಡೇರಿಸದೇ ಹೋದಾಗ, 'ಚೌರಿ ಚೌರ' ಘಟನೆಯಿಂದಾಗಿ ಸ್ಥಗಿತಗೊಳಿಸಲಾಗಿದ್ದ ಅಸಹಕಾರ ಚಳುವಳಿ ಮತ್ತೆ ಆರಂಭವಾಯಿತು. ಗಾಂಧಿ

ಈ ಬಾರಿ ಉಪ್ಪಿನ ಕಾನೂನನ್ನು ಮುರಿಯಲು ದಂಡಿ ಸತ್ಯಾಗ್ರಹ ಆರಂಭಿಸಿದರು. ಇದರಲ್ಲಿ ಸಕ್ರಿಯವಾಗಿ ಭಾಗವಹಿಸಲು ಉತ್ಸುಕರಾಗಿದ್ದ ಜೆ.ಪಿ., ತಾಯಿಯ ತೀವ್ರ ಅನಾರೋಗ್ಯ ಮತ್ತು ನಂತರದ ಸಾವಿನ ಕಾರಣದಿಂದಾಗಿ ಭಾಗವಹಿಸಲಾಗಲಿಲ್ಲ. ದಂಡಿ ಸತ್ಯಾಗ್ರಹದ ಪರಿಣಾಮವಾಗಿ ಬ್ರಿಟಿಷ್ ಸರ್ಕಾರ ಮತ್ತೆ ಗಾಂಧೀಜಿಯನ್ನು ಎರಡನೇ ದುಂಡು ಮೇಜಿನ ಪರಿಷತ್ತನ್ನು ಆಯೋಜಿಸಿ ಸಂಧಾನಕ್ಕೆ ಕರೆಯುವಂತಾಯಿತು. ಆದರೆ ರಾಜ ಸಂಸ್ಥಾನಗಳು, ಅಲ್ಪಸಂಖ್ಯಾತರು ಮತ್ತು ದಲಿತರ ಪ್ರತ್ಯೇಕತೆಯನ್ನು ಮಾನ್ಯಮಾಡಿ, ಸ್ವಾತಂತ್ರ್ಯ ನೀಡಿಕೆಯ ಸ್ವರೂಪವನ್ನು ನಿರ್ಧರಿಸುವ ಬ್ರಿಟಿಷ್ ಸರ್ಕಾರದ ದುರುದ್ದೇಶಿತ ಸಲಹೆಯಿಂದಾಗಿ ಈ ಸಂಧಾನವೂ ಮುರಿದುಬಿತ್ತು.

ಮತ್ತೆ ಮತ್ತೆ ಬ್ರಿಟಿಷರೊಂದಿಗೆ ಸಂಧಾನದ ಪ್ರಯತ್ನ ಮಾಡುವ ಗಾಂಧೀಜಿಯ ಗುಣದಿಂದ ಮೊದಲೇ ಕುಪಿತಗೊಂಡಿದ್ದ ಜೆ.ಪಿ., ಸುಭಾಷರೂ ಸೇರಿದಂತೆ ಕಾಂಗ್ರೆಸ್ಸಿನ ಯುವಗುಂಪು ಈಗ ಅಸಹಕಾರ ಚಳುವಳಿಯನ್ನು ತೀವ್ರಗೊಳಿಸುವಂತೆ ಗಾಂಧೀಜಿ ಮೇಲೆ ಒತ್ತಡ ಹೇರಿತು. ಇದರ ಪರಿಣಾಮವಾಗಿ ಗಾಂಧೀಜಿ ಸರ್ಕಾರದೊಡನೆ ಇನ್ನು ಸಂಧಾನ ಸಾಧ್ಯವಿಲ್ಲ ಎಂದು ಘೋಷಿಸಿದಾಗ, ಸರ್ಕಾರ ಕಾಂಗ್ರೆಸ್ಸಿನ ಎಲ್ಲಾ ನಾಯಕರನ್ನೂ ಬಂಧಿಸಿತು. ಬಂಧನದಿಂದ ತಪ್ಪಿಸಿಕೊಂಡ ಜೆ.ಪಿ., ಭೂಗತರಾಗಿ ಸರ್ಕಾರದ ವಿರುದ್ಧ ಚಳುವಳಿಯನ್ನು ಸಂಘಟಿಸತೊಡಗಿದರಾದರೂ, 1932ರ ಸೆಪ್ಟೆಂಬರ್ 7 ರಂದು ಅವರನ್ನು ಮದ್ರಾಸ್ ರೈಲ್ವೇ ನಿಲ್ದಾಣದಲ್ಲಿ ಬಂಧಿಸಲಾಯಿತು. ಈ ಸುದ್ದಿ ವಾರ್ತಾ ಪತ್ರಿಕೆಗಳಲ್ಲಿ 'ಕಾಂಗ್ರೆಸ್ ಮಿದುಳು ಬಂಧನದಲ್ಲಿ' ಎಂಬ ಶೀರ್ಷಿಕೆ ನೀಡಲಾಗಿತ್ತು ಎಂದರೆ, ಆ ಹೊತ್ತಿಗೆ ಜೆ.ಪಿ. ಕಾಂಗ್ರೆಸ್ ಸಂಘಟನೆಯಲ್ಲಿ ಎಂತಹ ಮಹತ್ವದ ಸ್ಥಾನಗಳಿಸಿದ್ದರು ಎಂಬುದು ಗೊತ್ತಾಗುತ್ತದೆ.

ಜೆ.ಪಿ.ಯವರ ಈ ಮೊದಲ ಸೆರೆಮನೆವಾಸದ ಅವಧಿಯಲ್ಲೇ ಭಾರತದ ಸಮಾಜವಾದಿ ಚಳುವಳಿಯ ಅಂಕುರವಾದದ್ದು. ನಾಸಿಕ್ ಸೆರೆಮನೆಯಲ್ಲಿ ಅವರೊಂದಿಗೆ ಅಶೋಕ ಮೆಹ್ತಾ, ಅಚ್ಯುತ್ ಪಟವರ್ಧನ್, ಯೂಸುಫ್ ಮೆಹ್ರೋಲಿ, ಮಿನೂ ಮಸಾನಿ ಮುಂತಾದ ಯುವ ಕಾಂಗ್ರೆಸ್ ನಾಯಕರೂ ಬಂಧನದಲ್ಲಿದ್ದರು. ಇವರೆಲ್ಲರೂ ಗಾಂಧಿ ಮಾರ್ಗದ ಸತತ ಸೋಲಿನಿಂದ ವ್ಯಾಕುಲಗೊಂಡು, 'ನೇರ ಹೋರಾಟ'ದ ಮಾರ್ಗಕ್ಕಾಗಿ ಕಾತರಿಸುತ್ತಿದ್ದರು. ಮಾರ್ಕ್ಸ್‌ವಾದ ಮತ್ತು ಸೋವಿಯತ್ ಕ್ರಾಂತಿಯಿಂದ ಪ್ರಭಾವಿತವಾಗಿದ್ದ ಈ ಗುಂಪು ಸೆರೆಮನೆಯಲ್ಲೇ ಪರಸ್ಪರ ಸಮಾಲೋಚನೆಯಲ್ಲಿ ತೊಡಗಿ, ಕಾಂಗ್ರೆಸ್‌ನಲ್ಲಿಯೇ ಎಡಪಂಥೀಯ ಗುಂಪೊಂದನ್ನು ಸಂಘಟಿಸಲು ನಿರ್ಧರಿಸಿತು.

ಈ ಮಧ್ಯೆ ಬ್ರಿಟಿಷ್ ಸರ್ಕಾರ ತನ್ನ ದೇಶದ ವಿಭಜನೆಯ ಪಿತೂರಿಯನ್ನು ಮುಂದುವರೆಸಿ ದಲಿತರಿಗೆ ಪ್ರತ್ಯೇಕ ಮತ ಕ್ಷೇತ್ರಗಳನ್ನಾಧರಿಸಿದ ಚುನಾವಣೆಗಳ ಮೂಲಕ ಭಾರತಕ್ಕೆ ಸೀಮಿತ ರಾಜಕೀಯ ಅಧಿಕಾರ ನೀಡುವ ಯೋಜನೆಯನ್ನು


ಪ್ರಕಟಿಸಿತು. ಯರವಾಡಾ ಜೈಲಿನಲ್ಲಿದ್ದ ಮಹಾತ್ಮಾ ಗಾಂಧಿ ಇದರ ವಿರುದ್ಧ ಉಪವಾಸ ಆರಂಭಿಸಿದರು. ಕೊನೆಗೆ ದಲಿತರ ಧ್ವನಿಯಾಗಿದ್ದ ಅಂಬೇಡ್ಕರ್ ಅವರ ಮನವೊಲಿಸಿ 'ಪೂನಾ ಒಪ್ಪಂದ'ವೆಂದು ಮುಂದೆ ಪ್ರಸಿದ್ಧವಾದ ಒಂದು ರಾಜೀಸೂತ್ರವೊಂದನ್ನು ರೂಪಿಸಲಾಯಿತು. ಇದರ ಫಲವಾಗಿ, 1935ರ ಭಾರತ ಸರ್ಕಾರದ ಕಾಯಿದೆ ಜಾರಿಗೆ ಬಂದು, ಭಾರತದಲ್ಲಿ ಪ್ರಾಂತೀಯ ಸ್ವಾಯತ್ತ ಸರ್ಕಾರಗಳ ಯುಗ ಆರಂಭವಾಯಿತು. ಬ್ರಿಟಿಷ್ ಭಾರತದ 11 ಪ್ರಾಂತ್ಯಗಳಲ್ಲಿ ಸ್ಥಳೀಯ ಜವಾಬ್ದಾರಿ ಸರ್ಕಾರಗಳು ಸ್ಥಾಪಿತವಾದವು. ಅಸಹಕಾರ ಚಳುವಳಿ ಕೊನೆಗೊಂಡಿತು. ನಾಯಕರೆಲ್ಲ ಬಿಡುಗಡೆಗೊಂಡರು.

ಜೆ.ಪಿ. ಸೆರೆಮನೆಯಿಂದ ಆಚೆ ಬಂದೊಡನೆ ಮಾಡಿದ ಮೊದಲ ಕೆಲಸವೆಂದರೆ, ಈಗಾಗಲೇ ಭಾರತದ ರಾಜಕಾರಣದಲ್ಲಿ 'ಸಮಾಜವಾದ'ದ ಚರ್ಚೆ ಆರಂಭಿಸಿದ್ದ ಆಚಾರ್ಯ ನರೇಂದ್ರ ದೇವ, ಸಂಪೂರ್ಣಾನಂದ ಮುಂತಾದ ಎಡಪಂಥೀಯ ಆಲೋಚನೆಯ ಗೆಳೆಯರನ್ನೆಲ್ಲ ಒಟ್ಟುಗೂಡಿಸಿ ಭಾರತದ ಸಮಾಜವಾದಿ ಪಕ್ಷವೊಂದನ್ನು ಸ್ಥಾಪಿಸಲು ನಿರ್ಧರಿಸಿದ್ದು, ಅದರ ಅಂಗರಚನೆಯನ್ನು ಜೆ.ಪಿ.ಯವರೇ ಸಿದ್ಧಪಡಿಸಿ, 1934ರ ಮುಂಬೈ ಕಾಂಗ್ರೆಸ್ ಅಧಿವೇಶನದ ಸಮಯದಲ್ಲೇ ಅಕ್ಟೋಬರ್ 21, 22ರಂದು ಆಚಾರ್ಯ ನರೇಂದ್ರದೇವ ಅವರ ಹಿರಿತನದಲ್ಲಿ ಅಶೋಕ ಮೆಹ್ತಾ, ಅಚ್ಯುತ ಪಟವರ್ಧನ, ಮಿನೂ ಮಸಾನಿ, ಕಮಲಾದೇವಿ ಚಟ್ಟೋಪಾಧ್ಯಾಯ, ಯೂಸುಫ್ ಮೆಹ್ರೂಲಿ ಅವರನ್ನೊಳಗೊಂಡಂತೆ 150 ಜನ ಎಡಪಂಥೀಯ ಗೆಳೆಯರ ಸಮ್ಮುಖದಲ್ಲಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಸ್ಥಾಪನೆಯನ್ನು ಘೋಷಿಸಿದರು. ಡಾ. ಸಂಪೂರ್ಣಾನಂದ ಅಧ್ಯಕ್ಷರಾದರೆ, ಸ್ವತಃ ಜೆ.ಪಿ. ಕಾರ್ಯದರ್ಶಿಯಾದರು. ಈ ಗುಂಪಿನ ಇನ್ನೊರ್ವ ಪ್ರತಿಭಾವಂತ ಯುವಕರಾಗಿದ್ದ ಡಾ. ರಾಮಮನೋಹರ ಲೋಹಿಯಾರನ್ನು ಈ ಪಕ್ಷದ ಮುಖವಾಣಿ 'ಕಾಂಗ್ರೆಸ್ ಸೋಶಲಿಸ್ಟ್' ಪತ್ರಿಕೆಯ ಸಂಪಾದಕರನ್ನಾಗಿ ಆರಿಸಲಾಯಿತು.



ಪಕ್ಷ ಕಾಂಗ್ರೆಸ್ ಸಂಘಟನೆಯ ಅಡಿಯಲ್ಲೇ ಒಂದು ಉಪ ಪಕ್ಷವಾಗಿ ಕೆಲಸ ಮಾಡಲು ತೀರ್ಮಾನಿಸಲಾಯಿತಾದರೂ, 1936ರ ಮೀರತ್ ಅಧಿವೇಶನದ ಹೊತ್ತಿಗೆ ಅದು ತನ್ನನ್ನು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಕ್ಷವೆಂದು ಘೋಷಿಸಿಕೊಂಡಿತು. ಈ ಬಗ್ಗೆ ಜೆ.ಪಿ. ವಿರುದ್ಧ ಗಾಂಧೀಜಿಗೆ ದೂರಿತ್ತಾಗ ಅವರು, 'ಜೆ.ಪಿ. ಮತ್ತು ಆತನ ಗೆಳೆಯರ ಬಗ್ಗೆ

ಚಿಂತೆ ಬೇಡ. ಆತನ ಹೆಂಡತಿ ಒತ್ತೆಯಾಳಾಗಿ ನನ್ನ ಬಳಿ ಇದ್ದಾಳೆ!' ಎಂದರಂತೆ! ಆದರೆ ಜೆ.ಪಿ., ಗಾಂಧೀಜಿಯನ್ನು ಭೇಟಿ ಮಾಡಿದಾಗಲೆಲ್ಲ ಬಗ್ಗಿ ಅವರ ಕಾಲ್ಮುಟ್ಟಿ ನಮಸ್ಕರಿಸುತ್ತಿದ್ದರಾದರೂ, ಅವರೊಂದಿಗೆ ವೈಚಾರಿಕ ಸಂಘರ್ಷಕ್ಕೂ ಇಳಿಯುತ್ತಿದ್ದರು. ಅವರ ಮಾರ್ಗದಿಂದ ಸ್ವಾತಂತ್ರ್ಯ-ಸ್ವರಾಜ್ಯ ಎರಡೂ ಸಾಧ್ಯವಿಲ್ಲ ಎಂದು ವಾದಿಸುತ್ತಿದ್ದರು. ಭೂಮಿ ಸೇರಿದಂತೆ ಎಲ್ಲ ಸಾಧನ-ಸಂಪತ್ತುಗಳ ಸರ್ಕಾರಿ ಒಡೆತನವನ್ನು ಪ್ರತಿಪಾದಿಸುತ್ತಿದ್ದರು. ಬ್ರಿಟಿಷರ ವಿರುದ್ಧ ನೇರ ಹೋರಾಟವೇ ಸೂಕ್ತ ಎಂದು ಹೇಳುತ್ತಿದ್ದರು!



ಈ ಮಧ್ಯೆ ಈರೋಪ್‌ನಲ್ಲಿ ಫ್ಯಾಸಿಸಂ ತಲೆ ಎತ್ತಿದ ಪರಿಣಾಮವಾಗಿ ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಸಂಸ್ಥೆ ತನ್ನ ಜಾಗತಿಕ ನೀತಿಯನ್ನು ಬದಲಾಯಿಸಿತು. ಕಮ್ಯೂನಿಸ್ಟರು ಆಯಾ ರಾಷ್ಟ್ರಗಳ ರಾಷ್ಟ್ರೀಯವಾದಿ ಚಳುವಳಿಗಳನ್ನು ವಿರೋಧಿಸುವುದನ್ನು ನಿಲ್ಲಿಸಿ ಅವುಗಳೊಂದಿಗೆ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಶಾಮೀಲಾಗಿ; ಆಯಾ ದೇಶಗಳಲ್ಲಿ ಕಮ್ಯೂನಿಸ್ಟ್ ಚಳುವಳಿಯನ್ನು ಬೆಳೆಸುವಂತೆ ಅದು ಕರೆ ಕೊಟ್ಟಿತು. ಇದರಿಂದಾಗಿ ಭಾರತದ ಕಮ್ಯೂನಿಸ್ಟರು ಕಾಂಗ್ರೆಸ್‌ನವರ ಸ್ನೇಹ ಸಂಪಾದಿಸಲು ಕಾಂಗ್ರೆಸ್ ಸೋಶಿಲಿಸ್ಟ್ ಪಕ್ಷವನ್ನು ಬಳಸಲು ನಿರ್ಧರಿಸಿದರು. ಸ್ವತಃ ಕಟ್ಟಾ ಮಾರ್ಕ್ಸ್‌ವಾದಿಯಾಗಿದ್ದ ಜೆ.ಪಿ. ಅವರನ್ನು ಕಾಂಗ್ರೆಸ್ ಸೋಶಲಿಸ್ಟ್ ಪಕ್ಷಕ್ಕೆ ತುಂಬು ಹೃದಯದಿಂದ ಸ್ವಾಗತಿಸಿದರು. ಇದರ ಫಲವಾಗಿ, ದೀರ್ಘಕಾಲದ ಸಂಘಟನೆಯ ಬಲವಿದ್ದ ಭಾರತದ ಕಮ್ಯೂನಿಸ್ಟ್ ಪಕ್ಷ ಈ ಹೊಸ ಕಾಂಗ್ರೆಸ್ ಸೋಶಿಲಿಸ್ಟ್ ಪಕ್ಷದ ಆಯಕಟ್ಟಿನ ಜಾಗಗಳನ್ನು ಆಕ್ರಮಿಸಿಕೊಳ್ಳಲು ಸಾಧ್ಯವಾಯಿತಲ್ಲದೆ, ಕಾಂಗ್ರೆಸ್ ಪಕ್ಷದೊಳಗಡೆಯೂ ತನ್ನ ಬಲವನ್ನು ಸ್ಥಾಪಿಸಿಕೊಳ್ಳತೊಡಗಿತು. ಇವರು ಜೆ.ಪಿ.ಯನ್ನು 'ಭಾರತದ ಲೆನಿನ್' ಎಂದು ಕರೆದು, 'ಭಾರತದ ಕ್ರಾಂತಿ ಚಿರಾಯುವಾಗಲಿ' ಎಂದು ಕೂಗಿ, ಕಾಂಗ್ರೆಸ್ಸಿನೊಳಗಿನ ಪಟೇಲ್ ಮುಂತಾದವರ ನೇತೃತ್ವದ ಬಲಪಂಥೀಯ ಗುಂಪಿನ ಪ್ರಾಬಲ್ಯವನ್ನು ಅಡಗಿಸುವ ಜೆ.ಪಿ. ಮತ್ತಿತರ ಗೆಳೆಯರ ಉದ್ದೇಶಕ್ಕೆ ಇಂಬು ನೀಡಿದರು.

ಈ ಬೆಳವಣಿಗೆಯ ಬಗ್ಗೆ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದೊಳಗೇ ವಿರೋಧ ಹೊಗೆಯಾಡುತ್ತಿತ್ತಾದರೂ, ಅದು ಸ್ಫೋಟಗೊಂಡದ್ದು 1939ರ ತ್ರಿಪುರಾ ಕಾಂಗ್ರೆಸ್ ಅಧಿವೇಶನದಲ್ಲಿ. ಕಾಂಗ್ರೆಸ್ ಅಧ್ಯಕ್ಷತೆಗೆ ಗಾಂಧೀಜಿ ಅಭ್ಯರ್ಥಿಯಾಗಿದ್ದ ಪಟ್ಟಾಭಿ ಸೀತಾರಾಮಯ್ಯನವರು ಸೋತು, ಸುಭಾಷ್‌ಚಂದ್ರ ಬೋಸ್ ಗೆದ್ದಾಗ. ಗಾಂಧೀಜಿಗೆ

ಆದ ಈ ಮುಖಭಂಗದಿಂದಾಗಿ. ಇದು ಹೇಗೆ ಸಾಧ್ಯವಾಯಿತೆಂದು ತನಿಖೆ ಮಾಡಿ ನೋಡಿದಾಗ ಗೊತ್ತಾದದ್ದು ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಮೂಲಕ ಕಾಂಗ್ರೆಸ್ ಪಕ್ಷದೊಳಗೆ ನುಸುಳಿದ್ದ ಕಮ್ಯೂನಿಸ್ಟರು. ಗಾಂಧಿ ನಾಯಕತ್ವವನ್ನು ಘಾಸಿಗೊಳಿಸಲು ಒಂದು ಸಂಘಟಿತ ಗುಂಪಾಗಿ ಕೆಲಸ ಮಾಡಿ ಇಡಿಯಾಗಿ ಸುಭಾಷರ ಪರ ಮತಹಾಕಿದ್ದರು. ಈ ಆಘಾತವನ್ನು ಗಾಂಧೀಜಿ ತಮ್ಮದೇ ತಂತ್ರದ ಮೂಲಕ ಮೆಟ್ಟಿ ನಿಂತರಾದರೂ, ಕಮ್ಯೂನಿಸ್ಟರ ತಂತ್ರದ ಬಗ್ಗೆ ಮೊದಲಿನಿಂದಲೂ ಅನುಮಾನಪಟ್ಟಿದ್ದ ಕಾಂಗ್ರೆಸ್ ಸೋಶಲಿಸ್ಟರ ಗುಂಪು ಕಮ್ಯೂನಿಸ್ಟರ ಗುಂಪಿನ ಗುಪ್ತ ಚಟುವಟಿಕೆಗಳ ಜಾಲವನ್ನು ಭೇದಿಸಿದಾಗ ಕಮ್ಯೂನಿಸ್ಟರು ಕಾಂಗ್ರೆಸ್ ನಾಯಕತ್ವವನ್ನು ಮಾತ್ರವಲ್ಲದೆ, ಕಾಂಗ್ರೆಸ್ ಸೋಶಿಲಿಸ್ಟ್ ಪಕ್ಷದ ನಾಯಕತ್ವನ್ನು ಹೀಗಳೆಯುತ್ತಾ, ಈ ಎರಡೂ ಪಕ್ಷಗಳನ್ನು ತಮ್ಮದನ್ನಾಗಿ ಮಾಡಿಕೊಳ್ಳುವ ಒಂದು ದೊಡ್ಡ 'ಯೋಜನೆ'ಯನ್ನೇ ರೂಪಿಸಿದ್ದ ದಾಖಲೆಗಳು ದೊರೆತವು. ಇದರಿಂದ ಹೆಚ್ಚು ಘಾಸಿಗೊಂಡವರೆಂದರೆ ಜೆ.ಪಿ.ಯವರೇ. ತಮ್ಮ ಪಕ್ಷದ 1939ರ ರಾಮಘಡ ಅಧಿವೇಶನದಲ್ಲಿ ಅವರು ಕಮ್ಯೂನಿಸ್ಟರನ್ನು ವಿಶ್ವಾಸದ್ರೋಹಿಗಳೆಂದೂ, ಸೋಶಲಿಸ್ಟ್ ಪಕ್ಷದ ಪರಮಶತ್ರುಗಳೆಂದೂ ಘೋಷಿಸಿ, ಅವರೆಲ್ಲರನ್ನೂ ಪಕ್ಷದಿಂದ ಹೊರಹಾಕುವ ನಿರ್ಣಯವನ್ನು ತಾವೇ ಮಂಡಿಸಿದರು. ನಿರ್ಣಯ ಅಂಗೀಕಾರವಾಯಿತಾದರೂ, ಆ ಹೊತ್ತಿಗೆ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಹಲವು-ವಿಶೇಷವಾಗಿ ದಕ್ಷಿಣ ಭಾರತದಲ್ಲಿ-ರಾಜ್ಯ ಘಟಕಗಳನ್ನು ಕಮ್ಯೂನಿಸ್ಟರು ತಮ್ಮ ತೆಕ್ಕೆಗೆ ತೆಗೆದುಕೊಂಡುಬಿಟ್ಟಿದ್ದರು. ಇ.ಎಂ.ಎಸ್. ನಂಬೂದಿರಿಪಾರ್, ಎ.ಕೆ.ಗೋಪಾಲನ್, ಸಿ.ರಾಜೇಶ್ವರ ರಾವ್, ಪಿ.ಸುಂದರಯ್ಯ ಇತ್ಯಾದಿ ಭವಿಷ್ಯದ ಕಮ್ಯೂನಿಸ್ಟ್ ನಾಯಕರೆಲ್ಲ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದ್ದು ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಮೂಲಕವೇ!

ಈ ಹೊತ್ತಿಗೆ ಎರಡನೇ ಮಹಾಯುದ್ಧ ಆರಂಭವಾಗಿ, ಇದರಲ್ಲಿ ಬ್ರಿಟನ್ ಕೂಡಾ ಭಾಗವಹಿಸಬೇಕಾಗಿ ಬಂದುದರಿಂದ, ಅದು ತನ್ನ ವಸಾಹತುವಾಗಿದ್ದ ಭಾರತವನ್ನು ಈ ಯುದ್ಧಕ್ಕೆ ಎಳೆಯುವ ಪ್ರಯತ್ನ ಮಾಡಿತು. ಈ ಪ್ರಯತ್ನದ ಭಾಗವಾಗಿ, ಭಾರತದ ಸೈನಿಕ ತುಕಡಿಗಳನ್ನು ಬ್ರಿಟನ್ ಪರ ಹೋರಾಡಲು ಕಳಿಸುವ ಮತ್ತು ಪ್ರಾಂತೀಯ ಸರ್ಕಾರಗಳ ಕೆಲವು ಅಧಿಕಾರಗಳನ್ನು ಮೊಟಕುಗೊಳಿಸುವ ಕ್ರಮವನ್ನು ಕೈಗೊಳ್ಳಲು ಬ್ರಿಟಿಷ್ ಸರ್ಕಾರ ಮುಂದಾಯಿತು. ಇದಕ್ಕೆ ಕಾಂಗ್ರೆಸ್‌ನಿಂದ ವ್ಯಾಪಕ ಪ್ರತಿಭಟನೆ ವ್ಯಕ್ತವಾಯಿತು. ಭಾರತ ಯುದ್ಧದಲ್ಲಿ ಬ್ರಿಟಿಷ್ ಸರ್ಕಾರದೊಂದಿಗೆ ಸಹಕರಿಸಬೇಕೇ ಬೇಡವೇ ಎಂಬ ಬಗ್ಗೆ ಕಾಂಗ್ರೆಸ್‌ನಲ್ಲಿ ಭಿನ್ನಾಭಿಪ್ರಾಯಗಳು ವ್ಯಕ್ತವಾದವು. ಕಾಂಗ್ರೆಸ್ ಸೋಶಲಿಸ್ಟರು ಬ್ರಿಟಿಷ್ ಸರ್ಕಾರವನ್ನು ಬೆಂಬಲಿಸದೆ ಅದರ ಮೇಲೆ ಒತ್ತಡ ಹೇರುವ ಮೂಲಕ ಪೂರ್ಣ ಸ್ವಾತಂತ್ರ್ಯ ಪಡೆಯುವ ಸದವಕಾಶವಿದೆಯೆಂದು ತೀರ್ಮಾನಿಸಿ ಯುದ್ಧವಿರೋಧಿ ಆಂದೋಲನ ಆರಂಭಿಸಿದರು.

ಇದರ ಭಾಗವಾಗಿ ಜೆ.ಪಿ. ಜಿಮ್‌ಶೆಡ್‌ಪುರದಲ್ಲಿ ಕಾರ್ಮಿಕರನ್ನು ಉದ್ದೇಶಿಸಿ ಮಾಡಿದ ಭಾಷಣದಿಂದಾಗಿ ಅವರನ್ನು ಬಂಧಿಸಲಾಯಿತು.



ಒಂಭತ್ತು ತಿಂಗಳ ಈ ಸೆರೆಮನೆವಾಸ ಅವರ ಬದುಕಿನಲ್ಲಿ ಒಂದು ದೊಡ್ಡ ವೈಚಾರಿಕ ತಿರುವಿಗೆ ಕಾರಣವಾಯಿತು. ಸ್ಟಾಲಿನ್ ಯುಗ ಮುಗಿದಿತ್ತು. ಸೋವಿಯತ್ ಒಕ್ಕೂಟದಿಂದ ಕಮ್ಯೂನಿಸ್ಟ್ ಬರ್ಬರತೆಯ ಸುದ್ದಿಗಳು ಬರತೊಡಗಿದ್ದವು. ಈ ಸಂಬಂಧ ಸೆರೆಮನೆಯಲ್ಲಿ ಅವರು ಅನೇಕ ಹೊಸ ಪುಸ್ತಕಗಳನ್ನು ಓದಿದರು. ಮಾರ್ಕ್ಸ್‌ವಾದಿ-ಲೆನಿನ್‌ವಾದಿ ದೃಷ್ಟಿಕೋನದ ಬಗ್ಗೆ ಅವರಲ್ಲಿ ಪುನರಾಲೋಚನೆ ಆರಂಭವಾಯಿತು. ಈ ಬಂಧನದಿಂದ ಬಿಡುಗಡೆಯಾದ ನಂತರದಲ್ಲೇ ಅವರು ಭೂಗತರಾಗಿ ಬ್ರಿಟಿಷ್ ಸರ್ಕಾರವನ್ನು ಬಹಿಷ್ಕರಿಸುವ ಯುದ್ಧವಿರೋಧಿ ಆಂದೋಲನದಲ್ಲಿ ಮತ್ತೆ ತೊಡಗಿಕೊಂಡರು. ಇವರ ವಿಧ್ವಂಸಕ ಕೃತ್ಯಗಳ ಜಾಡುಹಿಡಿದ ಬ್ರಿಟಿಷ್ ಸರ್ಕಾರ ಇವರನ್ನು ಮುಂಬೈನಲ್ಲಿ ಬಂಧಿಸಿ ಅತ್ಯಂತ ಕುಪ್ರಸಿದ್ಧ ಸೆರೆಮನೆ ಎನಿಸಿದ್ದ ರಾಜಸ್ಥಾನದ ದೇವಲಿ ಶಿಬಿರಕ್ಕೆ ಕಳಿಸಲಾಯಿತು.

ಮೂರನೇ ದರ್ಜೆ ಅಪರಾಧಿಗಳಿಗೆ ಮೀಸಲಾದ ಈ ಮರುಭೂಮಿ ಮಧ್ಯದ ಗುಡಾರಗಳನ್ನೊಳಗೊಂಡ ಈ 'ಸೆರೆಮನೆ'ಯಲ್ಲಿ ಬಂಧಿತರಿಗೆ ಸರಿಯಾದ ಅನ್ನಾಹಾರ ನೀಡದೆ, ವೈದ್ಯಕೀಯ ಸೌಲಭ್ಯಗಳಿಲ್ಲದೆ ಕ್ರೂರವಾಗಿ ನೋಡಿಕೊಳ್ಳಲಾಗುತ್ತಿತ್ತು. ಆದರೂ ಜೆ.ಪಿ., ಅಲ್ಲಿಂದಲೇ ತಮ್ಮನ್ನು ಕಾಣಲು ಬಂದವರ ಮೂಲಕ ಕಳ್ಳತನದಲ್ಲಿ ಪತ್ರಗಳನ್ನು ಕಳಿಸಿ, ಹೊರಗೆ ಬ್ರಿಟಿಷ್ ವಿರೋಧಿ ವಿಧ್ವಂಸಕ ಕೃತ್ಯಗಳನ್ನು ಆಯೋಜಿಸುತ್ತಿದ್ದರು. ಒಮ್ಮೆ ತಮ್ಮನ್ನು ಕಾಣಲು ಬಂದ ಪತ್ನಿ ಪ್ರಭಾವತಿಯವರ ಮೂಲಕವೇ ಇಂತಹ ಸಂದೇಶವೊಂದನ್ನು ಸಾಗಿಸಲು ಯತ್ನಿಸುತ್ತಿರುವಾಗ ಸಿಕ್ಕಿಹಾಕಿಕೊಂಡರು. ಆ ಸಂದೇಶ ವಿಧ್ವಂಸಕ ಕೃತ್ಯಗಳಿಗೆ ಕೊಟ್ಟ ಕರೆಯಾದುದರಿಂದ ಬ್ರಿಟಿಷ್ ಸರ್ಕಾರ; ವಿದ್ಯಾವಂತರೂ, ಬುದ್ಧಿವಂತರೂ ಆದ ಜೆ.ಪಿ.ಯವರನ್ನು ಅಂತಹ ಶಿಬಿರದಲ್ಲಿ ಬಂದಿಯಾಗಿಡಬಾರದೆಂಬ ಗಾಂಧಿಯವರ ಸಲಹೆಯನ್ನು ತಿರಸ್ಕರಿಸಿ, ಕಾಂಗ್ರೆಸ್ ಹೇಗೆ ಒಂದು ಹಿಂಸಾತ್ಮಕ ಆಂದೋಲನವಾಗುತ್ತಿದೆ ಎಂದು ಪ್ರಚಾರ ಮಾಡಿತು. ಗಾಂಧಿ, ಈ ಹಿಂಸಾಚಾರಕ್ಕೆ ಬ್ರಿಟಿಷ್ ಸರ್ಕಾರದ ದಮನ ನೀತಿಯೇ ಕಾರಣವೆಂದು ಉತ್ತರಿಸಿ, ಜೆ.ಪಿ.ಯವರನ್ನು ಬಿಡುಗಡೆ ಮಾಡಲು ಆಗ್ರಹಿಸಿದರು. ಈ ಮಧ್ಯೆ ಜೆ.ಪಿ. ಗಾಂಧಿಮಾರ್ಗ ಬಳಸಿ, ಶಿಬಿರದಲ್ಲಿನ ಸ್ಥಿತಿಗತಿಗಳ ವಿರುದ್ಧ 31 ದಿನಗಳ ಕಾಲ ಉಪವಾಸ ಕೂತರು. ಕೊನೆಗೆ ಬ್ರಿಟಿಷ್ ಸರ್ಕಾರ

ಅವರನ್ನು ಅವರದೇ ರಾಜ್ಯವಾದ ಬಿಹಾರದ ಹಜ಼ಾರಿಬಾಗ್ ಸೆರೆಮನೆಗೆ ಸ್ಥಳಾಂತರಿಸಿತು.

ಈ ಮಧ್ಯೆ ಯುದ್ಧ ಭಾರತದ ಬಾಗಿಲಿಗೇ ಬರುವಂತಾದಾಗ -ಜಪಾನೀ ಸೇನೆ ಬರ್ಮಾ ಗಡಿ ಮುಟ್ಟಿದಾಗ-ಕಾಂಗ್ರೆಸ್ ತನ್ನೆಲ್ಲ ಭಿನ್ನಾಭಿಪ್ರಾಯಗಳನ್ನು ಮರೆತು 1942ರ ಆಗಸ್ಟ್ 8ರಂದು ಬ್ರಿಟಿಷರಿಗೆ 'ಭಾರತ ಬಿಟ್ಟು ತೊಲಗಿ' ಎಂದು ಆಜ್ಞಾಪಿಸುವ ನಿರ್ಣಯವನ್ನು ಅಂಗೀಕರಿಸಿತು. ಈ ಸಂಬಂಧ ಗಾಂಧೀಜಿ ಮುಂಬೈನಲ್ಲಿ ಮಾಡಿದ ಭಾವನಾತ್ಮಕ ಭಾಷಣದಲ್ಲಿ, ಜನರನ್ನು 'ಮಾಡಿ ಇಲ್ಲವೇ ಮಡಿಯಿರಿ' ಎಂದು ನೀಡಿದ ಕರೆಯಿಂದ ದೇಶಾದ್ಯಂತ ವಿದ್ಯುತ್ ಸಂಚಾರವಾದಂತಾಗಿ, ಜನ ಬ್ರಿಟಿಷ್ ಸರ್ಕಾರದ ವಿರುದ್ಧ ಬಹಿರಂಗವಾಗಿ ದಂಗೆಯೆದ್ದರು. ಅವರಿಗೆ ಮಾರ್ಗ ತೋರಲು ಯಾರೂ ಇಲ್ಲದಂತೆ ಸರ್ಕಾರ ಎಲ್ಲ ಕಾಂಗ್ರೆಸ್ ನಾಯಕರನ್ನು ಬಂಧಿಸಿದ್ದರಿಂದಾಗಿ, ಜನ ರೊಚ್ಚಿನಿಂದ ಬ್ರಿಟಿಷ್ ಸರ್ಕಾರದ ಆಸ್ತಿ ಪಾಸ್ತಿಗಳನ್ನು ನಾಶಮಾಡತೊಡಗಿದರು. ಸರ್ಕಾರಿ ಕಚೇರಿಗಳಿಗೆ ಬೆಂಕಿ, ರೈಲ್ವೇನಿಲ್ದಾಣಗಳಿಗೆ ಮುತ್ತಿಗೆ, ಟೆಲಿಫೋನ್, ಟೆಲಿಗ್ರಾಫ್ ತಂತಿಗೆ ಕತ್ತರಿ, ಸೇತುವೆಗಳ ಸ್ಫೋಟ ದಿನನಿತ್ಯದ ಘಟನೆಗಳಾದವು. ಕಾಂಗ್ರೆಸ್ ಸೋಶಲಿಸ್ಟ್ ನಾಯಕರೆಲ್ಲ ಭೂಗತವಾಗಿ ಈ ವಿಧ್ವಂಸಕ ಕೃತ್ಯಗಳನ್ನು ಆಯೋಜಿಸಿ ಪ್ರೋತ್ಸಾಹಿಸುತ್ತಿದ್ದರು. ಲೋಹಿಯಾ ಮತ್ತವರ ಗೆಳೆಯರು ಒಂದು ಸಂಚಾರಿ ರೇಡಿಯೋ ಕೇಂದ್ರವನ್ನೇ ಸ್ಥಾಪಿಸಿ ಆ ಮೂಲಕ ಯುದ್ಧವಿರೋಧಿ ಕಾರ್ಯಾಚರಣೆಗೆ ಪ್ರಚೋದನೆ ನೀಡುತ್ತಾ ಬ್ರಿಟಿಷ್ ಸರ್ಕಾರಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದ್ದರು.

ಹೀಗೆ ಬ್ರಿಟಿಷ್ ವಿರೋಧಿ ಚಳುವಳಿ ಕಾವೇರುತ್ತಿದ್ದಂತೆ ಜೆ.ಪಿ.ಯವರಿಗೆ ಸೆರೆಮನೆಯಲ್ಲಿ ಉಳಿಯುವುದು ಅಸಾಧ್ಯವೆನಿಸಿತು. ಅವರು 1942ರ ನವೆಂಬರ್ 8ರಂದು ತಮ್ಮ ಸಹ ಬಂದಿಗಳ ಜೊತೆ ಸೇರಿ ಕಾವಲುಗಾರರಿಗೆ ಚಳ್ಳೆಹಣ್ಣು ತಿನ್ನಿಸಿ ಸೆರೆಮನೆಯ ಗೋಡೆ ಹಾರಿ ಹಗಲೂ ರಾತ್ರಿ ಕಾಡಿನಲ್ಲಿ ನಡೆದು ಬಿಹಾರ ಗಡಿದಾಟಿ ನೇಪಾಳವನ್ನು ಪ್ರವೇಶಿಸಿದರು. ಆ ಗಡಿ ಪ್ರದೇಶದಲ್ಲಿ ಅಜ್ಞಾತವಾಗಿ ನೆಲೆ ನಿಂತು 'ಆಜ಼ಾದ್ ದಾಸ್ತಾ' ಎಂಬ ಸ್ವಯಂ ಸೇವಕರ ಪಡೆಯೊಂದನ್ನು ಸಿದ್ಧಗೊಳಿಸಿ ಅಲ್ಲಿ ಒಂದು ಸಮಾನಾಂತರ ಸರ್ಕಾರವನ್ನೇ ಸ್ಥಾಪಿಸಿದರು. ಆ ಹೊತ್ತಿಗೆ ಅಲ್ಲಿಗೆ ಪೋಲೀಸ್ ಕಣ್ತಪ್ಪಿಸುತ್ತಾ, ಬಂದ ಲೋಹಿಯಾ ಮತ್ತಿತರ ಗೆಳೆಯರು ಬಂದು ಸೇರಿದರು. ಮತ್ತೆ ಪೋಲೀಸರು ಇವರ ಬೆನ್ನು ಹತ್ತಿದ ಪರಿಣಾಮವಾಗಿ ಗುಂಪು ಚೆಲ್ಲಾಪಿಲ್ಲಿಯಾಯಿತು. ಜೆ.ಪಿ. ಮಾರುವೇಷದಲ್ಲಿ ದೆಹಲಿ ತಲುಪಿ, ಅಲ್ಲಿಂದ ಬಲೂಚಿಸ್ತಾನದ ಪಠಾಣರನ್ನು ದಂಗೆಯೇಳಿಸಲು ರಾವಲ್ಪಿಂಡಿಗೆ ರೈಲಲ್ಲಿ ಹೊರಟಿದ್ದಾಗ ಅವರನ್ನು ಬಂಧಿಸಿ ಹತ್ತಿರದ ಲಾಹೋರ್ ಕೋಟೆಯ ಸೆರೆಮನೆಗೆ ದೂಡಲಾಯಿತು. ಅಲ್ಲಿಗೆ ಆ ಹೊತ್ತಿಗಾಗಲೇ ಮುಂಬೈನಲ್ಲಿ ಸಿಕ್ಕಿ ಬಿದ್ದಿದ್ದ ಲೋಹಿಯಾರನ್ನು ಕರೆತರಲಾಗಿತ್ತು.

ಲಾಹೋರ್ ಸೆರೆಮನೆಯಲ್ಲಿ ಜೆ.ಪಿ ಮತ್ತು ಲೋಹಿಯಾರ ವಿಚಾರಣೆ ಆರಂಭವಾಯಿತು. ಕೈಕಾಲುಗಳಿಗೆ ಬೇಡಿ ಹಾಕಿ ಕತ್ತಲೆ ಕೋಣೆಯಲ್ಲಿ ಕೂಡಿಹಾಕಲಾಗಿದ್ದ ಅವರನ್ನು ಹಲವು ರೀತಿಯ ಮೂರನೇ ದರ್ಜೆ ಶಿಕ್ಷೆಗೆ ಒಳಪಡಿಸಿ ಅವರಿಂದ ವಿಧ್ವಂಸಕ ಕೃತ್ಯಗಳ ವಿವರಗಳನ್ನೂ, ತಪ್ಪೊಪ್ಪಿಗೆಯನ್ನೂ ಪಡೆಯಲು ಪ್ರಯತ್ನಿಸಲಾಯಿತು. ಆದರೆ ಜೆ.ಪಿ. ಮತ್ತು ಲೋಹಿಯಾ ಬಾಯಿ ಬಿಡಲಿಲ್ಲ. ಹನ್ನೊಂದು ತಿಂಗಳುಗಳ ಈ ಭಯಾನಕ ಸೆರೆವಾಸದ ನಂತರ, ಹೊರಗೆ ಪರಿಸ್ಥಿತಿ ಬದಲಾಗಿ ಭಾರತದ ಸ್ವಾತಂತ್ರ್ಯೋದಯದ ಸೂಚನೆಗಳು ಆರಂಭವಾಗುತ್ತಿದ್ದಂತೆ, ಎಲ್ಲ ಹೋರಾಟಗಾರರೊಂದಿಗೆ 1946ರ ಏಪ್ರಿಲ್ 11ರಂದು ಜೆ.ಪಿ. ಮತ್ತು ಲೋಹಿಯಾರ ಬಿಡುಗಡೆ ಮಾಡಲಾಯಿತು. ಅವರಿಗೆ ದೇಶಾದ್ಯಂತ ವೀರೋಚಿತ ಸ್ವಾಗತ ದೊರಕಿತು. ಆ ಹೊತ್ತಿಗೆ ತಮ್ಮ ಮಿತ್ರ ಮೀನೂ ಮಸಾನಿ ಸೋವಿಯತ್ ಪ್ರವಾಸ ಮಾಡಿಬಂದು ಬರೆದಿದ್ದ ಅನುಭವ ಕಥನವೊಂದು, ಆ ಸಂಬಂಧದ ಇತರ ಪುಸ್ತಕಗಳ ಜೊತೆ ಸೇರಿ, ಜೆ.ಪಿ.ಯವರಲ್ಲಿ ಕಮ್ಯೂನಿಸ್ಟ್ ಪ್ರಭುತ್ವದ ಸ್ವರೂಪದ ಬಗ್ಗೆಯೇ ಭ್ರಮನಿರಸನ ಉಂಟುಮಾಡಿತ್ತು.

ಯುದ್ಧದಲ್ಲಿ ಬ್ರಿಟನ್ ಮತ್ತು ಅದರ ಗೆಳೆಯ ರಾಷ್ಟ್ರಗಳು ಜಯಗಳಿಸಿದ್ದವು. ಆದರೆ ಭಾರತಕ್ಕೆ ಸ್ವಾತಂತ್ರ್ಯ ನೀಡಲು ಅಡ್ಡಗಾಲು ಹಾಕಿದ್ದ ಬ್ರಿಟಿಷ್ ಪ್ರಧಾನಿ ಚರ್ಚಿಲ್ ಯುದ್ಧಾನಂತರದ ಚುನಾವಣೆಗಳಲ್ಲಿ ಸೋತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ನೀಡುವುದರ ಪರವಾಗಿದ್ದ ಅಟ್ಲೀ ನೇತೃತ್ವದ ಲೇಬರ್ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಅದು ತನ್ನ ಗೆಳೆಯ ರಾಷ್ಟ್ರಗಳ ಒತ್ತಡಕ್ಕೆ ಮಣಿದು, ತ್ವರಿತ ಗತಿಯಲ್ಲಿ ಭಾರತದಿಂದ ಬ್ರಿಟಿಷ್ ಸರ್ಕಾರ ಕಾಲ್ತೆಗೆಯಲು ಅನುವಾಗುವಂತಹ ವ್ಯವಸ್ಥೆ ರೂಪಿಸಲು, ಕ್ರಿಪ್ಸ್ ನೇತೃತ್ವದ ನಿಯೋಗವೊಂದನ್ನು ಕಳಿಸಿತ್ತು.

ಆದರೆ ಕಾಂಗ್ರೆಸ್ ಸೋಶಲಿಸ್ಟರಿಗೆ ಈ ಅಧಿಕಾರ ಹಸ್ತಾಂತರದ ವ್ಯವಸ್ಥೆ ರೂಪಿಸುವ ಕ್ರಮವೂ ಬ್ರಿಟಿಷ್ ಸರ್ಕಾರದ ಕಾಲಹರಣ ತಂತ್ರವಾಗಿ ಕಂಡಿತು. ಅವರು ಬ್ರಿಟಿಷರು ಕೂಡಲೇ ಭಾರತದಿಂದ ಕಾಲ್ತೆಗೆಯಬೇಕು; ನಂತರದ ವ್ಯವಸ್ಥೆಯನ್ನು ತಾವು ಮಾಡಿಕೊಳ್ಳುವಾ ಎಂಬ ನಿಲುವನ್ನು ತಾಳಿದ್ದರು. ಜೊತೆಗೆ ಮಹಮ್ಮದಾಲಿ



ಯೂಸುಫ್ ಮೆಹ್ರೂಲಿ ಅವರೊಂದಿಗೆ ಜೆ.ಪಿ.

ಜಿನ್ನಾರ ಪಾಕಿಸ್ತಾನದ ಕೂಗು ಬ್ರಿಟಿಷರ ಕುತಂತ್ರವಾಗಿಯೇ ಕಂಡು, ಪರಿಸ್ಥಿತಿಯನ್ನು ಇನ್ನಷ್ಟು ಜಟಿಲಗೊಳಿಸಿತು. ಗಾಂಧೀಜಿ ಎಷ್ಟೇ ಹೇಳಿದರೂ ಜೆ.ಪಿ. ಮತ್ತವರ ಸೋಶಲಿಸ್ಟ್ ಗೆಳೆಯರು ಮಧ್ಯಂತರ ಸರ್ಕಾರ, ಸಂವಿಧಾನ ರಚನಾ ಸಭೆ ಇತ್ಯಾದಿ ಸ್ವಾತಂತ್ರ್ಯದೆಡೆಯ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ನಿರಾಕರಿಸಿದರು. ಅವರು ಈ ಸಂಬಂಧದ ಕಾಂಗ್ರೆಸ್ಸಿನ ತೀರ್ಮಾನಗಳಲ್ಲೂ ಜವಾಬ್ದಾರಿ ಸ್ಥಾನಗಳಲ್ಲಿದ್ದು ಭಾಗವಹಿಸಲು, ಕಾಂಗ್ರೆಸ್ಸಿನ ಹಿರಿಯ ನಾಯಕರು ಒಪ್ಪದಂತಹ ಷರತ್ತುಗಳನ್ನು ಹಾಕಿದರು. ಅವರಿಗೆ ಈ ಎಲ್ಲ ಪ್ರಕ್ರಿಯೆ, ಔಪಚಾರಿಕತೆಗಳ ಮೂಲಕ ಅಧಿಕಾರ ಬ್ರಿಟಿಷರಿಂದ ಭಾರತದ ಪಟ್ಟಭದ್ರ ಹಿತಾಸಕ್ತಿಗಳಿಗಷ್ಟೇ ವರ್ಗಾವಣೆಯಾಗುತ್ತದೆ ಎಂಬ ಆತಂಕವಿತ್ತು. ಈ ಆತಂಕವನ್ನು ನಿವಾರಿಸಲು ಗಾಂಧಿ, ಜೆ.ಪಿ.ಯವರನ್ನು ಮತ್ತು ಆನಂತರ ಆಚಾರ್ಯ ನರೇಂದ್ರದೇವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಲು ಪ್ರಯತ್ನಪಟ್ಟರಾದರೂ, ನೆಹರೂ-ಪಟೇಲ್ ಗುಂಪು ಅದನ್ನು ನಯವಾಗಿ ತಡೆಯಿತು.

1947ರ ಆಗಸ್ಟ್ 15ರಂದು ಬ್ರಿಟಿಷರು ಭಾರತವನ್ನು ಬಿಟ್ಟುಹೋದರು. ಸ್ವಾತಂತ್ರ್ಯ ಘೋಷಣೆಯೂ ಆಯಿತು. ನೆಹರೂ ಪ್ರಧಾನಮಂತ್ರಿಯಾದರು. ಆದರೆ ಅದರ ಜೊತೆಯಲ್ಲೇ ದೇಶವಿಭಜನೆಯ ಅನಾಹುತದ ನೆತ್ತರು ದೇಶಾದ್ಯಂತ ಹರಿಯಿತು. ಬಂಗಾಳದಲ್ಲಿನ ಹಿಂದೂಗಳ ಮಾರಣಹೋಮಕ್ಕೆ ಪ್ರತಿಯಾಗಿ ಬಿಹಾರದಲ್ಲಿ ಮುಸ್ಲಿಮರ ಮಾರಣಹೋಮ ಆರಂಭವಾದಾಗ ಜೆ.ಪಿ. ಅಲ್ಲಿಗೆ ತೆರಳಿ, ಅದನ್ನು ತಡೆಯಲಾಗದ ಕಾಂಗ್ರೆಸ್ ಸರ್ಕಾರಕ್ಕೆ ಛೀಮಾರಿ ಹಾಕಿದರು. ಮುಸ್ಲಿಮರಲ್ಲಿ ಆತ್ಮವಿಶ್ವಾಸ ತುಂಬಿದರು. ಇದೇ ಹೊತ್ತಿನಲ್ಲಿ ನೆಹರೂ ಸರ್ಕಾರದ ಆಡಳಿತ ಶೈಲಿ ಮತ್ತು ಅಭಿವೃದ್ಧಿ ನೀತಿಯನ್ನು ಕಂಡು ವಿಚಲಿತರಾದ ಗಾಂಧೀಜಿ, ಇವುಗಳನ್ನು ಸರಿದಾರಿಗೆ ತರುವ ದಿಕ್ಕಿನ ಪ್ರಯತ್ನವಾಗಿ ಕಾಂಗ್ರೆಸ್ ಸೋಶಲಿಸ್ಟರೊಂದಿಗೆ ಮಾತುಕತೆ ಆರಂಭಿಸಿದ್ದರು. ಆದರೆ ಈ ಸಂದರ್ಭದಲ್ಲಿ ದಟ್ಟವಾಗಿ ಹರಡಿದ್ದ ರುದ್ರ ಭಯಂಕರ ಕೋಮುಗಲಭೆಯ ಉದ್ವಿಗ್ನತೆಯಲ್ಲಿ ಗಾಂಧೀಜಿ 1948ರ ಜನವರಿ 30ರಂದು ಕೊಲೆಯಾದರು. ಜೆ.ಪಿ. ಸೇರಿದಂತೆ ಕಾಂಗ್ರೆಸ್ ಸೋಶಲಿಸ್ಟರೆಲ್ಲ ದಿಗ್ಭ್ರಾಂತರಾದರು. ತಂದೆಯನ್ನು ಕಳೆದುಕೊಂಡಂತೆ ಅನಾಥರಾದರು. ಇದೇ ಸಮಯವೆಂದು ಪಟೇಲ್ ಇವರ ಕಿರಿಕಿರಿಗೆ ತಡೆಹಾಕಲು ಕೆಲವೇ ದಿನಗಳಲ್ಲಿ ಕಾಂಗ್ರೆಸ್ ಸಂವಿಧಾನಕ್ಕೆ ಒಂದು ತಿದ್ದುಪಡಿ ಮಾಡಿಸಿ, ಕಾಂಗ್ರೆಸ್ ಸೋಶಿಲಿಸ್ಟರು ಕಾಂಗ್ರೆಸ್‌ನಿಂದ ಇಡಿಯಾಗಿ ಹೊರಹೋಗುವಂತೆ ನೋಡಿಕೊಂಡರು.

ಹೀಗೆ ಕಾಂಗ್ರೆಸ್‌ನಿಂದ ಸ್ವತಂತ್ರವಾದ ಸೋಶಲಿಸ್ಟರು ತಮ್ಮದೇ ಭಾರತದ ಸಮಾಜವಾದಿ ಪಕ್ಷ ಸ್ಥಾಪಿಸಿಕೊಂಡು, 1952ರ ಮೊದಲ ಮಹಾಚುನಾವಣೆಗಳನ್ನು ಎದುರಿಸಿದರು. ಭಾರೀ ಸೋಲನ್ನು ಅನುಭವಿಸಿ ಕಂಗಾಲಾದರು. ಆನಂತರ ಪಕ್ಷ, ನೆಹರೂ ಸರ್ಕಾರದ ವೈಖರಿಯಿಂದ ಬೇಸರಗೊಂಡ ಆಚಾರ್ಯ ಕೃಪಲಾನಿಯವರಂತಹ

ಇನ್ನಷ್ಟು ಎಡಪಂಥೀಯ ಗಾಂಧೀವಾದಿಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡು 'ಪ್ರಜಾ ಸಮಾಜವಾದಿ ಪಕ್ಷ' ಎನ್ನಿಸಿಕೊಂಡಿತು. ಈ ಮಧ್ಯೆ ಲೋಹಿಯಾ ಚುನಾವಣಾ ನಂತರದ ಪಕ್ಷದ ಪಂಚಮಡಿ ಅಧಿವೇಶನದಲ್ಲಿ ಪಕ್ಷಕ್ಕೆ ಮಾರ್ಕ್ಸ್‌ವಾದಕ್ಕಿಂತ ಭಿನ್ನವಾದ ಗಾಂಧಿ ತತ್ವಗಳಿಂದ ಪ್ರಭಾವಿತವಾದ ಹೊಸ ಭಾರತೀಯ ಸಮಾಜವಾದದ ದೀಕ್ಷೆ ನೀಡಿದ್ದರು. ಜೆ.ಪಿ. ತಾವು ಈ ಹಿಂದೆ ಕಾರ್ಮಿಕ ನಾಯಕರಾಗಿದ್ದಾಗ ಕಾಂಗ್ರೆಸ್ ಸರ್ಕಾರವನ್ನು ನಂಬಿ ಕಾರ್ಮಿಕ ಸಂಘವೊಂದಕ್ಕೆ ನೀಡಿದ್ದ ವಾಗ್ದಾನವನ್ನು ಸರ್ಕಾರದ ವಚನಭಂಗದಿಂದಾಗಿ ಈಡೇರಿಸಲಾಗದಕ್ಕೆ ಪಶ್ಚಾತ್ತಾಪ ಕ್ರಮವಾಗಿ, ಏಳು ವಾರಗಳ ಉಪವಾಸ ನಡೆಸಿದರು. ಈ ಸಂದರ್ಭದಲ್ಲಿ ಅವರು ತಮ್ಮ ಈವರೆಗಿನ ಚಿಂತನೆ ಮತ್ತು ಅನುಭವಗಳನ್ನೆಲ್ಲ ಸಮಗ್ರವಾಗಿ ಹಿನ್ನೋಡಿ, ಮಾರ್ಕ್ಸ್‌ವಾದದ ಗತಿ ತಾರ್ಕಿಕತೆಯಲ್ಲಿ ಮನುಷ್ಯನ ಒಳ್ಳೆಯತನದ ಕಲ್ಪನೆಗೇ ಅವಕಾಶವಿಲ್ಲ ಎಂದು ತೀರ್ಮಾನಿಸಿ, ತಾವು ಈವರೆಗೆ ನಂಬಿಕೊಂಡು ಬಂದು ಹಲವಾರು ಬಾರಿ ಪುನರಾಲೋಚನೆಗೊಡ್ಡಿದ್ದ ಭೌತವಾದಕ್ಕೆ ತಿಲಾಂಜಲಿ ನೀಡಿದರು.

ನಂತರದ ದಿನಗಳಲ್ಲಿ ನೆಹರೂ ಕಾಂಗ್ರೆಸ್‌ನಲ್ಲಿ ಒಂಟಿಯಾಗಿ, ತಮ್ಮ ವಿರೋಧಿಗಳನ್ನು ಮಣಿಸುವ ರಾಜಕಾರಣದ ಭಾಗವಾಗಿ 1953ರ ಆವಡಿ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಮಾಜವಾದದ ದೀಕ್ಷೆ ನೀಡಿ, ಸಮಾಜವಾದಿಗಳನ್ನು ಸರ್ಕಾರದಲ್ಲಿ ಭಾಗವಹಿಸಲು ಆಹ್ವಾನಿಸಿದರು. ಜೆ.ಪಿ. ಅದಕ್ಕೆ ಮರುಳಾಗಿ ಕಾಂಗ್ರೆಸ್ ನಾಯಕರೊಂದಿಗೆ ಮಾತುಕತೆಗೆ ತೊಡಗಿದರು. ಇದರಿಂದ ಸಿಟ್ಟಾದ ಲೋಹಿಯಾ ಮತ್ತು ಅವರ ಅನುಯಾಯಿಗಳು ಜೆ.ಪಿ. ವಿರುದ್ಧ ಕಿಡಿ ಕಾರಿದರು. ಆದರೆ ಜೆ.ಪಿ. ಮಂಡಿಸಿದ ಷರತ್ತುಗಳಿಗೆ ಕಾಂಗ್ರೆಸ್ ಒಪ್ಪದೇ ಹೋಗಿ ಮಾತುಕತೆ ಮುರಿದು ಬಿದ್ದಾಗ ಜೆ.ಪಿ. ಒಂಟಿಯಾಗಿ ಹೋದರು. ನಂತರ ಇಲ್ಲಿಂದ ಆರಂಭವಾದಂತೆ ಸಮಾಜವಾದಿ ಪಕ್ಷದಲ್ಲಿ ಉಂಟಾದ ಅಶಾಂತಿ ಮತ್ತು ಒಳಜಗಳಗಳು ಜೆ.ಪಿ.ಯವರನ್ನು ಕಂಗೆಡಿಸಿ, ಅವರು ನಿಧಾನವಾಗಿ ಪಕ್ಷ ರಾಜಕೀಯವನ್ನೇ ತೊರೆಯಲು ನಿರ್ಧರಿಸುವಂತೆ ಮಾಡಿತು.

ಅವರು 1954ರಲ್ಲಿ ಬೋಧಗಯಾದಲ್ಲಿ ನಡೆದ ವಿನೋಬಾ ಭಾವೆ ನೇತೃತ್ವದ 'ಸರ್ವೋದಯ' ಸಮ್ಮೇಳನದಲ್ಲಿ ಭಾಗವಹಿಸಿ 'ಭೂದಾನ' ಚಳುವಳಿಯಲ್ಲಿ ಸಕ್ರಿಯರಾದರು. ಗಾಂಧಿ ರೂಪಿಸಿದ್ದ ಅಹಿಂಸಾತ್ಮಕ ಮನಃಪರಿವರ್ತನೆಯನ್ನಾಧರಿಸಿದ ಸಾರ್ವತ್ರಿಕ ಸರಳ ಜೀವನ ಮಾದರಿಯನ್ನು ಕಟ್ಟಬಯಸುವ ಸರ್ವೋದಯ ಮಾರ್ಗವೇ ಪಕ್ಷರಾಜಕಾರಣದ ಮಾರ್ಗಕ್ಕಿಂತ ಉತ್ತಮವೆಂದು ಭಾವಿಸಿದ ಅವರು, 1957ರಲ್ಲಿ 'ಪ್ರಜಾ ಸಮಾಜವಾದಿ ಪಕ್ಷ'ವನ್ನು ತೊರೆದು ವಿನೋಬಾ ಶಿಷ್ಯರಾಗಿ ಪರಿವರ್ತಿತರಾದರು; ಸರ್ವೋದಯ ಚಳುವಳಿಗೆ ತಮ್ಮನ್ನು ಪೂರ್ಣವಾಗಿ ಸಮರ್ಪಿಸಿಕೊಂಡರು. ತಮ್ಮನ್ನು ತಾವು 'ಜೀವನ ದಾನಿ' ಎಂದು ಘೋಷಿಸಿಕೊಂಡರು.

ಸರ್ವೋದಯ ಚಳುವಳಿಯ ಅಂಗವಾಗಿ ಅವರು ದೇಶದ ವ್ಯಾಪಕ ಪ್ರವಾಸ ಮಾಡಿದರು. ವಿಶೇಷವಾಗಿ ಬಿಹಾರದಲ್ಲಿ ಭೂದಾನವನ್ನು ಒಂದು ದೊಡ್ಡ ಚಳುವಳಿಯಾಗಿ ರೂಪಿಸಿದರು. ಇದಕ್ಕೆ ಪೂರಕವಾಗಿ ಸಖೋದೇವೊರಾ ಎಂಬಲ್ಲಿ ಸರ್ವೋದಯ ಆಶ್ರಮವೊಂದನ್ನು ತೆರೆದು, ಅಲ್ಲಿ ಜನಸಂಪರ್ಕ, ಸಂಶೋಧನೆ ಮತ್ತು ಗ್ರಾಮ ಕೈಗಾರಿಕೆಗಳನ್ನಾಧರಿಸಿದ ಹೊಸಜೀವನ ಮಾದರಿಯೊಂದನ್ನು ವಿಕಾಸಗೊಳಿಸುವ ಪ್ರಯೋಗಕ್ಕೆ ಕೈಹಾಕಿದರು. ಮುಂದಿನ ಹತ್ತು ವರ್ಷಗಳ ಕಾಲ ಅವರು ಟಿಬೆಟ್ ಮತ್ತು ಭಾರತದ ಮೇಲಿನ ಚೀನಾ ಆಕ್ರಮಣ, ಪಾಕಿಸ್ತಾನದೊಡನೆ ಯುದ್ಧ, ಕಾಶ್ಮೀರ ಸಮಸ್ಯೆ, ಬಾಂಗ್ಲಾ ಸಮಸ್ಯೆ, ಬಿಹಾರದ ಭೀಕರ ಕ್ಷಾಮ, ನಕ್ಸಲ್ ಸಮಸ್ಯೆ, ನಾಗಾ ಬಂಡುಕೋರರ ಸಮಸ್ಯೆಗಳಂತಹ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಎದುರಿಸುವಲ್ಲಿ ಸರ್ಕಾರದೊಡನೆ ಕೈಜೋಡಿಸಿ ಕೆಲಸ ಮಾಡಿದರು. ಕೆಲವೊಮ್ಮೆ-ಚೀನಾದ ಟಿಬೆಟ್ ನೀತಿಗೆ ಸಂಬಂಧಿಸಿದಂತೆ ಭಾರತ ಸರ್ಕಾರಕ್ಕೆ ಛೀಮಾರಿ ಹಾಕಲೂ ಅವರು ಹಿಂಜರಿಯಲಿಲ್ಲ. ಬಿಹಾರದ ಸಮಸ್ಯೆಗಳ ಪರಿಹಾರಕ್ಕೆ ರೂಪಿಸಿದಂತಹ ಶಾಂತಿ ಸೇನೆಯೊಂದನ್ನು ಜಾಗತಿಕ ಸೋದರತ್ವ ಸ್ಥಾಪನೆಗಾಗಿ ಕೂಡಾ ರೂಪಿಸಲು ಅವರು ಯತ್ನಿಸಿದರು. ಈ ಸಂಬಂಧ ಅವರು ವಿದೇಶಗಳಿಗೆ ಅತಿಥಿಯಾಗಿ ಹೋಗಿಬಂದರು. ಇಷ್ಟೆಲ್ಲಾ ಸಾಧನೆ ಮಾಡಿ ರಾಷ್ಟ್ರದ ಗಮನ-ಗೌರವ ಸಂಪಾದಿಸಿದ್ದರಿಂದಾಗಿಯೇ 1971ರಲ್ಲಿ ಚಂಬಲ್ ಕಣಿವೆಯ ಢಕಾಯಿತರು ಸರ್ಕಾರಕ್ಕೆ ಶರಣಾಗಲು ಇವರನ್ನು ಹುಡುಕಿಕೊಂಡು ಬರುವಂತಾದದ್ದು. ಇದರಲ್ಲಿ ಯಶಸ್ವಿಯಾದ ಜೆ.ಪಿ. ಮುಂದೆ ರಾಷ್ಟ್ರಾದ್ಯಂತ 'ಲೋಕನಾಯಕ'ರೆಂದೇ ಜನಪ್ರಿಯರಾದರು.



ಇಷ್ಟು ಹೊತ್ತಿಗೆ ಜೆ.ಪಿ. ಪತ್ನಿಯನ್ನು ಕಳೆದುಕೊಂಡಿದ್ದರು. ಅವರಿಗೆ ಮಧುಮೇಹ ಬಾಧಿಸ ತೊಡಗಿತ್ತು. ಸರ್ವೋದಯ ಚಳುವಳಿ ಜಡ್ಡುಗಟ್ಟತೊಡಗಿದೆ ಅನ್ನಿಸಿತ್ತು. ಹೊರಗೆ ರಾಜಕಾರಣ ರೂಕ್ಷವಾಗ ತೊಡಗಿತ್ತು. ಜೆ.ಪಿ. ಯಾವ ಪಕ್ಷ ರಾಜಕಾರಣದ ಜವಾಬ್ದಾರಿಯನ್ನು ಯಾರಿಗೆ ಬಿಟ್ಟು ಬಂದಿದ್ದರೋ ಆ ಲೋಹಿಯಾ ಅಕಾಲಿಕ ಮರಣಕ್ಕೆ ತುತ್ತಾಗಿದ್ದರು. ಕಾಂಗ್ರೆಸ್ ಪಕ್ಷ ವಿಭಜನೆಗೊಂಡು ತಮ್ಮ ಸ್ನೇಹಿತ ನೆಹರೂರ ಮಗಳು ಇಂದಿರಾಗಾಂಧಿ,

ಪಕ್ಷದಲ್ಲಿ ತಮ್ಮ ನಾಯಕತ್ವವನ್ನು ಭದ್ರಪಡಿಸಿಕೊಳ್ಳಲು ಪಕ್ಷದ ಪ್ರಜಾಸತ್ತಾತ್ಮಕ ಶೀಲವನ್ನೇ ನಾಶಮಾಡತೊಡಗಿದ್ದನ್ನು ಅವರು ಗಮನಿಸತೊಡಗಿದ್ದರು. ಕಾರ್ಯಾಂಗ ಮತ್ತು ನ್ಯಾಯಾಂಗಗಳಲ್ಲಿನ ಸರ್ಕಾರದ ಹಸ್ತಕ್ಷೇಪ ಅನುಚಿತ ಮಟ್ಟವನ್ನು ಮುಟ್ಟಿತ್ತು. ವಿರೋಧ ಪಕ್ಷಗಳು ಕುಗ್ಗಿ ಹೋಗಿದ್ದವು. ಇದೆಲ್ಲದರ ಪರಿಣಾಮವಾಗಿ ಹೆಚ್ಚುತ್ತಿದ್ದ ನಿರುದ್ಯೋಗ, ಬೆಲೆ ಏರಿಕೆ, ಬಡತನ ಹಾಗೂ ಹಿಂಸೆಗಳಿಗೆ ಪರಿಹಾರ ಮಾರ್ಗಗಳೇ ಇಲ್ಲವಾಗಿ, ದೇಶಾದ್ಯಂತ ಅಶಾಂತಿ ಮುಗಿಲು ಮುಟ್ಟತೊಡಗಿತು. ಸ್ವಾತಂತ್ರ್ಯಕ್ಕಾಗಿ ಮತ್ತು ಬಡಜನರ ಆಶೋತ್ತರಗಳಿಗಾಗಿ ತಮ್ಮ ಪ್ರಾಣವನ್ನೇ ಒತ್ತೆಯಿಟ್ಟು ಹೋರಾಡಿದ್ದ ಜೆ.ಪಿ.ಯವರಿಗೆ ಇದನ್ನೆಲ್ಲ ನೋಡುತ್ತಾ ಕೂರಲು ಸಾಧ್ಯವಾಗಲಿಲ್ಲ.

ಜಯಪ್ರಕಾಶರು 'ಎವೆರಿಮನ್ಸ್' ಎಂಬ ಇಂಗ್ಲೀಷ್ ಪತ್ರಿಕೆ ಆರಂಭಿಸಿ, ಅದರ ಮೂಲಕ ರಾಷ್ಟ್ರದ ರಾಜಕಾರಣಿಗಳಿಗೆ, ಕಾನೂನು ತಜ್ಞರಿಗೆ, ಬುದ್ಧಿಜೀವಿಗಳಿಗೆ; ರಾಷ್ಟ್ರದ ಸಮಸ್ಯೆಗಳನ್ನು ಪರಿಹರಿಸಲಾಗದ ಅಸಮರ್ಥ ಸರ್ಕಾರ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸರ್ವಾಧಿಕಾರಿಯಾಗುತ್ತಿರುವುದರ ಅಪಾಯದ ಸೂಚನೆ ನೀಡಿದರು. ಈ ಬಗ್ಗೆ ಪ್ರಧಾನಿ ಇಂದಿರಾಗೂ ತಿಳಿಹೇಳಿದರು. ಆದರೆ ಪ್ರಧಾನಿ ಇದನ್ನು ನಿರ್ಲಕ್ಷಿಸಿದಾಗ ಜೆ.ಪಿ. ವಿರೋಧ ಪಕ್ಷಗಳ ಒಕ್ಕೂಟವೊಂದರ ಪ್ರಯತ್ನ ಮಾಡಿದರು. ಆದರೆ ಇದೆಲ್ಲವೂ ಅಷ್ಟು ಕಾರ್ಯಶೀಲ ಅಲ್ಲ ಎನ್ನಿಸಿದಾಗ ಅವರ ಗಮನ ವಿದ್ಯಾರ್ಥಿ-ಯುವಜನರತ್ತ ಹರಿಯಿತು. ಅವರು ಈ ಸಮುದಾಯಗಳನ್ನು ಉದ್ದೇಶಿಸಿ ಮಾತನಾಡತೊಡಗಿದರು. ಮೊದಲ ಪ್ರತಿಕ್ರಿಯೆ ಗುಜರಾತ್‌ನಿಂದ ಬಂತು. ಅಲ್ಲಿ ನವನಿರ್ಮಾಣದ ಹೆಸರಲ್ಲಿ ಅಲ್ಲಿನ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಆರಂಭವಾಗಿದ್ದ ವಿದ್ಯಾರ್ಥಿ ಚಳುವಳಿ ಜೆ.ಪಿ. ಮಾರ್ಗದರ್ಶನ ಕೋರಿತು. ಇದು ಗುಜರಾತ್ ಸರ್ಕಾರವನ್ನು ಕೇಂದ್ರ ಸರ್ಕಾರ ವಿಸರ್ಜಿಸಬೇಕಾಗಿ ಬಂದುದರಲ್ಲಿ ಕೊನೆಗೊಂಡಿತು. ಈ ಮಧ್ಯೆ ಬಿಹಾರದಲ್ಲಿ ಕೂಡಾ ವಿದ್ಯಾರ್ಥಿಗಳು ಹಲವು ಕಡೆ ವಿದ್ಯಾರ್ಥಿ ನಿಲಯಗಳ ದುಃಸ್ಥಿತಿ ವಿರುದ್ಧ ಆರಂಭಿಸಿದ್ದ ಆಂದೋಲನವನ್ನು ಬಿಹಾರ ಸರ್ಕಾರ ನಿರ್ಲಕ್ಷಿಸಿ ಆಂದೋಲನವನ್ನು ಬಲಪ್ರಯೋಗದ ಮೂಲಕ ದಮನಮಾಡಲು ಯತ್ನಿಸಿದ್ದರಿಂದಾಗಿ, ಅದು ಸರ್ಕಾರದ ರಾಜೀನಾಮೆಗೆ ಆಗ್ರಹಿಸಲು ಆಂದೋಲನವಾಗಿ ಮಾರ್ಪಾಡಾಗಿತ್ತು. ಈ ಆಂದೋಲನ ಕೂಡಾ ಜೆ.ಪಿ. ಮಾರ್ಗದರ್ಶನವನ್ನು ಕೋರಿತು.

ಜೆ.ಪಿ. ಈ ಅಶಾಂತಿಯನ್ನೆಲ್ಲ ಒಂದು ರೋಗಚಿಹ್ನೆಯೆಂದು ಭಾವಿಸಿದರು. ಈ ಚಿಹ್ನೆ ಸೂಚಿಸುವ ರೋಗಕ್ಕೆ ದೇಶವೇ ತುತ್ತಾಗಿದೆಯೆಂದು ಗ್ರಹಿಸಿ, ಅದರ ನಿವಾರಣೆಗಾಗಿ ಎಲ್ಲ-ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ, ಬೌದ್ಧಿಕ, ದಾರ್ಶನಿಕ - ನೆಲೆಗಳಲ್ಲಿ ಬದಲಾವಣೆ ಅಗತ್ಯವೆಂದು ಕಂಡುಕೊಂಡರು. ಇಂತಹ ಸಮಗ್ರ ಬದಲಾವಣೆಗಾಗಿ 'ಸಂಪೂರ್ಣ ಕ್ರಾಂತಿ'ಯ ಪರಿಕಲ್ಪನೆಯೊಂದನ್ನು ರೂಪಿಸಿದರು. ಇದನ್ನು ಆಗು ಮಾಡಲು ಅವರು ವಿದ್ಯಾರ್ಥಿ ಹಾಗೂ ಯುವಶಕ್ತಿಯನ್ನು ಪ್ರೇರೇಪಿಸಿದರು. ಇದಕ್ಕಾಗಿ ಅವರು ದೇಶಾದ್ಯಂತ ಪ್ರವಾಸ ಮಾಡಿದರು. ಇದಕ್ಕೆ




ಮೊರಾರ್ಜಿ ದೇಸಾಯಿ ಅವರೊಂದಿಗೆ ಜೆ.ಪಿ

ಬೆಂಬಲವಾಗಿ ವಿರೋಧ ಪಕ್ಷಗಳನ್ನು ಸಜ್ಜುಗೊಳಿಸಲು ಅವರು ಪ್ರಯತ್ನಿಸಿದರು. ಯಾವುದನ್ನು ತಾವು ಸಮಾಜವಾದಿ ಆಂದೋಲನದಲ್ಲಿದ್ದುಕೊಂಡು ಪಕ್ಷ ರಾಜಕಾರಣದ ಮೂಲಕ ಸಾಧಿಸಲು ಅಸಾಧ್ಯವಾಗಿತ್ತೋ, ಅದನ್ನು ಈ 'ಸಂಪೂರ್ಣ ಕ್ರಾಂತಿ' ಆಂದೋಲನದ ಮೂಲಕ ಮಾಡಲು ಯತ್ನಿಸಿದರು.

ಇದಕ್ಕೆ ದೇಶದ ಯುವಜನತೆಯೂ ಸ್ಪಂದಿಸಿತ್ತು. ಬಿಹಾರದಲ್ಲಿ ತಾವು ಸರ್ವೋದಯ ಚಳುವಳಿಕಾರರಾಗಿ ಮಾಡಿದ್ದ 'ಗ್ರಾಮಸ್ವರಾಜ್ಯ' ಕಟ್ಟುವ ಕೆಲಸವನ್ನು ಜೆ.ಪಿ. ವಿದ್ಯಾರ್ಥಿ ಚಳುವಳಿಯ ಮೂಲಕ ಮುಂದುವರೆಸಿ ಸದೃಢಗೊಳಿಸಲು ನಿರ್ಧರಿಸಿದರು. ಇದನ್ನು ಇತರ ರಾಜ್ಯಗಳಿಗೂ ಹಬ್ಬಿಸಲು ಸಂಘಟನೆಗಳನ್ನು ರೂಪಿಸಿದರು. ಅಂತಹದೊಂದು ಸಂಘಟನೆ ಕರ್ನಾಟಕದಲ್ಲೂ ರೂಪುಗೊಂಡಿತ್ತು. ಆದರೆ ಈ ಕೆಲಸವನ್ನು ಸಹವಾಗಿಯೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಎದುರು ಹಾಕಿಕೊಂಡೇ ಮಾಡಬೇಕಾಯಿತು. ಇದರಿಂದಾಗಿ ಜೆ.ಪಿ. ಹಲವು ಕ್ಷುಲ್ಲಕ ಆರೋಪಗಳನ್ನೂ, ಅನುಚಿತ ಅವಮಾನಗಳನ್ನು ಸಹಿಸಬೇಕಾಯಿತಲ್ಲದೆ ಲಾಠಿ ಮತ್ತು ಅಶ್ರುವಾಯು ಪ್ರಯೋಗಗಳ ಬರ್ಬರ ದಾಳಿಯನ್ನೂ ಎದುರಿಸಿ, ದೈಹಿಕವಾಗಿ ಅಸ್ವಸ್ಥರಾಗಬೇಕಾಯಿತು.

ಈ ಮಧ್ಯೆ 1971ರ ಚುನಾವಣೆಗಳಲ್ಲಿ ಇಂದಿರಾಗಾಂಧಿಯವರು ರಾಯ್‌ಬರೇಲಿಯಿಂದ ಆಗಿದ್ದ ಆಯ್ಕೆಗೆ ಸಂಬಂಧಿಸಿದಂತೆ ಪ್ರತಿಸ್ಪರ್ಧಿ ರಾಜನಾರಾಯಣರು ಅಲಹಾಬಾದ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅರ್ಜಿ ಇತ್ಯರ್ಥಗೊಂಡು, ಇಂದಿರಾ ಗಾಂಧಿ ಚುನಾವಣಾ ಕಾನೂನುಗಳನ್ನು ಉಲ್ಲಂಘಿಸಿದ್ದಾರೆಂದು ನ್ಯಾಯಾಲಯ ಅವರ ಲೋಕಸಭಾ ಸದಸ್ಯತ್ವವನ್ನು ಅನೂರ್ಜಿತಗೊಳಿಸಿತು. ಇದರ ವಿರುದ್ಧ ಇಂದಿರಾ ಗಾಂಧಿ ಸರ್ವೋಚ್ಚ ನ್ಯಾಯಾಲಯಕ್ಕೂ ಮೇಲ್ಮನವಿ ಸಲ್ಲಿಸಿ, ಭಾಗಶಃ ತಡೆಯಾಜ್ಞೆ ಪಡೆದರು. ಆದರೆ ನ್ಯಾಯಾಲಯ, ಸಂಸತ್ತಿನಲ್ಲಿ ಯಾವುದೇ ನಿರ್ಣಯದ ಮೇಲೆ ಮತ ಹಾಕುವ ಅವರ ಅಧಿಕಾರವನ್ನು ಅಮಾನತ್ತಿನಲ್ಲಿಟ್ಟಿತ್ತು. ಈ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳು ಸರ್ವೋಚ್ಚ ನ್ಯಾಯಾಲಯ ಅಂತಿಮ ತೀರ್ಪು ಬರುವವರೆಗೂ ಇಂದಿರಾ ಪ್ರಧಾನಿ ಸ್ಥಾನ ತೊರೆಯಬೇಕೆಂದು ಆಗ್ರಹಿಸಿದವು. ದೇಶಾದ್ಯಂತ ಪ್ರತಿಭಟನೆಗಳೂ ನಡೆದವು.



1975ರ ಜೂನ್ 25 ರಂದು ದೆಹಲಿಯ ಬೋಟ್ ಕ್ಲಬ್ ಮೈದಾನದಲ್ಲಿ ಜೆ.ಪಿ. ಯವರ ನೇತೃತ್ವದಲ್ಲಿ ಬೃಹತ್ ಸಭೆಯೊಂದನ್ನು ನಡೆಸಿದ ವಿರೋಧ ಪಕ್ಷಗಳು, ಇಂದಿರಾ ಗಾಂಧಿ ಕೂಡಲೇ ರಾಜೀನಾಮೆ ನೀಡದಿದ್ದರೆ ಅವರ ಮನೆಗೆ ಮುತ್ತಿಗೆ ಹಾಕುವುದಾಗಿ ಘೋಷಿಸಿದವು. ಜೆ.ಪಿ., ಸೇನೆ, ಪೋಲೀಸ್ ಸೇರಿದಂತೆ ಸರ್ಕಾರಿ ನೌಕರರಿಗೂ, ಸರ್ಕಾರದ ಯಾವುದೇ ಸಂವಿಧಾನ ವಿರೋಧಿ ಆಜ್ಞೆಗಳನ್ನು ಪಾಲಿಸದಂತೆ ಕರೆ ನೀಡಿದರು.

ಅಂದು ಮಧ್ಯರಾತ್ರಿಯೇ ಜೆ.ಪಿ. ಸೇರಿದಂತೆ, ವಿರೋಧ ಪಕ್ಷಗಳ ಎಲ್ಲ ನಾಯಕರನ್ನು ಬಂಧಿಸಿ ಸೆರೆಮನೆ/ಸ್ಥಾನಬದ್ಧತೆಯಲ್ಲಿರಿಸಲಾಯಿತು. ಆಂತರಿಕ ಅಶಾಂತಿಯ ಕಾರಣವೊಡ್ಡಿ, ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಅಮಾನತ್ತಿನಲ್ಲಿಟ್ಟು ತುರ್ತುಪರಿಸ್ಥಿತಿಯನ್ನು ಘೋಷಿಸಲಾಯಿತು. ಜೆ.ಪಿ.ಯವರನ್ನು ಮೊದಲು ಹರ್ಯಾಣದ ಸೋಹನಾ ಎಂಬಲ್ಲಿನ ಅತಿಥಿಗೃಹವೊಂದರಲ್ಲಿ ಇರಿಸಲಾಗಿತ್ತಾದರೂ ಅವರ ಆರೋಗ್ಯ ಹದಗೆಟ್ಟ(ಈ ಬಗ್ಗೆಯೂ ಮುಂದೆ ಅನೇಕ ಪ್ರಶ್ನೆಗಳನ್ನು ಎತ್ತಲಾಯಿತು)* ಪರಿಣಾಮವಾಗಿ ಚಂಡೀಗಢದ ಸ್ನಾತಕೋತ್ತರ ವೈದ್ಯಕೀಯ ಸಂಸ್ಥೆಯ ಕೊಠಡಿಯೊಂದಕ್ಕೆ ವರ್ಗಾಯಿಸಲಾಯಿತು. ಇಲ್ಲಿಯೇ, ಸುಮಾರು ಒಂದೂವರೆ ವರ್ಷಗಳ ಏಕಾಂತವಾಸದ ಸಮಯದಲ್ಲೇ, ಜೆ.ಪಿ. ತಮ್ಮ ನೋವು-ನಿರೀಕ್ಷೆಗಳನ್ನು ದಾಖಲಿಸಿರುವ ಈ 'ಸೆರೆಮನೆಯ ದಿನಚರಿ'ಯನ್ನು ಬರೆದುದು.

ಜೆ.ಪಿ.ಯವರ ಆರೋಗ್ಯ ಹದಗೆಟ್ಟಾಗ, ಸರ್ಕಾರ 1976ರ ನವೆಂಬರ್ 13ರಂದು ಅವರನ್ನು 'ಪರೋಲ್' ಮೇಲೆ ಬಿಡುಗಡೆ ಮಾಡಿತು. ಆ ಹೊತ್ತಿಗೆ ಅವರ ಮೂತ್ರಪಿಂಡಗಳು ಕೆಲಸ ಮಾಡಲಾಗದಷ್ಟು ದುರ್ಬಲಗೊಂಡಿದ್ದವು. ಅವರು ತಮ್ಮ ಪಟ್ನಾ ನಿವಾಸಕ್ಕೆ ಹಿಂದಿರುಗಿದ ಮೇಲೆ ಮನೆಯಲ್ಲೇ ಅವರಿಗೆ ಅವರ ಗೆಳೆಯರು 'ಡಯಾಲಿಸಿಸ್' ಚಿಕಿತ್ಸೆಯ ವ್ಯವಸ್ಥೆ ಮಾಡಿಸಿದರು. ಜೆ.ಪಿ. ಸ್ವಗೃಹ 'ಕದಂಕುವಾ' ಸೇರಿ ಸುಧಾರಿಸಿ ಕೊಳ್ಳುತ್ತಿದ್ದಂತೆ, ಇಂದಿರಾ ಗಾಂಧಿಯವರು ರಾಜಕೀಯ ವಾತಾವರಣ ತಮ್ಮ ಪರವಾಗಿ ಮಾರ್ಪಾಡಾಗಿದೆ ಎಂದು ಭಾವಿಸಿಯೋ ಅಥವಾ ವಿದೇಶಗಳ, ವಿಶೇಷವಾಗಿ ಪಾಶ್ಚಿಮಾತ್ಯ ದೇಶಗಳ ಒತ್ತಡದಿಂದಾಗಿಯೋ 1977ರಲ್ಲಿ ಜನವರಿಯಲ್ಲಿ ತುರ್ತು ಪರಿಸ್ಥಿತಿಯನ್ನು ಭಾಗಶಃ ಸಡಿಲಿಸಿ, ಮಾರ್ಚ್‌ನಲ್ಲಿ ಚುನಾವಣೆ

* ಅನುಬಂಧ- 5 ನೋಡಿ

ನಡೆಯುವುದೆಂದು ಘೋಷಿಸಿದರು. ವಿರೋಧ ಪಕ್ಷಗಳ ನಾಯಕರನ್ನು ಸೆರೆಮನೆಗಳಿಂದ ಬಿಡುಗಡೆ ಮಾಡಲಾಯಿತು.

ಜೆ.ಪಿ., ವಿರೋಧ ಪಕ್ಷಗಳಿಗೆ ಇದೇ ನಿಮಗೆ ಕೊನೆಯ ಅವಕಾಶ ಎಂದು ಎಚ್ಚರಿಸಿ ಅವರನ್ನೆಲ್ಲ ಒಗ್ಗೂಡಿಸಿ 'ಜನತಾ ಪಕ್ಷ'ವನ್ನು ರೂಪಿಸಿದರು. ಇದರಲ್ಲಿ ಸಮಾಜವಾದಿ ಪಕ್ಷ, ಭಾರತೀಯ ಜನಸಂಘ, ಭಾರತೀಯ ಲೋಕದಳ ಹಾಗೂ ಸಂಸ್ಥಾ ಕಾಂಗ್ರೆಸ್ ಸೇರಿದ್ದವು. ಆಡಳಿತ ಪಕ್ಷದಿಂದಲೂ ಕೆಲವು ಗುಂಪುಗಳು ಬಂದು ಈ ಪಕ್ಷವನ್ನು ಸೇರಿಕೊಂಡವು. ಜೆ.ಪಿ. ತಮ್ಮ ಅನಾರೋಗ್ಯವನ್ನು ಲೆಕ್ಕಿಸದೆ ದೇಶಾದ್ಯಂತ ಬಿರುಗಾಳಿಯಂತೆ ಸುತ್ತಿ ಪ್ರಚಾರ ಮಾಡಿದರು. ಜನತಾಪಕ್ಷ ಪ್ರಚಂಡ ಬಹುಮತ ಗಳಿಸಿ ಗೆದ್ದಿತು. ಇಂದಿರಾಗಾಂಧಿ ಹಾಗೂ ತುರ್ತು ಪರಿಸ್ಥಿತಿಯ 'ದೊರೆ' ಎನಿಸಿದ್ದ ಅವರ ಮಗ ಸಂಜಯಗಾಂಧಿ ಇಬ್ಬರೂ ವೈಯಕ್ತಿಕವಾಗಿ ಸೋತಿದ್ದರು. ಜೆ.ಪಿ. ಇಂದಿರಾ ಮನೆಗೆ ಹೋಗಿ ಸಾಂತ್ವನ ಹೇಳಿಬಂದರು. ಜನತಾ ಪಕ್ಷದ ಮೊರಾರ್ಜಿ ದೇಸಾಯಿ ನೇತೃತ್ವದ ಸಚಿವ ಸಂಪುಟಕ್ಕೆ ಜೆ.ಪಿ. ಗಾಂಧಿ ಸಮಾಧಿಯ ಮುಂದೆ ಗಾಂಧೀವಾದಿ ನೈತಿಕತೆಯ ಪ್ರತಿಜ್ಞೆ ಬೋಧಿಸಿದರು. ಹೊಸ ಸರ್ಕಾರ ಗಾಂಧೀವಾದಿ ಸಮಾಜವಾದವನ್ನು ತನ್ನ ತತ್ವಪ್ರಣಾಳಿಕೆಯನ್ನಾಗಿ ಒಪ್ಪಿಕೊಂಡಿತು.

ಆದರೆ ಕೆಲವೇ ತಿಂಗಳುಗಳಲ್ಲಿ ಸರ್ಕಾರದಲ್ಲಿ ತಳಮಳ ಆರಂಭವಾಯಿತು. ಹೆಚ್ಚಿನ ಅಧಿಕಾರಕ್ಕಾಗಿ ಕಚ್ಚಾಟ ಶುರುವಾಯಿತು. ಭ್ರಷ್ಟಾಚಾರ ಆಪಾದನೆಗಳು ಕೇಳಿಬಂದವು. ಸಮಾಜವಾದಿಗಳು, ಪಕ್ಷವನ್ನು ಆರ್.ಎಸ್.ಎಸ್. ಮೂಲದ ಜನಸಂಘ ಗುಂಪು ಆಕ್ರಮಿಸಕೊಳ್ಳತೊಡಗಿದೆ ಎಂದು ದೂರಿದರು. ರಾಜ್ಯ ವಿಧಾನಸಭಾ ಚುನಾವಣೆಗಳಿಗೆ ತಾವು ಸ್ಥಾಪಿಸಿದ್ದ ಸ್ಥಳೀಯ ಜನಸಮಿತಿಗಳನ್ನು ಸಮಾಲೋಚಿಸಬೇಕೆಂಬ ಜೆ.ಪಿ.ಯವರ ಸೂಚನೆಯನ್ನು ಮೊರಾರ್ಜಿ ದೇಸಾಯಿ ತಳ್ಳಿ ಹಾಕಿದರು. ಜೆ.ಪಿ. ಕಟ್ಟಿದ ಸರ್ಕಾರದಲ್ಲಿ ಜೆ.ಪಿ.ಗೇ ಸ್ಥಾನವಿಲ್ಲದಂತಾಯಿತು. ಅವರು ದುರ್ಬಲಗೊಳ್ಳುತ್ತಿದ್ದ ತಮ್ಮ ಅನಾರೋಗ್ಯದ ನಡುವೆಯೇ ಸರ್ಕಾರಕ್ಕೆ ಒಂದೆರಡು ಬಾರಿ ಎಚ್ಚರಿಕೆ ನೀಡಿದರು. ತಾವು ತುರ್ತುಪರಿಸ್ಥಿತಿಗೆ ಮುನ್ನ ಆರಂಭಿಸಿದ್ದ 'ಸಂಪೂರ್ಣ ಕ್ರಾಂತಿ'ಗೆ ಭೂಮಿಕೆ ಸಿದ್ಧಪಡಿಸಲು ರಚಿಸಿದ್ದ ಜನಸಂಘರ್ಷ ಸಮಿತಿಗಳನ್ನು ಬಲಪಡಿಸಲು ಪ್ರಯತ್ನವನ್ನೂ ಮಾಡಿದರು. ಆದರೆ ಆ ಹೊತ್ತಿಗೆ ಜನತಾಪಕ್ಷ ಒಡೆದು ಹೋಳಾಗಿ ಸರ್ಕಾರ ಅಲ್ಪಸಂಖ್ಯಾತವಾಗಿತ್ತು. ಇಂದಿರಾ ಮತ್ತೆ ಚಿಕ್ಕಮಗಳೂರು ಉಪಚುನಾವಣೆಯಲ್ಲಿ ಗೆದ್ದು ಸಂಸತ್ತನ್ನು ಪ್ರವೇಶಿಸಿದ್ದರು. ಅವರಿಗೆ ಜೆ.ಪಿ. ಶುಭ ಹಾರೈಸಿದರು.

1979ರ ಅಕ್ಟೋಬರ್ 9ರಂದು ತಮ್ಮ 78ನೇ ವಯಸ್ಸಿನಲ್ಲಿ ಜೆ.ಪಿ. ತಮ್ಮ ಹೋರಾಟದ ಬದುಕಿಗೆ, ಬಹುಶಃ ದಟ್ಟ ವಿಷಾದದೊಂದಿಗೆ ಅಂತ್ಯ ಹಾಡಿದರು.

ಜುಲೈ 21

ನನ್ನ ಜಗತ್ತು ನನ್ನ ಸುತ್ತ ಛಿದ್ರಛಿದ್ರವಾಗಿ ಬಿದ್ದಿದೆ. ಇದನ್ನೆಲ್ಲಾ ಮತ್ತೆ ಒಂದುಗೂಡಿಸಲಾಗುವುದನ್ನು ನನ್ನ ಜೀವಿತ ಕಾಲದಲ್ಲಿ ನಾನು ಕಾಣಲಾರೆ ಎಂದೆನಿಸುತ್ತಿದೆ. ಬಹುಶಃ ನನ್ನ ಎಳೆಯ ಬಂಧುಗಳು ಇದನ್ನು ಕಾಣಬಹುದೇನೋ, ಏನೋ..

ಇಲ್ಲಿ ನಾನು ಪ್ರಜಾಪ್ರಭುತ್ವದ ಕ್ಷಿತಿಜಗಳನ್ನು ವಿಸ್ತಾರಗೊಳಿಸುವ ಪ್ರಯತ್ನ ಮಾಡಿದ್ದೆ. ಮುಖ್ಯವಾಗಿ, ಪ್ರಜಾತಂತ್ರ ವಿಧಾನಗಳಲ್ಲಿ ಜನರನ್ನು ಹೆಚ್ಚು ನಿಕಟ ಹಾಗೂ ನಿರಂತರವಾಗಿ ತೊಡಗಿಸುವ ಮೂಲಕ ಇದನ್ನು ಸಾಧಿಸಲು ಯತ್ನಿಸಿದ್ದೆ. ಇದಕ್ಕಾಗಿ ನಾನು ಎರಡು ಮಾರ್ಗಗಳನ್ನು ಯೋಚಿಸಿದ್ದೆ. ಒಂದು, ಚುನಾವಣೆಗಳಲ್ಲಿ ಅಭ್ಯರ್ಥಿಗಳನ್ನು ನಿಲ್ಲಿಸುವ ವಿಷಯದಲ್ಲಿ ಜನತೆಯ ಒಟ್ಟಾಭಿಪ್ರಾಯವನ್ನು ಕ್ರೋಢೀಕರಿಸಲು ಅನುಕೂಲವಾಗುವಂತಹ ವ್ಯವಸ್ಥೆಯೊಂದನ್ನು ರೂಪಿಸುವುದು. ಎರಡನೆಯದು, ಜನತೆಯು ತನ್ನ ಪ್ರತಿನಿಧಿಗಳ ಕಾರ್ಯ ನಿರ್ವಹಣೆಯ ಬಗ್ಗೆ ಸದಾ ಜಾಗೃತರಾಗಲು ಮತ್ತು ಅವರಿಂದ ಒಳ್ಳೆಯ ಮತ್ತು ಪ್ರಾಮಾಣಿಕವಾದ ಸೇವೆಯನ್ನು ಪಡೆದೇ ತೀರಲು ಸಾಧ್ಯವಾಗುವಂತಹ ವ್ಯವಸ್ಥೆಯೊಂದನ್ನು - ಈ ಮುನ್ನ ತಿಳಿಸಿದ ಮೊದಲನೇ ವ್ಯವಸ್ಥೆಯೇ ಈ ಕೆಲಸ ಮಾಡಬಹುದು - ಒದಗಿಸುವುದು. ಬಿಹಾರ ಆಂದೋಲನದ ಎಲ್ಲ ಅಂಗಗಳಿಂದಲೂ ನಾನು ಮಾಡಿಸಬಯಸಿದ್ದು ಈ ಎರಡು ಮಹತ್ವದ ಕೆಲಸಗಳನ್ನೇ. ಆದರೆ ಈ ಎಲ್ಲದರ ಪರಿಣಾಮ: ನಾನೀಗ ಪ್ರಜಾಸತ್ತೆಯ ಸಾವನ್ನು ಕಾಣಬೇಕಾಗಿದೆ.

ನನ್ನ ಲೆಕ್ಕಾಚಾರ ತಪ್ಪಿದ್ದಾದರೂ ಎಲ್ಲಿ? ("ನಮ್ಮ" ಲೆಕ್ಕಾಚಾರ ಎಂದೇ ಹೇಳಿಬಿಟ್ಟಿದ್ದೆ; ಅದರದು ತಪ್ಪು. ಎಲ್ಲವನ್ನೂ, ಇಡೀ ಜವಾಬ್ದಾರಿಯನ್ನು ನಾನೇ ಹೊರಬೇಕು.) ನಾನು ತಪ್ಪಿದ್ದು, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿನ ಪ್ರಧಾನ ಮಂತ್ರಿಯೊಬ್ಬರು, ಶಾಂತಿಪೂರ್ಣವಾಗಿ ನಡೆಯುವ ಪ್ರಜಾಸತ್ತಾತ್ಮಕ ಆಂದೋಲನವನ್ನು ಅಡಗಿಸಲು ಎಲ್ಲಾ ಸಾಮಾನ್ಯ ಮತ್ತು ಅಸಾಮಾನ್ಯ ಕಾನೂನುಗಳನ್ನು ಬಳಸಬಹುದು; ಆದರೆ

ಪ್ರಜಾಸತ್ತೆಯನ್ನೇ ಕೊಲೆಮಾಡಿ, ಅದರ ಸ್ಥಾನದಲ್ಲಿ ಏಕಚಕ್ರಾಧಿಪತ್ಯವನ್ನು ಸ್ಥಾಪಿಸುವ ಸಾಹಸ ಮಾಡುವುದಿಲ್ಲ ಎಂದು ನಾನು ಭಾವಿಸಿದ್ದರಲ್ಲಿ, ಒಂದುವೇಳೆ ಪ್ರಧಾನಮಂತ್ರಿ ಇದನ್ನು ಮಾಡಬಯಸಿದರೂ, ಅಷ್ಟೊಂದು ಉನ್ನತ ಪ್ರಜಾಸತ್ತಾತ್ಮಕ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಿರುವ ಆಕೆಯ ಪಕ್ಷ ಇದಕ್ಕೆ ಅವಕಾಶ ಕೊಡುತ್ತದೆ ಎಂದಾದರೂ ನಾನು ಹೇಗೆ ತಿಳಿಯಬಲ್ಲೆನಾಗಿದ್ದೆ? ಆದರೆ ಆಗಬಾರದ್ದು ಆಗಿಹೋಗಿದೆ. ಹಿಂಸಾಚಾರ ತನ್ನ ತಲೆ ಎತ್ತಿ, ಇಡೀ ಪರಿಸ್ಥಿತಿಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಹವಣಿಸಿದ್ದ ಸಂದರ್ಭದಲ್ಲಿ, ಇಂತಹ ಕ್ರಮವನ್ನು ಯಾರಾದರೂ ಅರ್ಥಮಾಡಿಕೊಳ್ಳಬಲ್ಲರಾಗಿದ್ದರು. ಆದರೆ ಶಾಂತಿಯುತ ಆಂದೋಲನವೊಂದು ಈ ರೀತಿಯಲ್ಲಿ ಕೊನೆಗೊಳ್ಳುವುದು ಎಂದರೆ! ಭ್ರಷ್ಟಾಚಾರ, ನಿರುದ್ಯೋಗ, ಬಡತನ -ಇವುಗಳ ವಿರುದ್ಧ ಹೋರಾಡಲು ಜನರು, ತರುಣರು ಏನು ಮಾಡಬೇಕು? ಆರಾಮವಾಗಿ ಕೈಕಟ್ಟಿ ಕುಳಿತು ಈ ಎಲ್ಲ ಸಂಕಷ್ಟಗಳನ್ನು ಮೌನವಾಗಿ ಸಹಿಸಬೇಕು? ಇದೇ ಶ್ರೀಮತಿ ಗಾಂಧಿಯ ಪ್ರಜಾಪ್ರಭುತ್ವದ ಕಲ್ಪನೆ: ಸ್ಮಶಾನದ ಮೌನ. ಚುನಾವಣೆಗಳೇ ಮುಕ್ತ ಹಾಗೂ ನ್ಯಾಯಯುತವಾಗಿಲ್ಲದಿದ್ದರೆ? ಆಗ ಅವರು ಜಾಗೃತರಾಗಬೇಕು, ಸಂಘಟಿತಗೊಳ್ಳಬೇಕು. ಯಾವುದೇ ಪ್ರಜಾಸತ್ತಾತ್ಮಕ ಸಮಾಜದಲ್ಲಿ ಜನತೆ ತನ್ನ ಭವಿಷ್ಯವನ್ನು ಬದಲಾಯಿಸಿಕೊಳ್ಳಲು ಇಡಿಯಾಗಿ ಚುನಾವಣೆಗಳನ್ನೇ ಅವಲಂಬಿಸಿದೆ ಎಂದು ನನಗನ್ನಿಸುವುದಿಲ್ಲ. ಎಲ್ಲ ಕಡೆಗಳಲ್ಲೂ ಮುಷ್ಕರ, ಪ್ರತಿಭಟನೆ, ಪ್ರದರ್ಶನ ಮುಂತಾದವು ಇದ್ದೇ ಇವೆ.

ಪ್ರಜಾಪ್ರಭುತ್ವವನ್ನು ಕತ್ತು ಹಿಚುಕಿ ಕೊಲ್ಲಲು ಮತ್ತು ತನ್ನ ಸರ್ವಾಧಿಕಾರೀ ಆಳ್ವಿಕೆಯನ್ನು ಹೇರಲು ಪ್ರಧಾನಮಂತ್ರಿಯು ಕೈಗೊಂಡ ಕ್ರಮಗಳನ್ನು ಇಲ್ಲಿ ಮತ್ತೆ ನೆನಪಿಸಿಕೊಳ್ಳುವ ಅಗತ್ಯವಿಲ್ಲ. ಇದೇ ಪ್ರಧಾನಮಂತ್ರಿಯು, ನಾವು ಪ್ರಜಾಪ್ರಭುತ್ವವನ್ನು ನಾಶಮಾಡಿ ಫ್ಯಾಸಿಸಂ ಅನ್ನು ಸ್ಥಾಪಿಸುವ ಸನ್ನಾಹದಲ್ಲಿದ್ದೇವೆ ಎಂದು ಪದೇ ಪದೇ ಆರೋಪಿಸುತ್ತಿರಲಿಲ್ಲವೇ? ಈಗ ಅದೇ ವ್ಯಕ್ತಿ ಪ್ರಜಾಪ್ರಭುತ್ವವನ್ನು ನಾಶಮಾಡಿ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಫ್ಯಾಸಿಸಂ ಅನ್ನು ಸ್ಥಾಪಿಸುತ್ತಿದ್ದಾಳಲ್ಲಾ! ಈಕೆ ಪ್ರಜಾಪ್ರಭುತ್ವವನ್ನು ಸಂರಕ್ಷಿಸುತ್ತಿದ್ದಾಳೆ - ಅದನ್ನು ತನ್ನ ಕೈಲಿಂದಲೇ ಕೊಂದು ಸಮಾಧಿಯೊಳಗೆ ಆಳಕ್ಕೆ ಮಲಗಿಸಿ ಮಣ್ಣು ಮುಚ್ಚುವ ಮೂಲಕ. ತುರ್ತಪರಿಸ್ಥಿತಿಗಿಂತ ಮುಂಚೆ ಇದ್ದಂತಹ ಬೇಕಾದ್ದನ್ನೆಲ್ಲಾ ಮಾಡಬಲ್ಲ ಪರಿಸ್ಥಿತಿಗೆ ಭಾರತ ಹಿಂದಿರುಗಲು ಸಾಧ್ಯವಿಲ್ಲ ಎಂದು ಆಕೆ ಘೋಷಿಸಿದ್ದಾಳಲ್ಲವೇ? ಬೇಕಾದ್ದನ್ನೆಲ್ಲಾ! ಹೌದು, ಈ ಬೇಕಾದ್ದನ್ನೆಲ್ಲಾ ಮಾಡುವ ಬಗ್ಗೆ ಮಾತನಾಡಲು ಆಕೆಗೆ ಮುಖವಿದೆ! (1974ರ ಆಗಸ್ಟ್ 4ರಂದು) ಆಕೆ ಏರ್ಪಡಿಸಿದ್ದ ಕಾಂಗ್ರೆಸ್ ಯುವಜನ ಮೇಳ ಆಕೆಗೇ ಮರೆತೇ ಹೋಯಿತೇ? ಅಲ್ಲಿ ಎಂತಹ ಗೂಂಡಾಗಿರಿ, ಲಂಪಟತನ ನಡೆದವು! 1975ರ ಮಾರ್ಚ್ 6ರಂದು ನಡೆದ ಅಖಿಲ ಭಾರತ ಜನತಾ ಪ್ರದರ್ಶನ ಹಾಗೂ

ಸಭೆ ಆಕೆಯ ನೆನಪಿನಲ್ಲಿಯೆ?[1] ಅಂದು ಯಾವುದೇ ದುರ್ಘಟನೆ ನಡೆಯಲಿಲ್ಲವೆಂದು ಸ್ವತಃ ದೆಹಲಿ ಐ.ಜಿ.ಪಿ.ಯವರೇ ಹೇಳಿದ್ದಾರೆ. ಹೋಗಲಿ, (1975ರ ಏಪ್ರಿಲ್ 2ರಂದು) ಕಲ್ಕತ್ತಾದಲ್ಲಿ ನಾನು ಭಾಷಣ ಮಾಡಬೇಕಾಗಿದ್ದ ವಿಶ್ವವಿದ್ಯಾಲಯ ಭವನದ ಮುಂದೆ ನಡೆದ ನಾಚಿಕೆಗೆಟ್ಟ ವರ್ತನೆಯ ಬಗ್ಗೆ ಈಕೆ ಏನು ಹೇಳುತ್ತಾಳೆ? ಇದಕ್ಕೆ ಹೋಲಿಸಿದಂತೆ, ಇದೇ ವರ್ಷದ ಮಾರ್ಚ್ 5ರಂದು ಕಲ್ಕತ್ತಾದಲ್ಲಿಯೇ ನಡೆದ ಮಹಾನ್ ಪ್ರದರ್ಶನ ಈಕೆಗೆ ನೆನಪಿದೆಯೆ? ದಿಕ್ಕೆಟ್ಟು ಬೆಳೆದಿರುವ ಈ ರಾಕ್ಷಸ ನಗರದಲ್ಲಿ ಇಂತಹ ಪ್ರದರ್ಶನವೊಂದು ಇಷ್ಟು ಶಾಂತಿಯುತವಾಗಿ ನಡೆದದ್ದು ಇದೇ ಮೊದಲು ಎಂದು ಇಡೀ ಜಗತ್ತು ಒಪ್ಪಿಕೊಂಡಿತು. ಶಾಂತಿಯುತವಾಗಿ ವ್ಯವಸ್ಥಿತವಾಗಿ ನಡೆಯುವ ಸಾರ್ವಜನಿಕ ಸಭೆಗಳು, ಮೆರವಣಿಗೆಗಳು, ಬಂದ್‌ಗಳು ಇಷ್ಟಬಂದ ಹಾಗೆ ಮಾಡುವ ಪ್ರವೃತ್ತಿಯ ಪ್ರತೀಕಗಳೆಂದು ಹಿಂದೆ ಅಥವಾ ಈಗ ಕೂಡಾ ಯಾರಾದರೂ ಪರಿಗಣಿಸುತ್ತಾರೇನೋ ನಂಗೊತ್ತಿಲ್ಲ.

ನಾನೊಬ್ಬನೇ ಈಗ ದೇಶಕ್ಕೆ ಉಳಿದಿರುವ "ಆಶಾಕಿರಣ" ಎಂದು ನನಗೆ ಹೇಳುತ್ತಿದ್ದ ಆ ಮಹನೀಯರು, ಮಹಿಳೆಯರು ಈಗ ಏನೆಲ್ಲಾ ಹೇಳುತ್ತಿದ್ದಾರೆ ಎಂದು ನನಗೆ ಆಶ್ಚರ್ಯವಾಗುತ್ತಿದೆ. ಇಂತಹ ಭಯಾನಕ ಅಧಃಪತನಕ್ಕೆ ಕಾರಣನಾದ ನನಗೆ ಅವರು ಹಿಡಿಶಾಪ ಹಾಕುತ್ತಿರಬಹುದೇ? ಹಾಗಿದ್ದರೂ ನಾನು ಆಶ್ಚರ್ಯಪಡಬೇಕಿಲ್ಲ. ಎಲ್ಲ ಕಡೆಗಳಿಂದಲೂ ಸುತ್ತುವರಿಯಲ್ಪಟ್ಟ ಶ್ರೀಮತಿ ಗಾಂಧಿ ಈಗ ಕೈಗೊಂಡಿರುವ ಕ್ರಮವನ್ನು ಬಿಟ್ಟು ಮತ್ತೇನೂ ಮಾಡಲು ಸಾಧ್ಯವಿರಲಿಲ್ಲ ಎಂದು ಸಹ ಅವರು ಹೇಳುತ್ತಿರಬಹುದು. ಆದರೆ ಈಗಲೂ ಕೂಡಾ ಕೆಲವು ಜನರಾದರೂ ಅದರಲ್ಲೂ ತರುಣರು ನನಗೆ ಮತ್ತು ನಾನು ಪ್ರತಿನಿಧಿಸಿದ ಆದರ್ಶಕ್ಕೆ ನಿಷ್ಠರಾಗಿರುವರು ಎಂಬ ಆಸೆಯನ್ನು ನಾನಿಟ್ಟುಕೊಂಡಿದ್ದೇನೆ. ಅವರೇ ಭವಿಷ್ಯದ ಆಶಾಕಿರಣ. ಭಾರತ ಸಮಾಧಿಯಿಂದ ಎದ್ದೇ ಏಳುತ್ತದೆ. ಅದಕ್ಕೆ ಎಷ್ಟು ಕಾಲ ತಗುಲುತ್ತದೆ ಎಂಬುದು ಮುಖ್ಯವಲ್ಲ.

ಜುಲೈ 22

ಶ್ರೀಮತಿ ಗಾಂಧಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ ; ಆಕೆ ಅನುಸರಣೆಯಲ್ಲೂ, ಹೃದಯಾಂತರಾಳದಲ್ಲೂ ಸರ್ವಾಧಿಕಾರಿಯೇ ಎಂದು ನಾನು ಎಂದಿನಿಂದಲೂ ತಿಳಿದಿದ್ದೆ. ನನ್ನ ನಂಬಿಕೆ ದುರಂತಮಯ ರೀತಿಯಲ್ಲಿ ನಿಜವಾಗಿಹೋಗಿದೆ. ನನ್ನ ನಂಬಿಕೆಗೆ ಬೆಂಬಲವಾಗಿ ನಾನು ಲೇಖನವೊಂದರಲ್ಲೋ

1. ಇದು ಜನತಾ ಆಂದೋಲನ ಏರ್ಪಡಿಸಿದ್ದ ಅಖಿಲಭಾರತ ಪ್ರತಿಭಟನಾ ಪ್ರದರ್ಶನ. ವಿವಿಧ ಅಂದಾಜುಗಳ ಪ್ರಕಾರ ಈ ಪ್ರದರ್ಶನದಲ್ಲಿ ಸುಮಾರು 5ರಿಂದ 10 ಲಕ್ಷ ಜನ ಭಾಗವಹಿಸಿದ್ದರು.

ಅಥವಾ ಹೇಳಿಕೆಯೊಂದರಲ್ಲೋ, ಶ್ರೀಮತಿ ಗಾಂಧಿಯ ಆತ್ಮಚರಿತ್ರೆ ಬರೆದಿರುವ ಲೇಖಕಿಯ(ಶ್ರೀಮತಿ ಉಮಾ ವಾಸುದೇವ) ಕೆಲವು ವಾಕ್ಯಗಳನ್ನು ಉಲ್ಲೇಖಿಸಿದಾಗ, ಪಾಪ, ಆ ಬಡಪಾಯಿ ಲೇಖಕಿ ತಾನು ಏನು ಬರೆದಿದ್ದೇನೆ ಎಂಬುದನ್ನು ವಿವರಿಸಿ ಹೇಳುವಂತೆ ಮಾಡಲಾಯಿತು! ಅದರೆ ಅದೇನೂ ನನ್ನ ಮನಸ್ಸನ್ನು ಬದಲಾಯಿಸಲಿಲ್ಲ.

ನಾನು ಎಲ್ಲಿ ತಪ್ಪಿದೆ? ಶ್ರೀಮತಿ ಗಾಂಧಿಯ ವೈಯಕ್ತಿಕ ಒಲವೇನೇ ಆಗಿರಲಿ, ಆಕೆ ಸರ್ವಾಧಿಕಾರಿಯಾಗಲು ಸಾಧ್ಯವಾಗುವುದಿಲ್ಲ ಎಂದು ನಾನು ಅಂದುಕೊಂಡಿದ್ದೇ ತಪ್ಪಾಯಿತು. ಮೊದಲು ನಾನಂದುಕೊಂಡದ್ದು ಜನ ಇದಕ್ಕೆ ಅವಕಾಶ ಕೊಡುವುದಿಲ್ಲ ಮತ್ತು ಆಕೆಯೂ ಮುಂದುವರಿಯುವ ಧೈರ್ಯವಹಿಸಲಾರಳು ಎಂದು. ಯಾಕೆಂದರೆ, ಕಾಂಗ್ರೆಸ್ ಪಕ್ಷ-ನಿನ್ನೆ ಬರೆದಂತೆ-ಇದೆಲ್ಲಾ ನಡೆಸಲು ಅವಕಾಶ ಕೊಡುವುದಿಲ್ಲ ಎಂದು ಬಗೆದೆ. ಒಳ್ಳೆಯದು, ಈಗ ನಡೆದಿರುವುದೆಲ್ಲಾ ನಾನೆಣಿಸಿದ್ದು ತಪ್ಪು ಎಂದು ತೋರಿಸಿವೆ. ಜನತಾ ಪ್ರತಿಭಟನೆ ಬೆಳೆಯುತ್ತದೆ, ಕ್ರಮೇಣ ಶಕ್ತಿ ತುಂಬಿಕೊಳ್ಳುತ್ತದೆ ಎಂದು ಈಗಲೂ ಕೂಡಾ ನನಗನ್ನಿಸುತ್ತದೆ. ಇದಕ್ಕೆ ಕಾಲ ಬೇಕು. ಈಗ ಜನ ಗಾಬರಿಯಾಗಿದ್ದಾರೆ ; ತಮ್ಮ ನಾಯಕರಿಲ್ಲದೆ ಏನು ಮಾಡಬೇಕೆಂಬುದೆ ಗೊತ್ತಿಲ್ಲದಾಗಿದ್ದಾರೆ. ಆದರೆ ನಿನ್ನೆ ತಿಳಿಸಿದ ಸಮುದಾಯದಿಂದ ಹೊಸ ನಾಯಕರು ಎದ್ದು ಬರುತ್ತಾರೆ: ಇಡಿಯಾಗಿ ಹೊಸದಾದ ನಾಯಕತ್ವ ಬೆಳೆಯುತ್ತದೆ, ಪ್ರತಿಭಟನೆ ಮುಂದುವರೆಯುತ್ತದೆ.

ಕಾಂಗ್ರೆಸ್ ಪಕ್ಷದ ಬಗ್ಗೆ ಹೇಳುವುದಾದರೆ, ಅದರ ನಿಸ್ಸತ್ವ ನನಗೆ ಅರ್ಥವೇ ಆಗುವುದಿಲ್ಲ. ಹೌದು, ಹಲವಾರು ಕಾಂಗ್ರೆಸ್ಸಿಗರು ಹತಾಶರಾದ ಕಮ್ಯುನಿಷ್ಟರು. ಅವರು ಆಗ ಬೇಕಾದ್ದೆಲ್ಲಾ ಆಗುವವರೆಗೂ ಶ್ರೀಮತಿ ಗಾಂಧಿಯ ಜತೆಯಲ್ಲೇ ಇರುತ್ತಾರೆ. ಅವರು ಎಂದಿನಿಂದಲೂ ಪ್ರಜಾಪ್ರಭುತ್ವದ ಶತ್ರುಗಳಾಗಿದ್ದಾರೆ. ಅವರ ಹಿಂದೆ ಬಲ ಕಮ್ಯುನಿಸ್ಟ್ ಪಕ್ಷವಿದೆ, ಅದರ ಹಿಂದೆ ಸೋವಿಯತ್ ಒಕ್ಕೂಟವಿದೆ. ರಷ್ಯ ಶ್ರೀಮತಿ ಗಾಂಧಿಯನ್ನು ಅಂಗುಲಂಗುಲದಲ್ಲೂ ಬೆಂಬಲಿಸಿದೆ. ಏಕೆಂದರೆ, ಶ್ರೀಮತಿ ಗಾಂಧಿ ತನ್ನ ಪ್ರಸಕ್ತ ಹಾದಿಯಲ್ಲಿ ಎಷ್ಟು ದೂರ ಸಾಗುತ್ತಾಳೋ ಅಷ್ಟು ಹೆಚ್ಚು ಪ್ರಭಾವವನ್ನು ರಷ್ಯ ಈ ದೇಶದ ಮೇಲೆ ಹೊಂದಲು ಸಾಧ್ಯವಾಗುತ್ತದೆ. ಶ್ರೀಮತಿ ಗಾಂಧಿಯಿಂದ ರಷ್ಯನ್ನರು ಮುಖ್ಯವಾಗಿ ಎಳೆದುಕೊಳ್ಳಬೇಕಾದ್ದನ್ನೆಲ್ಲಾ ಎಳೆದು, ಕೊನೆಗೆ ಸಿ.ಪಿ.ಐ. ಮತ್ತು ಕಾಂಗ್ರೆಸ್ಸಿನೊಳಗಿನ ತಮ್ಮ ಟ್ರೋಜನ್ ಕುದುರೆಗಳ ಮೂಲಕ ಆಕೆಯನ್ನು ಇತಿಹಾಸದ ತಿಪ್ಪೆಗೆ ಎಸೆದು, ತಮ್ಮ ಕೈಗೊಂಬೆಯೊಬ್ಬನನ್ನು ಆಕೆಯ ಸ್ಥಾನದಲ್ಲಿ ಕುಳ್ಳಿರಿಸುವ ಕಾಲ ಬಂದರೂ ಬರಬಹುದು. ಶ್ರೀಮತಿ ಗಾಂಧಿಯೇ ಅವರ ಆಟದ ಕಾಯಿಯಾಗಿರಬಹುದು; ಆದರೆ ಆಕೆಗೆ ಅಧಿಕಾರದ ಲಾಲಸೆ - ಆಟದಿಂದ ಹೊರದೂಡಲ್ಪಡುವುದು ಆಕೆಗೆ ಇಷ್ಟವಾಗಲಾರದು. ಆಕೆಯ ಉಪಯೋಗಗಳೆಲ್ಲಾ ಮುಗಿದು, ನಂತರ ಕಮ್ಯೂನಿಸ್ಟ್ ಬಣ್ಣಗಳಲ್ಲಿ ಆಳಕ್ಕೆ ಮುಳುಗಿ ದಟ್ಟ ಬಣ್ಣ ಬಳಿದುಕೊಂಡ ಮತ್ತು ಇನ್ನೂ ಹೆಚ್ಚು ಆದರದಿಂದ ತಮ್ಮನ್ನು

ಬರಮಾಡಿಕೊಳ್ಳುವ ಬೇರೊಬ್ಬ ವ್ಯಕ್ತಿಯನ್ನು (ರಷ್ಯನರು) ಹುಡುಕುವ ಕಾಲವೂ ಬರಬಹುದು. ಬಂದೇ ಬರುತ್ತದೆ ಎಂದು ನನಗನ್ನಿಸುತ್ತದೆ. ಆಗ ತಾನು ನಿಸ್ಸಹಾಯಕಳಾಗಿರುವುದು ಆಕೆಗೇ ಗೊತ್ತಾಗುತ್ತದೆ. ಇದೆಲ್ಲಾ ಆಗೇ ಆಗುತ್ತದೆ ಎಂದು ನಾನು ಹೇಳುವುದಿಲ್ಲ. ಜನ ಜಾಗೃತರಾಗಬಹುದು, ಸೈನ್ಯವೇ ಇದನ್ನೆಲ್ಲಾ ಸಹಿಸದೆ, ದೇಶವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು. ಇನ್ನೂ ಬೇರೇನಾದರೂ ಆಗಬಹುದು.

ಅದು ಇತರ ಕಾಂಗ್ರೆಸ್ಸಿಗರು, ನಿಜವಾದ ಕಾಂಗ್ರೆಸ್ಸಿಗರು ಎಂದು ಕರೆಯಬಹುದಾದವರ ಬಗ್ಗೆ ಏನು ಹೇಳಲಿ? ಅವರೇಕೆ ತೆಪ್ಪಗೆ ಎಲ್ಲವನ್ನೂ ಒಪ್ಪಿಕೊಂಡು ಬಿಟ್ಟಿದ್ದಾರೆ? ವಾಸ್ತವವಾಗಿ, ನಿಜವಾದ ಕಾಂಗ್ರೆಸ್ಸಿಗರು ಕೆಲವೇ ಕೆಲವರೆಂದು ಕಾಣುತ್ತದೆ. ಶ್ರೀ ಚಂದ್ರಶೇಖರ್ ಮತ್ತು ಶ್ರೀ ರಾಮಧನ್ ಅವರನ್ನು ಬಂಧಿಸಿ, ಇತರ ತರುಣ ಉತ್ಸಾಹಿಗಳನ್ನು ಧೃತಿಗೆಡಿಸಿದ ಮೇಲೆ ಈ ನಿಜವಾದ ಕಾಂಗ್ರೆಸ್ಸಿಗರಿಗೆ ಸಹ ಬಂಡಾಯವೇಳುವ ಧೈರ್ಯವಿಲ್ಲ. ಮಿಕ್ಕವರಲ್ಲಿ ಹೆಚ್ಚಿನವರಿಗೆ ಯಾವುದೇ ಸ್ಥಿರ ಆದರ್ಶಗಳಿಲ್ಲ, ಅವರೆಲ್ಲಾ ಕೇವಲ ಸ್ವಾರ್ಥಿಗಳು, ಹೌದಪ್ಪಗಳು. ಶ್ರೀಮತಿ ಗಾಂಧಿ ಇವರನ್ನೆಲ್ಲಾ ತನ್ನ ಹಿತಕ್ಕೆ ಬಳಸಿಕೊಂಡು, ಒಂದು ದಿನ ದೂರ ತಳ್ಳುತ್ತಾಳೆ. ಆದರೆ ಜಗಜೀವನರಾಂ, ಚವ್ಹಾಣ್, ಸ್ವರ್ಣಸಿಂಗ್‌ರಂತಹ ಹಿರಿಯ ಕಾಂಗ್ರೆಸ್ಸಿಗರಿಗಾದರೂ ಏನಾಗಿದೆ? ಶ್ರೀಮತಿ ಗಾಂಧಿಯಂತೆ ಇವರೂ ಕೂಡಾ ಪ್ರಜಾಪ್ರಭುತ್ವದ ಶತ್ರುಗಳು ಎಂದರೆ ನಾನು ನಂಬುವುದಿಲ್ಲ. ಬಹುಶಃ ಅವರಿಗೂ ಧೈರ್ಯವಿಲ್ಲ ; ತಮ್ಮ ಸ್ಥಾನಗಳನ್ನು ಕಳೆದುಕೊಂಡು ಸೆರೆಮನೆಯಲ್ಲಿ ಕೊಳೆಯಲು ಅವರಿಗೆ ಇಷ್ಟವಿಲ್ಲವೆಂದು ಕಾಣುತ್ತದೆ. ಅಥವಾ ಅವರು ಸೂಕ್ತ ಕಾಲಕ್ಕಾಗಿ ಕಾಯುತ್ತಲೂ ಇರಬಹುದು. ಇನ್ನೊಂದು ಅಂಶವೆಂದರೆ: ಅವರಲ್ಲೂ ಪರಸ್ಪರ ಒಗ್ಗಟ್ಟಿಲ್ಲ. ಆದರೆ ಅವರ ಮೌನ ಸಮ್ಮತಿಯನ್ನು ಕಂಡು ನಾನು ದಂಗಾಗಿದ್ದೇನೆ.

ಭಾರತ ಕೂಡಾ ಮತ್ತೊಂದು ಪಾಕಿಸ್ತಾನವೋ ಅಥವಾ ಬಾಂಗ್ಲಾದೇಶವೋ ಆಗುತ್ತದೆಯೋ? ಅದೆಂತಹ ಅವಮಾನ! ಈ ದೇಶಗಳಿಗೆ ಒಬ್ಬ ಗಾಂಧಿ, ಒಬ್ಬ ನೆಹರೂ, ಒಬ್ಬ ಪಟೇಲ್, ಒಬ್ಬ ರಾಜೇಂದ್ರಪ್ರಸಾದ್, ಒಬ್ಬ ಮೌಲಾನಾ ಆಜಾದ್, ಒಬ್ಬ ರಾಜಗೋಪಾಲಚಾರಿ ಇರಲಿಲ್ಲ. ನನ್ನ ದೇಶಕ್ಕಾಗಿ ಇವರೆಲ್ಲ ಸೇರಿ ಮಾಡಿದ್ದು ವ್ಯರ್ಥವಾಗಿ ಹೋಗುತ್ತದಾ? ಇದನ್ನು ನಾನು ನಂಬಲಾರೆ. ಅದಕ್ಕೇ ನಾನು ನಿನ್ನೆ ಹೇಳಿದ್ದು, ಭಾರತದ ಪ್ರಜಾಪ್ರಭುತ್ವ ತನ್ನ ಸಮಾಧಿಯಿಂದ ಎದ್ದೇಳುತ್ತದೆ ಎಂದು.

ಜುಲೈ 25

ಕಳೆದೆರಡು ದಿನಗಳಿಂದ ಬರೆಯಲು ಮನಸ್ಸಾಗಲಿಲ್ಲ. ಭಾರತದ ಪ್ರಜಾಸತ್ತೆಯ ಶವಪೆಟ್ಟಿಗೆಗೆ ಹೊಡೆಯುತ್ತಿರುವ ಪ್ರತಿಯೊಂದು ಮೊಳೆಯೂ ನನ್ನ ಹೃದಯದೊಳಕ್ಕೇ

ಹೊಡೆಯಲಾಗುತ್ತಿರುವ ಮೊಳೆಯಂತೆ ಅನಿಸುತ್ತದೆ. ನಾನು ನನ್ನ ಹೃದಯವನ್ನ ಬಿಚ್ಚಿ ನೋಡಿಕೊಂಡಿದ್ದೇನೆ - ನಾನು ನಿಜವಾಗಿ ಹೇಳುವೆ, ನಾನು ಈ ಕ್ಷಣದಲ್ಲೇ ಸಾಯಬೇಕಿದ್ದಲ್ಲಿ, ಅದಕ್ಕೆ ನನಗೆ ಸ್ವಲ್ಪವೂ ದುಃಖವಾಗುವುದಿಲ್ಲ. ನಾನು ಸಾಯುವ ಕ್ಷಣದಲ್ಲಿ ನನ್ನ ಹಾಸಿಗೆಯ ಸುತ್ತ ನನ್ನ ಪ್ರೀತಿಪಾತ್ರರನ್ನು ಕಾಣಲು ನಾನು ಖಂಡಿತ ಹಂಬಲಿಸುತ್ತೇನೆ. ನಿಜ; ಆದರೆ ಅವರನ್ನೆಲ್ಲಾ ಕಾಣದೆಯೇ ಸಾವನ್ನು ಎದುರಿಸುವ ಆತ್ಮ ಸ್ಥೈರ್ಯವನ್ನು ನಾನು ಬಹಳ ಹಿಂದೆಯೇ ಪಡೆದುಕೊಂಡಿರುವೆ. ನಮ್ಮ ಪ್ರಜಾಪ್ರಭುತ್ವದ ಮೇಲಿರುವ ಈ ಸಾವಿನ ಬಿಗಿ ಹಿಡಿತವೇ ನಾನು ನನ್ನಲ್ಲೇ ಅಳುವಂತೆ ಮಾಡುತ್ತಿರುವುದು. ನಾವು ಹೋರಾಡಿದ್ದು ನಮ್ಮ ಬದುಕನ್ನೇ ಸವೆಸಿದ್ದು ಇದಕ್ಕೆಂದೇ? ನನ್ನ ಆರೋಗ್ಯ ಸುಧಾರಿಸದೇ ಇರುವುದು ಈ ಹೃದಯ ವೇದನೆಯಿಂದಲೇ ಎಂದು ನನಗನ್ನಿಸುತ್ತದೆ. ಇವತ್ತು ಬೆಳಿಗ್ಗೆ ತೆಗೆದ ಇ.ಸಿ.ಜಿ. ಕೂಡಾ ಮತ್ತೆ ಹೃದಯ ಅನಿಯಮಿತವಾಗಿ ಬಡಿಯುತ್ತಿರುವುದನ್ನು ಸೂಚಿಸಿತು. ಮತ್ತೆ ನನ್ನನ್ನು ಡಯಲೈಂಟೈನ್‌ಗೆ ಒಳಪಡಿಸಲಾಗಿದೆ.

ರಾಜಾ[2] ನಿನ್ನೆ ಬಂದಿದ್ದ. ನಂತರ ತಾರ್ಕುಂಡೆ[3]ಯವರ ಸಹಾಯಕ ವಿಮಲ್ ದವೆ ಕೂಡ. ನನ್ನನ್ನು ಒಂಟಿಯಾಗಿ ಇಟ್ಟಿರುವುದರ ವಿರುದ್ಧ ರಾಜಾ ಸರ್ವೋನ್ನತ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಿದ್ದಾನೆ. ಸರ್ಕಾರಕ್ಕೆ ಒಪ್ಪಿಗೆಯಾಗುವ ಜೊತೆಗಾರರೊಬ್ಬರು ನನ್ನೊಂದಿಗೆ ಕಾಲ ಕಳೆಯಲು ಅವಕಾಶ ಕೊಡಬೇಕೆಂದೂ ಸಹ ಆತ ನ್ಯಾಯಾಲಯಕ್ಕೆ ಮನವಿ ಮಾಡಲಿದ್ದಾನೆ.

ಬಿಹಾರಕ್ಕೆ ಅಥವಾ ಆ ರಾಜ್ಯಕ್ಕೆ ಚಂಡೀಘಡಕ್ಕಿಂತ ಹತ್ತಿರವಾಗಿರುವ ಸ್ಥಳವೊಂದಕ್ಕೆ ನನ್ನನ್ನು ವರ್ಗಾಯಿಸಬೇಕೆಂದು ನಾನು ಕೇಂದ್ರ ಗೃಹ ಮಂತ್ರಿಯವರಿಗೆ ಮಾಡಿಕೊಂಡಿದ್ದ ಮನವಿಯ ಬಗ್ಗೆ ಶ್ರೀ ದವೆ ಅವರಿಗೆ ತಿಳಿಸಿದೆ. ಲಾಲ್‌ಬಾಬು[4] ಕಲ್ಕತ್ತಾ ಇಲ್ಲಿಂದ ಬಹು ದೂರ ಹೋಗಿದ್ದಾರೆ. ನನಗೆ ಬಾಬೂನಿಯನ್ನು ನೋಡಬೇಕೆನಿಸುತ್ತಿದೆ. ಆಕೆ ಕೂಡಾ ನನ್ನನ್ನು ನೋಡಬೇಕೆನ್ನುತ್ತಿದ್ದಾಳಂತೆ. ಆದರೆ ಇಲ್ಲಿಂದ ಪಟ್ನಾ ಎಷ್ಟು ದೂರವಿದೆ, ಪ್ರಯಾಣ ಎಷ್ಟು ಕಷ್ಟಮಯವಾಗಿರುತ್ತದೆ!

ಇಂದು ಬರೆಯಲು ಸಾಧ್ಯವಾಗಿದ್ದು ಇಷ್ಟೆ. ನಾಳೆ ನನ್ನ ಮನಃಸ್ಥಿತಿ ಬದಲಾಗಬಹುದೇನೊ; ನಾನು ಇನ್ನೊಂದಿಷ್ಟು ಬರೆಯಬಹುದು.

---

2. ರಾಜಾ ಅಂದರೆ ರಾಜೇಶ್ವರಪ್ರಸಾದ್, ಮುಂಬೈನಲ್ಲಿರುವ ಜೆ.ಪಿ.ಯವರ ತಮ್ಮ.
3. ವಿ.ಎಮ್. ತಾರ್ಕುಂಡೆ, ಮುಂಬೈ ಶ್ರೇಷ್ಠ ನ್ಯಾಯಾಲಯದ ಮಾಜೀ ನ್ಯಾಯಾಧೀಶರು. ಭಾರತದ ಸರ್ವೋನ್ನತ ನ್ಯಾಯಾಲಯದ ಹಿರಿಯ ನ್ಯಾಯವಾದಿ; ದಿವಂಗತ ಮಾನಬೇಂದ್ರನಾಥ್‌ರಾವ್ ಅವರ ನಿಕಟವರ್ತಿ.
4. ಲಾಲ್‌ಬಾಬು ಎಂಬುದು, ಜೆ.ಪಿ.ಯುವರ ಪತ್ನಿ ಪ್ರಭಾವತಿ ದೇವಿಯುವರ ಸೋದರ ಶಿವನಾಥಪ್ರಸಾದರ ಮುದ್ದಿನ ಹೆಸರು.

ಜುಲೈ 26

ಇಂದು ನಾನು ನನ್ನ ಸೆರೆವಾಸದ ಒಂದು ತಿಂಗಳನ್ನು ಪೂರ್ಣಗೊಳಿಸಿರುವೆ. ಈ ಒಂದು ತಿಂಗಳು ಒಂದು ವರ್ಷದಂತಿತ್ತು ಎಂದು ನಾನು ಹೇಗೆ ಹೇಳದಿರಲಿ? ಬಹುಶಃ ಕಳೆದ 30 ವರ್ಷಗಳಿಂದ, ನಿಖರವಾಗಿ ಹೇಳಬೇಕೆಂದರೆ 29 ವರ್ಷಗಳಿಂದ ಸೆರೆಮನೆಗೆ ಹೋಗುವ ಅಭ್ಯಾಸ ತಪ್ಪಿದ್ದೇ ಇದಕ್ಕೆ ಕಾರಣವಿರಬಹುದು. ಇತಿಹಾಸದಲ್ಲಿ ಇಂದಿರಾಜಿಯ ಆಳ್ವಿಕೆಯನ್ನು ಅದರ ಸಾಧನೆಗಳಿಗಾಗಿ ಅಥವಾ ಸಾಧನೆಗಳು ಸೊನ್ನೆ ಎಂಬುದಕ್ಕಾಗಿ - ಈ ಆಳ್ವಿಕೆಯ ಗಮನಾರ್ಹ ಸಾಧನೆ ಎಂದರೆ ಪ್ರಜಾಪ್ರಭುತ್ವದ ಕೊಲೆ - ಜ್ಞಾಪಿಸಿಕೊಳ್ಳಬಹುದೇನೋ! -ಆದರೆ ನಾನು (ಬದುಕಿರಬಹುದಾದ ಕೆಲವು ತಿಂಗಳುಗಳು ಅಥವಾ ವರ್ಷಗಳ ಕಾಲ) ಇದನ್ನು ನೆನಪಿಸಿಕೊಳ್ಳುವುದು, ಸ್ವತಂತ್ರ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ನಾನು ಕೇಂದ್ರ ಮೀಸಲು ಪಡೆಯ ಅಶ್ರುವಾಯು ಪ್ರಯೋಗ ಹಾಗೂ ಲಾಠಿಏಟಿಗೆ ಬಲಿಯಾಗಬೇಕಾಗಿ ಬಂದ ಮತ್ತು ಸೆರೆವಾಸವನ್ನು ಅನುಭವಿಸಬೇಕಾಗಿ ಬಂದ ಆಳ್ವಿಕೆ ಎಂದು. ಬ್ರಿಟಿಷರ ಕಾಲದಲ್ಲೂ ನಾನೆಂದೂ ಸ್ವತಃ ಅಶ್ರುವಾಯು ಅಥವಾ ಲಾಠಿ ಪ್ರಯೋಗವನ್ನು ಎದುರಿಸಿರಲಿಲ್ಲ. 1946ರ ಏಪ್ರಿಲ್‌ನಲ್ಲಿ ಆಗ್ರಾ ಕೇಂದ್ರ ಸೆರೆಮನೆಯಿಂದ ನನ್ನ ಬಿಡುಗಡೆಯಾದ ನಂತರ ಮತ್ತೆ ನನ್ನನ್ನೆಂದೂ ಬಂಧಿಸಿರಲಿಲ್ಲ ಮತ್ತು ಸೆರೆಯಲ್ಲಿಟ್ಟಿರಲಿಲ್ಲ. ಒಂದು ತಿಂಗಳು ಒಂದು ವರ್ಷದಂತೆ ನನಗನ್ನಿಸಲು, ಖಂಡಿತ ನನ್ನ ಒಂಟಿತನವೂ ಕಾರಣವಾಗಿದೆ. ಇತರ ಬಂಧಿತರೂ ನನ್ನೊಡನಿರಲು ಅವಕಾಶ ಮಾಡಿಕೊಟ್ಟಿದ್ದರೆ ನನಗೆಷ್ಟೊ ಸಹಾಯವಾಗುತ್ತಿತ್ತು.

ಇರಲಿ, ಆದರೆ ಇಂದು ನಾನು ಕುಳಿತದ್ದು ಇದನ್ನೆಲ್ಲಾ ಬರೆಯಲೆಂದಲ್ಲ; ನಾನು ಬರೆಯಲು ಕುಳಿತದ್ದು ಇನ್ನೂ ಹೆಚ್ಚಿನ ಮಹತ್ವವುಳ್ಳದ್ದನ್ನು. ನಾನೀಗ ಬಂದಿರುವ ನಿರ್ಧಾರಕ್ಕೆ, ಪ್ರಜ್ಞಾಪೂರ್ವಕನಾದ ಪ್ರತಿ ಭಾರತೀಯನೂ ಬಂದಿರಬಹುದು - ಅದನ್ನು ನಾನು ಈ ಕೆಳಗೆ ಬರೆಯುತ್ತಿರುವೆ ;

ನಾನು ಪ್ರಧಾನಮಂತ್ರಿಗೆ ಬರೆದಿರುವ ಪತ್ರ[5] ಹಾಗೂ ಆ ನಂತರದ ಎರಡು ದಿನಗಳ ಟಿಪ್ಪಣಿಗಳಿಂದ, ಪ್ರಧಾನಮಂತ್ರಿಯಾಗಿ ತನ್ನ ಸ್ಥಾನ ಅಭದ್ರ ಎನಿಸಿದಾಗ ಏನು ಮಾಡಬೇಕೋ ಆ ಪ್ರಕಾರವಾಗಿ ಆಕೆ ವರ್ತಿಸಿದ್ದಾಳೆ ಎಂಬುದನ್ನು ಕಾಣಬಹುದು. ಇದಕ್ಕೆಲ್ಲಾ ಈಗ ಕಾಲ ಕೂಡಿಬಂತಷ್ಟೆ. ಇಂದಿರಾಜಿ, ಆಕೆಯ ಪಕ್ಷದಲ್ಲಿರುವ ವೇಷ ಮರೆಸಿಕೊಂಡ ಕಮ್ಯುನಿಸ್ಟರು, ಸಿ.ಪಿ.ಐ.ನವರು ಮತ್ತು ಈ ಎಲ್ಲದರ ಹಿನ್ನೆಲೆಯಲ್ಲಿ ಸೋವಿಯತ್ ಒಕ್ಕೂಟ - ಇವರೆಲ್ಲಾ ಜೂನ್ 25ರವರೆಗೆ ನಾವು ಹೊಂದಿದ್ದ

---

5. **ಜುಲೈ 21ರಂದು ಬರೆದ ಪತ್ರ : ಅನುಬಂಧ-1 ನೋಡಿ.**

ಪ್ರಜಾಪ್ರಭುತ್ವ ವ್ಯವಸ್ಥೆಯ ಸ್ಥಾನದಲ್ಲಿ ಸರ್ವಾಧಿಕಾರಿ ವ್ಯವಸ್ಥೆಯೊಂದನ್ನು ಜಾರಿಗೆ ತರಲು ವಿವರವಾದ ಯೋಜನೆಯೊಂದನ್ನು ಸಿದ್ಧಪಡಿಸಿದ್ದಾರೆ ಎಂಬುದು ನನಗೆ ಖಂಡಿತವೆನಿಸಿದೆ. ಈ ಮೂವ್ವರಿಗೂ - ಪ್ರಧಾನಿ, ಕಾಂಗ್ರೆಸ್‌ನಲ್ಲಿರುವ ಕಮ್ಯೂನಿಸ್ಟ್ ಬಾಲಬಡುಕರು ಹಾಗೂ ಸಿ.ಪಿ.ಐ. - ಪ್ರಜಾಪ್ರಭುತ್ವವೆಂಬುದು ನುಂಗಲಾರದ ತುತ್ತಾಗಿದೆ ಮತ್ತು ಅವರೆಲ್ಲ ತಮ್ಮ ಗುರಿಯನ್ನು ಸಾಧಿಸಲು ಅಗತ್ಯವಾದ ಕ್ರಮಗಳನ್ನು ಬಹಳ ವರ್ಷಗಳಿಂದ ಅಯೋಜಿಸಿದ್ದಾರೆ : ಮೊದಲು “ಸಾಮಾಜಿಕ ಪ್ರಜಾಪ್ರಭುತ್ವ”, ಆನಂತರ ಯಾರಿಗೂ ಗೊತ್ತಾಗದಂತೆ ವೇಷ ಮರೆಸಿಕೊಂಡ ರಷ್ಯನ್ ಮಠದಾಶ್ರಯದಲ್ಲಿ ಕಮ್ಯೂನಿಸ್ಟ್ ಪಕ್ಷದ ನಗ್ನ ಆಡಳಿತ.

ಒಂದಲ್ಲ, ಎರಡು ಯೋಜನೆಗಳಿರಬೇಕು. ಒಂದು, ಇಂದಿರಾಜಿಯೂ ಭಾಗಿಯಾಗಿರುವ ಮತ್ತು ಇದನ್ನು ತಾನೇ ರೂಪಿಸುವುದು ಎಂದ ಆಕೆ ನಂಬುವಂತೆ ಮಾಡಲಾಗಿರುವ ಯೋಜನೆ. ಈ ಯೋಜನೆಯ ಪ್ರಕಾರ, ಸಾವು ಮಧ್ಯೆ ಪ್ರವೇಶಿಸುವವರೆಗೂ ಇಂದಿರಾಜಿ ನಿರಂತರವಾಗಿ ಅತ್ಯುನ್ನತ ಸ್ಥಾನದಲ್ಲಿರುವಳು. ಇನ್ನೊಂದು, ಸೋವಿಯತ್ ಯೋಜನೆ. ಆದರೆ ಈ ಯೋಜನೆ ತಮ್ಮ ಅದ್ಭುತ ಮಿದುಳುಗಳಿಂದಲೇ ಮೂಡಿದ್ದು ಎಂದು ಸಿ.ಪಿ.ಐ.ಯವರನ್ನು ನಂಬಿಸಲಾಗಿದೆ. ಇಂದಿರಾಜಿಗೆ ಈ ಯೋಜನೆ ಗೊತ್ತಿಲ್ಲ, ಕೆಲವು ಖಾಸಗಿ ಸಂಶಯಗಳಿರಬಹುದಾದರೂ. ಸೋವಿಯತ್‌ನವರು ನಂಬುವ, ಆದರೆ ತಮ್ಮ ಬಹಿರಂಗ ನಡವಳಿಕೆಗಳ ಮೂಲಕ ಸಿ.ಪಿ.ಐ. ಅಥವಾ ಸೋವಿಯತ್ ಒಕ್ಕೂಟದ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸದ ಕೆಲವರ ಹೊರತಾಗಿ, ಕಾಂಗ್ರೆಸ್ಸಿನಲ್ಲಿರುವ ಕಮ್ಯೂನಿಸ್ಟ್ ಬಾಲಬಡುಕರಿಗೂ ಸಹ ಈ ಯೋಜನೆ ಗೊತ್ತಿಲ್ಲ. ಅವರು ಕೆಲವೇಳೆ ಸಮಾಜವಾದದ ಪಿತೃದೇಶದ ಬಗ್ಗೆ ದ್ವೇಷವನ್ನಲ್ಲದಿದ್ದರೂ, ಖಂಡನೆಯನ್ನು ವ್ಯಕ್ತಪಡಿಸಿದಂತೆ ಕಂಡಿದ್ದರೂ ಕಂಡಿರಬಹುದು.

ಈ ಎರಡನೇ ಯೋಜನೆಯನ್ನು, ಸಾಮಾಜಿಕ ಪ್ರಜಾಪ್ರಭುತ್ವದಿಂದ ನಗ್ನ ಕಮ್ಯೂನಿಸ್ಟ್ ಸರ್ವಾಧಿಕಾರ ಸ್ಥಾಪನೆಯ ಸ್ಥಿತ್ಯಂತರ ಸಮಯದಲ್ಲಿ ಜಾರಿಗೆ ಬರುವಂತೆ ರೂಪಿಸಲಾಗಿದೆ. ಆ ಜಾರಿಯ ಸಮಯದಲ್ಲಿ ಹಲವಾರು ತಲೆಗಳು ಉರುಳುವುವು, ಸಾಮಾಜಿಕ ಪ್ರಜಾಪ್ರಭುತ್ವದ ಸಮಯದಲ್ಲೂ, ತಲೆಗಳು ಉರುಳುವುದು ಅಂತಹ ವಿಶೇಷದ ವಿಷಯವಾಗಲಾರದಾದರೂ.

ಈಗ ಯೋಚಿಸಬೇಕಾದ ಸಂಗತಿಯೆಂದರೆ, ಈ ಯೋಜನೆ ಅಥವಾ ಈ ಯೋಜನೆಗಳು ಯಶಸ್ವಿಯಾಗುತ್ತವೆಯೇ? ನನಗಂತೂ ಈ ಬಗ್ಗೆ ಬಹಳ ಸಂದೇಹವಿದೆ. ಆದರೆ ಈಗ ಈ ಬಗ್ಗೆ ದೇಶ ಸ್ವಲ್ಪಕಾಲ ನರಕಯಾತನೆಯನ್ನು ಅನುಭವಿಸಲೇ ಬೇಕಾಗಿದೆ.

ಈಗಿನ ಪ್ರಶ್ನೆ ಎಂದರೆ, ಈ ಅನಾಹುತವನ್ನು ತಪ್ಪಿಸಬಹುದಿತ್ತೇ? ಈ ಪ್ರಶ್ನೆಯ ಬಗ್ಗೆ ಈ ಮುನ್ನ ವಿಚಾರ ಮಾಡಿದ್ದೇನೆ; ಆದರೂ ಚಾರ್ಲ್ಸ್ ದೊರೆಯ

ತಲೆಯಂತೆ ಇದು ಮತ್ತೆ ಮತ್ತೆ ಮಟಿದೇಳುತ್ತದೆ. ಹೂಂ, ನಾವು ಒಳ್ಳೆಯ ಹುಡುಗರಂತೆ ವರ್ತಿಸಿ, ನಿರ್ಣಯಗಳನ್ನು ಅಂಗೀಕರಿಸುತ್ತಾ, ಮನವಿ ಪತ್ರಗಳನ್ನು ಸಲ್ಲಿಸುತ್ತಾ ಪ್ರತಿಫಲಕ್ಕಾಗಿ ದೇವರನ್ನು ಕಾಯುತ್ತಾ ಕೂರುವುದರಲ್ಲಿ ತೃಪ್ತಿ ಪಡೆದಿದ್ದಲ್ಲಿ ಈ ಅನಾಹುತವನ್ನು ತಡೆಯಬಹುದಿತ್ತು. **ಅನುಶಾಸನಪರ್ವ** ಎಂಬುದರ ಅರ್ಥ ಇದೇ ಇರಬಹುದೇ ಎಂಬ ಅನುಮಾನ ನನಗಿದೆ. ಸಾಮಾಜಿಕ ಮತ್ತು ಆರ್ಥಿಕ ಅನ್ಯಾಯ ಹಾಗೂ ಪಿಡುಗುಗಳ ವಿರುದ್ಧ ಹೋರಾಟವಿರಬೇಕೆಂದು ವಿನೋಬಾಜಿ ನನಗೆ ಸಲಹೆ ನೀಡಿದ್ದು ಈಗ ನೆನಪಿಗೆ ಬರುತ್ತಿದೆ.[6] ಆದರೆ ಅವರು ಇದಕ್ಕೆ ಕೊಟ್ಟ ಕಾರಣವೆಂದರೆ, ಅಮೆರಿಕಾ ಮತ್ತೆ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಸುತ್ತಿದ್ದು ಮತ್ತು ಚೀನಾ ಕೂಡಾ ಅದರ ನೆರವಿಗೆ ಬಂದಿದ್ದು (ಮಿಲಿಟರಿ ಸಲಕರಣೆಗಳಿಗಿಂತ ಮಾತಿನ ಮೂಲಕ) ಪಾಕಿಸ್ತಾನದೊಡನೆ ಯುದ್ಧ ಸಂಭವಿಸುವ ಸಾಧ್ಯತೆ ಇರುವುದರಿಂದ, ಸರ್ಕಾರದ ವಿರುದ್ಧದ ಹೋರಾಟ ದೇಶವನ್ನು ದುರ್ಬಲಗೊಳಿಸುತ್ತದೆ; ಈ ದೃಷ್ಟಿಯಿಂದ ಸರ್ಕಾರ ವಿರೋಧೀ ಹೋರಾಟ ಸೂಕ್ತವಲ್ಲ. ಈ ಅಭಿಪ್ರಾಯದ ವಿರುದ್ಧ ನನ್ನದೇ ವಾದವಿದೆ. ಇದನ್ನು, ಸರ್ವಸೇವಾಸಂಘವು ಕೆಲವು ಆಯ್ದ ವ್ಯಕ್ತಿಗಳಿಗೆ ಹಂಚಿರುವ, ನನ್ನ ಮತ್ತು ವಿನೋಬಾಜಿ ನಡುವಣ ಸಂಭಾಷಣೆಗಳ ದಾಖಲೆಯಲ್ಲಿ ಕಾಣಬಹುದಾಗಿದೆ. ಇಷ್ಟಾದರೂ, ಪರಿಸ್ಥಿತಿಯನ್ನು ವಿನೋಬಾಜಿಗೆ ಅರ್ಥಮಾಡಿಸಲು ಯಾರೂ ಇಚ್ಛಿಸಲಿಲ್ಲ; ನನ್ನ ವಾದವನ್ನು ಸಹ ಯಾರೂ ಪ್ರಶ್ನಿಸಲಿಲ್ಲ.

ಹೋಗಲಿ ಈಗ ಉಳಿದಿರುವುದಾದರೂ ಏನು? ನಡೆದದ್ದು ಪಾಕಿಸ್ತಾನದೊಂದಿಗೆ ಯುದ್ಧವಲ್ಲ, ಭಾರತೀಯ ಪ್ರಜಾಪ್ರಭುತ್ವದ, ಪೂರ್ವನಿಯೋಜಿತ ಹಾಗೂ ಭಯಾನಕವಾದ ಕೊಲೆ. ಈ ಬಗ್ಗೆ ವಿನೋಬಾಜಿ ತೃಣಮಾತ್ರ ಸೂಚನೆಯನ್ನೂ ಕೊಟ್ಟಿರಲಿಲ್ಲ. ಸರ್ವಾಧಿಕಾರವನ್ನು ಅವರು, ಶಿಸ್ತುಮೂಡಿಸುವ ಆರೋಗ್ಯಕಾರೀ ವಿಧಾನವೆಂದು, ಅಂದರೆ ತನ್ನ ಶತ್ರುಗಳನ್ನು ಎದುರಿಸಲು ಹಾಗೂ ನೈತಿಕ, ಲೌಕಿಕ ಮತ್ತು ಆಧ್ಯಾತ್ಮಿಕ ಪರಿಪೂರ್ಣತೆಯ ಕಡೆಗೆ ಭಾರತ ಪ್ರಗತಿಯ ಹೆಜ್ಜೆಯನ್ನಿಡಲು ಅನುಕೂಲವಾಗುವಂತೆ; ದೇಶವು ಅದರಲ್ಲೂ ನಿರ್ದಿಷ್ಟವಾಗಿ ನಾನು, ಮೊರಾರ್ಜಿ ದೇಸಾಯಿ, ಸಿದ್ಧರಾಜ್,[7] ಹಾಗೂ ಇತರ ಹಲವಾರು ಅಧಿಕ ಪ್ರಸಂಗಿಗಳು ಆತ್ಮ ಪರಿಶುದ್ಧೀಕರಣಕ್ಕಾಗಿ ಹಾದುಹೋಗಬೇಕಾದ ಅಗ್ನಿಕುಂಡವೆಂದು ಪರಿಗಣಿಸುವರೇನೋ ಗೊತ್ತಿಲ್ಲ.

---

6. ವಿನೋಬಾಜಿ ವಾಸಿಸುವ ವಾರ್ಧಾ ಪೌನಾರ್ ಆಶ್ರಮದಲ್ಲಿ ಜೆ.ಪಿ. ಹಾಗೂ ವಿನೋಬಾ ಭಾವೆ ನಡುವೆ 1975ರ ಮಾರ್ಚ್ 14ರಂದು ನಡೆದ ಚರ್ಚೆಯ ಉಲ್ಲೇಖವಿದು. ಈ ಸಂದರ್ಭದಲ್ಲಿ ವಿನೋಬಾಜಿ ಒಂದು ವರ್ಷದ ಮೌನಾಚರಣೆಯ ತಮ್ಮ ಪ್ರತಿಜ್ಞೆಯನ್ನು ಮುರಿದರು.
7. ಸರ್ವಸೇವಾ ಸಂಘದ ಅಧ್ಯಕ್ಷರು; ಮೀಸಾ ಬಂಧಿತರು.

ಅಂತೂ, ಪ್ರತಿಯೊಬ್ಬರೂ - ವಿರೋಧ ಪಕ್ಷಗಳು, ತಲೆಕೆಟ್ಟ ಸರ್ವೋದಯ ಕಾರ್ಯಕರ್ತರು, ವಿದ್ಯಾರ್ಥಿಗಳು, ಯುವಜನರು ಮತ್ತು ಸ್ವತಃ ಜನತೆಯೇ - ಸಭ್ಯತೆಯಿಂದ ವರ್ತಿಸಿದ್ದಲ್ಲಿ; ಅಂದರೆ, ಹೇಗೋ ದೇಶದಲ್ಲಿ ಸ್ಮಶಾನಮೌನವನ್ನು ಮೂಡಿಸುವಂತಿದ್ದಲ್ಲಿ, ಎಲ್ಲವೂ ಸುರಕ್ಷಿತವಾಗಿರುತ್ತಿತ್ತು, ನಿಸೂರಾಗಿರುತ್ತಿತ್ತು. ಆದರೆ ಆಗ ಪ್ರಜಾಪ್ರಭುತ್ವಕ್ಕೆ ಬೆಲೆಯಾದರೂ ಎಷ್ಟಿರುತ್ತಿತ್ತು? ಪ್ರಜಾಪ್ರಭುತ್ವವೊಂದರಲ್ಲಿ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಬದಲಾವಣೆಗಳನ್ನು ತರುವ ಮಾರ್ಗಗಳು ಯಾವುವು? ಚುನಾವಣೆಯೊಂದೇ ಮಾರ್ಗವೇ? ಚುನಾವಣೆಗಳೇ ಮುಕ್ತ ಹಾಗೂ ನ್ಯಾಯಯುತವಾದ ರೀತಿಯಲ್ಲಿ ನಡೆಯದಿದ್ದರೆ ಏನು ಮಾಡುವುದು? ಬಾಯಿ ಮುಚ್ಚಿಕೊಂಡು, ಕೈಗಳನ್ನು ಕಟ್ಟಿಕೊಂಡು ಚುನಾವಣೆಗಳನ್ನು ಗೆಲ್ಲಲು ಸಾಧ್ಯವೇ? ಮತ್ತೆ ಹೇಗೆ ಅನ್ಯಾಯ ಮತ್ತು ತುಳಿತವನ್ನು ಎದುರಿಸುವುದು? ಚುನಾವಣೆಗಳಿಗಾಗಿ ಕಾಯುತ್ತಾ ಕೂತು, ಕೊನೆಗೆ ಸೋಲುವುದೇ? ಈ ಸರ್ಕಾರದ ದುರಾಚಾರಗಳನ್ನು ಬಯಲಿಗೆಳೆಯದಿದ್ದಲ್ಲಿ, ಅದನ್ನು ಕೆಳಗಿಳಿಸಿ ಬೇರೆ ಸರ್ಕಾರವನ್ನು ಸ್ಥಾಪಿಸಲು ಚಳುವಳಿ ಮಾಡದಿದ್ದಲ್ಲಿ, ಚುನಾವಣೆಗಳಲ್ಲಿ ಗೆಲ್ಲುವ ಅವಕಾಶವಾದರೂ ನಿಮಗೆ ಹೇಗೆ ದೊರಕಲು ಸಾಧ್ಯ? ಈ ಎಲ್ಲ ಸಭೆಗಳು, ಪ್ರದರ್ಶನಗಳು, ಮುಷ್ಕರಗಳು, ಬಂದ್‌ಗಳು, ನಾಗರಿಕ ಅಸಹಕಾರ ಮುಂತಾದುವೆಲ್ಲಾ ಪ್ರಜಾಪ್ರಭುತ್ವದ ಆಯುಧಗಳು; ಅವನ್ನು ಬಳಸಲೇಬೇಕು. ನಿಜ, ಇವನ್ನೆಲ್ಲಾ ಶಾಂತಿಯುತವಾಗಿ ಮತ್ತು ವ್ಯವಸ್ಥಿತವಾದ ರೀತಿಯಲ್ಲಿ ನಡೆಸಬೇಕು. ಅವ್ಯವಸ್ಥೆ ಹಾಗೂ ಹಿಂಸೆ ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ. ಆದರೆ ಬಿಹಾರ ಆಂದೋಲನ ಅತ್ಯಂತ ಶಾಂತಿಪೂರ್ಣವಾಗಿತ್ತು, ವ್ಯವಸ್ಥಿತವಾಗಿತ್ತು. ದೆಹಲಿಯಲ್ಲಿನ ಪ್ರದರ್ಶನಗಳು ಕೂಡಾ. ಏಳುದಿನಗಳ ನಾಗರಿಕ ಅಸಹಕಾರ ಕಾರ್ಯಕ್ರಮವನ್ನು ಕೂಡಾ ಶಾಂತಿಯುತ ರೀತಿಯಲ್ಲಿ ನಡೆಸುವ ಉದ್ದೇಶವಿತ್ತು.* ತುರ್ತುಪರಿಸ್ಥಿತಿ ಘೋಷಿಸಲು, ಪತ್ರಿಕೆಗಳ ಮೇಲೆ ನಿರ್ಬಂಧ ಹೇರಲು, ಮೂಲಭೂತ ಹಕ್ಕುಗಳನ್ನು ರದ್ದುಗೊಳಿಸಲು, ಸಾವಿರಾರು ಜನರನ್ನು ಬಂಧಿಸಿ ಸ್ಥಾನಬದ್ಧತೆಯಲ್ಲಿಡಲು ಮತ್ತು ಸಂವಿಧಾನ, ಜನತಾ ಪ್ರಾತಿನಿಧ್ಯ ಕಾಯಿದೆ ಹಾಗೂ ಮೀಸಾಕ್ಕೆ ಹಲವಾರು ತಿದ್ದುಪಡಿಗಳನ್ನು ಮಾಡಲು, ಯಾವ ಕಾರಣವೂ ಇರಲಿಲ್ಲ. ಪ್ರಧಾನಮಂತ್ರಿಗೆ ಬರೆದ ಪತ್ರದಲ್ಲಿ ಈ ಎಲ್ಲರದ ಬಗ್ಗೆ ವಿವರವಾಗಿ ವಾದ ಮಾಡಿರುವೆ.

ಇಂದಿರಾಜಿ ಇದನ್ನೆಲ್ಲಾ ಮಾಡಿರುವುದೇಕೆಂದರೆ, ಜೂನ್ 26, ನಾನು ಈ ಹಿಂದೆ ಪ್ರಸ್ತಾಪ ಮಾಡಿದ ಯೋಜನೆಯು ಆರಂಭದಿನ ಮಾತ್ರವಾಗಿದೆ.

---

* ಅಲಹಾಬಾದ್ ಶ್ರೇಷ್ಠ ನ್ಯಾಯಾಲಯದ ತೀರ್ಪನ್ನು ಧಿಕ್ಕರಿಸಿ, ಶ್ರೀಮತಿ ಗಾಂಧಿಯವರು ಪ್ರಧಾನಮಂತ್ರಿ ಸ್ಥಾನಕ್ಕೆ ಅಂಟಿಕೊಂಡಾಗ ವಿರೋಧ ಪಕ್ಷಗಳು ಅವರ ರಾಜೀನಾಮೆಯನ್ನು ಒತ್ತಾಯಿಸಿ ಅಸಹಕಾರ ಚಳುವಳಿಯನ್ನು ನಡೆಸಲು ನಿರ್ಧರಿಸಿದ್ದವು.

ಜುಲೈ 27

ಇನ್ನೊಂದು ಸಂತೋಷದ ದಿನ. ಬಾಬೂನಿ[8] ಮತ್ತು ಅಶೋಕ[9] ಬಂದಿದ್ದರು. ಬಾಬೂನಿ ಬಹಳ ಬಳಲಿದ್ದಂತೆ, ನನ್ನ ಬಗ್ಗೆ ಆತಂಕಗೊಂಡಿರುವಂತೆ ಕಂಡಿತು. ಅವಳ ಕಣ್ಣುಗಳು ತುಂಬಿ ಬಂದಿದ್ದವು. ಅವಳು ಇನ್ನೇನು ಜೋರಾಗಿ ಅಳಲಿದ್ದಾಳೆ, ಅದರಿಂದ ನನ್ನ ಹೃದಯ ಕೂಡಾ ತುಂಬಿ ಬಂದು ನಾನು ಅಳದೇ ಇರಲಾರೆ ಎಂದೆನಿಸಿದಾಗ, ಅವಳ ಹಾಗೂ ನನ್ನ ಮನಸ್ಸನ್ನು ಬೇರೆ ಕಡೆ ತಿರುಗಿಸಲು ಅಶೋಕನೊಂದಿಗೆ ಆತನ ಮಕ್ಕಳು ಹಾಗೂ ಸೋದರಿಯ ಬಗ್ಗೆ ಮಾತು ಆರಂಭಿಸಿದೆ. ನನ್ನ ಪ್ರಯತ್ನ ಯಶಸ್ವಿಯಾಯಿತು. ಬಾಬೂನಿ ತನಗೆ ತಾನೇ ಸಮಾಧಾನ ಮಾಡಿಕೊಂಡಳು.

ಪಟ್ನಾದಲ್ಲಿನ ನನ್ನ ಸ್ನೇಹಿತರು ಹಾಗೂ ಬಂಧುಗಳು ಮತ್ತು ಮಹಿಳಾ ಚರಕಾ ಸಮಿತಿಯ ಬಗ್ಗೆ ಮಾತನಾಡಿ ಸಂತೋಷಗೊಂಡೆ.

ನನ್ನ ಆಲೋಚನೆಗಳು ಹಾಗೂ ಅಭಿಪ್ರಾಯಗಳನ್ನು ಇಲ್ಲಿ ಬರೆಯಲು ಏಕೋ ಇಂದು ಮನಸ್ಸಾಗುತ್ತಿಲ್ಲ.

ಆಗಸ್ಟ್ 6

ನಿರೀಕ್ಷಿಸಿದಂತೇ ನಡೆದಿದೆ. ಜನತಾ ಪ್ರತಿನಿಧಿ ಕಾಯಿದೆಗೆ ತಿದ್ದುಪಡಿ ಮಾಡಿ, ಸರ್ವೋನ್ನತ ನ್ಯಾಯಾಲಯ ನೀಡಬಹುದಾದ ಪ್ರತಿಕೂಲ ತೀರ್ಪಿನ ವಿರುದ್ಧ ಶ್ರೀಮತಿ ಗಾಂಧಿ ಈಗ ರಕ್ಷಣೆ ಪಡೆದುಕೊಂಡಿದ್ದಾಳೆ. ಸಂವಿಧಾನವನ್ನು ಇಡಿಯಾಗಿ ತಿದ್ದುಪಡಿ ಮಾಡಲಾಗುವುದೆಂದೂ ನಿರೀಕ್ಷಿಸಲಾಗಿದೆ. ಇದೆಲ್ಲಾ ನಡೆಯುತ್ತಿರುವುದು, ದೇಶದ ಸ್ವಯಂಘೋಷಿತ ರಕ್ಷಕಿಯ ಸರ್ವಾಧಿಕಾರವನ್ನು ಪರಿಪೂರ್ಣಗೊಳಿಸಲೆಂದು, ಇದನ್ನೆಲ್ಲಾ ರಾಜ್ಯಾಂಗಬದ್ಧವಾಗಿಯೇ ಮಾಡಲಾಗುತ್ತಿದೆ ಎಂದು ಹೇಳಿಕೊಳ್ಳಲಾಗುತ್ತಿದೆ. ಹಿಟ್ಲರ್ ಕೂಡಾ ತನ್ನ ಅವನತಿಗೆ ಕಾರಣವಾದ ಸರ್ವಾಧಿಕಾರವನ್ನು ಸ್ಥಾಪಿಸಿದ್ದೂ ಪ್ರಜಾತಂತ್ರ ವಿಧಾನಗಳ ಮೂಲಕವೇ. ಈ ಕತ್ತಲೆಯಿಂದ ಹೊರಬರಲು ಭಾರತ ಸಹ ಮತ್ತೆ ನರಕದ ಮೂಲಕ ಹಾದು ಹೋಗಬೇಕೆ? ಖಂಡಿತ ಹೌದೆನಿಸುತ್ತದೆ ಈಗ. ಆದರೆ ಇದಕ್ಕೆ ಭಾರತ ತೆರಬೇಕಾಗುವ ಬೆಲೆ ಎಂದರೆ ದೇಶ ಹೆಳವಾಗುವುದು. ದೇವರು ಆಕೆಗೆ ಒಳ್ಳೆಯದನ್ನು ಮಾಡಲಿ.

---

8. ಬಾಬೂನಿ ಎಂಬುದು ಜೆ.ಪಿ. ತಂಗಿಯ ಮುದ್ದಿನ ಹೆಸರು.
9. ಜೆ.ಪಿ.ಯವರ ತಂಗಿ ಬಾಬೂನಿಯ ಮಗ.

ಆಗಸ್ಟ್ 7

(ಹಿಂದಿಯಲ್ಲಿ ಬರೆದದ್ದು)

"ಸಂಪೂರ್ಣ ಕ್ರಾಂತಿ ನಮ್ಮ ಘೋಷಣೆ: ಭವಿಷ್ಯದ ಇತಿಹಾಸ ನಮಗೆ ಸೇರಿದ್ದು" - ಈಗ ಇದು ಚರಿತ್ರೆಯ ವ್ಯಂಗ್ಯವಾಗಿ ಉಳಿಯುತ್ತದೆಯೇ? ಎಲ್ಲ ಹೌದಪ್ಪಗಳು, ಹೇಡಿಗಳು ಹಾಗೂ ಭಟ್ಟಂಗಿಗಳು ಈಗ ನಮ್ಮನ್ನು ಕಂಡು ನಗುತ್ತಿರಬಹುದು. "ಅವರು ನಕ್ಷತ್ರಗಳ ಬಳಿ ಹೋಗಲೆಣಿಸದರು. ಆದರೆ ನರಕಕ್ಕೆ ಜಾರಿದರು" ಎಂದು ಅವರು ನಮ್ಮನ್ನು ಹೀಯಾಳಿಸುತ್ತಿರಬಹುದು. ಆದರೆ ನಕ್ಷತ್ರಗಳತ್ತ ಹೋಗಬಯಸಿದವರೇ ಈ ಪ್ರಪಂಚದಲ್ಲಿ ಏನನ್ನಾದರೂ ಸಾಧಿಸಿರುವುದು, ತಮ್ಮ ಪ್ರಾಣಗಳನ್ನು ತ್ಯಾಗ ಮಾಡಿಯಾದರೂ.

ಸಂಪೂರ್ಣ ಕ್ರಾಂತಿಯ ಬದಲಾಗಿ ನಮ್ಮ ಸುತ್ತ ಪ್ರತಿಕ್ರಾಂತಿಯ ಕರಿಮೋಡಗಳು ಆವರಿಸುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಎಲ್ಲ ದಿಕ್ಕುಗಳಿಂದಲೂ ಕೂಗುತ್ತಿರುವ, ಊಳಿಡುತ್ತಿರುವ ಗೂಬೆಗಳು, ನರಿಗಳಿಗೆ ಇಂದು ಹಬ್ಬದ ದಿನವಾಗಿದೆ. ಆದರೆ ರಾತ್ರಿ ಎಷ್ಟೇ ದಟ್ಟವಾಗಿದ್ದರೂ, ಬೆಳಕು ಮೂಡಲೇಬೇಕು.

ಆದರೆ ತಂತಾನೇ ಬೆಳಕು ಮೂಡುತ್ತದೆಯೆ? ನಾವು ಕೈಕಟ್ಟಿ ಸುಮ್ಮನೆ ಕಾಯುತ್ತಾ ಕೂರಬೇಕೆ? ರಾತ್ರಿಯ ನಂತರ ಬೆಳಕು ಮೂಡುವ ಪ್ರಾಕೃತಿಕ ಕ್ರಾಂತಿಯ ಹಾಗೇ ಸಾಮಾಜಿಕ ಕ್ರಾಂತಿಯೂ ಆಗುವುದಿದ್ದರೆ, ಸಾಮಾಜಿಕ ಪ್ರಗತಿ ಹಾಗೂ ಬದಲಾವಣೆಗಾಗಿ ಮಾನವ ಪ್ರಯತ್ನದ ಅಗತ್ಯವೇ ಇರುತ್ತಿರಲಿಲ್ಲ, ಹಾಗಿದ್ದರೆ ಈಗ ನಾವೇನು ಮಾಡಬೇಕು? ಅದಕ್ಕುತ್ತರ ಇದು*: "ಆ ಘೋಷಣೆಯನ್ನು ಕೂಗಿದ, ಆ ವೀರಗೀತೆಯನ್ನು ಹಾಡಿದ ಜನರೇ ತಾವಾಗಿ ತ್ಯಾಗ ಬಲಿದಾನಗಳಿಗಾಗಿ ಮುಂದೆ ಬರಬೇಕು. ಬಲಿಪೀಠಕ್ಕೆ ಮೊದಲು ಮುತ್ತಿಟ್ಟವನೇ ಅವರ ನಾಯಕನಾಗಿದ್ದವನಿರಬೇಕು". ಶಂಕೆ-ಸಂದೇಹಗಳಿಗೆ ವಿಶ್ರಾಂತಿ ನೀಡಲಾಗಿದೆ; ನಿರ್ಧಾರವನ್ನಾಗಲೇ ಕೈಗೊಳ್ಳಲಾಗಿದೆ.

ಕಳೆದ ರಾತ್ರಿ ನಾನು ದೇವಿ ಭಗವತಿ ಪ್ರಾರ್ಥನೆ ಸಲ್ಲಿಸುವಾಗ, ಈ ಕತ್ತಲಿಂದ ಹೊರದಾರಿಯೊಂದನ್ನು ತೋರಿಸುವಂತೆ ಕೇಳಿಕೊಂಡೆ; ಈ ಬೆಳಿಗ್ಗೆ ಅದು ನನಗೆ ದೊರೆಯಿತು. ಈಗ ನನ್ನ ಮನಸ್ಸು ನಿರ್ಮಲವಾಗಿದೆ, ಶಾಂತವಾಗಿದೆ.

ಜೀವನದ ಸಂಜೆ ಹೊತ್ತಿನಲ್ಲಿ

ಪ್ರಭಾ[10] ನನ್ನನ್ನು ಅಗಲಿದ ನಂತರ ನನಗೆ ಬದುಕಿನಲ್ಲಿ ಆಸಕ್ತಿಯೇ

---

* ಆಂಗ್ಲ ಪದ್ಯವೊಂದರ ಸಾಲು.

10. ಶ್ರೀಮತಿ ಪ್ರಭಾವತಿದೇವಿ, ಜೆ.ಪಿ.ಯವರ ಪತ್ನಿ.

ಹೊರಟುಹೋಯಿತು. ಸಾರ್ವಜನಿಕ ಕಾರ್ಯದ ಕಡೆ ನಾನು ವಿಶೇಷ ಒಲವು ಬೆಳಸಿಕೊಳ್ಳದಿದ್ದಲ್ಲಿ ನಾನು ಹಿಮಾಲಯಕ್ಕೆ ಹೊರಟು ಹೋಗುತ್ತಿದ್ದೇನೋ. ನಾನು ಒಳಗೇ ಅತ್ತೆನಾದರೂ, ಹೊರಗೆ ಎಂದಿನ ಕಾರ್ಯಕಲಾಪಗಳನ್ನು ಮುಂದುವರೆಸಿಕೊಂಡು ನಡೆದೆ. ನನ್ನ ಆರೋಗ್ಯ ಸಹ ಹದಗೆಡುತ್ತಿತ್ತು. ಈ ಅನಾಥ ಮನೋಸ್ಥಿತಿಯ ಸಮಯದಲ್ಲೆ ನನ್ನ ಅಂತಃಚೇತನವನ್ನು ಉದ್ದೀಪಿಸಿದ ಏನೋ ಅನಿರೀಕ್ಷಿತವಾದದ್ದು ನಡೆದದ್ದು. ನನ್ನ ಆರೋಗ್ಯ ಸಹ ಉತ್ತಮಗೊಳ್ಳಲಾರಂಭಿಸಿತ್ತು. ನನ್ನಲ್ಲಿ ಹೊಸ ಶಕ್ತಿ-ಉತ್ಸಾಹ ತುಂಬಿಕೊಂಡ ಅನುಭವವಾಗಿತ್ತು.

1973ರ ಕೊನೆಯ ತಿಂಗಳುಗಳಲ್ಲೇ - ಆಗ ನಾನು ಪೌನಾರ್‌ನಲ್ಲಿದ್ದೆ - ನಾನು ಯುವಜನರಿಗೆ ಕರೆಕೊಡುವ ಆಂತರಿಕ ಒತ್ತಡಕ್ಕೆ ಒಳಗಾದದ್ದು. ನಾನು ಅವರಿಗಾಗಿ ಮನವಿಯೊಂದನ್ನ ಸಿದ್ಧಪಡಿಸಿ "ಪ್ರಜಾಪ್ರಭುತ್ವಕ್ಕಾಗಿ ಯುವಜನರು" ಎಂಬ ಹೆಸರಿನಡಿ ಪತ್ರಿಕೆಗಳಲ್ಲಿ ಪ್ರಕಟಣೆಗಾಗಿ ಕಳುಹಿಸಿದೆ. ಈ ಮನವಿ, ನಾನು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಉತ್ತೇಜನಕಾರಿಯಾದ ಪ್ರತಿಕ್ರಿಯೆಯನ್ನು ಪ್ರಚೋದಿಸಿತು.

ಆಗಸ್ಟ್ 11

(ಹಿಂದಿಯಲ್ಲಿ ಬರೆದದ್ದು)

ನನ್ನ ಈ ಮುಂಚಿನ ನಿರ್ಧಾರಕ್ಕೆ[11] ಬದ್ಧನಾಗಿದ್ದೇನೆ. ಪತ್ರವನ್ನು[12] ಕಳಿಸಲಾಗಿಲ್ಲ. ನಾನು ಅದನ್ನು ಹರಿದು ಹಾಕಿದೆ. ನಾನು ಸೂಕ್ತ ಕಾಲಕ್ಕಾಗಿ ಕಾಯುವೆ, ಪರಿಸ್ಥಿತಿ ಯಾವ ಸ್ವರೂಪಕ್ಕೆ ತಿರುಗುತ್ತದೆ ಎಂದು ನೋಡುವೆ.

ಆಗಸ್ಟ್ 11

ವೃತ್ತ ಪತ್ರಿಕೆಗಳನ್ನು ಓದುವುದನ್ನು ಮತ್ತೆ ಆರಂಭಿಸಿದ್ದೇನೆ.[13] ಶ್ರೀಮತಿ ಗಾಂಧಿ ನನ್ನನ್ನು ದೂಷಿಸುವ, ನನ್ನ ಹೆಸರಿಗೆ ಮಸಿ ಬಳಿಯುವ ತನ್ನ ಪ್ರಯತ್ನಗಳನ್ನು ಮುಂದುವರಿಸಿದ್ದಾಳೆ. ನಾನು ಸರ್ವಾಧಿಕಾರದಲ್ಲಿ ನಂಬಿಕೆಯುಳ್ಳ ಮನುಷ್ಯನೆಂದೂ,

---

11. ಅನಿರ್ದಿಷ್ಟ ಕಾಲದವರೆಗೆ ಉಪವಾಸ ಕೈಗೊಳ್ಳುವ ನಿರ್ಧಾರ; ನಂತರ ಇದನ್ನು ಮುಂದೂಡಲಾಯಿತು.
12. ಈ ಮೇಲಿನ ನಿರ್ಧಾರವನ್ನು ಪ್ರಧಾನಮಂತ್ರಿಯವರಿಗೆ ತಿಳಿಸುವ ಪತ್ರ.
13. ಸರ್ಕಾರ ವಿರೋಧ ಪಕ್ಷಗಳನ್ನು ತಣ್ಣಗಾಗಿಸಿದ ನಂತರ ಸರ್ಕಾರ ಹೇಳುವ ಬರೀ ಸುಳ್ಳುಗಳಿಂದ ತುಂಬಿದ ಏಕಪಕ್ಷೀಯ ಪ್ರಚಾರ ಮಾತ್ರ ಪ್ರಕಟವಾಗುತ್ತಿದ್ದುದರಿಂದ ಜೆ.ಪಿ. ಪತ್ರಿಕೆಗಳನ್ನು ಓದುವುದನ್ನು ಬಿಟ್ಟುಬಿಟ್ಟಿದ್ದರು

ಮತ್ತು ಸಂಸದೀಯ ಪ್ರಜಾಸತ್ತೆಯ ವಿರೋಧಿ ಎಂದೂ ಆಕೆ ಹೇಳುತ್ತಿದ್ದಾಳೆ. ಆಕೆ ಅಥವಾ ಆಕೆಯ ಸಹೋದ್ಯೋಗಿಗಳು ಪ್ರತಿಸಲವೂ ಇದನ್ನು ಹೇಳುವಾಗ ಈ ಎರಡು ಅಂಶಗಳನ್ನು ಮರೆಯುತ್ತಾರೆ: (ಅ) ನಮ್ಮ ಸಂಸದೀಯ ಪ್ರಜಾಸತ್ತೆಯನ್ನು ಇನ್ನೂ ಹೆಚ್ಚು ಪ್ರಜಾಸತ್ತಾತ್ಮಕವಾಗಿ ಮಾಡಲು ನಾನು ಹಲವಾರು ಚುನಾವಣಾ ಸುಧಾರಣೆಗಳನ್ನು (ಉದಾ: ಚುನಾವಣೆಗಳ ವೆಚ್ಚ ಕಡಿಮೆ ಮಾಡಲು ಕ್ರಮ) ಎಂದಿನಿಂದಲೂ ಪ್ರತಿಪಾದಿಸುತ್ತಿರುವೆ ಮತ್ತು (ಆ) ಗಾಂಧೀಜಿ ಬೋಧಿಸಿದ ಗ್ರಾಮ ಸ್ವರಾಜ್ಯ ಅಥವಾ ಇದು ತೀರಾ ಆದರ್ಶಮಯ ಎನಿಸಿದರೆ (ವಾಸ್ತವವಾಗಿ ಹಾಗೇನಿಲ್ಲ) ಜರ್ಮನಿಯಲ್ಲಿರುವ "ಯಾದಿ ವ್ಯವಸ್ಥೆ"* ಹಾಗೂ ಈಗ ನಮ್ಮಲ್ಲಿರುವ ಬಹುಮತಾಧಿಕಾರ ವ್ಯವಸ್ಥೆಯ ಸಮನ್ವಯದಿಂದ ಉಂಟಾಗುವ ಇನ್ನೂ ಉತ್ತಮ ತೆರನ ಪ್ರಜಾಸತ್ತೆಯನ್ನು ನಾನು ಪ್ರತಿಪಾದಿಸಿರುವೆ.

ನನ್ನ ಬಂಧನಕ್ಕೆ ಕೆಲವೇ ತಿಂಗಳಿಗೆ ಮುಂಚೆ 'ಪ್ರಜಾಪ್ರಭುತ್ವಕ್ಕಾಗಿ ಪ್ರಜಾವರ್ಗ'ದ ಅಧ್ಯಕ್ಷನಾಗಿ ನಾನು ನೇಮಿಸಿದ ಸಮಿತಿಯೊಂದು ರಾಜಕೀಯ ಪಕ್ಷಗಳು (ಆಳುವ ಕಾಂಗ್ರೆಸ್ ಈ ಬಗ್ಗೆ ಸಹಕರಿಸಲಿಲ್ಲ) ರಾಜಕೀಯ ವಿಜ್ಞಾನಿಗಳು ಹಾಗೂ ಯಾವ ಪಕ್ಷಕ್ಕೂ ಸೇರದ ಸಾರ್ವಜನಿಕ ಕ್ಷೇತ್ರದ ಮಹನೀಯರನ್ನು ಕಂಡು ಅವರೊಂದಿಗೆ ಸಮಾಲೋಚಿಸಿ, ಕ್ಷೇತ್ರ ವರದಿಯೊಂದನ್ನು ಸಲ್ಲಿಸಿತು. ವಿರೋಧ ಪಕ್ಷಗಳು ಈ ವರದಿಯನ್ನು ಪರಿಶೀಲಿಸಿ, ಸರ್ವಸಮ್ಮತವಾದ ಕೆಲವು ಶಿಫಾರಸುಗಳನ್ನು ಮಂಡಿಸಿದವು. ಆದರೆ ಶ್ರೀಮತಿ ಗಾಂಧಿಯಾಗಲೀ ಅಥವಾ ಆಕೆಯ ಪಕ್ಷವಾಗಲೀ ಇದಕ್ಕೆ ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲಿಲ್ಲ. ಇದೆಲ್ಲಾ ಜನತೆಗೂ ಗೊತ್ತು ಮತ್ತು ಶ್ರೀಮತಿ ಗಾಂಧಿ ಹಲವಾರು ಸಂದರ್ಶನಗಳನ್ನು ನೀಡುತ್ತಿರುವ ವಿದೇಶೀ ಪತ್ರಿಕೆಗಳಿಗೂ ಗೊತ್ತು. ಆದರೆ ತುರ್ತುಪರಿಸ್ಥಿತಿಯ ಈ ಸಮಯದಲ್ಲಿ ಆಕೆಯ ಸುಳ್ಳುಗಳಿಗೆ ಉತ್ತರ ಕೊಡಲು ಯಾರಾದರೂ ಬಯಸಿದರೂ ಕೂಡಾ, ಅದನ್ನು ಪ್ರಕಟಿಸಲು ಯಾವ ಪತ್ರಿಕೆಯೂ ಧೈರ್ಯಮಾಡಲಾರದು.

ಕೇವಲ ಎರಡು ಮೂರು ದಿನಗಳ ಹಿಂದೆ ವಿದೇಶಿ(ಜರ್ಮನ್ ಇರಬಹುದು) ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲೋ ಅಥವಾ ಹೇಳಿಕೆಯೊಂದರಲ್ಲೋ ಶ್ರೀಮತಿ ಗಾಂಧಿ, ಚೀನಾ ಮುಂತಾದವುಗಳ ಬಗ್ಗೆ ಏನೂ ಹೇಳದೆ, ತನ್ನ ಸರ್ವಾಧಿಕಾರೀ ಕ್ರಮಗಳನ್ನು ಮಾತ್ರ ಟೀಕಿಸುತ್ತಿವೆ ಎಂದು ವಿದೇಶೀ ಪತ್ರಿಕೆಗಳನ್ನು ದೂಷಿಸಿದ್ದಳು. ಇದಕ್ಕಿಂತ ಅಪ್ರಬುದ್ಧವಾದದ್ದೇನಾದರೂ ಇದೆಯೇ? ಉತ್ತರ ಎಲ್ಲರಿಗೂ ಗೊತ್ತಿದ್ದೇ ಆಗಿದೆ.

ಶ್ರೀಮತಿ ಗಾಂಧಿ ಹೆಚ್ಚು ಕಡಿಮೆ ಪ್ರತಿದಿನವೂ ಹೇಳುವ ವಿಷಯಗಳ ಬಗ್ಗೆ

---

* 'List System'

ನನಗನ್ನಿಸಿದ್ದನ್ನು ಹೇಳುವ ಮನಸ್ಸಿತ್ತು. ಆದರೆ ಈ ಬಗ್ಗೆ ಗಂಭೀರವಾಗಿ ಯೋಚಿಸಿದ ನಂತರ, ಅದು ಕೇವಲ ವೃಥಾ ಕಾಲಕ್ಷೇಪ ಎಂಬ ತೀರ್ಮಾನಕ್ಕೆ ಬಂದಿರುವೆ. ನನ್ನ ಮನ ಮಿಡಿದಾಗ ನನ್ನ ಆಲೋಚನೆಗಳನ್ನು ಇಲ್ಲಿ ಬರೆಯುವುದಷ್ಟೇ ಲೇಸು. ತನ್ನ ಕಪಟ ನಾಟಕಗಳನ್ನು ಭಾರತದ ಜನತೆಯಾಗಲೀ ಅಥವಾ ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳಾಗಲೀ ನಂಬುವಂತೆ ಮಾಡುವ ಆಕೆಯ ಯಾವ ಪ್ರಯತ್ನಗಳೂ ಸಫಲವಾಗಲಾರವೆಂಬ ವಿಶ್ವಾಸ ನನಗಿದೆ. ಇದು ಹಿಂದೆಯೇ ಆಕೆಗೆ ಅನುಭವವಾಗಿದೆ ಮತ್ತು ಈ ಬಗ್ಗೆ ತನ್ನ ಅಸಹಾಯಕ ರೋಷವನ್ನು ತೋಡಿಕೊಂಡಿದ್ದಾಳಷ್ಟೆ. ಇತ್ತೀಚಿನ ಒಂದು ದೃಷ್ಟಾಂತವೆಂದರೆ, ಆಕೆ ವಿಠಲಭಾಯಿ ಪಟೇಲ್ ಭವನದಲ್ಲಿ ನಡೆದ ಎಲ್.ಎನ್. ಮಿಶ್ರ ನಿಧನದ ಸಂತಾಪ ಸೂಚಕ ಸಭೆಯಲ್ಲಿ, 'ನನ್ನ ಕೊಲೆಯಾದರೂ ಅದನ್ನು ನಾನೇ ಮಾಡಿಸಿದೆ ಎಂದು ಅವರು ಹೇಳುತ್ತಾರೆ' ಎಂದು ಕಿರುಚಾಡಿದ್ದು.

ಆಗಸ್ಟ್ 13

ಶ್ರೀಮತಿ ಗಾಂಧಿಯ ಮನವಿ ಹಾಗೂ ರಾಜನಾರಾಯಣರ ಪ್ರತಿ ಮನವಿಯನ್ನು 11ರಂದು ಸ್ವೀಕರಿಸಲಾಗಿತ್ತು. ಅದನ್ನು ವಿಚಾರಣೆಗಾಗಿ 25ಕ್ಕೆ ಮುಂದೂಡಲಾಯಿತು. ಕಾನೂನು ಹಾಗೂ ಸಂವಿಧಾನಕ್ಕೆ ಇತ್ತೀಚೆಗೆ ಮಾಡಲಾದ ತಿದ್ದುಪಡಿಗಳು ಸಂವಿಧಾನದ 'ಮೂಲ ಸ್ವರೂಪ'ಕ್ಕೆ ಧಕ್ಕೆಯುಂಟುಮಾಡಿದೆ; ಹೀಗೆ ಮಾಡುವ ಅಧಿಕಾರ ಸಂಸತ್ತಿಗಿಲ್ಲ ಎಂದು ನ್ಯಾಯಾಲಯ ಈ ಮುನ್ನ ಅಭಿಪ್ರಾಯಪಟ್ಟಿದೆ ಎಂಬುದಾಗಿ ಶಾಂತಿಭೂಷಣ್ ವಾದ ಮಾಡಿದ್ದಾರೆ. ಶ್ರೀ ಶಾಂತಿಭೂಷಣ್ ನಿಸ್ಸಂದೇಹವಾಗಿ ಒಬ್ಬ ಅಪೂರ್ವ ನ್ಯಾಯವಾದಿ. ಶ್ರೀ ನಿರೇನ್ ಡೇ[14] ತಮ್ಮ ಪ್ರತಿವಾದದಲ್ಲಿ, ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆಯಾಗಿದೆ ಎಂಬುದನ್ನು ತೋರಿಸಿಕೊಟ್ಟಲ್ಲಿ ಆ ಬಗ್ಗೆ ವಿಚಾರಣೆ ನಡೆಯಬಹುದು ಎಂದು ಒಪ್ಪಿಕೊಳ್ಳುವ ಸ್ಥಿತಿ ತಲುಪಿದ್ದಾರೆ. ಇದೊಂದು ಗಮನಾರ್ಹ ಬೆಳವಣಿಗೆ. ಈಗಲೂ ಭವಿಷ್ಯ ಆಶಾದಾಯಕವಾಗಿದ್ದಂತೆ ತೋರುತ್ತದೆ. ನಮ್ಮ ಪ್ರಜಾಸತ್ತೆಯಲ್ಲಿ ಇನ್ನೂ ಒಂದಿಷ್ಟು ಚೈತನ್ಯ ಉಳಿದಿದೆ. 'ಮೂಲಸ್ವರೂಪ' ಎಂದರೇನು ಎಂದು ತಿಳಿಸಲು ಡೇ ನ್ಯಾಯಾಲಯವನ್ನು ಕೇಳಿದ್ದಾರೆ. ಒಳ್ಳೆಯದು. ಇತ್ತೀಚಿನ ತಿದ್ದುಪಡಿಗಳು, ತುರ್ತುಪರಿಸ್ಥಿತಿ ಘೋಷಣೆ ಮುಂತಾದವು ಸಂವಿಧಾನದ ಮೂಲಸ್ವರೂಪಕ್ಕೆ ಧಕ್ಕೆ ಉಂಟು ಮಾಡಿರುವುದು ಮಾತ್ರವಲ್ಲದೆ ಅದನ್ನು ನಾಶಪಡಿಸಿವೆ ಎಂಬುದರಲ್ಲಿ ಸಾಮಾನ್ಯ ಪರಿಜ್ಞಾನ ಇರುವ ಮತ್ತು ನಮ್ಮ ರಾಜ್ಯಾಂಗ ಹಾಗೂ ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಸ್ವಲ್ಪ ತಿಳುವಳಿಕೆ ಇರುವ ಯಾರಿಗೇ ಆಗಲಿ ಕಿಂಚಿತ್ತೂ ಸಂದೇಹವಿಲ್ಲ.

ಈ ಮುನ್ನ ನಾನು ತಿದ್ದುಪಡಿಗಳ ಬಗ್ಗೆ ಬರೆದಾಗ ಒಂದು ಪ್ರಮುಖ ಅಂಶ

---

14. ಇಂದಿರಾ ಸರ್ಕಾರದ ಅಡ್ವೋಕೇಟ್ ಜನರಲ್

ಕೈಬಿಟ್ಟು ಹೋಗಿತ್ತು. ಅದು ಇಂದು ನನ್ನ ಗಮನಕ್ಕೆ ಬಂತು. ನಮ್ಮ ಸಂವಿಧಾನದ ಪ್ರಕಾರ, ಪ್ರಧಾನಮಂತ್ರಿ ಹುದ್ದೆಗೆ ನೇರ ಚುನಾವಣೆ ಇಲ್ಲ. ಆಯ್ಕೆ ಮಾಡುವುದು ಲೋಕಸಭಾ ಸದಸ್ಯರನ್ನು ಮಾತ್ರ. ಯಾವ ಪಕ್ಷ ಅಥವಾ ಪಕ್ಷಗಳು ಗೆಲ್ಲುತ್ತವೆ, ಅನಂತರ ಗೆಲ್ಲುವ ಪಕ್ಷ ಅಥವಾ ಪಕ್ಷಗಳು ಯಾರನ್ನು ತನ್ನ ನಾಯಕನನ್ನಾಗಿ ಅಥವಾ ನಾಯಕಿಯನನ್ನಾಗಿ ಆಯ್ಕೆ ಮಾಡುತ್ತವೆ ಎಂಬುದು ಯಾರಿಗೇ ಆಗಲಿ ಚುನಾವಣೆಗೆ ಮುನ್ನ ಗೊತ್ತಿರುವುದಿಲ್ಲ. ಅಂದರೆ ಎಲ್ಲ ಸಂಸತ್ ಸದಸ್ಯರೂ ಆಯ್ಕೆಯಾಗುವುದೂ ಒಂದೇ ರೀತಿಯಲ್ಲಿ; ಮತ್ತು ಕಾನೂನು ಎಲ್ಲರಿಗೂ ಸಮಾನವಾಗಿ ಅನ್ವಯಿಸುತ್ತದೆ. ಈಗ ಅವರಲ್ಲೊಬ್ಬರು ಪ್ರಧಾನಮಂತ್ರಿಯಾದಲ್ಲಿ ಆತನ ಅಥವಾ ಆಕೆಯ ಚುನಾವಣೆಯನ್ನು, ಇತರ ಸಂಸತ್ ಸದಸ್ಯರ ಚುನಾವಣೆಯನ್ನು ಪ್ರಶ್ನಿಸಿದಂತೆಯೇ ಏಕೆ ಪ್ರಶ್ನಿಸಬಾರದು? ಆತ ಅಥವಾ ಆಕೆಯನ್ನು ಪ್ರಧಾನಮಂತ್ರಿಯಾಗಿ ನೇರವಾಗಿಯೇನೂ ಚುನಾಯಿಸಿಲ್ಲ. - ಸಂವಿಧಾನದಲ್ಲೂ ಅದಕ್ಕೆ ಅವಕಾಶವಿಲ್ಲ. ಆದುದರಿಂದ ಈ ತಿದ್ದುಪಡಿ ಮೂರ್ಖತನದಿಂದ ಕೂಡಿದ್ದು, ಹೆಬ್ಬಾವನ್ನು ಕಂಡ ಮೊಲಗಳಂತೆ, ಗೋಖಲೆ[15] ಹಾಗೂ ಸಚಿವ ಸಂಪುಟದ ಇತರ ಸದಸ್ಯರು ಪ್ರಧಾನಮಂತ್ರಿಯಿಂದ ಭಯಭ್ರಾಂತರಾಗಿದ್ದಾರೆಂದು ತೋರುತ್ತದೆ. ಇದು ಮೂರ್ಖತನದಿಂದ ಕೂಡಿದ್ದು ಮಾತ್ರವಲ್ಲದೆ - ಇದೇನೂ ಕಾನೂನಿನ ಪ್ರಕಾರ ಕಾನೂನು ಬಾಹಿರವಲ್ಲ - ಸಾರ್ವತ್ರಿಕ ಚುನಾವಣೆಗಳ ನಂತರ ನಡೆಯುವ ಪ್ರಧಾನಮಂತ್ರಿಯ ಆಯ್ಕೆಯನ್ನು ಚುನಾವಣಾ ಕಾನೂನಿನ ವ್ಯಾಪ್ತಿಯಿಂದ ದೂರವಿಡುವುದು, ಏಕರೀತಿಯಲ್ಲಿ ಚುನಾಯಿತರಾದ ಸಂಸತ್ ಸದಸ್ಯರ ನಡುವೆ ಅಸಮಾನತೆಯನ್ನು ಕೂಡಾ ಕಲ್ಪಿಸುತ್ತದೆ. ಇದು ತೀವ್ರ ರೀತಿಯ ಕಾನೂನು ವಿರೋಧಿ ಕೃತ್ಯವಲ್ಲದೆ, ಅಸಮರ್ಥನೀಯವೂ ಆಗಿದೆ. ಪ್ರಧಾನಮಂತ್ರಿಯ ಚುನಾವಣೆ ಎಂಬಂತಹುದೇನೂ ನಡೆಯುವುದಿಲ್ಲ; ನಡೆಯುವುದು ಸಂಸತ್ ಸದಸ್ಯರ ಚುನಾವಣೆ - ಅವರಲ್ಲೊಬ್ಬ ಪ್ರಧಾನಮಂತ್ರಿಯಾಗುತ್ತಾರಷ್ಟೆ. ಆದುದರಿಂದ ಓರ್ವ ನಿರ್ದಿಷ್ಟ ಸಂಸತ್ ಸದಸ್ಯರ - ಆತ ಅಥವಾ ಆಕೆ ಮುಂದೆ ಪ್ರಧಾನಮಂತ್ರಿಯಾಗುವರು - ಚುನಾವಣೆಯನ್ನು ಚುನಾವಣಾ ಕಾನೂನು ಹಾಗೂ ನ್ಯಾಯಾಲಯಗಳ ವ್ಯಾಪ್ತಿಯಿಂದ ಹೊರಗಿಡುವುದೆಂದರೆ ಸಂಸತ್ ಸದಸ್ಯರ ನಡುವೆ ಪರಸ್ಪರ ಬೇಧಭಾವ ಎಣಿಸಿದಂತಾಗುತ್ತದೆ.

ಆಗಸ್ಟ್ 14

ಪ್ರೊ. ಈಶ್ವರೀಪ್ರಸಾದ್ ಅವರು ತಮ್ಮ 'ಮುಸ್ಲಿಂ ಆಳ್ವಿಕೆಯ ಚರಿತ್ರೆ' ಎಂಬ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ: ರೋಗಿಯ ಅರ್ಧದಷ್ಟು ಸಂಕಷ್ಟವನ್ನು ಕಡಿಮೆ

15. ಎಚ್.ಆರ್. ಗೋಖಲೆ, ಇಂದಿರಾ ಸರ್ಕಾರದ ಕಾನೂನು ಮಂತ್ರಿ.

ಮಾಡುವ ವಾತ್ಸಲ್ಯಪೂರಿತ ಉಪಚಾರ ಹಾಗೂ ಆತ್ಮೀಯ ಗಮನ ಇಲ್ಲದೆಯೇ ಚಕ್ರವರ್ತಿ, ನೆಂಟರಿಷ್ಟರಿಂದ ಸುತ್ತುವರಿದಿದ್ದರೂ ಒಂಟಿತನ ಮತ್ತು ಮನಸ್ಸಿನ ಕಹಿಯನ್ನು ಅನುಭವಿಸಿದ; ಉನ್ನತ ಪದವಿಗೆ ಏರುವ ಸಾಹಸ ಮಾಡಿದ್ದಕ್ಕೆ ಸೂಕ್ತ ಶಿಕ್ಷೆ ಅನುಭವಿಸಲೇಬೇಕು (ಪುಟ. 653) *(ಕಂಬಾಕಶ್, ಔರಂಗಜೇಬ್‌ನ ಪ್ರೀತಿಯ ಪುತ್ರ)*

ದೆಹಲಿಯ ಉಚ್ಚ ನ್ಯಾಯಾಲಯ ನನ್ನ ಅರ್ಜಿಯನ್ನು ನಾನು ಶಂಕಿಸಿದ ಕಾರಣಗಳ ಆಧಾರದ ಮೇಲೇ ತಳ್ಳಿಹಾಕಿದೆ. ಜ್ಞಾನಿಗಳಾದ ನ್ಯಾಯಾಧೀಶರ ಬಗ್ಗೆ ನನ್ನದೇನೂ ದೂರಿಲ್ಲ, ಬಹುಶಃ ಇವರಾರೂ ಸೆರೆಮನೆಯಲ್ಲಿ ಅಥವಾ ಸ್ಥಾನಬದ್ಧತೆಯಲ್ಲಿ ಎಂದೂ ಇದ್ದಿರಲಾರರು, ಕೆಲವು ಜನ ಆಸ್ಪತ್ರೆಗಳಲ್ಲಿದ್ದಿದ್ದರೂ ಇರಬಹುದು. ಸಾಮಾನ್ಯವಾಗಿ ಯಾರಾದರೂ ಆಸ್ಪತ್ರೆಯಲ್ಲಿದ್ದರೆ, ವೈದ್ಯರು ಹಾಗೂ ದಾದಿಯರನ್ನು ಬಿಟ್ಟು ಆತನ ಪಕ್ಕದಲ್ಲಿ ಹತ್ತಿರ ಸಂಬಂಧಿಯೋ ಸ್ನೇಹಿತನೋ ಇರುತ್ತಾರೆ. ಈ ಸೌಭಾಗ್ಯವೊಂದಿದ್ದರೆ ಚಿಕಿತ್ಸೆಯು ಅರ್ಧದಷ್ಟು ಮುಗಿದಂತೆ. ಇಲ್ಲಿ, ಭಾರತದ ಅತ್ಯುತ್ತಮ ಆಸ್ಪತ್ರೆಗಳಲ್ಲೊಂದಾದ ಇದರಲ್ಲಿ, ಸಾಮಾನ್ಯವಾಗಿ ಉದಾರವಾಗಿರುವ ವೈದ್ಯರು ಹಾಗೂ ದಾದಿಯರು ಚಿಕಿತ್ಸೆ ಅಗತ್ಯವೆನಿಸಿದಾಗ ಬಂದು ಹೋಗುತ್ತಾರೆ. ಮುಕ್ತ ವಾತಾವರಣ ಇದ್ದಲ್ಲಿ ವೈದ್ಯರು, ದಾದಿಯರು ಕೂಡಾ ಸ್ನೇಹಿತರಾಗಬಹುದು. ಆದರೆ ಇಲ್ಲಿ ಅವರು ಅಗತ್ಯಕ್ಕಿಂತ ಒಂದು ನಿಮಿಷ ಕೂಡಾ ಹೆಚ್ಚು ನಿಲ್ಲುವ ಧೈರ್ಯಮಾಡುವುದಿಲ್ಲ. ನನ್ನ ಆರೋಗ್ಯಸ್ಥಿತಿಯನ್ನು ಬಿಟ್ಟು ಮತ್ತೇನನ್ನೂ ಮಾತನಾಡುವುದಿಲ್ಲ. ಆಸ್ಪತ್ರೆಯ ನಿರ್ದೇಶಕರೊಬ್ಬರನ್ನುಳಿದು, ಇನ್ನಾರೇ ವೈದ್ಯರು ಅಥವಾ ದಾದಿಯರು ನನ್ನ ಕೊಠಡಿಗೆ ಪ್ರವೇಶಿಸಿದಲ್ಲಿ ಹಿಂದೆಯೇ ಬರುತ್ತಾನೆ, ಸೆರೆಮನೆಯ ಪಹರೆ ಅಥವಾ ಪೋಲೀಸು ದಳದ (ಐಬಿ[16] ಅಥವಾ ಸಿಬಿಐ[17]ನವರೂ ಇರಬಹುದು) -ಇವರೆಲ್ಲಾ ಈ ಮಹಡಿಯ ಹಲವಾರು ಕೊಠಡಿಗಳಲ್ಲಿ ಬಿಡಾರ ಹೂಡಿದ್ದಾರೆ - 24 ತಾಸುಗಳೂ (ಇವರು ಪಾಳಿಯ ಮೇಲೆ ಕೆಲಸ ಮಾಡುತ್ತಾರೆ.) ನನ್ನ ಕೊಠಡಿಯ ಬಾಗಿಲ ಬಳಿ ಪಹರೆ ಕಾಯುವ ಪ್ರತಿನಿಧಿ (ಬಹುಶಃ ದಫೇದಾರ). ಆಗಾಗ್ಗೆ ನನ್ನನ್ನು ನೋಡಲು ಬರುವ ಆಸ್ಪತ್ರೆಯ ಆಡಳಿತಾಧಿಕಾರಿಗಳೂ ಕೂಡಾ ಹೀಗೆಯೇ. ಅವರು ಯಾವಾಗಲೂ ತುಟಿ ಬಿಗಿದಿರುತ್ತಾರೆ - ತಮಗೆ ಸೂಚಿಸಿದ ಕರ್ತವ್ಯಕ್ಕೆ ಸಂಬಂಧಿಸಿದ್ದನ್ನು ಮಾತ್ರ ಅವರು ಮಾತನಾಡುತ್ತಾರೆ. ಹೀಗಾಗಿ ನಾನು ಆಸ್ಪತ್ರೆಯಲ್ಲಿರುವಾಗ, ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿರುವಾಗಲೂ, ಹಲವಾರು ಜನ ಬಂದು ಹೋಗುತ್ತಿರುವಾಗಲೂ ನಾನು ನಿಜವಾಗಿಯೂ ಒಂಟಿಯಾಗಿದ್ದೇನೆ. ನನಗೀಗ ಅತ್ಯಗತ್ಯವಾಗಿ ಬೇಕಾಗಿರುವುದು ಒಡನಾಟ. ಪ್ರತಿದಿನ ಪತ್ರಿಕೆಗಳಲ್ಲಿ

16. **ಭಾರತ ಸರ್ಕಾರದ ಗುಪ್ತಚರ ಇಲಾಖೆ.**
17. **ಕೇಂದ್ರೀಯ ತನಿಖಾ ಮಂಡಳಿ.**

ನನ್ನನ್ನು ಸಂಪೂರ್ಣವಾಗಿ ಸಿಟ್ಟಿಗೆಬ್ಬಿಸುವ ಏನಾದರೊಂದು ಸುದ್ದಿ ಇದ್ದೇ ಇರುತ್ತದೆ - ಸಾಮಾನ್ಯವಾಗಿ ಇದು ಶ್ರೀಮತಿ ಗಾಂಧಿಯ ಅರೆನಿಜಗಳು ಮತ್ತು ಸುಳ್ಳುಗಳು. ನನ್ನೊಂದಿಗೆ ಒಬ್ಬೇ ಒಬ್ಬ ರಾಜಕೀಯ ಬಂಧಿತನಾದರೂ ಇದ್ದಲ್ಲಿ - ಆತನನ್ನು ಇದೇ ಮಹಡಿಯ ಯಾವುದಾದರೊಂದು ಕೊಠಡಿಯಲ್ಲಿಡಬಹುದು - ನಾವು ಒಟ್ಟಿಗೆ ಮಾತಾಡಬಹುದಿತ್ತು, ನಮ್ಮ ಭಾವನೆಗಳನ್ನು ಹಂಚಿಕೊಂಡು ಹೃದಯವನ್ನು ಹಗುರ ಮಾಡಿಕೊಳ್ಳಬಹುದಿತ್ತು. ಇದು ಎಷ್ಟೋ ಮಾತ್ರೆಗಳು, ನೋವು ಶಮನಕಾರಿಗಳು ಮತ್ತು ನಿದ್ರೆ ಗುಳಿಗೆಗಳಿಗಿಂತ ಅಮೂಲ್ಯವಾಗಿರುತ್ತಿತ್ತು. ಕೆಲವೇ ದಿನಗಳ ಹಿಂದೆ, ನಿಖರವಾಗಿ ಹೇಳುವುದಾದರೆ, ಶ್ರೀಮತಿ ಗಾಂಧಿ ಬಾಯಿಗೆ ಬಂದಂತೆ ಹೇಳುವ ಎಲ್ಲದರ ಬಗ್ಗೆ ನಿರ್ಲಕ್ಷ ತೋರಲು ನಿರ್ಧರಿಸಿರುವುದಾಗಿ ಈ ಪುಟಗಳಲ್ಲಿ ಬರೆದ ದಿನದವರೆಗೆ ನಾನು ಎಷ್ಟು ಉದ್ರಿಕ್ತಗೊಳ್ಳುತ್ತಿದ್ದೆನೆಂದರೆ, ಕೆಲವೇಳೆ ನಾನು ನಿದ್ರಾಗುಳಿಗೆಗಳಿಗಾಗಿ ಆಸ್ಪತ್ರೆಯ ಸಿಬ್ಬಂದಿಗೆ ಫೋನ್ ಮಾಡಬೇಕಾಗುತ್ತಿತ್ತು. ಆದರೆ ನಾನೀಗ ಆ ಹಂತವನ್ನು ದಾಟಿದ್ದೇನೆ, ಆದರೂ, ನಾನು ಮುಕ್ತಮನಸ್ಸಿನಿಂದ ಮಾತನಾಡಬಹುದಾದ ಜೊತೆಗಾರನೊಬ್ಬನ ಅಗತ್ಯ ನಿಜವಾಗಿಯೂ ಮಹತ್ವದ್ದೆನಿಸಿದೆ. ನನ್ನ ಆತ್ಮೀಯರೊಬ್ಬರು ನನ್ನೊಂದಿಗೆ ವಾಸಿಸುವ ಹಾಗಿಲ್ಲ, ಆದುದರಿಂದ ಇದು ನಿಜವಾದ ಅರ್ಥದಲ್ಲಿ ಒಂಟಿ ಸೆರೆವಾಸ. ಹಗಲೂ ರಾತ್ರಿ - ಈ ಮಹಡಿಯಲ್ಲಿನ, ಎಲ್ಲ ಕಡೆಯಿಂದಲೂ ಮುಚ್ಚಲ್ಪಟ್ಟ ಹಾಗೂ ಇಕ್ಕಟ್ಟಾಗಿರುವ ಅಂಗಣದಲ್ಲಿ ಸ್ವಲ್ಪ ಕಾಲ ಓಡಾಡಲು ಹೊರಕ್ಕೆ ಕರೆದುಕೊಂಡು ಹೋಗುವುದನ್ನು ಬಿಟ್ಟು - ನಾನು ಈ ಕೊಠಡಿಯೊಳಗೇ ಉಳಿಯಬೇಕಾಗಿದೆ.

ಬ್ರಿಟಿಷರ ಕಾಲದಲ್ಲಿ ನಾನು ಸೆರೆಮನೆಗಳಲ್ಲಿ ವರ್ಷಗಟ್ಟಲೆ ಕಳೆದಿದ್ದೇನೆ. ಯಾರಿಗೇ ಆಗಲಿ ಒಂಟಿ ಸೆರೆವಾಸದ ಶಿಕ್ಷೆ ವಿಧಿಸಿದ ಹೊರತು, ಆತ ಸೆರೆ - ಕೊಠಡಿಗಳಿಗೆ ಬೀಗ ಹಾಕುವ ಹೊತ್ತಿನವರೆಗೂ, ಇಡೀ ದಿನ ಸ್ವತಂತ್ರವಾಗಿ ತನ್ನ ಅಂಗಳದಲ್ಲಿ ಸಹ ಸೆರೆಯಾಳುಗಳೊಂದಿಗೆ, ಸೆರೆಮನೆಯ ನಿಯಮಗಳ ಪ್ರಕಾರವೇ, ಇಷ್ಟಬಂದಂತೆ ಚರ್ಚಿಸಬಹುದಿತ್ತು, ಆಟವಾಡಬಹುದಿತ್ತು, ಒಟ್ಟಿಗೆ ಓದಬಹುದಿತ್ತು, ಏನಾದರೂ ಮಾಡಬಹುದಿತ್ತು. ಯಾರಿಗಾದರೂ ಕಾಯಿಲೆಯಾಗಿ, ಆತನನ್ನು ಸೆರೆಮನೆಯ ಆಸ್ಪತ್ರೆಗೆ ಕಳಿಸಿದಾಗಲೂ ಕೂಡಾ, ಅಲ್ಲಿ ಇತರ ಸೆರೆಮನೆಗಳಲ್ಲಿನ ಗೆಳೆಯರಿರುತ್ತಿದ್ದರು - ನಿಜವಾಗಿಯೂ ಅದೊಂದು ಅದ್ಭುತ ಕಾಲ. ಲಾಹೋರ್ ಕೋಟೆಯಲ್ಲಿ ಮಾತ್ರ ನನ್ನನ್ನು ಕೆಲವು ತಿಂಗಳುಗಳ ಕಾಲ ಒಂಟಿಯಾಗಿ ಸೆರೆಯಲ್ಲಿಡಲಾಗಿತ್ತು. ಈ ಮಧ್ಯೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಲಾಗಿತ್ತು. ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸಲಾಗಿತ್ತು, ಹೀಗೇ ಇನ್ನೂ ಏನೇನೋ. ಅಂತೂ ಕೊನೆಗೆ, ಒಂದು ದಿನ ಇಬ್ಬರಿಗೂ ಆನಂದ, ಆಶ್ಚರ್ಯ ಉಂಟುಮಾಡುವಂತೆ, ಸೆರೆಮನೆಯವರು ರಾಮಮನೋಹರನನ್ನು[18] - ಆತನನ್ನು, ನನ್ನನ್ನು ತಂದ ಕೆಲವು ತಿಂಗಳುಗಳ ನಂತರ ಕೋಟೆಗೆ ತರಲಾಗಿತ್ತು - ನನ್ನಲ್ಲಿಗೇ ತಂದರು.

---

18. ದಿವಂಗತ ಡಾ. ರಾಮಮನೋಹರ ಲೋಹಿಯಾ.

ಅನಂತರ ನಾವು ಪ್ರತಿ ದಿನ ಒಂದು ತಾಸು ಪರಸ್ಪರ ಭೇಟಿ ಮಾಡುತ್ತಿದ್ದೆವು. ಸ್ವಲ್ಪ ಕಾಲದ ನಂತರ ನಮ್ಮಿಬ್ಬರನ್ನೂ ಒಟ್ಟಿಗೆ ಆಗ್ರಾದ ಸೆರೆಮನೆಗೆ ವರ್ಗಾಯಿಸಲಾಯಿತು. ಅಲ್ಲಿ ನಮ್ಮನ್ನು ದೊಡ್ಡ ಆವರಣವೊಂದರಲ್ಲಿ ಇಡಲಾಗಿತ್ತು.

ಆದುದರಿಂದ, ಆಸ್ಪತ್ರೆಯಲ್ಲಿರುವಾಗ ನಾನು ಒಂಟಿಸೆರೆವಾಸದ ಶಿಕ್ಷೆಗೆ ಒಳಗಾಗಿದ್ದೇನೆ ಎಂದು ತಿಳಿಯುವುದು ಸರಿಯಲ್ಲ ಎಂಬ ಜ್ಞಾನಿಗಳಾದ ನ್ಯಾಯಾಧೀಶರ ಭಾವನೆ ತಪ್ಪು. ಆದರೆ ಇದನ್ನೆಲ್ಲಾ ಅರ್ಥಮಾಡಿಕೊಳ್ಳಲು ಬಹಳಷ್ಟು ಮಾನವೀಯ ಸಹಾನುಭೂತಿ ಹಾಗೂ ಅಂತಃಕರಣ ಬೇಕು. ಅಂದಮಾತ್ರಕ್ಕೆ ಜ್ಞಾನಿಗಳಾದ ನ್ಯಾಯಾಧೀಶರು ಈ ಎರಡು ಗುಣಗಳನ್ನೂ ಹೊಂದಿಲ್ಲ ಎಂದು ನಾನು ಹೇಳುತ್ತಿಲ್ಲ. ನನ್ನ ಅರ್ಜಿಯನ್ನು ತಳ್ಳಿಹಾಕಲು ಅವರು ಕಂಡ ಕಾರಣಗಳು ತಪ್ಪು ಎಂದಷ್ಟೇ ನಾನು ಹೇಳುತ್ತಿರುವುದು.

ಈ ಬರಹದ ಮೊದಲಲ್ಲಿ ಈಶ್ವರೀಪ್ರಸಾದರ "ಮುಸ್ಲಿಂ ಆಳ್ವಿಕೆಯ ಚರಿತ್ರೆ" ಪುಸ್ತಕದಿಂದ ಒಂದು ಉಲ್ಲೇಖವಿದೆ. ಹೌದು, ಚಕ್ರವರ್ತಿಯಂತಹವನೇ ಅನುಭವಿಸಿದ್ದನ್ನು ನನ್ನಂತಹ ದೀನ ಅನುಭವಿಸಲು (ನ್ಯಾಯಾಲಯ) ಅವಕಾಶ ಕೊಡಬಹುದು. ಅಂದಹಾಗೆ, ಔರಂಗಜೇಬ್ ಆ ಸ್ಥಿತಿಗೆ ಒಳಗಾಗದದ್ದು ತನ್ನ ಉನ್ನತಸ್ಥಾನದ ಕಾರಣದಿಂದಲ್ಲ. ಆತ ಆ ಮುನ್ನ ತನ್ನ ತಂದೆಯನ್ನು ಬಂಧಿಸಿ, ತನ್ನ ಸೋದರರು ಹಾಗೂ ಅವರ ಮಕ್ಕಳನ್ನು ಕೊಲ್ಲಿಸಿದಂತಹ ದುಷ್ಕೃತ್ಯಗಳನ್ನು ಎಸಗಿದ್ದ. ಸ್ವತಃ ಪ್ರೊ. ಈಶ್ವರೀಪ್ರಸಾದರೇ ಹೇಳಿದ ಹಾಗೆ, ಔರಂಗಜೇಬ್‌ಗೆ ತನ್ನ ಮಕ್ಕಳು ತನ್ನ ಹಾಸಿಗೆಯ ಬಳಿಗೆ ಜೀವಂತವಾಗಿ ಬರುವರೆಂಬ ನಂಬಿಕೆಯೇ ಇರಲಿಲ್ಲ. ಆದ್ದರಿಂದಲೇ ಆತ ತನ್ನ ಪ್ರೀತಿಪಾತ್ರನಾದ ಮಗ ಕಂಭಕಶ್‌ನನ್ನು ಅವರ ಸುರಕ್ಷತೆಗಾಗಿ ಕಣ್ಣೀರಿಟ್ಟು ಕಳಸಿದ. ಆದರೆ ಔರಂಗಜೇಬನ ಒಂಟಿತನ ತಾನೇ ಮಾಡಿಕೊಂಡಿದ್ದು. ಆದರೆ ನನ್ನದು ನನ್ನ ಮೇಲೆ ಹೇರಲಾಗಿರುವುದು. ನಾನು ಸಾಯುತ್ತಿಲ್ಲ, ನಿಜ - ಹೃದಯರೋಗಿಯ ಬಗ್ಗೆ ಏನನ್ನೂ ಹೇಳಲಾಗದಾದರೂ. ಆದರೆ ದೇಶವನ್ನೇ ವೈಯಕ್ತಿಕ ಸರ್ವಾಧಿಕಾರದ ನರಕಕ್ಕೆ ತಳ್ಳುತ್ತಿರುವಾಗ, ಹೀಗೆ ಬಾಯಿಮುಚ್ಚಿ ಕೂತಿರುವುದೆಂದರೆ, ನನಗೆ ಅದು ಸಾವಿಗಿಂತ ಕಡಿಮೆಯೇನಲ್ಲ.

ಆಗಸ್ಟ್ 15

(ಹಿಂದಿಯಲ್ಲಿ ಬರೆದದ್ದು)

ಇಂದು ಆಗಸ್ಟ್ 15. ನಮ್ಮ ಸ್ವಾತಂತ್ರ್ಯದ 28 ವರ್ಷಗಳು ಪೂರ್ಣಗೊಂಡಿವೆ. ಭಾರತ ವಿದೇಶಿ ಪ್ರಭುತ್ವದಿಂದ ಮುಕ್ತವಾಗಿದೆ. ಶ್ರೀಮತಿ ಗಾಂಧಿ ಇದೇ ದಿಕ್ಕಿನಲ್ಲಿ ಮುಂದುವರಿದರೆ ಈ ದೇಶ ರಷ್ಯಾದ ಪ್ರಭಾವವಲಯಕ್ಕೆ ಈಡಾಗುವುದು ಖಂಡಿತ.

ಇಂದಿನ Tribune ಪತ್ರಿಕೆಯಲ್ಲಿ ಪ್ರಕಟವಾಗಿರುವ K.P.S. ಮೆನೊನ್ ಅವರ ಲೇಖನ ಮುಂದಿನ ಆ ಭಯಾನಕ ದಿನಗಳ ಸೂಚಕವಾಗಿದೆ. ಆದರೆ ಇಂತಹದನ್ನೆಂದೂ ಭಾರತದ ಜನತೆ ಒಪ್ಪುವುದಿಲ್ಲ ಎಂಬ ವಿಶ್ವಾಸ ನನಗಿದೆ.

ಸ್ವಾಂತಂತ್ರ್ಯ ಹೋರಾಟ ನಡೆದದ್ದು ಕೇವಲ ರಾಷ್ಟ್ರೀಯ ಸ್ವಾತಂತ್ರ್ಯ ಸಾಧಿಸಲು ಅಲ್ಲ; ಪ್ರಜಾಪ್ರಭುತ್ವದ ಸ್ಥಾಪನೆಯೂ ಸಹ ಹೋರಾಟದ ಪ್ರಮುಖ ಗುರಿಗಳಲ್ಲೊಂದಾಗಿತ್ತು. ಈ ಗುರಿಯನ್ನು ದೃಷ್ಟಿಯಲ್ಲಿಟ್ಟುಕೊಂಡೇ, ರಾಜ್ಯಾಂಗ ರಚನಾ ಸಭೆಯು ಪ್ರಜಾಪ್ರಭುತ್ವವಾದೀ ಭಾರತಕ್ಕಾಗಿ ಸಂವಿಧಾನವೊಂದನ್ನು ಸಿದ್ಧಪಡಿಸಿ; 1949ರ ನವೆಂಬರ್ 26ರಂದು ಭಾರತದ ಜನತೆಯ ಪರವಾಗಿ ಅದನ್ನು ಅನುಮೋದಿಸಿದ್ದು, ಇದಕ್ಕನುಗುಣವಾಗಿಯೇ 1950ರ ಜನವರಿ 26ರಂದು ಭಾರತವನ್ನು ಒಂದು ಗಣರಾಜ್ಯವೆಂದು ಘೋಷಿಸಿದ್ದು.

ಇಂದು ಆ ಪ್ರಜಾಪ್ರಭುತ್ವದ ಕಿಂಚಿತ್ತಾದರೂ ಉಳಿದಿದೆಯೇ? ಇದೆಲ್ಲಾ ಎಷ್ಟು ಅವಾಸ್ತವಿಕ ಹಾಗೂ ಕನಸಿನಂತೆ ಕಾಣುತ್ತದೆಂದರೆ, ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿ ಕೂಡಾ ತುರ್ತು ಪರಿಸ್ಥಿತಿ ತಾತ್ಕಾಲಿಕ ಕ್ರಮ ಮಾತ್ರ, ಭಾರತ ಪ್ರಜಾಪ್ರಭುತ್ವದಡಿಯಲ್ಲಿ ಮಾತ್ರ ಒಗ್ಗಟ್ಟಾಗಿರಲು ಸಾಧ್ಯ ಮುಂತಾಗಿ ಪದೇ ಪದೇ ಹೇಳುವ ಮೂಲಕ ಜನತೆಯ ಮನವೊಲಿಸುವ ಪ್ರಯತ್ನ ಮಾಡಬೇಕಾಗಿದೆ. ಈ ಇಬ್ಬರು ಮಹಾಶಯರೂ ಇಂದು ತಮ್ಮ ಸ್ವಾತಂತ್ರ್ಯ ದಿನದ ಸಂದೇಶಗಳಲ್ಲಿ ಈ ಮನ ಒಲಿಸುವ ಆಶ್ವಾಸನೆಗಳನ್ನು ಪುನಃರುಚ್ಚರಿಸಿದ್ದಾರೆ.

ಆದರೆ ತುರ್ತುಪರಿಸ್ಥಿತಿ ಘೋಷಣೆಗೆ ಆಧಾರವಾಗಿ ನೀಡಲಾದ ಕುಂಟು ನೆವಗಳು ಹಾಗೂ ಸುಳ್ಳು ವಾದಗಳು ಮತ್ತು ಆ ನಂತರ ಮಾಡಲಾದ ಸಂವಿಧಾನ ತಿದ್ದುಪಡಿಗಳನ್ನು ಗಮನಿಸಿದರೆ, ಈ ಆಶ್ವಾಸನೆ - ವಾದಗಳೆಲ್ಲಾ ಕೇವಲ ಕಣ್ಣೊರೆಸುವ ತಂತ್ರಗಳಾಗಿವೆ ಎಂಬುದು ಗೊತ್ತಾಗುತ್ತದೆ. ಶ್ರೀಮತಿ ಗಾಂಧಿಯ ಮಟ್ಟಿಗೆ ಹೇಳುವುದಾದರೆ, ಆಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನೂ ಇರಿಸಿಲ್ಲ ಮತ್ತು ಅದರ ಪುನರ್‌ಸ್ಥಾಪನೆಯನ್ನು ತಡೆಯಲು ತನ್ನೆಲ್ಲಾ ಪ್ರಯತ್ನಗಳನ್ನು ಮಾಡದೇ ಇರುವುದಿಲ್ಲ. ದೇಶದಲ್ಲಿನ ಪ್ರಜಾಪ್ರಭುತ್ವವಾದೀ ಶಕ್ತಿಗಳು ಈ ಒಳಸಂಚನ್ನು ಎಷ್ಟರವರೆಗೆ ಮುಂದುವರೆಯಲು ಬಿಡುತ್ತವೆ ಎಂಬುದನ್ನು ನೋಡಬೇಕಾಗಿದೆ. ನಾನು ಭಾರತದ ಜನರನ್ನು, ಅದರ ಯುವ ಜನತೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದೇ ಆದರೆ, ಈ ಒಳಸಂಚು ಯಶಸ್ವಿಯಾಗಲು ಅವರು ಅವಕಾಶ ಕೊಡುವುದಿಲ್ಲ ಎಂಬುದರಲ್ಲಿ ನನಗೆ ಸಂಶಯವಿಲ್ಲ.

ಆ ಆಶಯುವನ್ನಿಟ್ಟುಕೊಳ್ಳಲು ಮತ್ತೊಂದು ಕಾರಣವೂ ಇದೆ. ಪ್ರಧಾನಮಂತ್ರಿಯು ಮತ್ತೆ ಮತ್ತೆ ಭಾರತದ ವೈವಿಧ್ಯತೆ, ಅದರ ವಿಸ್ತಾರ ಹಾಗೂ ಭಾರೀ ಜನಸಂಖ್ಯೆಯ ದೃಷ್ಟಿಯಿಂದ ನಮ್ಮ ರಾಷ್ಟ್ರೀಯ ಏಕತೆ ಪ್ರಜಾಸತ್ತಾತ್ಮಕ

ವಾತಾವರಣದಲ್ಲಿ ಮಾತ್ರ ಉಳಿಯಲು ಸಾಧ್ಯ ಎಂದೂ ಹೇಳುತ್ತಲೇ ಇರುವುದನ್ನು ನಾವು ಕಾಣಬಹುದಾಗಿದೆ. ಆಕೆ ಇಂದು ಸಹ ಅದನ್ನೇ ಹೇಳಿದ್ದಾಳೆ. ನಾವೀಗ ಶ್ರೀಮತಿ ಇಂದಿರಾಗಾಂಧಿಯ ಸರ್ವಾಧಿಕಾರದಡಿ ಇದ್ದೇವೆ. ಆದರೆ, ಇಡೀ ಭಾರತವನ್ನು ಏಕಮಾತ್ರ ಕೇಂದ್ರವೊಂದರಿಂದ ಆಳುವ ಪ್ರಯತ್ನ ಎಂದೂ ಪೂರ್ಣವಾಗಿ ಯಶಸ್ವಿಯಾಗಿಲ್ಲ ಎಂಬುದಕ್ಕೆ ಚರಿತ್ರೆಯೇ ಸಾಕ್ಷಿಯಾಗಿದೆ. ಅಂತಹ (ಕೇಂದ್ರೀಕೃತ) ಸಾಮ್ರಾಜ್ಯಗಳು ಹೆಚ್ಚುಕಾಲ ಬಾಳಲೂ ಇಲ್ಲ. ಎಲ್ಲ ಕಾಲದಲ್ಲೂ ಒಬ್ಬ ಮಹಾನ್ ಚಕ್ರವರ್ತಿಯ ಕೆಳಗೆ, ತಂತಮ್ಮ ಸಂಸ್ಥಾನಗಳಲ್ಲಿ ಒಂದಿಷ್ಟು ಹೆಚ್ಚೋ ಕಡಿಮೆಯೋ ಅಷ್ಟೇ ಬಲಿಷ್ಠರಾದ ಮತ್ತು ಪರಮಾಧಿಕಾರ ಉಳ್ಳ ದೊರೆಗಳು ಮತ್ತು ಸುಲ್ತಾನರು ಇದ್ದೇ ಇದ್ದರು. ಕಾಲಕಳೆದಂತೆ ವಿವಿಧ (ಭಾರತೀಯ) ಸಂಸ್ಥಾನಗಳ ಗಡಿ ಕುಗ್ಗುತ್ತಾ ಅಥವಾ ವಿಸ್ತರಿಸುತ್ತಾ ಹೋಗಿ, ಕೆಲವೇ ಶತಮಾನಗಳಲ್ಲಿ ಆ ಸಂಸ್ಥಾನಗಳು ನಾಶಹೊಂದುತ್ತಿದ್ದವು.

ಇದು, ವಯಸ್ಕ ಮತದಾನದ ಆಧಾರವಿರುವ ಪ್ರಜಾಪ್ರಭುತ್ವದ ಅಥವಾ ನಾಗರಿಕ ಸ್ವಾತಂತ್ರ್ಯ ಮತ್ತು ಪ್ರಜೆಯ ಹಕ್ಕುಗಳ ಕಲ್ಪನೆಯೇ ಇಲ್ಲದ ಕಾಲದಲ್ಲೂ ಕೂಡಾ ಕಂಡುಬರುತ್ತಿದ್ದ ಬೆಳವಣಿಗೆ. ಅಲ್ಲದೆ, ಆಗ ಭಾರತದ ಜನಸಂಖ್ಯೆ ಇಷ್ಟು ಭಾರಿ ಇರಲಿಲ್ಲ. ಹೀಗಿರುವಾಗ ಈ ವಿಸ್ತಾರವಾದ ದೇಶದ ಮೇಲಿನ ಆಕೆಯ ದಬ್ಬಾಳಿಕೆ ಬಹಳ ಕಾಲ ಮುಂದುವರಿಯುತ್ತದೆಂದು ನಂಬಲು ಇಂದಿರಾಜಿಯಲ್ಲಾಗಲೀ ಅಥವಾ ಆಕೆಯ ಪಕ್ಷದಲ್ಲಾಗಲೀ ಯಾವುದೋ ವೈಯಕ್ತಿಕವಾದ, ವಿಶೇಷ ಯೋಗ್ಯತೆ ನನಗೆ ಕಾಣಬರುತ್ತಿಲ್ಲ.

ಶ್ರೀಮತಿ ಗಾಂಧಿಯ ಪಕ್ಷದ ಬಗ್ಗೆ ನಾನು ಮೇಲಿನ ಸಾಲುಗಳಲ್ಲಿ ಸಾಕಷ್ಟು ಹೇಳಿದ್ದೇನೆ. ಈ ಪಕ್ಷ, ಸ್ವಾರ್ಥಿಗಳು ಹಾಗೂ ಹೇಡಿಗಳಿಂದ ತುಂಬಿಹೋಗಿದೆ. ಇವರಲ್ಲಿ ಹೆಚ್ಚಿನವರಿಗೆ ಭ್ರಷ್ಟಾಚಾರ ಮೈಗೂಡಿಹೋಗಿದೆ. ಅವರವರಲ್ಲೇ ಸ್ವಾರ್ಥಪರವಾದ, ಕೊನೆಗೊಳ್ಳದ ಒಳಜಗಳಗಳಿವೆ. ಜಾತೀಯತೆ ಕೂಡಾ ಇದೆ, ಇಂತಹ ಪಕ್ಷವೊಂದರ ಸರ್ವಾಧಿಕಾರ ಸ್ಥಿರವಾಗಿರಲು ಸಾಧ್ಯವೇ? ಕಾಂಗ್ರೆಸ್ಸಿನಲ್ಲಿನ ಎಲ್ಲಾ ಪ್ರಾಮಾಣಿಕರನ್ನೂ ಹಾಗೂ ಧೈರ್ಯಶಾಲಿಗಳನ್ನೂ, ಇಂದಿರಾಜಿ ಹೊರತಳ್ಳಿಬಿಟ್ಟಿದ್ದಾಳೆ.

ವಿರೋಧ ಪಕ್ಷಗಳು ಒಂದುಗೂಡಿದ್ದಲ್ಲಿ, ಕಾಂಗ್ರೆಸ್ ಆಳ್ವಿಕೆ ಎಂದೋ ಕೊನೆಗೊಳ್ಳುತ್ತಿತ್ತು. ಸರ್ವಾಧಿಕಾರದ ದಳ್ಳುರಿಯಲ್ಲಿ ನರಳುತ್ತಿರುವ ವಿರೋಧ ಪಕ್ಷಗಳು ಈಗಲಾದರೂ ಒಗ್ಗೂಡುತ್ತವೆಂಬ ಆಶಯ ನನಗಿದೆ. ವಾಸ್ತವವಾಗಿ, ತುರ್ತುಪರಿಸ್ಥಿತಿಯನ್ನು ಘೋಷಿಸಲು ಕಾರಣವಾದ ಪ್ರಮುಖ ಅಂಶಗಳಲ್ಲಿ, ಗುಜರಾತ್‌ನಲ್ಲಿನ ಜನತಾರಂಗದ ವಿಜಯದ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ವಿರೋಧ ಪಕ್ಷಗಳ ಏಕತೆಯ ಸಾಧ್ಯತೆಯನ್ನು ಮನಗಂಡ ನಂತರ, ಮುಂದಿನ

ಲೋಕಸಭಾ ಚುನಾವಣೆಗಳಲ್ಲಿ ತಾನು ಗೆಲ್ಲಲಾರೆ ಎಂದು ಶ್ರೀಮತಿ ಗಾಂಧಿಗೆ ಅನಿಸಿದ್ದೂ ಒಂದಾಗಿದೆ. ಅಲ್ಲದೆ ಬಿಹಾರ ಆಂದೋಲನದ ಪ್ರಭಾವ ಇತರ ರಾಜ್ಯಗಳಿಗೂ ಹರಡುತ್ತಿತ್ತು. ನಾನು ದೇಶಾದ್ಯಂತ ನಡೆಸಿದ ಪ್ರವಾಸಗಳ ಯಶಸ್ಸು ಸಹ ಆಕೆಯನ್ನು ಭಯಭೀತಳನ್ನಾಗಿ ಮಾಡಿರಬಹುದು. ಈ ಘಟ್ಟದಲ್ಲಿ ಪ್ರಜಾಪ್ರಭುತ್ವವನ್ನೇ ನಾಶಮಾಡುವುದರಲ್ಲಿ ತನ್ನ ಹಿತ ಅಡಗಿದೆ ಎಂದು ಆಕೆ ನಿರ್ಧರಿಸಿರಬಹುದು. ಎಂತಾದರೂ ಕೂಡಾ, ನಾನು ಮೇಲೆ ಹೇಳಿರುವುದರಿಂದಲೇ ಸ್ಪಷ್ಟವಾಗುವಂತೆ, ಈ ಅಪ ಮಾರ್ಗದಲ್ಲಿ ಆಕೆ ಎಂದೂ ಜಯಗಳಿಸಲಾರಳು.

ಆಗಸ್ಟ್ 16

(ಹಿಂದಿಯಲ್ಲಿ ಬರೆದದ್ದು)

ಪ್ರೊಫೆಸರ್ ಸತ್ಯವ್ರತರು **ಭಗವದ್ಗೀತೆ**ಯ ಮೇಲಿನ ತಮ್ಮ ವ್ಯಾಖ್ಯಾನದಲ್ಲಿ (ಪು. 201) 'ಗೀತೆಯನ್ನು ರಚಿಸಿದ ಸಮಯದಲ್ಲಿ **ಕರ್ಮಕಾಂಡ** ಮಹತ್ವದ್ದೇ **ಜ್ಞಾನಕಾಂಡ** ಮಹತ್ವದ್ದೋ ಎಂಬ ಬಗ್ಗೆ ವಿವಾದ ಎದ್ದಿತು' ಎಂದು ಹೇಳುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಅವರು ಶಂಕರಾಚಾರ್ಯರ ಹೆಸರನ್ನು ಉಲ್ಲೇಖಿಸಿದ್ದಾರೆ. ಇದು ಮಾತ್ರ ಸೂಕ್ತವಾಗಿ ಕಾಣುವುದಿಲ್ಲ, ಅವರು ಎರಡೂ ಕಡೆಗಳಲ್ಲಿನ ಬೆಂಬಲಿಗರಲ್ಲಿ ಕೆಲವರ ಹೆಸರುಗಳನ್ನಾದರೂ ನೀಡಬೇಕಿತ್ತು.

ಆಗಸ್ಟ್ 16

ಬಂಗ್ಲಾದೇಶದಿಂದ ಭೀಕರ ಸುದ್ದಿ, ನಂಬಲಸಾಧ್ಯವಾದ ಸುದ್ದಿ, ಆದರೆ, ಎಲ್ಲ ಪಕ್ಷಗಳನ್ನು ಬಹಿಷ್ಕರಿಸಿ, ಮುಜೀಬ್ ವೈಯಕ್ತಿಕವಾದ ಹಾಗೂ ತನ್ನ ಪಕ್ಷದ ಸರ್ವಾಧಿಕಾರವನ್ನು ಸ್ಥಾಪಿಸಿದ ಪರಿಣಾಮವಿದು. ಮುಜೀಬ್ ಅನುಸರಿಸಿದ ಇಡೀ ತಂತ್ರವನ್ನು ಮುಜೀಬರ ಆಪ್ತ ಅನುಯಾಯಿಗಳೊಂದಿಗೆ ದೆಹಲಿಯಲ್ಲಿ ರೂಪಿಸಲಾಯಿತು ಎಂದು ಆಗ ದೆಹಲಿಯಲ್ಲಿ ದಟ್ಟ ವದಂತಿ ಹರಡಿತ್ತು. ಆಗ ಮುಜೀಬ್ ನೀಡಿದ್ದೂ, ಈಗ ಶ್ರೀಮತಿ ಗಾಂಧಿ ನೀಡುತ್ತಿರುವಂತಹ ನೆವಗಳನ್ನೇ. ಮುಜೀಬ್ ಸಂಚಿನ ಸಮಯದಲ್ಲೇ, ಶ್ರೀಮತಿ ಗಾಂಧಿ ತನ್ನದೇ ಹಾದಿ ಹಿಡಿದರೆ, ಭಾರತವೂ ಬಂಗ್ಲಾದೇಶದ ದಿಕ್ಕನ್ನೇ ಹಿಡಿಯುತ್ತದೆ ಎಂಬ ವದಂತಿಗಳೂ ಆಗ ಇದ್ದವು. ಭಾರತ ಇಂದು ಪ್ರಜಾಪ್ರಭುತ್ವ ಹಾಗೂ ಮುಜೀಬ್ ಸರ್ವಾಧಿಕಾರದ ನಡುವಣ ಅರ್ಧ ದಾರಿಯಲ್ಲಿದೆ. ಶ್ರೀಮತಿ ಗಾಂಧಿ ಈ ಹಾದಿಯಲ್ಲೇ ಮುನ್ನಡೆಯುವಳು ಎಂಬ ಶಂಕೆ ನನಗಿತ್ತು. 'ಇತ್ತು' ಎಂದು ನಾನು ಹೇಳಿರುವುದು 'ಸೇನಾ ಪಿತೂರಿ'ಯನ್ನು ಗಮನದಲ್ಲಿಟ್ಟುಕೊಂಡು(ಅದು ಸೇನಾ ಕ್ರಾಂತಿಯೇ ಎಂಬುದು ದೇವರಿಗೇ ಗೊತ್ತು. ಆದರೆ ಖೊಂಡಾಕರ್ ಮುಷ್ತಾಕ್ ಅಹ್ಮದ್ ಸ್ವತಃ ತಾನೇ ಇದನ್ನು ಮಾಡಿಸಿರಲಾರ.

ಈ ಭಯಾನಕ ಕೃತ್ಯವನ್ನು ಅಮೇರಿಕನ್ನರೇ ನಡೆಸಿರುವುದು ಎಂದು ಸಿಪಿಐ ಹೇಳಲಿದೆ. ರಷ್ಯನರು ಪ್ರಾಯಶಃ ತಾವು ಸುಮ್ಮನಿರಬಹುದು. ಆದರೆ ಇಡೀ ಘಟನೆಯ ಹೊಣೆಯನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ಮೇಲೆ ಹೊರಿಸುವಂತೆ ಪ್ರಪಂಚದಾದ್ಯಂತ ಇರುವ, ಅದರಲ್ಲೂ ನಿರ್ದಿಷ್ಟವಾಗಿ ಏಷ್ಯಾದಲ್ಲಿರುವ ತಮ್ಮ ಬಾಲಬಡುಕರನ್ನು ಉತ್ತೇಜಿಸುವುದಂತೂ ಖಂಡಿತ.) ಸರ್ವಾಧಿಕಾರ ಈ ದೇಶದ ವಿನಾಶಕ್ಕೆ ಕಾರಣವಾಗುತ್ತದೆ; ನಿನ್ನೆ ತಾನೇ ಹೇಳಿದಂತೆ, ದೇಶದ ಒಗ್ಗಟ್ಟನ್ನು ಕಾಪಾಡಲು ಅಗತ್ಯವಾಗಿರುವ ಪ್ರಜಾಪ್ರಭುತ್ವವನ್ನು ಪುನರ್ ಸ್ಥಾಪಿಸಬೇಕು. ಬಂಗ್ಲಾದೇಶದ ಅನಾಹುತ ಸೂಚಿಸುವ ದೇಶಕ್ಕಿರುವ ಅಪಾಯವನ್ನು, ಜನತೆಯ ಸ್ವಾತಂತ್ರ್ಯವನ್ನು ಪುನರ್‌ಸ್ಥಾಪಿಸಿ, ಮುಕ್ತ ವಾತಾವರಣದಲ್ಲಿ ಉಸಿರಾಡಲು ಅವಕಾಶ ನೀಡುವ ಮೂಲಕ ಮಾತ್ರ ಎದುರಿಸಬಹುದು ಎಂಬುದನ್ನು ಅರ್ಥಮಾಡಿಕೊಳ್ಳುವಂತೆ ಈ ಮಹತ್ವದ ಸಮಯದಲ್ಲಿ ಆಕೆಗೆ ಮಾರ್ಗದರ್ಶನ ನೀಡು ಎಂದು ನಾನು ದೇವರಲ್ಲಿ ಕಳಕಳಿಯಿಂದ ಬೇಡಿಕೊಳ್ಳುವೆ, ಸ್ವಾತಂತ್ರ್ಯದ ದಮನ ಹಾಗೂ ಈಗಿನ ಉಸಿರು ಕಟ್ಟಿಸುವ ಪರಿಸ್ಥಿತಿಯನ್ನು ಮುಂದುವರಿಸುವುದು ಭಯಾನಕ ಘಟನೆಗಳಿಗೆ ಮಾತ್ರ ದಾರಿಮಾಡಿಕೊಡುತ್ತದೆ. ಹಲವು ರೀತಿಯ ಘಟನೆಗಳು ನಡೆಯಬಹುದು; ಅವನ್ನು ಊಹಿಸುವುದು ಕಷ್ಟವೇನಲ್ಲ, ಇಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳುವುದೇ ಈಗಿನ ಕರ್ತವ್ಯ. ಶ್ರೀಮತಿ ಗಾಂಧಿ ಇದನ್ನರಿತು ಎಚ್ಚರಗೊಳ್ಳುವಳೇ? ತನ್ನ ವೈಯಕ್ತಿಕ ಸ್ಥಾನ ಅಪಾಯದಲ್ಲಿದ್ದಾಗ ಮಾತ್ರ ಆಕೆ ಎಚ್ಚತ್ತು ಕಾರ್ಯಪ್ರವೃತ್ತಳಾಗುವಳು ಎಂದಷ್ಟೇ ನಮಗೆ ಈವರೆಗೆ ಗೊತ್ತಿರುವುದು. ದೇಶವೇ ಅಪಾಯದಲ್ಲಿರುವಾಗ ಆಕೆ ಎಚ್ಚೆತ್ತು ಕಾರ್ಯಪ್ರವೃತ್ತಳಾಗಬಲ್ಲಳೇ?

ಆಗಸ್ಟ್ 17

ಬಂಗ್ಲಾದೇಶದ ದುರಂತಮಯ ಘಟನೆಗಳ ಬಗ್ಗೆ ನಿನ್ನೆ ನಾನು ನಿಷ್ಪಕ್ಷಪಾತ ರೀತಿಯಲ್ಲಿ ಬರೆಯಲಿಲ್ಲ ಎಂದು ನನಗನ್ನಿಸುತ್ತಿದೆ, ಹೌದು, ಮುಷ್ತಾಕ್ ಅಹ್ಮದರೇನೋ ಹಿಂದಿನ ಸರ್ಕಾರದ ಭ್ರಷ್ಟಾಚಾರ ಹಾಗೂ ಸ್ವಾತಂತ್ರ್ಯ ದಮನದ ಬಗ್ಗೆ ಮಾತನಾಡುತ್ತಿದ್ದಾರೆ ಮತ್ತು ಈ ಎರಡನ್ನೂ ತಡೆಯುವ ಭರವಸೆ ನೀಡಿದ್ದಾರೆ. ಆದರೆ ಇದನ್ನು ಮುಂದಿನ ಚರಿತ್ರೆ ಮಾತ್ರ ಹೇಳಬಲ್ಲದು. ಈತ ಕೇವಲ ಸೇನೆಯು ಬಳಸಿಕೊಂಡ ಸಾಧನ ಮಾತ್ರವಾಗಿದ್ದರೆ, ತನ್ನ ಭರವಸೆಗಳನ್ನು ಈಡೇರಿಸಬಲ್ಲ ಎಂದು ನನಗನ್ನಿಸುವುದಿಲ್ಲ.

ಭುಟ್ಟೋನಿಂದ ಬಿಡುಗಡೆಯಾಗಿ, ತನ್ನ ದೇಶದ ನೇತೃತ್ವ ವಹಿಸಲು ಬಂಗ್ಲಾಗೆ ಹಿಂತಿರುಗಿದ ಮುಜೀಬ್ ವಂಗಬಂಧು, ವಂಗಪಿತ ಕೂಡಾ ಆದದ್ದು ನನ್ನ ನೆನಪಿಗೆ ಬರುತ್ತಿದೆ. ಆತ ನಿಜವಾಗಿಯೂ ಜನತೆಯ ಪ್ರೀತಿಗೆ ಪಾತ್ರನಾಗಿದ್ದ ಆ ಸಂದರ್ಭದಲ್ಲಿ

ನಾನು ನೀರು ತುಂಬಿದ ಕಣ್ಣುಗಳಲ್ಲಿ ಪತ್ರ ಬರೆದದ್ದೂ ನೆನಪಿಗೆ ಬರುತ್ತಿದೆ. ಆತನಿಗೆ ನಾನು ಎರಡೋ ಮೂರೋ ಪತ್ರಗಳನ್ನು ಬರೆದಿರಬೇಕು. ಹಾಗೂ ಆತ ಒಮ್ಮೆಯೋ ಎರಡು ಬಾರಿಯೋ ಉತ್ತರಿಸಿರಬಹುದು. ಸೇನ್[19] ಮೂಲಕ ಸಹ ನನಗೆ ಸೌಹಾರ್ದತೆಯ ಸಂದೇಶ ಕಳಿಸಿದ್ದ. ಆ ದಿನಗಳಲ್ಲಿ ಮುಜೀಬ್ ಬಗ್ಗೆ ನನ್ನ ಭಾವನೆಗಳು ಹೀಗಿದ್ದವು. ಆದರೆ ಆತ ತನ್ನ ಪಿತೂರಿಯ ಮೂಲಕ ಏಕಪಕ್ಷ ಸರ್ವಾಧಿಕಾರವನ್ನು ಸ್ಥಾಪಿಸಿದ ನಂತರ ಆತನ ಬಗ್ಗೆ ನನಗಿದ್ದ ಆದರವೆಲ್ಲಾ ಮಾಯವಾಯಿತು. ಆತನ ಕಷ್ಟಗಳೂ ನನಗೆ ಗೊತ್ತಿದ್ದವು. ಆದರೆ ಆತನಿಗೆ ಸಾಮರ್ಥ್ಯವಿದ್ದಿದ್ದಲ್ಲಿ, ಜನತೆ ಆತನ ಬಗ್ಗೆ ಇಟ್ಟಿದ್ದ ಅಭಿಮಾನ ಹಾಗೂ ಜವಾಹರಲಾಲರಿಗೆ ಕೊಟ್ಟಿದ್ದಂತಹ ಪರಮ ಅಧಿಕಾರದೊಂದಿಗೆ, ಪ್ರಜಾಪ್ರಭುತ್ವವನ್ನು ದಮನ ಮಾಡದೆಯೇ ಆತ ಪರಿಸ್ಥಿತಿಯನ್ನು ತಹಬಂದಿಗೆ ತರಬಹುದಿತ್ತು. ಆದರೆ ಮೂರ್ಖನಂತೆ ವರ್ತಿಸಿ ವಿಫಲನಾದ; ಆತನನ್ನು ಕೊಲ್ಲಲಾಗಿದೆ ಎಂದು ನಿನ್ನೆ ಓದಿದಾಗ ನಾನು ದುಃಖಿತನಾದೆ. ಆದರೆ ದಿಗ್ಭ್ರಮೆಗೊಳ್ಳಲಿಲ್ಲ ಅಥವಾ ಹೃದಯಾಂತರಾಳದಲ್ಲಿ ಆತನಿಗಾಗಿ ಮರುಕವನ್ನೂ ಪಡಲಿಲ್ಲ. ಮುಜೀಬರನ್ನು ಮುಖತಃ ನಾನು ಕಂಡಿಲ್ಲ. (ಪಾಕಿಸ್ತಾನದಿಂದ ಬೇರೆಯಾದಾಗ ಸ್ಥಾಪಿತವಾದ) ಹಂಗಾಮಿ ಬಂಗ್ಲಾ ಸರ್ಕಾರದ ಇತರ ಎಲ್ಲಾ ರಾಜಕೀಯ ಹಾಗೂ ಮಿಲಿಟರಿ ನಾಯಕರೊಂದಿಗೆ ನಿಕಟ ಎಂದೇ ಹೇಳಬಹುದಾದ ಪರಿಚಯವಿತ್ತಾದರೂ, ಮುಜೀಬರ ಪರಿಚಯ ಇರಲಿಲ್ಲ. ಆಗ ಖೊಂಡಾಕರ್ ಮುಷ್ತಾಕ್ ಅಹ್ಮದ್ ನನಗೆ ಗೊತ್ತಿತ್ತು. ನನ್ನ ನೆನಪಿನ ಪ್ರಕಾರ ಆತ ತೆಳುವಾದ ಸರಾಸರಿ ಎತ್ತರದ ಮತ್ತು ಯಾವಾಗಲೂ, ಸಾಮಾನ್ಯವಾಗಿ ಬಂಗಾಳಿಗಳು ಹಾಕದ ಟೋಪಿಯನ್ನು ಧರಿಸಿದ್ದ ಮನುಷ್ಯ. ತಾಜುದ್ದೀನ್ ಅಹ್ಮದ್‌ರೊಂದಿಗೆ ಮತ್ತು ಬಹುಶಃ ನಜ್ರುಲ್ ಇಸ್ಲಾಮರೊಂದಿಗೂ* ಆತನ ಸಂಬಂಧ ಉತ್ತಮವಾಗಿರಲಿಲ್ಲ ಎಂಬುದು ಗೊತ್ತಿದ್ದ ವಿಷಯವಾಗಿತ್ತು. ಆತ ಭಾರತದಲ್ಲಿ ತಲೆಮರೆಸಿಕೊಂಡಿದ್ದಾಗ ಇತರ ನಾಯಕರಂತೆ ಮುಜೀಬರ ಕಟ್ಟಾ ಅಭಿಮಾನಿ ಎಂದು ಕಂಡಿದ್ದನಾದರೂ, ಬಹುಶಃ ತನಗೆ ವಿದೇಶಾಂಗ ಖಾತೆ ಅಥವಾ ಅಷ್ಟೇ ಮಹತ್ವದ ಸಚಿವ ಸ್ಥಾನ ಕೊಡಲಿಲ್ಲ ಎಂಬ ಕಾರಣದಿಂದ ಮುಜೀಬರಿಂದ ದೂರವಾಗಿರುವವನು ಎಂದು ಸೇನ್ ಬಂಗ್ಲಾದೇಶದಿಂದ ಹಿಂತಿರುಗಿದ ನಂತರ ತಿಳಿಸಿದ್ದರು. ಅವಾಮಿ ಲೀಗ್‌ನಲ್ಲಿ ಮತ್ತು ಒಟ್ಟಾರೆ ದೇಶದಲ್ಲಿ ಮುಜೀಬರನ್ನು ಎದುರಿಸಬಲ್ಲ ವ್ಯಕ್ತಿ ಯಾರಾದರೂ ಇದ್ದಲ್ಲಿ ಆತ ಖೊಂಡಾಕರ್ ಮುಷ್ತಾಕ್ ಅಹ್ಮದ್ ಎಂದು ಸಹ ಸೇನ್ ತಿಳಿಸಿದ್ದರು. ಆದರೆ ಎದುರಿಸಲಿದ್ದದ್ದು ಮತ್ತು ಗೆಲ್ಲಲಿದ್ದದ್ದು ಹೀಗೆ ಎಂಬುದು ಯಾರಿಗೆ ತಾನೇ ಗೊತ್ತಿತ್ತು?...ಕೊನೆಯ ಒಂದು

---

19. ಎಂ.ಸಿ. ಸೇನ್, ಜೆ.ಪಿ.ಯವರ ನಿಕಟವರ್ತಿಗಳಲ್ಲೊಬ್ಬರು.

* ತಾಜುದ್ದೀನ್ ಅಹ್ಮದ್ ಹಾಗೂ ನಜ್ರುಲ್ ಇಸ್ಲಾಂ ಇಬ್ಬರೂ ಯಹ್ಯಾಖಾನ್‌ರ ದಬ್ಬಾಳಿಕೆಯ ವಿರುದ್ಧ ಹೋರಾಡಿದವರು. ಇತ್ತೀಚಿನ ಬಂಡಾಯದಲ್ಲಿ ಇವರನ್ನು ಕೊಲ್ಲಲಾಯಿತು.

ಮಾತು: ಅಹ್ಮದ್ ಬಗ್ಗೆ ನಾನು ಎರಡು ನಿರ್ಣಯಗಳಿಗೆ ಬಂದಿದ್ದೆ; ಆತ ಪಶ್ಚಿಮ ದೇಶಗಳ ಪರ ಮತ್ತು ಇತರರಿಗಿಂತ-ಧಾರ್ಮಿಕ ದೃಷ್ಟಿಯಿಂದ-ಒಂದಿಷ್ಟು ಹೆಚ್ಚು ಮಹಮ್ಮದೀಯ.

ಬಂಗ್ಲಾದೇಶದ ಬಂಡಾಯದಲ್ಲಿ ಭಾರೀ ರಹಸ್ಯ ಅಡಗಿದೆ; ಹಲವಾರು ಸಂದೇಹಗಳಿವೆ. ಪ್ರಶ್ನೆಗಳಿವೆ. ಕಾಲ ಇವುಗಳಲ್ಲಿ ಕೆಲವನ್ನು ಉತ್ತರಿಸಬಹುದು, ಆದರೆ ಎಲ್ಲವನ್ನು ಅಲ್ಲ ಎಂದು ನನಗನ್ನಿಸುತ್ತದೆ.

ಆಗಸ್ಟ್ 18

ಬಂಗ್ಲಾದೇಶ ತನ್ನ ಅಧಿಕೃತ ಹೆಸರನ್ನು 'ಜನತಾ ಗಣರಾಜ್ಯ'ವೆಂದೇ ಉಳಿಸಿಕೊಂಡಿದೆ ಮತ್ತು 'ಇಸ್ಲಾಮೀ ಗಣರಾಜ್ಯ' ಎಂದು ಬದಲಾಯಿಸಿಕೊಂಡಿಲ್ಲ ಎಂಬುದನ್ನು ಇಂದಿನ ಪತ್ರಿಕೆಗಳಲ್ಲಿ ಓದಿ ನನ್ನ ಮನಸ್ಸು ಎಷ್ಟೊ ಹಗುರಾಗಿದೆ. ಸದ್ಯಕ್ಕಾದರೂ 'ಜಾತ್ಯತೀತತೆ' ಸುರಕ್ಷಿತವಾಗಿದೆ ಎಂದು ಕಾಣುತ್ತದೆ. ಅಹ್ಮದರ ಸಂಪುಟದಲ್ಲೂ ಇಬ್ಬರು-ಮುಜೀಬ್ ಸಂಪುಟದಲ್ಲಿದ್ದಷ್ಟೇ- ಹಿಂದೂಮಂತ್ರಿಗಳಿದ್ದಾರೆ. ಬಂಗ್ಲಾದೇಶ ಯಾವುದೇ ದೇಶದ ಪ್ರಭಾವವಲಯಕ್ಕೆ ಸಿಗಲಾರದು. ಅಥವಾ ಪಾಕಿಸ್ತಾನದೊಂದಿಗೆ ಯಾವುದೇ ರೀತಿಯ - ಸಂಘ, ಒಕ್ಕೂಟ ಅಥವಾ ಇನ್ನಾವುದೇ ರೀತಿಯ-ಸಂವಿಧಾನಾತ್ಮಕ ಸಂಬಂಧಗಳನ್ನು ಅದು ಹೊಂದಲಾರದು. ಅಹ್ಮದರನ್ನು ನಾನು ಅರಿತಿರುವಂತೆ ಆತ ಭಾರತದೊಂದಿಗೆ ಸ್ನೇಹ ಬಯಸುತ್ತಾನೆ. ಆದರೆ ಸಂಬಂಧಗಳಲ್ಲಿ ಯಾವುದೇ ಅವಲಂಬನೆ ಅಥವಾ ಅಸಮಾನತೆಯನ್ನು ಒಪ್ಪದೆ.

ಮುಜೀಬ್ ತನ್ನ ದೇಶದ ರಾಜ್ಯತ್ವವನ್ನು ನಿರ್ಮಿಸಲು ಆಧರಿಸಿದ ನಾಲ್ಕು ಆದರ್ಶಗಳು ಅಥವಾ ತತ್ವಗಳಲ್ಲಿ, ಪ್ರಜಾಪ್ರಭುತ್ವ ಹಾಗೂ ಸಮಾಜವಾದ - ಈ ಎರಡು ಹೆಸರಿಗಾದರೂ ಉಳಿಯುತ್ತವೆಯೇ ಎಂಬುದು ಸಂದೇಹಾಸ್ಪದ. ಪ್ರಜಾಪ್ರಭುತ್ವ ಸ್ವತಃ ಮುಜೀಬರಿಂದಲೇ ನಾಶವಾಗಿರುವುದರಿಂದ ಈಗಿನ ಪ್ರಶ್ನೆ ಪ್ರಜಾಪ್ರಭುತ್ವದ ಉಳಿವಲ್ಲ, ಅದರ ಪುನರ್ ಚಾಲನೆ. ಸಮಾಜವಾದವಂತೂ ಬಂಗ್ಲಾದೇಶದಲ್ಲಿ, ಭಾರತದ ಕಾಂಗ್ರೆಸ್ಸಿನಲ್ಲಿದ್ದಂತೆ, ಒಂದು ಘೋಷಣೆ ಮಾತ್ರ, ಮತ್ತೇನೂ ಅಲ್ಲ.

ನಾನು ನಿನ್ನೆ ಊಹಿಸಿದಂತೆ, ರಷ್ಯ ಮತ್ತು ರಷ್ಯಾದ ಪತ್ರಿಕೆಗಳು ಮೌನ ವಹಿಸಿವೆ; ಇಲ್ಲವೇ ಅಡ್ಡಗೋಡೆ ಮೇಲೆ ದೀಪ ಇಟ್ಟಿವೆ. ಆದರೆ ನಾನು ಅಂದುಕೊಂಡಂತೆಯೇ, ಯೂರೋಪಿನ ಕಮ್ಯೂನಿಸ್ಟ್ ಪತ್ರಿಕೆಗಳು ಪ್ರತಿಕ್ರಿಯಿಸಿವೆ. L'humanite ಪತ್ರಿಕೆ ಅತ್ಯಂತ ಸ್ಪಷ್ಟವಾಗಿಯೇ ಹೇಳಿದೆ : ಬಂಗ್ಲಾದಲ್ಲಿ ನಡೆದಿರುವುದು CIA ಕೈವಾಡ. ಪೂರ್ವ ಐರೋಪ್ಯ ದೇಶಗಳ ಅಭಿಪ್ರಾಯಗಳು ವಿಭಿನ್ನವಾಗಿವೆ. ಕೆಲವು ಇದನ್ನು ಅಮೇರಿಕಾದ ರಹಸ್ಯ ನೆರವಿನ ಮೂಲಕ ನಡೆದಿರುವ ಬಲಪಂಥೀಯ

ಬಂಡಾಯ ಎಂದು ಸೂಚಿಸಿದ್ದರೆ, ಇತರ ಪತ್ರಿಕೆಗಳು ಚೀನಾದ ಬೆಂಬಲ ಪಡೆದ ತೀವ್ರವಾದಿಗಳ ಕೃತ್ಯ ಎಂದಿವೆ. ಯುಗೋಸ್ಲಾವಿಯಾ, ಮುಜೀಬ್ ಬದ್ಧವಾಗಿದ್ದ ಅಲಿಪ್ತ ನೀತಿಗೆ ಗ್ರಹಣ ಹಿಡಿಯಿತಲ್ಲಾ ಎಂದಷ್ಟೇ ವಿಷಾದಿಸಿದೆ. ನನಗೆ ಒದಗಿಸಲಾಗುವ Tribune* ನಲ್ಲಿ ಪಾಶ್ಚಿಮಾತ್ಯ ದೇಶಗಳ ಪ್ರತಿಕ್ರಿಯೆಗಳನ್ನು ವರದಿ ಮಾಡಿಲ್ಲ. ಅವರಿಗೇನೂ ಗೊತ್ತಾಗಿಲ್ಲ ಅಥವಾ ಅವರಿನ್ನೂ ಅನಿಶ್ಚಯ ಸ್ಥಿತಿಯಲ್ಲಿ ಇದ್ದಾರೆಂದು ಕಾಣುತ್ತದೆ. ಇಸ್ಲಾಮೀ ಗಣರಾಜ್ಯದ ಸುಳ್ಳುಸುದ್ದಿ ಹುಟ್ಟಿಸಿದ್ದು ಅಮೇರಿಕಾದ ಪತ್ರಿಕಾ ಸಂಸ್ಥೆಯೊಂದು. ಅಮೇರಿಕಾದವರು ಯಾವಾಗಲೂ ಏಕೆ ಇಂತಹ ಕುಚೇಷ್ಟೆಗೆ ಕೈಹಾಕುತ್ತಾರೆ? ಭಾರತೀಯ ಪತ್ರಿಕೆಗಳ ಪ್ರತಿಕ್ರಿಯೆಗಳನ್ನಿನ್ನೂ ನಾನು ನೋಡಿಲ್ಲ. ಮಿಕ್ಕ ಸುದ್ದಿಗ್ಗಳಂತೆ ಇವನ್ನೂ ಪೂರ್ವಪರೀಕ್ಷೆಗೆ ಒಳಪಡಿಸಬಹುದು. ಅಂದರೆ CIA ಕಡೆ ಬೊಟ್ಟು ಮಾಡುವ ಎಲ್ಲ ಪ್ರತಿಕ್ರಿಯೆಗಳನ್ನೂ ಪ್ರಕಟಿಸಲಾಗುವುದು. ಆದರೆ ಬಹುಶಃ ಸಮತುಲಿತ ಪ್ರತಿಕ್ರಿಯೆಗಳನ್ನು ತಡೆಯಬಹುದು. CIA ಮತ್ತು KGB ಎರಡೂ ಬಲಿಷ್ಠವಾಗಿದ್ದು, ಪ್ರಪಂಚದ ಎಲ್ಲೆಡೆಯಲ್ಲೂ ಸಕ್ರಿಯವಾಗಿವೆ. ಭಾರತದಲ್ಲಿ KGB ಜೋರಾಗಿ ಕೆಲಸ ಮಾಡುತ್ತಿದೆ ಎಂದೆನಿಸುತ್ತದೆ ; ಬಂಗ್ಲಾದೇಶದಲ್ಲಿ KGBಗಿಂತ CIA ಜೋರಾಗಿ ಕೆಲಸ ಮಾಡಿರುವ ಸಾಧ್ಯತೆ ಇದೆ. ನನ್ನ ಅಭಿಪ್ರಾಯದಲ್ಲಿ ಬಂಗ್ಲಾದೇಶದ ಪ್ರಕರಣ ಒಂದು ಆಂತರಿಕ ಘಟನೆ ಎಂಬುದಾದರೂ, ಅಲ್ಲಿನ ಸೇನಾಪಡೆಗಳು ಈ ಕ್ರೂರ ರೀತಿಯಲ್ಲೇಕೆ ಮುಜೀಬ್ ವಿರುದ್ಧ ಬಂಡೆದ್ದವು ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗಿದೆ. ಅಲ್ಲದೆ ಇಡೀ ಘಟನೆ ಇಷ್ಟು ಸುಗಮವಾಗಿ ಹೇಗೆ ನಡೆಯಿತು ಎಂಬುದೂ ಅರ್ಥವಾಗದ ವಿಷಯವಾಗಿದೆ. ದೇಶದಲ್ಲಿ ಬಹಳಷ್ಟು ರಕ್ತಪಾತವಾಗಿದೆ ಅಥವಾ ಸಶಸ್ತ್ರ ಪಡೆಗಳಲ್ಲಿ ಯಾವುದೋ ಒಳಜಗಳಗಳಿವೆ ಎಂದೇನೂ ಕಾಣುತ್ತಿರಲಿಲ್ಲ.

ಆಗಸ್ಟ್ 18

ಜನತಾ ಆಂದೋಲನದ ಬಗ್ಗೆ ನನ್ನ ಒಂದು ಆಲೋಚನೆಯನ್ನು ಪ್ರತಿದಿನ ಅಥವಾ ನನಗೆ ಹಾಗೆ ಮಾಡಬೇಕೆನಿಸಿದ ಯಾವುದೇ ದಿನ ಈ ಪುಟಗಳಲ್ಲಿ ಬರೆಯಲು ಉದ್ದೇಶಿಸಿರುವೆ. ಇವನ್ನೆಲ್ಲಾ ಒಟ್ಟಿಗೆ ಕೂಡಿಸಿದರೆ, ನನ್ನ ಆಂದೋಲನದ ಒಟ್ಟಾರೆ ಚಿತ್ರ ದೊರಕುತ್ತದೆ. ಈ ಟಿಪ್ಪಣಿಗಳನ್ನು ನಂತರ ಪುನರ್ವ್ಯವಸ್ಥೆಗೊಳಿಸಿ, ಸಂಪಾದಿಸಬೇಕಾಗಬಹುದು.

ವಿನೋಬಾಜಿ ತಮ್ಮ ಮೌನವನ್ನು ಸ್ವಲ್ಪಕಾಲ ಮುರಿದ ಸಂದರ್ಭದಲ್ಲಿ[20]

---

* ಸಿ.ಪಿ.ಐ. ಒಲವುಳ್ಳ ಪತ್ರಿಕೆ.

20. ಇದಾದದ್ದು 1975ರ ಮಾರ್ಚ್ 14ರಂದು ; 6ನೇ ಅಡಿಟಿಪ್ಪಣಿ ನೋಡಿ.

ನನಗೆ ಹೇಳಿದ ಒಂದು ಮಾತು ನೆನಪಿಗೆ ಬರುತ್ತಿದೆ. ನನ್ನ ಹೋರಾಟದ ಕಲ್ಪನೆ ಸರಿ ಎಂದು ಅವರು ಒಪ್ಪಿ, ಇದಕ್ಕೆ ನೆರವಾಗಲು ಮುಂದೆ ಬರಲು ಸಿದ್ಧರಾಗಿರುವುದಾಗಿ ಹೇಳಿದರಾದರೂ, ನಾನು ಸರ್ಕಾರದ ವಿರುದ್ಧ ಹೋರಾಟವನ್ನು ಕೈಬಿಡಬೇಕೆಂದು ಸೂಚಿಸಿದರು. ಈ ಹೋರಾಟಕ್ಕೆ ಅವರು ಎತ್ತಿದ ಆಕ್ಷೇಪಣೆ ಎಂದರೆ, ಪಾಕಿಸ್ತಾನದ ಮನೋವೃತ್ತಿ. ಪಾಕಿಸ್ತಾನಕ್ಕೆ ಅಮೇರಿಕಾದ ಶಸ್ತ್ರಾಸ್ತ್ರ ಪೂರೈಕೆ (ಶಸ್ತ್ರಾಸ್ತ್ರ ಪೂರೈಕೆಯ ದಿಗ್ಬಂಧನವನ್ನು ಎತ್ತಲಾಗಿರುವುದರಿಂದ) ಮತ್ತು ಪಾಕಿಸ್ತಾನದೊಂದಿಗೆ ಸ್ನೇಹ ಪ್ರದರ್ಶಿಸಲು ಚೀನಾ ಅಸಾಮಾನ್ಯ ರೀತಿಯಲ್ಲಿ ವರ್ತಿಸುತ್ತಿರುವ ದೃಷ್ಟಿಯಿಂದ ದೇಶಕ್ಕೆ ಯುದ್ಧದ ಬೆದರಿಕೆ ಇದೆ ಎಂಬುದು. ಸರ್ಕಾರ ವಿರೋಧೀ ಹೋರಾಟ ದೇಶವನ್ನು ದುರ್ಬಲಗೊಳಿಸಬಹುದು ಎಂದವರ ಅಭಿಪ್ರಾಯವಾಗಿತ್ತು. ಆದರೆ ಹೋರಾಟ, ಹೀಗೆ ಭಾರತೀಯ ಪ್ರಜಾಪ್ರಭುತ್ವದ ಕತ್ತು ಹಿಚುಕಿ ಹೋಗುವುದರಲ್ಲಿ ಕೊನೆಗೊಳ್ಳಬಹುದು ಎಂದು ವಿನೋಬಾಜಿ ಶಂಕಿಸಿರಲಿಲ್ಲ.

ಈ ಅಂಶ ಪ್ರಸ್ತುತ ಟಿಪ್ಪಣಿಗಳಿಗೆ ಒಳ್ಳೆಯ ಆರಂಭವಾಗಬಹುದು.

ಈ ಹೋರಾಟ, ಈ ಆಂದೋಲನದ ಗುರಿ ಸಂಪೂರ್ಣ ಕ್ರಾಂತಿ. ಅಂದರೆ ಸಾಮಾಜಿಕ ಜೀವನ ಹಾಗೂ ವ್ಯವಸ್ಥೆಗಳ ಎಲ್ಲ ಆಯಾಮಗಳಲ್ಲೂ ಕ್ರಾಂತಿ. ಕ್ರಾಂತಿ ಶಾಂತಿಯುತವಾಗಿದ್ದು ಇದ್ದಕ್ಕಿದ್ದಂತೆ ಅಥವಾ ಕ್ಷಿಪ್ರವಾಗಿ ನಡೆಯುವಂತಹುದಾಗಿರಲಿಲ್ಲ. ಅದು ಕೆಲಕಾಲ ತೆಗೆದುಕೊಳ್ಳುತ್ತದಾದರೂ, ಈಗ ಕ್ರಾಂತಿಯು ಪರ್ವಕಾಲವಾಗಿರುವುದರಿಂದ ಬಹಳ ಹೆಚ್ಚು ಕಾಲವನ್ನೂ ತೆಗೆದುಕೊಳ್ಳಲಾಗದು - ಬಹುಶಃ ಒಂದೆರಡು ದಶಕಗಳು. ಮೂಲಭೂತವಾದ ವ್ಯವಸ್ಥಾತ್ಮಕ ಬದಲಾವಣೆಗಳು ಮೊದಲು ನಡೆಯುತ್ತವೆ ; ನಂತರ ಹೆಚ್ಚಿನವು, ಮಾನಸಿಕ ಮಟ್ಟದ ವೈಯಕ್ತಿಕ ಹಾಗೂ ಸಾಮುದಾಯಿಕ ಪರಿವರ್ತನೆಯ ಪ್ರಯತ್ನಗಳಾಗಿರುತ್ತವೆ.

ಇದು ಇಷ್ಟನ್ನು ಸ್ಪಷ್ಟಪಡಿಸೀತು: ರಾಜಕೀಯ ವ್ಯವಸ್ಥೆಯ ಕ್ರಾಂತಿಕಾರಕ ಬದಲಾವಣೆ ಸಂಪೂರ್ಣ ಕ್ರಾಂತಿಯ ಮತ್ತು ಆ ಮೂಲಕ ಹೋರಾಟದ ಸಮಗ್ರ ಹಾಗೂ ಅನಿವಾರ್ಯವಾದ ಭಾಗವಾಗಿರುತ್ತದೆ.

ಪ್ರಾಯಶಃ ವಿನೋಬಾಜಿ, ರಾಜಕೀಯ ವ್ಯವಸ್ಥೆಯಲ್ಲಿ ಹೋರಾಟವಿಲ್ಲದೆಯೇ ಅಥವಾ ಶಾಂತಿಯುತ ಹೋರಾಟವೂ ಬೇಕಾಗದೆ ಬದಲಾವಣೆಯನ್ನು ತರಬಹುದೆಂದು ಭಾವಿಸಿದ್ದರು - ಈಗಲೂ ಕೂಡಾ ಭಾವಿಸಿರಬಹುದು. ಆದರೆ ಗ್ರಾಮಸ್ವರಾಜ್ಯ ಕಾರ್ಯಕ್ರಮದ ನನ್ನ ಒಂದು ವರ್ಷದ ಅನುಭವವು, ಈ ಕಾರ್ಯಕ್ರಮ ಕೇವಲ ಕಾಗದದ ಮೇಲೆ ಮಾತ್ರ ಇರದೆ ನಿಜವಾಗಿಯೂ ಜಾರಿಗೆ ಬಂದರೆ, ಸ್ವತಃ ಇದೇ (ಗ್ರಾಮ ಸ್ವರಾಜ್ಯ) ಅಮೂಲ್ಯ ರಾಜಕೀಯ ಸಂಸ್ಥೆಯಾಗಬಲ್ಲದು ಎಂದು ನನಗೆ ಮನವರಿಕೆ ಮಾಡಿದೆ. ಆದರೆ ಗ್ರಾಮ ಸ್ವರಾಜ್ಯ ಆಂದೋಲನ, ವ್ಯವಸ್ಥಿತ ರಾಜಕೀಯ

ಕ್ರಾಂತಿಯನ್ನು ತರುವಷ್ಟು ಸಮರ್ಥವಾಗಿರಲಿಲ್ಲ, ಏಕೆ ಸಮರ್ಥವಾಗಿರಲಿಲ್ಲ ಎನ್ನುವುದಕ್ಕೆ ಯಾವುದೇ ಸೈದ್ಧಾಂತಿಕ ಕಾರಣ ಕಂಡುಬರುವುದಿಲ್ಲ. ಗ್ರಾಮ ಸ್ವರಾಜ್ಯದ ಆಧಾರದ ಮೇಲೆ ಹೊಸ ಸಾಮಾಜಿಕ ಸಮಷ್ಠಿಯೊಂದು ಮೂಡಿ, ಈಗಿನ ವ್ಯವಸ್ಥೆಯನ್ನು ಹೇಗೆ ಬದಲಾಯಿಸಬಲ್ಲುದು ಎಂಬುದನ್ನು ನಾನು ಎಷ್ಟು ನೂರಾರು - ಸಾವಿರಾರು ಇದ್ದರೂ ಇರಬಹುದು - ಸಭೆಗಳಲ್ಲಿ ವಿವರಿಸಿದ್ದೇನೋ ಗೊತ್ತಿಲ್ಲ. ನನ್ನ ಈ ವಿವರಣೆ - ವಿಚಾರಗಳಲ್ಲಿ, ಈಗ ನನ್ನನ್ನು ಕಟುವಾಗಿ ಟೀಕಿಸುತ್ತಿರುವವರೂ ಸೇರಿದಂತೆ, ನನ್ನ ಸರ್ವೋದಯ ಸಹಕಾರ್ಯಕರ್ತರಲ್ಲಿ ಯಾರೊಬ್ಬರೂ, ಎಂದಾದರೂ ತಪ್ಪು ಕಂಡುಹಿಡಿದಿದ್ದು ನನ್ನ ನೆನಪಿನಲ್ಲಿಲ್ಲ (ಗ್ರಾಮ ಸ್ವರಾಜ್ಯದ) ಮಾದರಿಯನ್ನು ನಿರ್ಮಿಸಲು ಜಿಲ್ಲೆಗಳನ್ನು ತೆಗೆದುಕೊಳ್ಳಲಾಯಿತು : ನಂತರ ಸಾಮುದಾಯಿಕ ಅಭಿವೃದ್ಧಿ (CD) ವಿಭಾಗಗಳನ್ನೂ ಸಹ. ಆದರೆ ಎಲ್ಲೂ ಯಶಸ್ಸನ್ನು ಸಾಧಿಸಲಾಗಲಿಲ್ಲ.

ಸಂಪೂರ್ಣ ಕ್ರಾಂತಿಯ ಧ್ಯೇಯೋದ್ದೇಶಗಳನ್ನು ನಾವು ವಿಶಾಲವಾದ ಹಾಗೂ ತಾತ್ವಿಕವಾದ ಸರ್ವೋದಯದ ದೃಷ್ಟಿಯಿಂದ (ಎಂದೂ ಇದನ್ನು ಒಪ್ಪಿಲ್ಲವಾದರೂ) ನೋಡಿದ್ದಲ್ಲಿ ಬಿಹಾರದಲ್ಲಿನ 'ಗ್ರಾಮಜನ - ಸಂಘರ್ಷ ಸಮಿತಿ'ಗಳು ಗ್ರಾಮಸ್ವರಾಜ್ಯದ ಕೆಲಸವನ್ನೇ ಮಾಡುತ್ತಿರುವುದನ್ನು ಮತ್ತು ಅವು ಕೇವಲ ಕಾಗದದ ಮೇಲೆ ಮಾತ್ರವಿರದೆ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಕಾಣಬಹುದಾಗಿದೆ. ಹೋರಾಟ ಆಳವಾಗಿ ಬೇರೂರುತ್ತಿದ್ದಂತೆ, ಹೆಚ್ಚೆಚ್ಚು ಸಮಿತಿಗಳು ಸಕ್ರಿಯವಾಗತೊಡಗಿ, ನಿಜವಾದ ಜನತಾ ಸರ್ಕಾರಗಳಾಗಿ (ಗ್ರಾಮ ಮಟ್ಟದಲ್ಲಿ) ಅಭಿವೃದ್ಧಿಗೊಳ್ಳುತ್ತಿದ್ದವು. ಭೂದಾನದೊಂದಿಗೆ ಆರಂಭವಾಗಿ ಗ್ರಾಮದಾನದ ಮೂಲಕ ಹಾದು ಹೋದ ಗ್ರಾಮ ಸ್ವರಾಜ್ಯ ಆಂದೋಲನವು ಇಂದು ನಾವು ಕಾಣುತ್ತಿರುವ ನಿಷ್ಕ್ರಿಯ ಸ್ಥಿತಿಯನ್ನು ಮುಟ್ಟಬೇಕಾದರೆ 20 ವರ್ಷಗಳನ್ನು ತೆಗೆದುಕೊಂಡಿದೆ!

ಹಾಗೆ ನೋಡಿದರೆ, ಗ್ರಾಮಜನ ಸಂಘರ್ಷ ಸಮಿತಿಗಳು ಕೆಲವೇ ತಿಂಗಳುಗಳ ಹಿಂದೆ ಜನ್ಮ ತಳೆದುದಾದರೂ, ಹಲವಾರು ಸ್ಥಳಗಳಲ್ಲಿ ಅವು ಗ್ರಾಮ ಸ್ವರಾಜ್ಯಕ್ಕಿಂತ ಎಷ್ಟೋ ಹೆಚ್ಚು ವಾಸ್ತವಿಕವಾಗಿದ್ದವು. ಇದಕ್ಕೆ ನನಗೆ ತೋರುವ ಕಾರಣವೆಂದರೆ, ಹೋರಾಟದ ವಾತಾವರಣ. ಇಂತಹ ವಾತಾವರಣದಲ್ಲಿ ಜನರನ್ನು ಆಕರ್ಷಿಸಿ, ಸವಾಲುಗಳನ್ನು ಒಪ್ಪಿಕೊಳ್ಳುವಂತೆ ಮತ್ತು ತಮ್ಮನ್ನು ಬದಲಾವಣೆಗೆ ಒಳಪಡಿಸಿಕೊಳ್ಳುವಂತೆ ಹಾಗೂ ಇತರರನ್ನು ಒಳಪಡಿಸುವಂತೆ ಪ್ರಚೋದಿಸುವ ಮಾನಸಿಕ ಶಕ್ತಿಗಳು ನಿರ್ಮಾಣವಾಗುತ್ತವೆ. ಗ್ರಾಮ ಸ್ವರಾಜ್ಯ ಕಾರ್ಯ ನಿರ್ವಹಿಸುತ್ತಿದ್ದ ನಿರಾಸಕ್ತ ವಾತಾವರಣದಲ್ಲಿ ಇಂತಹ ಮಾನಸಿಕ ಶಕ್ತಿಗಳು ನಿಶ್ಚಲವಾಗಿ ಉಳಿದುಹೋದುವು. ವಿನೋಬಾಜಿಯ ಆಧ್ಯಾತ್ಮಿಕ ಹಾಗೂ ನೀತಿಪೂರ್ಣವಾದ ಮನವಿಗಳು ಮತ್ತು ಸಾತ್ವಿಕ ಪ್ರಭಾವವು ಕೆಲವು ವ್ಯಕ್ತಿಗಳಲ್ಲಿ ಕೆಲವು ಗಮನಾರ್ಹ ನೈತಿಕ ಬದಲಾವಣೆಗಳನ್ನು ಉಂಟುಮಾಡಿದ್ದೂ ನಿಜ. ಆದರೆ ಅವರೆಂದೂ ಸಾಮಾಜಿಕ

ಅಥವಾ ಮಾನಸಿಕ ಶಕ್ತಿಗಳಾಗಿ ಹೊರಹೊಮ್ಮಲಿಲ್ಲ. ಸಾವಿರಾರು ಜಮೀನ್ದಾರರು ತಮ್ಮ ಭೂಮಿಯನ್ನು ದಾನ ಮಾಡಿದ ಭೂದಾನ ಚಳವಳಿಯ ಸಮಯದಲ್ಲಿ, ಕೆಲವರಿಗೇ ಸೀಮಿತವಾಗದ, ನಿಜವಾಗಿಯೂ ವ್ಯಾಪಕವಾದ ನೈತಿಕ ಬಲವೊಂದು ನಿರ್ಮಾಣವಾಯಿತು ಎಂದು ಹೇಳಲಾಗುತ್ತದೆ. ಬಹುಶಃ ಇದು ನಿಜ ಕೂಡಾ. ಆದರೆ ಇದು ಅಲ್ಪಕಾಲಿಕವಾಗಿದ್ದದ್ದು; ಅಸಂಖ್ಯಾತ ದಾನಿಗಳು ಸ್ವಲ್ಪಕಾಲದ ನಂತರ ತಾವು ಕೊಟ್ಟಿದುದನ್ನು ಹಿಂತೆಗೆದುಕೊಂಡರು. ಆ ನೈತಿಕ ಬಲ ಸ್ವಲ್ಪ ಕಾಲದಲ್ಲಿಯೇ ಬತ್ತಿಹೋಯಿತು - ವಿನೋಬಾಜಿ ಇನ್ನೂ ಕಾರ್ಯಕ್ಷೇತ್ರದಲ್ಲಿದ್ದರೂ ಕೂಡಾ. ಗ್ರಾಮದಾನ ಪದಾರ್ಪಣ ಮಾಡಿದಾಗಲಂತೂ ಆ ಬಲ ಸಂಪೂರ್ಣವಾಗಿ ಮಾಯವಾಯಿತು. ಭೂಮಿ ಹಾಗೂ ಆಸ್ತಿಯನ್ನು ಕುರಿತ ಕೆಲವು ಕಲ್ಪನೆಗಳು ತಾತ್ವಿಕವಾಗಿ ಉಳಿದುವಾದರೂ, ಜನಮಾನ್ಯ ಕಲ್ಪನೆಗಳಾಗಿ ಉಳಿಯಲಿಲ್ಲ. ಇವು ಜನಮಾನ್ಯ ಕಲ್ಪನೆಗಳಾಗಿಯೇನಾದರೂ ಉಳಿದಿದ್ದಲ್ಲಿ, ಅವು ಸಾಮಾಜಿಕ ಬದಲಾವಣೆಯ ಅದ್ಭುತ ಶಕ್ತಿಗಳಾಗಿ ಪರಿಣಮಿಸಿರುತ್ತಿದ್ದವು.

ಆದರೆ ಮೇಲಿನ ವಿಚಾರದಿಂದ, ಯಾವಾಗ ಬೇಕಾದರೂ ಹೋರಾಟದ ವಾತಾವರಣವನ್ನು ಸೃಷ್ಟಿಸಿಬಿಡಬಹುದು ಎಂಬ ತೀರ್ಮಾನಕ್ಕೆ ಬರಲಾಗದು. ಯುವಜನರು, ವಿದ್ಯಾರ್ಥಿಗಳು ಹಾಗೂ ಬುದ್ಧಿಜೀವಿಗಳೂ ಸೇರಿದಂತೆ - ಕೊನೆಯವರು ಬಹಳ ಮುಖ್ಯರು - ಜನರು(ಸರ್ಕಾರದಿಂದ ಹಿಡಿದು ಕಾಲೇಜು ಅಧಿಕಾರ ವರ್ಗದವರೆಗೆ) ಸಾರ್ವತ್ರಿಕವಾಗಿ ಅತೃಪ್ತಿ, ಹತಾಶೆ, ನಿರಾಶೆಗಳಿಗೆ ಒಳಪಟ್ಟಿದ್ದು ಅಧಿಕಾರ ವ್ಯವಸ್ಥೆಯಿಂದ ದೂರವಾಗಿದ್ದಾಗ ಮಾತ್ರ ಹೋರಾಟಕ್ಕೆ ಪರಿಸ್ಥಿತಿ ಪಕ್ವವಾಗಿರುತ್ತದೆ. ಹೋರಾಟ ಹಿಂಸೆಯಲ್ಲಿ ಸ್ಫೋಟಗೊಳ್ಳಬಹುದು, ಅಥವಾ ಶಾಂತಿಪೂರ್ಣ ರೂಪವನ್ನು ಪಡೆಯಬಹುದು. ಕ್ರಾಂತಿಕಾರೀ ಬದಲಾವಣೆಗಳಿಗಾಗಿ ಶಾಂತಿಯುತವಾದ ಜನತಾ ಹೋರಾಟ ಬೇರೆಲ್ಲಿಗಿಂತ ಗಾಂಧೀಜಿಯ ಭಾರತದಲ್ಲಿ ಹೆಚ್ಚು ಸಮ್ಮತಾರ್ಹವಾದದ್ದು ಮತ್ತು ಇದು ಕ್ರಾಂತಿಕಾರೀ ಕಾರ್ಯಕರ್ತರ ಕಣ್ಣಿಗೆ ಬರೀ ಬಡಾಯಿಯಾಗಿ ಕಾಣಲಾರದು ಎಂಬುದನ್ನು ಇಲ್ಲಿ ಸೂಚಿಸುವುದು ಅನಗತ್ಯ. ಹಿಂಸಾತ್ಮಕವೋ, ಶಾಂತಿಯುವೋ - ಅಂತೂ ಈ ಎರಡೂ ಸಂದರ್ಭಗಳಲ್ಲಿ, ಕ್ರಾಂತಿಕಾರೀ ವಾತಾವರಣದಿಂದ ಕ್ರಾಂತಿಕಾರೀ ಆಂದೋಲನವೊಂದನ್ನು ರೂಪಿಸುವುದಕ್ಕೆ ಅಗತ್ಯವಾದ ನಾಯಕತ್ವ ಹಾಗೂ ಸಂಘಟನೆ ಇರದಿದ್ದಲ್ಲಿ ಕ್ರಾಂತಿಕಾರೀ ಪರಿಸ್ಥಿತಿ ಅರಾಜಕತೆ ಅಥವಾ ಸರ್ವಾಧಿಕಾರದ ಹೇರಿಕೆಯಲ್ಲಿ ಕೊನೆಗೊಳ್ಳಬಹುದು.

ಆಗಸ್ಟ್ 21

ಮೂರು ದಿನಗಳ ನಂತರ ಮತ್ತೆ ಬರೆಯುತ್ತಿರುವೆ. ವಿದ್ಯಾರ್ಥಿಗಳ ಆಂದೋಲನವನ್ನು, ವ್ಯಾಪಕವಾದ ಧ್ಯೇಯಗಳಿಗಾಗಿ ಶಾಂತಿಯುತವಾದ ಜನತಾ

ಆಂದೋಲನವನ್ನಾಗಿ ಪರಿವರ್ತಿಸುವ ಅವಕಾಶ ಒದಗಿಸಿತು. ಅದೆಂದರೆ ಸಂಪೂರ್ಣ ಕ್ರಾಂತಿ. ಇಲ್ಲಿ ಎರಡು ಅಂಶಗಳನ್ನು ಸ್ಪಷ್ಟಪಡಿಸುವುದು ಅಗತ್ಯ. ಒಂದೆಂದರೆ, ಬಿಹಾರ ಆಂದೋಲನದ ಆರಂಭದಲ್ಲಿ, ನನ್ನ ಯಾವುದೇ ನಿರ್ದಿಷ್ಟ ಅಥವಾ ನೇರ ಪ್ರಭಾವವಿರಲಿಲ್ಲ. 1973ರ ಡಿಸೆಂಬರ್‌ನಲ್ಲಿ ನಾನು ಯುವಜನರಿಗೆ ಮಾಡಿದ ಮನವಿಯ ನಂತರ[21] ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಬಗ್ಗೆ ಹೆಚ್ಚು ಗಮನವಿಟ್ಟಿದ್ದೆ ಮತ್ತು ಸುಮಾರಾಗಿ ದೊಡ್ಡದಾಗಿದ್ದ ವಿದ್ಯಾರ್ಥಿ ಸಭೆಗಳನ್ನು ಉದ್ದೇಶಿಸಿ ಪಟ್ನಾ ವಿಶ್ವವಿದ್ಯಾಲಯ ಆವರಣದಲ್ಲಿ ಎರಡು ಬಾರಿ ಮಾತನಾಡಿದ್ದೆ - ಎರಡೂ ಸಭೆಗಳ ಅಧ್ಯಕ್ಷತೆಯನ್ನು ವಿದ್ಯಾರ್ಥಿ ಸಂಘಗಳ ಅಧ್ಯಕ್ಷರು ವಹಿಸಿದ್ದುದೂ ನಿಜ. ನಾನು ಉತ್ತರ ಪ್ರದೇಶದ ಹಲವಾರು ವಿಶ್ವವಿದ್ಯಾಲಯ ಕೇಂದ್ರಗಳಲ್ಲೂ ಮಾತನಾಡಿ, ಮುಂಬರುವ ವಿಧಾನಸಭಾ ಚುನಾವಣೆಗಳ ದೃಷ್ಟಿಯಿಂದ ನನ್ನ ಮನವಿಯ ಒಂದು ನಿರ್ದಿಷ್ಟ ಅರ್ಥವನ್ನು ಅವರಿಗೆ ವಿವರಿಸಿದ್ದೆ. ಈ ಸಭೆಗಳಲ್ಲಿ ನಾನಾಡಿದ ಕೆಲವು ಮಾತುಗಳು - ಉದಾಹರಣೆಗೆ 1942ರ ಚಳವಳಿಯನ್ನು* ಕಣ್ಣಿಗೆ ಕಟ್ಟಿದಂತೆ ಚಿತ್ರಿಸಿದ್ದು - ಹಲವಾರು ವಿದ್ಯಾರ್ಥಿಗಳ ಹೃದಯವನ್ನು ಮುಟ್ಟಿದವು. ಗುಜರಾತ್ ವಿದ್ಯಾರ್ಥಿ ಆಂದೋಲನದ ಆರಂಭಕ್ಕೆ ಮುನ್ನ ನಾನೇನೂ ಆ ರಾಜ್ಯಕ್ಕೆ ಹೋಗಿರಲಿಲ್ಲವಾದರೂ, ಅಲ್ಲಿನ ಕೆಲವು ಪ್ರಮುಖ ನಾಯಕರು ನಾನು ತೋರಿಸಿದ್ದ ಹಾದಿಯಲ್ಲಿ ಮುನ್ನಡೆಯುತ್ತಿರುವುದಾಗಿ ತಿಳಿಸಿದರು.

ಇದಕ್ಕೂ ಮುನ್ನ ರಾಜಕೀಯ ಭ್ರಷ್ಟಾಚಾರದ ಬಗ್ಗೆ (ಪಕ್ಷ, ಸರ್ಕಾರ, ಆಡಳಿತ) ಕಟುವಾಗಿ ಮಾತನಾಡಿದ್ದೆ ಮತ್ತು ಅದನ್ನು ತಡೆಯುವ ಮಾರ್ಗಗಳನ್ನು ಮತ್ತು ಚುನಾವಣಾ ಕಾನೂನು ಹಾಗೂ ವಿಧಾನಗಳನ್ನು ಸುಧಾರಣೆಗೆ ಒಳಪಡಿಸಬೇಕಾದ ಅಗತ್ಯವನ್ನು ಸೂಚಿಸಿದ್ದೆ. ಈ ಅಂಶಗಳ ಬಗ್ಗೆ ಚರ್ಚಿಸಲೆಂದೇ 1973ರಲ್ಲಿ ಪ್ರಧಾನಮಂತ್ರಿಯನ್ನು ಎರಡುಬಾರಿ ಭೇಟಿ ಮಾಡಿದ್ದೆ ; ಎರಡು ಬಾರಿಯೂ ಖೇದಗೊಂಡು, ನಿರಾಶನಾಗಿ ಬಂದುಬಿಟ್ಟಿದ್ದೆ. ಆ ನಂತರವೇ ನಾನು ಯಾವುದರಡಿಯಲ್ಲಿ ಸಿಕ್ಕಿ ಈಗ ನರಳುತ್ತಿದ್ದೇವೆಯೋ ಆ ಭ್ರಷ್ಟ ವ್ಯವಸ್ಥೆಯಿಂದ ವಿಮುಕ್ತರಾಗಬೇಕಾದರೆ ಸ್ವತಃ ಜನತೆಯೇ ಹೋರಾಟವನ್ನು - ಅದು ಶಾಂತಿಯುತವಾಗಿರಬೇಕು ಕೂಡಾ - ನಡೆಸಬೇಕೆಂದು ಘೋಷಿಸಿ ಲೇಖನವೊಂದನ್ನು ಬರೆದಿದ್ದು, ಭ್ರಷ್ಟಾಚಾರವಲ್ಲದೆ ಹಸಿವು, ನಿರುದ್ಯೋಗ, ಹಣದುಬ್ಬರ, ಹಲವಾರು ರೀತಿಯ ಸಾಮಾಜಿಕ ಮತ್ತು ಆರ್ಥಿಕ ಅನ್ಯಾಯ ಮತ್ತು ಮೊದಲನೆಯದಾಗಿ ತಮ್ಮ ಹೆಚ್ಚಿನ ಮಕ್ಕಳನ್ನು ಅಶಿಕ್ಷಿತರನ್ನಾಗಿ ಉಳಿಸಿದ ಮತ್ತು ಎರಡನೆಯದಾಗಿ ಮಿಕ್ಕವನ್ನು ದುಶಿಕ್ಷಿತರನ್ನಾಗಿ

---

21. ಜೆ.ಪಿ. 1973ರ ಡಿಸೆಂಬರ್ 11ರಂದು ಪೌನಾರ್‌ನಲ್ಲಿರುವ ವಿನೋಬಾ ಅವರ ಆಶ್ರಮದಲ್ಲಿ ಈ ಮನವಿಯನ್ನು ಸಿದ್ಧಪಡಿಸಿದರು. ಇದನ್ನು ಕುಸುಮ ದೇಶಪಾಂಡೆ ವಿನೋಬಾ ಅವರಿಗೆ ತೋರಿಸಿದಾಗ ಅವರು ಅದನ್ನು ಅನುಮೋದಿಸಿದರು.

* 'ಭಾರತ ಬಿಟ್ಟು ತೊಲಗಿ' ಚಳವಳಿ.

(miseducated) ಮಾಡಿದ ಶಿಕ್ಷಣದಲ್ಲಿನ ನಿರುಪಯುಕ್ತ ದರ್ಜೆ ನೀಡುವ ವ್ಯವಸ್ಥೆಯ ವಿರುದ್ಧ ಸಹ ಹೋರಾಟ ನಡೆಯಬೇಕು ಎಂದು ಹೇಳಿದ್ದು, ತಮ್ಮ ಸಮಸ್ಯೆಗಳನ್ನು ತಾವೇ ಎದುರಿಸಲು ಕ್ರಿಯಾಶೀಲರಾಗಬೇಕೆಂದು ಜನತೆಗೆ ಹಾಗೂ ವಿದ್ಯಾರ್ಥಿ ಸಮುದಾಯಕ್ಕೆ ಕೊಟ್ಟ ಕರೆಗಳ ಈ ಹಿನ್ನೆಲೆಯಲ್ಲೇ ಗುಜರಾತ್ ಹಾಗೂ ಬಿಹಾರಗಳೆರಡರಲ್ಲೂ ವಿದ್ಯಾರ್ಥಿ ಚಳುವಳಿ ರೂಪುಗೊಂಡಿದ್ದು.

ಅಂತೂ ಹೇಗೋ, ಕೆಲವೇ ತಿಂಗಳುಗಳಲ್ಲಿ ವಿದ್ಯಾರ್ಥಿ ಸಮುದಾಯ ಹಾಗೂ ನನ್ನ ನಡುವೆ ಒಂದು ವಿಚಿತ್ರ ರೀತಿಯ ಬಾಂಧವ್ಯ ಸ್ಥಾಪಿತವಾಯಿತು ಎಂಬುದಂತೂ ನಿಜ.

ಎರಡನೆಯದು: 1974ರ ಜೂನ್ 5ರಂದು ಗಾಂಧಿ ಮೈದಾನದಲ್ಲಿ (ಪಾಟ್ನಾ) ಸೇರಿದ್ದ ನಗರದ ವಿದ್ಯಾರ್ಥಿಗಳು ಹಾಗೂ ನಾಗರಿಕರ ಬೃಹತ್ ಸಭೆಯ ಮುಂದೆ - ಇದು ನಡೆದದ್ದು ಬೇಡಿಕೆಗಳನ್ನು ರಾಜ್ಯಪಾಲರಿಗೆ ಸಲ್ಲಿಸಲು ರಾಜಭವನಕ್ಕೆ ಮೆರವಣಿಗೆ ನಡೆಸಿದ ನಂತರ - ಬಿಹಾರ ಆಂದೋಲನವು 12 ಮೂಲ ಬೇಡಿಕೆಗಳು ಮತ್ತು ಮಾರ್ಚ್ 18ರ ನಂತರ ಸೇರಿಸಲಾದ ಇತರ ಕೆಲವು ಬೇಡಿಕೆಗಳಿಗೆ (ಅತಿ ಪ್ರಮುಖ ಬೇಡಿಕೆ ಎಂದರೆ ಮಂತ್ರಿಮಂಡಳವನ್ನು ಕೆಳಗಿಳಿಸಿ ವಿಧಾನ ಸಭೆಯನ್ನು ವಿಸರ್ಜಿಸಬೇಕೆಂಬುದು) ಸೀಮಿತವಾದ ವಿದ್ಯಾರ್ಥಿ ಆಂದೋಲನವಾಗಿ ಮಾತ್ರ ಉಳಿಯದೆ, ಸಂಪೂರ್ಣ ಕ್ರಾಂತಿ ಸಾಧನೆಯೇ ಈ ಆಂದೋಲನ ಅಥವಾ ಹೋರಾಟದ ಅಂತಿಮ ಧ್ಯೇಯಗಳಾಗಿವೆ ಎಂದು ನಾನು ಘೋಷಿಸಿದೆ. ಆಗ ಇಡೀ ಬೃಹತ್ ಸಭೆ ಮುಗಿಲು ಮುಟ್ಟುವ ಹರ್ಷೋದ್ಗಾರ ಹಾಗೂ ಕರತಾಡನ ಮಾಡಿ, ಹೋರಾಟಕ್ಕೆ ವಿದ್ಯಾರ್ಥಿಗಳು ಮಾತ್ರವಲ್ಲದೆ ಸಾರ್ವಜನಿಕರೂ ಸಹಜ ಉತ್ಸಾಹಪೂರಿತ ಅನುಮೋದನೆಯ ಮುದ್ರೆಯೊತ್ತಿದರು. ಆಂದೋಲನದ ಬಗ್ಗೆ ಸ್ಪಷ್ಟನೆ ಹಾಗೂ ವಿವರಣೆ ನೀಡಬೇಕೆಂದು ವಿದ್ಯಾರ್ಥಿಮಿತ್ರರು ಹಾಗೂ ಸಹ ಕಾರ್ಯಕರ್ತರು ಪದೇ ಪದೇ ಕೋರುತ್ತಿದ್ದರಾದರೂ ಎಂದೂ ಯಾರೂ ನಮ್ಮ ಅಂತಿಮಗುರಿಗೆ ವಿರೋಧವನ್ನು ಕಿಂಚಿತ್ತೂ ಸೂಚಿಸಲಿಲ್ಲ. ನನ್ನ ಮಿತ್ರರು ಕೋರಿದ ಸ್ಪಷ್ಟ ಚಿತ್ರಣ ಹಾಗೂ ವಿವರಣೆಗಳನ್ನು ನಾನು ಅವರೊಂದಿಗೆ ನಡೆಸಿದ ಚರ್ಚೆಗಳಲ್ಲಿ ಹಾಗೂ ನನ್ನ ಸಾರ್ವಜನಿಕ ಭಾಷಣಗಳಲ್ಲಿ ಮಂಡಿಸಿದೆ ; ಇದೆಲ್ಲವೂ 'ಸಂಪೂರ್ಣ ಕ್ರಾಂತಿ' ಶೀರ್ಷಿಕೆಯ ಕರಪತ್ರವೊಂದರಲ್ಲಿ ಪ್ರಕಟವಾಗಿದೆ (ಈ ಬಗ್ಗೆ ಮುಂದೆ ಸಂಕ್ಷಿಪ್ತವಾಗಿ ವಿವರಿಸುವೆ). ಸಂಪೂರ್ಣ ಕಾಂತ್ರಿಯ ಮೂಲ ಆಶಯವಾದ ಸರ್ವವ್ಯಾಪ್ತೀ ಸಾಮಾಜಿಕ ಕ್ರಾಂತಿ ಇಲ್ಲದೆಯೇ, ವಿದ್ಯಾರ್ಥಿಗಳ ಸೀಮಿತ ಬೇಡಿಕೆಗಳು ಸಹ - ಭ್ರಷ್ಟಾಚಾರದ ನಿರ್ಮೂಲನೆ, ನಿರುದ್ಯೋಗ ಪರಿಹಾರ, 'ಶೈಕ್ಷಣಿಕ ಕ್ರಾಂತಿ' ಮುಂತಾದವು - ಸಂಪೂರ್ಣವಾಗಿ ಈಡೇರುವ ಸ್ಥಿತಿಯಿರಲಿಲ್ಲ ಎಂದಷ್ಟೇ ಇಲ್ಲಿ ಹೇಳಿದರೆ ಸಾಕೆಂದು ಕಾಣುತ್ತದೆ. ಅಲ್ಲದೆ ನಾನು ಇದನ್ನೂ (ಹಿಂದಿನ ವಾಕ್ಯದ ಅಂತರ್ಯವೂ ಇದೇ

ಆಗಿದೆ) ಸೂಚಿಸಿದ್ದೆ : ಮಂತ್ರಿಮಂಡಲವೊಂದರ ರಾಜೀನಾಮೆ ಅಥವಾ ವಿಧಾನಸಭೆಯೊಂದರ ವಿಸರ್ಜನೆ ಮಾತ್ರದಿಂದಲೇ ಏನೂ ಸಾಧನೆಯಾಗಲಾರದು ; ಅಗತ್ಯವಾಗಿದ್ದುದು, ಉತ್ತಮವಾದ ಒಂದು ರಾಜಕೀಯ ವ್ಯವಸ್ಥೆ.

ಈ ಸಂದರ್ಭದಲ್ಲಿ ಒಂದಿಷ್ಟು ವೈಯಕ್ತಿಕ ವಿಷಯವನ್ನು ತಿಳಿಸುವುದೂ ಸೂಕ್ತವೆನಿಸುತ್ತದೆ. ನನ್ನ ಪ್ರೌಢಶಾಲಾ ದಿನಗಳಲ್ಲೇ ಕ್ರಾಂತಿಯ ತಿಗಣೆ ನನ್ನನ್ನು ಕಚ್ಚಿತ್ತು. ಆಗ ಅದು ರಾಷ್ಟ್ರೀಯ ಕ್ರಾಂತಿಯ, ರಾಷ್ಟ್ರೀಯ ಸ್ವಾತಂತ್ರ್ಯದ ತಿಗಣೆ. ಅಸಹಕಾರಕ್ಕಾಗಿ ಗಾಂಧೀಜಿ ಕೊಟ್ಟ ಕರೆಗೆ ನಾನೂ ಓಗೊಟ್ಟಿದ್ದು ಈ ತಿಗಣೆಯ ಪರಿಣಾಮವೇ. ನನ್ನ ಅಸಹಕಾರದ ಒಂದು ವರ್ಷ ಎಂಟು ತಿಂಗಳ ನಂತರ ಅಸಹಕಾರ ಚಳುವಳಿ ಪೇಲವವಾಗತೊಡಗಿದಾಗಲೇ ನಾನು ಅಮೇರಿಕಾಕ್ಕೆ ಹೋಗಿದ್ದು. ನಾನು ನನ್ನ ಅಧ್ಯಯನವನ್ನು ಮುಂದುವರಿಸಲು ಇಷ್ಟಪಟ್ಟೆನಾದರೂ ಬ್ರಿಟಿಷ್ ವಿಶ್ವವಿದ್ಯಾನಿಲಯಗಳಿಗೆ, ಕೊನೆಗೆ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯಕ್ಕೂ ಹೋಗಲು ನನಗೆ ಮನಸ್ಸಾಗಲಿಲ್ಲ : ಆಗಿದ್ದ ವಿದ್ಯಾಪೀಠಗಳು ವಿಜ್ಞಾನದ ವಿದ್ಯಾರ್ಥಿಗಳಿಗೆ ಸೂಕ್ತ ಸೌಲಭ್ಯಗಳನ್ನು ಒದಗಿಸುವ ಸ್ಥಿತಿಯಲ್ಲಂತೂ ಇರಲಿಲ್ಲ. ನಾನು ವಿಜ್ಞಾನದ ವಿದ್ಯಾರ್ಥಿಯಾಗಿದ್ದೆ ಮತ್ತು ನನ್ನ ಪ್ರೌಢಶಾಲಾ ದಿನಗಳಲ್ಲಿ ಸ್ವಾಮಿ ಸತ್ಯದೇವ ಪರಿವ್ರಾಜಕರ ಭಾಷಣ ಹಾಗೂ ಬರಹಗಳಿಂದ, ಸಾಧಾರಣ ಕುಟುಂಬಗಳ ವಿದ್ಯಾರ್ಥಿಗಳೂ ಸಹ ಅಮೆರಿಕನ್ ವಿಶ್ವವಿದ್ಯಾಲಯಗಳಲ್ಲಿ "ಕಷ್ಟಪಟ್ಟು" ಓದಬಹುದು, ಅಂದರೆ ಒಟ್ಟಿಗೇ ದುಡಿಯುವ ಮತ್ತು ಓದುವ ಸೌಲಭ್ಯವಿದೆ ಎಂದು ತಿಳಿದಿದ್ದೆ. ಕ್ರಾಂತಿಯ ತಿಗಣೆ ನನ್ನನ್ನು ಮಾರ್ಕ್ಸ್‌ವಾದದ ಕಡೆ ಕೊಂಡೊಯ್ಯಿತು ; ನಂತರ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯ ಮೂಲಕ ಪ್ರಜಾಸತ್ತಾತ್ಮಕ ಸಮಾಜವಾದದ ಕಡೆಗೆ ತಿರುಗಿ, ತದನಂತರ ವಿನೋಬಾಜಿಯವರ ಪ್ರೇಮಮಾರ್ಗದ ಅಹಿಂಸಾತ್ಮಕ ಕ್ರಾಂತಿಗೆ ನನ್ನನ್ನು ಮುಟ್ಟಿಸಿತು. ನಾನು ವಿನೋಬಾಜಿಯವರನ್ನು ಸೇರುವ ಮುನ್ನ, ಅವರೊಂದಿಗೆ ಚರ್ಚೆ ನಡೆಸಿ ಅವರ ಕಳಕಳಿ ಕೇವಲ ಭೂಮಿಯನ್ನು ವಿತರಿಸುವುದಕ್ಕೆ ಮಾತ್ರ ಸೀಮಿತವಾಗಿರದೆ, ಅದು ಮಾನವ ಮತ್ತು ಸಮಾಜದ ಸಂಪೂರ್ಣ ಪರಿವರ್ತನೆಯ ಎಲ್ಲೆಗಳವರೆಗೆ - ಅದನ್ನು ನಾನು ಉಭಯಕ್ರಾಂತಿ : ಮಾನವೀಯ ಕ್ರಾಂತಿಯ ಮೂಲಕ ಸಾಮಾಜಿಕ ಕ್ರಾಂತಿ ಎಂದು ವರ್ಣಿಸಿದೆ - ವ್ಯಾಪಿಸಿರಬೇಕು ಎಂಬುದನ್ನು ಖಚಿತಪಡಿಸಿಕೊಂಡೆ.

ನನ್ನ ಹಾಗೂ ಕ್ರಾಂತಿಯ ನಡುವಣ ಪುರಾತನ ನೆಂಟು ಹೀಗಿದ್ದು ಗ್ರಾಮ ಸ್ವರಾಜ್ಯ ಆಂದೋಲನವು ಅಹಿಂಸಾತ್ಮಕ ಕ್ರಾಂತಿಯನ್ನು - 1954ರಲ್ಲಿ ನಾನು ವಿನೋಬಾಜಿಯನ್ನು ಸೇರಿದ ನಂತರದ ಇಡೀ 20 ವರ್ಷಗಳ ಕಾಲವೂ ಈ ಬಗ್ಗೆ ಮಾತಾಡಿಯೂ - ಉಂಟುಮಾಡಲಾರದು ಎಂಬುದು ನನಗೆ ಮನವರಿಕೆಯಾದಾಗ, ನಾನು ಬೇರೆ ಮಾರ್ಗವೊಂದನ್ನು ಹುಡುಕಲಾರಂಭಿಸಿದೆ. ಈ ಮಧ್ಯೆ, ಕೆಲವು

ವರ್ಷಗಳ ಕಾಲ ವಿಚಾರ ಸಂಕಿರಣ ಹಾಗೂ ಸಮ್ಮೇಳನಗಳನ್ನು ಏರ್ಪಡಿಸಿ, ಮೊದಲ ಕೆಲ ವರ್ಷಗಳಲ್ಲಿ ಆಡಳಿತ ಪಕ್ಷದ ಕೆಲವು ನೇತಾರರೂ ಇವುಗಳಲ್ಲಿ ಭಾಗವಹಿಸುವಂತೆ ಮಾಡುವ ಮೂಲಕ ಚುನಾವಣಾ ಸುಧಾರಣೆಯೂ ಸೇರಿದಂತೆ ಯೋಜಿತ ಅಭಿವೃದ್ಧಿ ಮತ್ತು ಇತರ ಹಲವಾರು ಕ್ಷೇತ್ರಗಳಲ್ಲಿನ ಸರ್ಕಾರದ ನೀತಿಯಲ್ಲಿ ಅಷ್ಟಿಷ್ಟು ಬದಲಾವಣೆಗಳನ್ನು ಉಂಟು ಮಾಡಿಸುವ ಪ್ರಯತ್ನ ಮಾಡಿದ್ದೆ. ಆದರೆ ಈ ಎಲ್ಲ ಪ್ರಯತ್ನಗಳೂ ಜವಾಹರಲಾಲ್‌ರ ಕಾಲದಲ್ಲೂ ಕೂಡಾ ನಿಷ್ಫಲವಾದವು. ಡೊಳ್ಳುಹೊಟ್ಟೆಯ ಅಧಿಕಾರಶಾಹಿ ತನ್ನ ದಾರಿಯನ್ನೇ ಹಿಡಿಯಿತು. 1973ರಲ್ಲಿ ಶ್ರೀಮತಿ ಗಾಂಧಿಯೊಂದಿಗೆ ನಡೆಸಿದ ಎರಡು ಸಭೆಗಳು ಹಾಗೂ ಆ ಹೊತ್ತಿಗೆ ನಾನು ಈ ಮೇಲೆ ವಿವರಿಸಿದ ತೀರ್ಮಾನಕ್ಕೆ ತಲುಪಿದ್ದುದು, ನನ್ನೆಲ್ಲಾ ಈ ರೀತಿಯ ಪ್ರಯತ್ನಗಳನ್ನು ನಿಲ್ಲಿಸಲು ಕಾರಣವಾದವು. ಹೀಗೆ, ಬಿಹಾರ ವಿದ್ಯಾರ್ಥಿ ಆಂದೋಲನ ಶಕ್ತಿಗೂಡಿಸಿಕೊಂಡು, ದೀರ್ಘ ಉಸಿರೆಳೆದುಕೊಂಡು, ಹಳ್ಳಿಯ ಜನರೂ ಸೇರಿದಂತೆ ಎಲ್ಲ ಜನತೆಯ ಸಹಾನುಭೂತಿ ಹಾಗೂ ಬೆಂಬಲ ಮತ್ತು ಸ್ವಲ್ಪಮಟ್ಟಿನ ಕ್ರಿಯಾಶೀಲತೆಯನ್ನೂ ಕ್ರೋಢೀಕರಿಸಿಕೊಂಡಾಗ, ಇದು ಸಂಪೂರ್ಣ ಕ್ರಾಂತಿಯ ಅಂತಿಮ ಗುರಿಗಳ ಕಡೆ ಸಾಗುವಂತೆ ಮಾಡುವ ಕಾಲ ಈಗ ಒದಗಿಬಂದಿದೆ ಎಂದು ನನಗನ್ನಿಸಿತು. ಜೂನ್ 5ರ ಸಭೆಯಲ್ಲಿ ಆಂದೋಲನದಲ್ಲಿ ಭಾಗವಹಿಸಿದ್ದ ವಿರೋಧ ಪಕ್ಷಗಳು ತಮ್ಮ ಸಂಪೂರ್ಣ ಸಮ್ಮತಿ ಸೂಚಿಸಿದ ನಂತರ - ಈ ಸಮ್ಮತಿ ಎಷ್ಟರಮಟ್ಟಿಗೆ ಹೃದಯಪೂರ್ವಕವಾಗಿತ್ತು ಮತ್ತು ಬದ್ಧತೆಯಿಂದ ಕೂಡಿತ್ತು ಎಂಬುದನ್ನು ನಾನು ಹೇಳಲಾರೆ - ಸಂಪೂರ್ಣ ಕ್ರಾಂತಿಯೇ ಹೋರಾಟದ ಅಂತಿಮ ಗುರಿ ಎಂದು ಉದ್ಘೋಷಿತವಾಯಿತು. 'ಸಂಪೂರ್ಣ ಕ್ರಾಂತಿಯೇ ಇಂದಿನ ಘೋಷಣೆಯಾಗಿದೆ, ಮುಂದಿನ ಇತಿಹಾಸ ನಮ್ಮದಾಗಿದೆ' *(ಸಂಪೂರ್ಣ್ ಕ್ರಾಂತಿ ಅಬ್ ನಾರಾ ಹೈ, ಭಾವಿ ಇತಿಹಾಸ್ ಹಮಾರಾ ಹೈ)* - ಈ ಘೋಷಣೆಗಳು ಹಾಗೂ ಗೀತೆಗಳು, ಬಹುಶಃ ಆದಿವಾಸಿ ಹಿನ್ನಾಡನ್ನು ಬಿಟ್ಟು ಬಿಹಾರದ ಉದ್ದಗಲಕ್ಕೂ ಮೊಳಗಿದವು. ಗೀತೆಗಳಲ್ಲದಿದ್ದರೂ ಘೋಷಣೆಗಳು ದೇಶದಲ್ಲಿನ ಹಿಂದಿ ಮಾತಾಡುವ ಮತ್ತು ಹಿಂದಿ ಅರ್ಥವಾಗುವ ರಾಜ್ಯಗಳುದ್ದಕ್ಕೂ ತೀವ್ರಗತಿಯಲ್ಲಿ ವ್ಯಾಪಿಸಿದವು. ಇದು ರಾಷ್ಟ್ರವ್ಯಾಪಿ ಕ್ರಾಂತಿಕಾರಿ ಆಂದೋಲನದ ಆರಂಭವಾಗಿತ್ತೇ? ನಾನು ದೇಶಾದ್ಯಂತ ಮಾಡಿದ ವ್ಯಾಪಕ ಪ್ರವಾಸಗಳು ನಿಸ್ಸಂದೇಹವಾಗಿ ಸಾಮೂಹಿಕ ಜನಜಾಗೃತಿಯನ್ನು ಪ್ರಚೋದಿಸಿದವರಾದರೂ ಬಿಹಾರ ಆಂದೋಲನವು ದೇಶಾದ್ಯಂತ ಹರಡಲು ಅದು ಸಕಾಲವಾಗಿತ್ತೇ ಎಂಬುದು ಸಂದೇಹಾಸ್ಪದವಾಗಿತ್ತು. ಮೊದಲಾಗಿ, ಸೂಕ್ತ ನಾಯಕತ್ವದ ಕೊರತೆ ಇದೆ ಎಂದೆನ್ನಿಸಿತು; ಎರಡನೆಯದಾಗಿ ಸಾರ್ವತ್ರಿಕ ಚುನಾವಣೆಗಳು ಹತ್ತಿರವಾಗುತ್ತಿದ್ದಂತೆ ವಿರೋಧಪಕ್ಷಗಳ ಗಮನ ಹೆಚ್ಚಾಗಿ ಚುನಾವಣೆ ಕಡೆಗೆ ಮತ್ತು ನವಜಾಗೃತಿಯನ್ನು ತಾವು ಚುನಾವಣೆಗಳನ್ನು ಗೆಲ್ಲಲು ಉಪಯೋಗಿಸಿಕೊಳ್ಳುವ ಸಾಧ್ಯತೆಯೂ ಕಡೆಗೆ ತಿರುಗತೊಡಗಿದೆ ಅನಿಸಿತು. ನಾನು ಇದಕ್ಕೇನೂ

ವಿರೋಧವಾಗಿರಲಿಲ್ಲವಾದ್ದರಿಂದ ಮತ್ತು ದೇಶದ ಪ್ರಜಾಪ್ರಭುತ್ವದ ಹಿತಾಸಕ್ತಿಯ ದೃಷ್ಟಿಯಿಂದ ಕೇಂದ್ರದಲ್ಲಿನ ಕಾಂಗ್ರೆಸ್ ಅಧಿಕಾರ ಸ್ವಾಮ್ಯವನ್ನು ಮುರಿಯಲು ಸ್ವತಃ ನಾನೇ ಉತ್ಸುಕನಾಗಿದ್ದುದರಿಂದ, ವ್ಯಾಪಕ ಸಾಮಾಜಿಕ ಬದಲಾವಣೆಯ ಸಾರ್ವತ್ರಿಕ ಜನತಾ ಹೋರಾಟಕ್ಕೆ ತಮ್ಮನ್ನು ಅರ್ಪಿಸಿಕೊಂಡು, ಅದರಿಂದ ಮೂಡುವ ವಾತಾವರಣವನ್ನು ಮುಂಬರುವ ಚುನಾವಣೆಗಳಲ್ಲಿನ ವಿಜಯಕ್ಕಾಗಿ ಉಪಯೋಗಿಸಿಕೊಳ್ಳಲು ವಿರೋಧಪಕ್ಷಗಳನ್ನು ಪ್ರೋತ್ಸಾಹಿಸಿದೆ. ಆ ಮೂಲಕ ಅವರನ್ನೆಲ್ಲಾ ಒಂದೇ ಪಕ್ಷದ ಅಥವಾ ಗುಜರಾತ್‌ನ ಜನತಾರಂಗದಂತಹ ಸುಯೋಜಿತ ಒಕ್ಕೂಟವೊಂದರ ವ್ಯಾಪ್ತಿಗೆ ಒಳಪಡಿಸಲು ಯತ್ನಿಸಿದೆ. ಕಾಂಗ್ರೆಸ್ಸಿನ ಅಧಿಕಾರ ಸ್ವಾಮ್ಯವನ್ನು ಮುರಿಯುವುದಲ್ಲದೆ ಈ ಎಲ್ಲ ಪ್ರಯತ್ನಗಳ ಹಿಂದೆ ಅಡಗಿದ್ದ ನನ್ನ ಉದ್ದೇಶವೆಂದರೆ, ಜನತಾ ಹೋರಾಟವೊಂದಕ್ಕೆ ವಿರೋಧಪಕ್ಷಗಳು ವ್ಯಕ್ತಪಡಿಸಿದ ಸಂಪೂರ್ಣ ನಿಷ್ಠೆಯ ಮೂಲಕ; ಅವು ಒಂದು ವೇಳೆ ಕೇಂದ್ರ ಹಾಗೂ ರಾಜ್ಯಗಳಲ್ಲಿ ಅಧಿಕಾರ ಪಡೆದಲ್ಲಿ, ಈ ಹೊಸ ಸರ್ಕಾರಗಳು ಕ್ರಾಂತಿಕಾರಿ ಆಂದೋಲನಕ್ಕೆ ನೆರವಾಗುವುದನ್ನು ಮತ್ತು ಅದರಲ್ಲಿ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳುವುದಾಗಿತ್ತು. ಈ ಸಂದರ್ಭದಲ್ಲೇ, ಜನತಾ ಹೋರಾಟಕ್ಕೆ ಸಂಬಂಧಿಸಿದ, ಆದರೆ ಈವರೆಗೆ ನಾನು ಹೆಚ್ಚು ವಿವರಿಸದ ಹಾಗೂ ಜನರು ಇನ್ನೂ ಪೂರ್ಣವಾಗಿ ಅರ್ಥಮಾಡಿಕೊಂಡಿಲ್ಲ ಎಂಬ ಶಂಕೆ ನನಗಿರುವ ಮಹತ್ವದ ಅಂಶವೊಂದರ ಬಗ್ಗೆ ವಿವರ ನೀಡಬಯಸುವೆ. ಇದನ್ನೆಲ್ಲಾ ಇನ್ನೊಂದು ದಿನ ಬರೆಯುವೆ ; ಇದರ ಬಗ್ಗೆ ಮತ್ತು ಸಾಮಾನ್ಯ ರಾಜಕೀಯ ವಿಧಾನಗಳ ಮೂಲಕವೇ ಏಕೆ ಕ್ರಾಂತಿಯನ್ನುಂಟುಮಾಡಲು ಸಾಧ್ಯವಾಗುವುದಿಲ್ಲ ಎಂಬ ಬಗ್ಗೆ.

ಆಗಸ್ಟ್ 22

ಆಂದೋಲನವನ್ನು ಕುರಿತ ಟಿಪ್ಪಣಿಗಳನ್ನು ಇಂದು ಬರೆಯುವ ಸ್ಥಿತಿಯಲ್ಲಿ ನಾನಿಲ್ಲ. ಬಂಗ್ಲಾದೇಶದಿಂದ ಭಯಂಕರ, ಭಯಂಕರ ಸುದ್ದಿ ಬಂದಿದೆ. ಪೈಶಾಚಿಕ ಕೃತ್ಯವೊಂದು ನಡೆದಿದೆ. ಕೊಲಂಬಿಯಾ ಬ್ರಾಡ್‌ಕಾಸ್ಟಿಂಗ್ ಸಂಸ್ಥೆಯ ಪ್ರತಿನಿಧಿ ರಿಚರ್ಡ್ ಫ್ರೆಲ್ಕೆಲ್ಡ್ ಪ್ರಕಾರ, ಮುಜೀಬರ ಹೆಂಡತಿ, 9 ವರ್ಷಗಳ ಹಸುಳೆಯೂ ಸೇರಿದಂತೆ ಆತನ ಮೂವರು ಪುತ್ರರು, ಇಬ್ಬರು ಸೊಸೆಯರು, ಸೋದರನ ಇಬ್ಬರು ಮಕ್ಕಳು - ಒಟ್ಟಾರೆಯಾಗಿ ದಿವಂಗತ ವಂಗಬಂಧುವಿನ 18 ಮಂದಿ ನಿಕಟ ಸಂಬಂಧಿಗಳನ್ನು ಆ ಬಂಡಾಯದ ದಿನ ಕೊಂದುಹಾಕಲಾಗಿದೆ. ಈ ಕ್ರೌರ್ಯವನ್ನು ಅರ್ಥಮಾಡಿಕೊಳ್ಳುವುದೇ ಕಷ್ಟವಾಗಿದೆ. ಖೊಂಡಾಕರ್ ಮುಷ್ತಾಕ್ ಅಹ್ಮದ್‌ಗೆ ಮುಜೀಬ್ ಮಾತ್ರವಲ್ಲ, ಆತನ ಹೆಂಡತಿ ಮಕ್ಕಳ ಬಗ್ಗೆ ಕೂಡಾ ಇಷ್ಟೊಂದು ಕ್ರೂರದ್ವೇಷ - ಅಥವಾ ಭಯ ಎಂದು ಹೇಳಲೇ - ಇದ್ದಿರಲಾರದು. ಈ ಘಟನೆ,

ಹಿಂದೆ ಸಿಂಹಾಸನಕ್ಕಾಗಿ ಸೋದರ ಸೋದರನನ್ನು ಕೊಲ್ಲುತ್ತಿದ್ದ ಆ ರಾಜಶಾಹಿ ದಿನಗಳನ್ನು ನೆನಪಿಗೆ ತರುತ್ತದೆ. ಮುಷ್ತಾಕ್ ಅಹ್ಮದ್ ಭಾರತದೊಡನೆಯ ಸ್ನೇಹ, ರಾಷ್ಟ್ರೀಯತೆ, ಸಮಾಜವಾದ, ಜಾತ್ಯಾತೀತತೆ ಹಾಗೂ ಪ್ರಜಾಸತ್ತೆ - ಈ ನಾಲ್ಕು 'ರಾಜ್ಯನೀತಿಯ ಮೂಲಭೂತ ತತ್ವಗಳ ಬದ್ಧತೆ' ಸೇರಿದಂತೆ ತಮ್ಮ ದೇಶದ ಒಲವು ನಿಲುವುಗಳ ಬಗ್ಗೆ ನಯವಾಗಿಯೇ ಮಾತನಾಡುತ್ತಿದ್ದಾರೆ. ಆದರೆ ಇಷ್ಟು ವಿನಯವಂತರಾಗಿರುವ ಶ್ರೀ ಅಹ್ಮದ್‌ರಂತಹ ಮನುಷ್ಯ ಇಂತಹ ದುಷ್ಟ ಕೆಲಸಗಳನ್ನು ಮಾಡಬಲ್ಲ ಎಂದು ಹೇಗೆ ತಾನೆ ನಂಬುವುದು? ಪ್ರಜಾಸತ್ತೆಯ ಬಗ್ಗೆ ಮಾತನಾಡುತ್ತಿರುವಾಗಲೇ ಆತ ಲಷ್ಕರಿ ಶಾಸನದ ಪರಮಾಧಿಕಾರಗಳನ್ನು ವಹಿಸಿಕೊಂಡಿರುವುದನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಎಲ್ಲ ಸರ್ವಾಧಿಕಾರಿಗಳೂ ಮಾತನಾಡುವುದು ಹೀಗೇ. ನಮಗೆ ನಮ್ಮವರೇ ಆದ ಶ್ರೀಮತಿ ಗಾಂಧಿ ಇರುವರಲ್ಲ. ಆದರೆ ಇಡೀ ಮುಜೀಬ್ ಕುಟುಂಬವನ್ನೇಕೆ ಕೊಲ್ಲಬೇಕಿತ್ತು? ಆತನ ಕುಟುಂಬದ ಒಬ್ಬನೇ ಒಬ್ಬ ಸದಸ್ಯ ಉಳಿದಿದ್ದರೂ, ಆತ ದೇಶದಲ್ಲಿ ಮುಜೀಬ್ ಪರ ಶಕ್ತಿಗಳ ಸಂಘಟನೆಯ ಕೇಂದ್ರವಾಗಿಬಿಡುತ್ತಿದ್ದ ಎಂಬ ಭಯವೇನಾದರೂ ಇತ್ತೆ? ಅಥವಾ ಇದು ಅಹ್ಮದರ ಆಜ್ಞೆಯ ಮೇರೆಗೆ, ಕೊನೆಗೆ ಬಂಡಾಯಗಾರ ಸೇನಾಧಿಪತಿಗಳ ಸಾಮೂಹಿಕ ಆಜ್ಞೆಯ ಮೇರೆಗೂ ನಡೆಯದೆ, ಮುಜೀಬ್ ವಿರುದ್ಧ ವೈಯಕ್ತಿಕ ದ್ವೇಷವಿಟ್ಟುಕೊಂಡಿದ್ದ ಸೇನಾಧಿಕಾರಿ ಅಥವಾ ಸೇನಾ ಅಧಿಕಾರಿಗಳ ಕೂಟವೊಂದರ ಆದೇಶದಂತೆ ನಡೆದು, ಅವರು ಈ ಘೋರ ರೀತಿಯಲ್ಲಿ ತಮ್ಮ ಪ್ರತೀಕಾರವನ್ನು ತೀರಿಸಿಕೊಂಡಿರಬಹುದೇ? ದೇವರಿಗೇ ಗೊತ್ತು. ಕಾಲಕ್ರಮೇಣ ನಿಜ ಹೊರಬೀಳಬಹುದೇನೋ, ಅದೇನಾದರೂ ಆಗಿರಲಿ, ಇದಂತೂ ಇತ್ತೀಚಿನ ಚರಿತ್ರೆ ಪುಟಗಳಲ್ಲಿನ ಒಂದು ಕರಾಳ ಅಧ್ಯಾಯವಾಗಿದೆ.

ಇವತ್ತಿನ ಪತ್ರಿಕೆಗಳು, ಶ್ರೀಮತಿ ಗಾಂಧಿ-ಕಾರಂಜಿಯಾ ಸಂದರ್ಶನವೊಂದನ್ನು ಪ್ರಕಟಿಸಿವೆ. ಇದರಲ್ಲಿ ಹೆಚ್ಚಿನದೆಲ್ಲಾ ಎಂದಿನ ಬಡಾಯಿಯೇ : ಧಿಮಾಕು, ಅಹಂಭಾವ ಹಾಗೂ ತಾನೊಬ್ಬಳೇ ದೇಶ ಸಂರಕ್ಷಕಿ ಎಂಬ ಸೋಗು. ಆದರೆ, ಭಾರತೀಯ ಪ್ರಜಾಪ್ರಭುತ್ವ ಉಳಿಯಬಹುದು - ಕೈಕಾಲು ಕಟ್ಟಿ ಬಾಯಿಗೆ ಬಟ್ಟೆ ತುರುಕಿದ, ಆದರೂ ಉಸಿರಾಡುವ ಮತ್ತು ಕುಟುಕಜೀವವಿರುವ ರೀತಿಯದಿದ್ದರೂ ಇರಬಹುದೇನೋ - ಎಂಬ ಅವುಗಳ ಪ್ರಾಮಾಣಿಕತೆಯನ್ನು ಪ್ರಶ್ನಿಸದೇ ಒಪ್ಪಿಕೊಂಡರೆ ಆಸೆ ಹುಟ್ಟಿಸುವ ಎರಡು ಸ್ಪಷ್ಟ ಹೇಳಿಕೆಗಳೂ ಈ ಸಂದರ್ಶನದಲ್ಲಿವೆ. ಈ ಹೇಳಿಕೆಗಳು: (1) ಹೊಸ ಸಂವಿಧಾನ ಇರುವುದಿಲ್ಲ, ಪ್ರಸಕ್ತ ಸಂವಿಧಾನವೇ, ಆಕೆಯ ಆಳ್ವಿಕೆಯನ್ನು ನಿರಂತರಗೊಳಿಸಬಲ್ಲ ಕೆಲವು ಬದಲಾವಣೆಗಳೊಂದಿಗೆ ಮುಂದುವರೆಯುತ್ತದೆ. (2) ಚುನಾವಣೆಗಳು ನಡೆಯುತ್ತವೆ, ಈಗಲೇ ದಿನಾಂಕಗಳನ್ನು ಗೊತ್ತುಮಾಡುವುದು ಅಸಾಧ್ಯವಾದರೂ. ಕೃತಜ್ಞತೆ ಸೂಚಿಸಬೇಕಾದ ವಿಷಯವೇ. ತನ್ನ ವಿಜಯ ಖಚಿತ ಎನ್ನಿಸುವ ಪರಿಸ್ಥಿತಿಯನ್ನು ನಿರ್ಮಿಸಲು ಸಾಧ್ಯವಾದಾಗ ಮಾತ್ರ ಶ್ರೀಮತಿ ಗಾಂಧಿ

ಚುನಾವಣೆಗಳನ್ನು ನಡೆಸುತ್ತಾಳೆ. ಹೌದು, ಇದಕ್ಕೆಂದೇ ತುರ್ತುಪರಿಸ್ಥಿತಿಯನ್ನು ಘೋಷಿಸಿದ್ದು. ಗುಜರಾತ್ ಚುನಾವಣೆಗಳ ನಂತರ ವಿರೋಧ ಪಕ್ಷಗಳ ಏಕತೆಯ ಪರಮ ಸಾಧ್ಯತೆ ಮತ್ತು ಆಂದೋಲನದ ಪರಿಣಾಮವಾದ ಜನಜಾಗೃತಿಯನ್ನು ಮನಗಂಡ ಆಕೆ ಚುನಾವಣೆಯಲ್ಲಿ ಸೋಲುವ ಬಗ್ಗೆ ಉಸಿರೇ ನಿಂತುಹೋಗುವಷ್ಟು ಭಯಭೀತಳಾಗಿದ್ದುದರಲ್ಲಿ ಸಂದೇಹವಿಲ್ಲ. ಸರ್ವೋನ್ನತ ನ್ಯಾಯಾಲಯದಲ್ಲಿರುವ ತನ್ನ ಚುನಾವಣಾ ಮೊಕದ್ದಮೆಯೂ ಆಕೆಯ ತಲೆ ಕೆಡಿಸುತ್ತಿರಬಹುದು. ಅದಕ್ಕೆಂದೇ ಆಕೆ ಜನತಾ ಪ್ರಾತಿನಿಧ್ಯ ಕಾಯಿದೆ ಹಾಗೂ ರಾಜ್ಯಾಂಗಕ್ಕೆ ತಿದ್ದುಪಡಿಮಾಡಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಳು. ಹೀಗೆ ಬಂಧನಗಳು, ತುರ್ತುಪರಿಸ್ಥಿತಿ ಘೋಷಣೆ, ಪತ್ರಿಕಾ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಮತ್ತು ಪರಸ್ಪರ ಸಮಾಲೋಚನೆ ಕುರಿತ ಪ್ರಜೆಗಳ ಮೂಲಭೂತ ಹಕ್ಕುಗಳ ದಮನ, ಕಾನೂನು ಹಾಗೂ ರಾಜ್ಯಾಂಗ ತಿದ್ದುಪಡಿ - ಇವೆಲ್ಲವುಗಳ ಏಕಮಾತ್ರ ಉದ್ದೇಶ: ಶ್ರೀಮತಿ ಗಾಂಧಿಯನ್ನು ಭದ್ರವಾಗಿ ಮತ್ತು ಬೆಚ್ಚಗೆ ಕಾಪಾಡುವುದು(ಈ ನಡುವೆ ನಡೆದಿರುವ ಘಟನೆಗಳು ನನ್ನ ಕೊನೆಯ ಮಾತುಗಳನ್ನು ರುಜುವಾತುಪಡಿಸಿವೆ.)

ಒಂದು ಕುತೂಹಲದ ಸಂಗತಿ ಎಂದರೆ ಶ್ರೀಮತಿ ಗಾಂಧಿ ಈ ಸಂದರ್ಶನದಲ್ಲಿ, ಕಾಂಗ್ರೆಸ್ ಈ ಮುನ್ನ ಸಾರಿದ್ದ 10 ಅಂಶಗಳನ್ನು ಜಾರಿಗೆ ತರಲಾಗಿರಲಿಲ್ಲ ಎಂದು ಒಪ್ಪಿಕೊಂಡಿದ್ದಾಳೆ ಮತ್ತು ಏನನ್ನೇ ಆಗಲಿ ಹಿಂದೆ ಮಾಡದಿದ್ದ ಮಾತ್ರಕ್ಕೆ ಅದನ್ನು ಈಗ ಮಾಡಬಾರದು ಎಂದೆನ್ನಲು ಕಾರಣವಲ್ಲ ಎಂದು ವಾದಿಸಿದ್ದಾಳೆ. 'ನಾವು ಕಷ್ಟಪಟ್ಟು ದುಡಿಯುತ್ತಿದ್ದೇವೆ' ಎಂದು ಹೇಳಿರುವ ಆಕೆ 'ಈಗ ಶಿಸ್ತು ಹಾಗೂ ನೈತಿಕತೆಯ ಹೊಸ ಚೈತನ್ಯ ಮೂಡಿದೆ' ಎಂದೂ ತಿಳಿಸಿದ್ದಾಳೆ. ಮೋಹನ ಧಾರಿಯಾ ಹಾಗೂ ಇತರ ತರುಣ ಉತ್ಸಾಹಿಗಳು ಈ 10 ಅಂಶಗಳನ್ನು ಶ್ರೀಮತಿ ಗಾಂಧಿಗೆ ನೆನಪು ಮಾಡಿಕೊಟ್ಟದ್ದಕ್ಕಾಗಿ ಬಹಳಷ್ಟು ಕಷ್ಟಗಳನ್ನೆದುರಿಸಬೇಕಾಯಿತು. ಈಗಲಾದರೂ ಇವರು, ತಮ್ಮ ಶಿಫಾರ್ಸುಗಳನ್ನು ಪರಿಗಣಿಸಿದಕ್ಕಾಗಿ ಸಂತೋಷಪಡಬೇಕು. 20 ಅಂಶಗಳ ಅನುಷ್ಠಾನದ ಬಗ್ಗೆ ನಾನು ಪ್ರಧಾನಮಂತ್ರಿಗೆ ಬರೆದ ಕಾಗದದಲ್ಲಿ[22] ವ್ಯಕ್ತಪಡಿಸಿರುವ ಆಶಾವಾದಕ್ಕಿಂತ ಹೆಚ್ಚು ಆಶಾವಾದವನ್ನು ಇವರು ಇಟ್ಟುಕೊಂಡಿದ್ದಾರೆ - ದೇಶದಲ್ಲಿ ಶ್ರೀಮತಿ ಗಾಂಧಿ ಕಾಣುತ್ತಿರುವ ನವಚೈತನ್ಯ ಇರಲಿ, ಇಲ್ಲದಿರಲಿ - ಎನ್ನುವುದಕ್ಕೆ ನನಗೇನೂ ಕಾರಣಗಳು ಹೊಳೆಯುತ್ತಿಲ್ಲ.

ಈಗ ಈ ಶಿಸ್ತು ಹಾಗೂ ನೈತಿಕತೆಯ ನವ ಚೈತನ್ಯಕ್ಕೆ ಬರೋಣ. ಆಡಳಿತಗಾರರು, ನೌಕರರು ಹಾಗೂ ಕೆಳ ಅಧಿಕಾರಿಗಳಲ್ಲಿ ಹೆಚ್ಚಿನ ಶಿಸ್ತು ಇರುವುದನ್ನು ಕಂಡು ಸಂತೋಷಪಡುತ್ತಿದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳುವೆ. ಆ ಬಗ್ಗೆ ಸಂದೇಹವೇ

---

22. ಜುಲೈ 21ರಂದು ಜೆ.ಪಿ. ಪ್ರಧಾನಿಗೆ ಬರೆದ ಪತ್ರ ಅನುಬಂಧ-1 ನೋಡಿ.

ಬೇಡ. ಆದರೆ ಭಯದಿಂದ ಹುಟ್ಟಿಸಿದ ಶಿಸ್ತಿನ ಬಗ್ಗೆ ಸಂತೋಷಪಡುವುದು ದೊಡ್ಡದೇನಲ್ಲ ಎನ್ನುವುದನ್ನು ಶ್ರೀಮತಿ ಗಾಂಧಿ ತಿಳಿಯಬೇಕು. ಭಯದಿಂದ ದೇಶ ಕಟ್ಟಲು ಸಾಧ್ಯವಿಲ್ಲ. ಅದು, ಭಯದ ವಾತಾವರಣಗಲ್ಲಿ ಬೆಳೆದ ಮಗು ಮಾನಸಿಕರೋಗಿಯಾದ ತರುಣನಾಗುವಂತೆ ರೋಗಗ್ರಸ್ಥ ದೇಶವಾಗುತ್ತದೆ. ಇನ್ನು ನೈತಿಕತೆಯನ್ನು ಶ್ರೀಮತಿ ಗಾಂಧಿ ಎಲ್ಲಿ ಕಾಣುತ್ತಿರುವಳೋ ಗೊತ್ತಿಲ್ಲ. ಭಯದ ನೆರಳಳಲ್ಲಿ 'ಶಿಸ್ತನ್ನು' ಕಾಣಬಹುದೇ ಹೊರತು, ನೈತಿಕತೆಯನ್ನು ಕಾಣುವುದು ಅಸಾಧ್ಯ. ಮುಕ್ತ ವಾತಾವರಣದಲ್ಲಿ ಮಾತ್ರ ಆರೋಗ್ಯಶಾಲಿ ದೇಶವೊಂದನ್ನು ಕಟ್ಟಲು ಸಾಧ್ಯ. ಶಿಸ್ತನ್ನು ನಿರ್ಮಿಸುವುದು ಒಂದು ದ್ವಿಮುಖೀ ಕೆಲಸ. ನಮ್ಮ ಸರ್ಕಾರೀ ಅಧಿಪತಿಗಳು ಇತ್ತೀಚಿನ ವರ್ಷಗಳಲ್ಲಿ ತೃಣಮಾತ್ರ ಶಿಸ್ತನ್ನೂ ತೋರಿಲ್ಲ; ಅದೆಷ್ಟು ಭ್ರಷ್ಟಾಚಾರ, ಅಧಿಕಾರಕ್ಕಾಗಿ ಅದೆಷ್ಟು ಕಚ್ಚಾಟ - ಇಂತಹವು ಒಂದಲ್ಲ ಎರಡಲ್ಲ, ಗೃಹಾಡಳಿತವೂ ಸೇರಿದಂತೆ ಎಲ್ಲ ವಲಯಗಳಲ್ಲೂ ಇದೇ ಕಥೆ.

ಶ್ರೀ ಕಾರಂಜಿಯ ಕೂಡಾ 'ಪರಸ್ಪರ ಹೊಂದಿಕೊಳ್ಳುವಿಕೆ'ಯ ಪ್ರಶ್ನೆ ಎತ್ತಿದ್ದಾರೆ. ಈಗಲೂ ಜಯಪ್ರಕಾಶ ನಾರಾಯಣ್, ಶ್ರೀಮತಿ ಗಾಂಧಿಗೆ ಬೆಂಬಿಡದ ಭೂತವಾಗಿದ್ದಾನೆ. ಶ್ರೀಮತಿ ಗಾಂಧಿ ಹೇಳಿರುವುದರ ಬಗ್ಗೆ ಟೀಕೆ ಮಾಡುವ ಇಷ್ಟ ನನಗಿಲ್ಲ, ನನ್ನ ಸ್ವಂತ ಆಲೋಚನೆಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ದಾಖಲು ಮಾಡುವುದು ನನಗೆ ಪ್ರಿಯವಾಗಿದೆ.

ರಾಜಿ ಬಗ್ಗೆ ವಿರೋಧಪಕ್ಷಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ವಿರೋಧಪಕ್ಷಗಳೇ ಉತ್ತರ ಹೇಳಬೇಕು. ಆದರೆ ನಾನೇ ಅವುಗಳ ಸ್ಥಾನದಲ್ಲಿದ್ದು ಆಲೋಚಿಸಿದರೆ, ಅವುಗಳ ಮಟ್ಟಿಗೆ 'ಹೊಂದಿಕೊಳ್ಳುವಿಕೆ' ಎಂದರೇನರ್ಥ ಎಂದು ಕೇಳುವೆ. ಶ್ರೀಮತಿ ಗಾಂಧಿಯ ಪ್ರಕಾರ ಇದರ ಸ್ಪಷ್ಟ ಅರ್ಥ: ಅವು 'ತಮ್ಮ ನಿಲುವನ್ನು' ಕೈಬಿಡುವುದು. ಯಾಕೆಂದರೆ, ಸಂದರ್ಶನದ ನಡುವೆ ಆಕೆ '...ನಾವು ಇಂತಹ ಕ್ರಮದ ಬಗ್ಗೆ ಆಲೋಚಿಸುವ ಮುನ್ನ ಪರಿಸ್ಥಿತಿಯ ಬಗ್ಗೆ ಇನ್ನಷ್ಟು ಅಧ್ಯಯನ ಮಾಡಬೇಕಾಗಿದೆ; ಕಾರಣವೆಂದರೆ ವಿರೋಧೀ ಒಕ್ಕೂಟ ತನ್ನ ನಿಲುವನ್ನು ಕೈಬಿಟ್ಟಿರುವ ಬಗ್ಗೆ ನನಗೆ ಅನುಮಾನವಿದೆ' ಎಂದು ಹೇಳಿರುವುದಾಗಿ ವರದಿಯಾಗಿದೆ. ಆಕೆಯ ಪ್ರಕಾರ ಇದರರ್ಥ ಏನು ಎಂದು ಕಾರಂಜಿಯಾ ಕೇಳಬೇಕಿತ್ತು. ವಿರೋಧ ಪಕ್ಷವು ನಿಷ್ಕ್ರಿಯವಾಗಿ ಶ್ರೀಮತಿ ಗಾಂಧಿಯವರಿಗೆ ಸಂಪೂರ್ಣ ಬೆಂಬಲದ ಭರವಸೆ ಕೊಡಬೇಕು ಮತ್ತು ಸಂಸತ್ತು, ಸಾರ್ವಜನಿಕ ವೇದಿಕೆಗಳು ಹಾಗೂ ಪತ್ರಿಕೆಗಳಲ್ಲಿ ಒಂದಿಷ್ಟು ನಿರಪಾಯಕಾರಿ ಗಲಾಟೆ ಮಾಡುವುದನ್ನು ಬಿಟ್ಟು ಆದರ್ಶ 'ವಿರೋಧ ಪಕ್ಷ' CPIನ ಹಾಗೆ ಒಳ್ಳೆಯ ಹುಡುಗರಂತೆ ವರ್ತಿಸಬೇಕು ಎಂಬುದು ಆಕೆಯ ಅರ್ಥವೇ? ಯಾರಿಗಾದರೂ ಅನುಮಾನ ಉಂಟಾಗುವಂತಹ ವಿಷಯ ಇದು. ನನ್ನ ಅಭಿಪ್ರಾಯದಲ್ಲಿ, ಸಂಸದೀಯ ಪ್ರಜಾಸತ್ತೆಯೊಂದರಲ್ಲಿನ ವಿರೋಧಪಕ್ಷದ ಪ್ರಾಥಮಿಕ ಪಾತ್ರವೆಂದರೆ, ಚುನಾವಣಾ

ವಿಧಾನದ ಮೂಲಕ ಆಡಳಿತಪಕ್ಷದ ಸ್ಥಾನವನ್ನು ಆಕ್ರಮಿಸಲು ಪ್ರಾಮಾಣಿಕ ಪ್ರಯತ್ನ ನಡೆಸುವುದು. ಚುನಾವಣೆ ಕಳೆದು ಚುನಾವಣೆ ಬರುವವರೆಗೆ ವಿರೋಧಪಕ್ಷ ಒಂದು ಕಡೆ ಸಂಸತ್ತಿನಲ್ಲಿ ಮತ್ತು ಹೊರಗೆ ಪ್ರಚಾರ, ರಚನಾತ್ಮಕ ಕಾರ್ಯ, ಶಾಂತಿಯುತ ಪ್ರದರ್ಶನಗಳು ಹಾಗೂ ಸಾರ್ವಜನಿಕ ಒಲವು ಗಳಿಸಬಲ್ಲ ಇತರ ಪ್ರಜಾಸತ್ತಾತ್ಮಕ ಮಾರ್ಗಗಳ ಮೂಲಕ ಸರ್ಕಾರಕ್ಕೆ ವಿರೋಧವಾಗಿಯೇ ಉಳಿಯುತ್ತದೆ; ಇನ್ನೊಂದು ಕಡೆ, ಸರ್ಕಾರದ ಮೇಲೆ ಸಾರ್ವಜನಿಕ ಒತ್ತಡ ಹಾಕುವ ಮೂಲಕ ವಿರೋಧಪಕ್ಷವು ಮತದಾರರ ಮೇಲಿನ ತನ್ನ ಪ್ರಭಾವಕ್ಷೇತ್ರವನ್ನು ವಿಸ್ತರಿಸಿಕೊಳ್ಳಲು ಪ್ರಯತ್ನಿಸುವುದಲ್ಲದೆ ಆಡಳಿತಾತ್ಮಕ ಅಥವಾ ಶಾಸನಾತ್ಮಕ ಕ್ರಮಗಳಿಂದಾಗಿ ತೀವ್ರ ತೊಂದರೆಗೀಡಾದ ಸಾರ್ವಜನಿಕರಲ್ಲಿ ಕೆಲವರಿಗಾದರೂ ಪರಿಹಾರ ಒದಗಿಸುತ್ತದೆ.

ಸಾಮಾನ್ಯವಾಗಿ ನಾಗರಿಕ ಅಸಹಕಾರದ ಮಾರ್ಗ ಹಿಡಿಯುವುದು ವಿರೋಧಪಕ್ಷಗಳ ಕಾರ್ಯಕ್ರಮದ ಒಂದು ಅಂಗವಲ್ಲ. ಆದರೆ ಕೆಲವು ಅಪರೂಪದ ಸಂದರ್ಭಗಳಲ್ಲಿ, ಸರ್ಕಾರವೊಂದು ಭ್ರಷ್ಟಾಚಾರದಂತಹ ತಪ್ಪುಗಳನ್ನು ಹಠದಿಂದೆಂಬಂತೆ ಮುಂದುವರಿಸುವ ಅಥವಾ ತುರ್ತು ಅಗತ್ಯಗಳ ಈಡೇರಿಕೆಗಾಗಿ ನಡೆಯುವ ಕಾನೂನುಬದ್ಧ ಚಳವಳಿಯೊಂದನ್ನು ತುಳಿಯುವಂತಹ ದಮನಕಾರೀ ಕೃತ್ಯಗಳಲ್ಲಿ ತೊಡಗಿದಾಗ(ಬಿಹಾರ ಆಂದೋಲನ ಇದಕ್ಕೊಂದು ಉದಾಹರಣೆ) ನಾಗರಿಕ ಅಸಹಕಾರಕ್ಕೆ ಕರೆ ಕೊಡುವುದು ವಿರೋಧಪಕ್ಷಕ್ಕೆ ಅನಿವಾರ್ಯವಾಗುತ್ತದೆ.

ನಾಗರಿಕ ಅಸಹಕಾರ ಸೂಕ್ತವೆನಿಸದ ಆದರೆ ಸತ್ಯಾಗ್ರಹ ಅಗತ್ಯವೆನಿಸುವೆಡೆಗಳಲ್ಲಿ - ಉದಾಹರಣೆಗೆ, ಸಾಮಾಜಿಕ ಹಾಗೂ ಆರ್ಥಿಕ ಶೋಷಣೆ-ಸಾಮಾಜಿಕ ಕಾರ್ಯಕರ್ತರು ಸಕ್ರಿಯವಾಗಬಹುದು, ವಿರೋಧೀ ಗುಂಪುಗಳು ಕೂಡಾ. ಇಂತಹ ಸತ್ಯಾಗ್ರಹವು, ಸರ್ಕಾರವೇ ಶೋಷಿಸುವವರ ಪರ ಸೇರಿದಾಗ, ಸರ್ಕಾರ ವಿರೋಧೀ ನಾಗರಿಕ ಅಸಹಕಾರ ಚಳವಳಿಯಾಗಿ ಮಾರ್ಪಾಡಾಗಿಬಿಡಬಹುದು. ಕಾಂಗ್ರೆಸ್ ಅಧಿಕಾರದಲ್ಲಿದ್ದ ಭಾರತದ ವಿವಿಧ ಭಾಗಗಳಲ್ಲಿ ಪದೇ ಪದೇ ಹೀಗಾಗಿದೆ. ತಾನು ಇಂತಹ ಸತ್ಯಾಗ್ರಹದಿಂದ ದೂರವಿರುವುದಾಗಿ ಮಾತುಕೊಡುವುದು ವಿರೋಧಪಕ್ಷಕ್ಕೆ ಎಂದೂ ಸಾಧ್ಯವಿಲ್ಲ.

ಕೊನೆಯ ಪ್ರಶ್ನೆಯೊಂದು ಉಳಿಯುತ್ತದೆ. ಚುನಾಯಿತ ಸರ್ಕಾರ ಮತ್ತು ಶಾಸನಸಭೆಯೊಂದನ್ನು ನಾಗರಿಕ ಅಸಹಕಾರದ ಮೂಲಕ, ಬಿಹಾರದಲ್ಲಿ ಮಾಡಿದಂತೆ ಪದಚ್ಯುತಗೊಳಿಸಲು ಪ್ರಯತ್ನಿಸಬಹುದೇ? ಈ ಪ್ರಶ್ನೆಗೆ ಹಲವಾರು ಬಾರಿ ಉತ್ತರ ಹೇಳಲಾಗಿದೆ ಮತ್ತು ಇದರ ಸಾಂವಿಧಾನಿಕ ಸಿಂಧುತ್ವವನ್ನು ಸಮರ್ಥ ಸಾಂವಿಧಾನಿಕ ವಕೀಲರು ಪರಿಶೀಲಿಸಿದ್ದಾರೆ. ನಾನೂ ಸಹ ಈ ಬಗ್ಗೆ ಇತ್ತೀಚೆಗೆ ಪ್ರಧಾನಮಂತ್ರಿಗೆ ಬರೆದ ಪತ್ರದಲ್ಲಿ ಬರೆದಿದ್ದೇನೆ. ಇದನ್ನೆಲ್ಲಾ ಮತ್ತೆ ಬರೆಯುವ ಅಗತ್ಯವಿಲ್ಲ. ಆದರೂ ಎರಡು ಸಂಬಂಧಿತ ಅಂಶಗಳನ್ನು - ಇವು ಬಹಳ ಮುಖ್ಯ ಅಂಶಗಳು ಕೂಡಾ -

ಕುರಿತು ಸಂಕ್ಷಿಪ್ತವಾಗಿಯಾದರೂ ಹೇಳಬೇಕು. ಒಂದೆಂದರೆ, ಶ್ರೀಮತಿ ಗಾಂಧಿ ವಿರೋಧೀ ಒಕ್ಕೂಟವೆಂದು ಕರೆಯುವ ಕೂಟದ ಯಾವ ಪಕ್ಷವೂ ನಾಗರಿಕ ಅಸಹಕಾರವನ್ನು ಚುನಾಯಿತ ಸರ್ಕಾರ ಹಾಗೂ ಶಾಸನಸಭೆಗಳನ್ನು ಪದಚ್ಯುತಗೊಳಿಸುವ ಸಾರ್ವತ್ರಿಕ ವಿಧಾನವಾಗಿರಬೇಕು ಎಂದು ಭಾವಿಸಿಲ್ಲ; ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಇಂತಹ ಕ್ರಮ ಕೈಗೊಳ್ಳಬಹುದಷ್ಟೆ. ಎರಡನೆಯ ಅಂಶವೆಂದರೆ, ಚುನಾಯಿತ ಸರ್ಕಾರ ಮತ್ತು ಶಾಸನಸಭೆ ವಿಸರ್ಜಿತವಾಗಿರುವ ಅಥವಾ ಆ ಪ್ರಕ್ರಿಯೆಯ ಪ್ರಯತ್ನ ನಡೆಯುತ್ತಿರುವಲ್ಲಿಯೂ ಕೂಡಾ, ಹೊಸ ಸರ್ಕಾರ ಹಾಗೂ ಶಾಸನ ಸಭೆಯನ್ನು ಕಾನೂನುಬದ್ಧವಾದ ಸಾರ್ವತ್ರಿಕ ಚುನಾವಣೆಯ ಮೂಲಕ ಮಾತ್ರ ಸ್ಥಾಪಿಸಬೇಕು.

ಈಗ ಶ್ರೀಮತಿ ಗಾಂಧಿ, ವಿರೋಧಪಕ್ಷಗಳು ಈ ಅಭಿಪ್ರಾಯಗಳನ್ನು - ಇವೆಲ್ಲದರ ಮೊತ್ತವೇ ಶ್ರೀಮತಿ ಗಾಂಧಿಯ ಮಾತಿನಲ್ಲಿ 'ಅವುಗಳ ನಿಲುವು' - ಕೈಬಿಡಬೇಕೆಂದು ಬಯಸುತ್ತಾಳೇನೋ ಎಂಬುದರ ಬಗ್ಗೆ ನಾನೇನೂ ಹೇಳಲಾರೆ. ಆಕೆಯೇನಾದರೂ ಆಕೆಯ ರಾಜೀನಾಮೆಗಾಗಿರುವ ವಿರೋಧಪಕ್ಷಗಳ ಒತ್ತಾಯದಂತಹ ವೈಯಕ್ತಿಕ ವಿಷಯವನ್ನು 1975ರ ಜೂನ್ 25ರಂದು ವಿರೋಧೀ ಒಕ್ಕೂಟ ಅನುಮೋದಿಸಿದ ನಿರ್ಣಯಕ್ಕೆ ಜೋಡಿಸಿಕೊಂಡು ಯೋಚಿಸುತ್ತಿದ್ದಲ್ಲಿ, ಆ ವಿಷಯವು ಆಕೆಯ ಮೊಕದ್ದಮೆಯ ಬಗ್ಗೆ ಸರ್ವೋನ್ನತ ನ್ಯಾಯಾಲಯ ಒಮ್ಮೆ ತೀರ್ಮ ನೀಡಿದ ಕ್ಷಣವೇ ಕೊನೆಗೊಳ್ಳುತ್ತದೆ. ತೀರ್ಪೇನಾದರೂ ಆಕೆಯ ವಿರುದ್ಧವಾಗಿದ್ದಲ್ಲಿ - ಹಾಗಾಗುವುದು ತೀರಾ ಅಸಂಭವ - ಅದನ್ನು ರದ್ದು ಹಾಗೂ ಅಸಿಂಧುಗೊಳಿಸಲು ಆಕೆ ಬಹುಶಃ ಈಗಾಗಲೇ ವಿಶೇಷಾಜ್ಞೆಯೊಂದನ್ನು ಸಿದ್ಧಮಾಡಿಟ್ಟುಕೊಂಡಿರಬಹುದು. ಅಂತಹ ಸಂದರ್ಭದಲ್ಲಿ ವಿರೋಧಪಕ್ಷ ಆಕೆಯ ರಾಜೀನಾಮೆಯ ಒತ್ತಾಯವನ್ನು ಕೈಬಿಡಲಾರದು. ಇಂತಹ ಒತ್ತಾಯ ಸಂಪೂರ್ಣವಾಗಿ ಸಮರ್ಥನೀಯವಾಗಿರುತ್ತದೆ ಸಹ. ಆದರೆ ವಿರೋಧಪಕ್ಷ ಈ ದಿಕ್ಕಿನಲ್ಲಿ ನಾಗರಿಕ ಅಸಹಕಾರ ಚಳವಳಿಯನ್ನು ಆರಂಭಿಸುವ ಸಾಧ್ಯತೆ ಇಲ್ಲ, ವಿರೋಧಪಕ್ಷಗಳ ಇಂದಿನ ಅವಸ್ಥೆಯನ್ನು ನೋಡಿ ಹೇಳುವುದಾದರೆ. ಬಹುಶಃ ಅವು ಶ್ರೀಮತಿ ಗಾಂಧಿ ಭರವಸೆ ನೀಡಿರುವ - ಆಕೆಗೆ ಸೂಕ್ತವಾದ ಕಾಲದಲ್ಲಿ ನಡೆಯುವ - ಮುಂದಿನ ಚುನಾವಣೆಗಳಿಗಾಗಿ ಭರದ ಸಿದ್ಧತೆಗಳನ್ನು ಮಾಡಿಕೊಳ್ಳಬಹುದಷ್ಟೆ.

ಇದೇ ವಿರೋಧಪಕ್ಷಗಳ ನಿಲುವಾಗಿರುತ್ತದೆ ಎಂದು ನಾನಂದುಕೊಂಡಿದ್ದೇನೆ; ಇದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ ಕೂಡಾ. ನನ್ನ ನಿಲುವೇನಾಗಿರುತ್ತದೆ? ನಾನು ಕೂಡಾ ನನ್ನೆಲ್ಲವನ್ನೂ ಚುನಾವಣೆಗೆ ಮುಡಿಪಾಗಿಟ್ಟು, ವಿರೋಧಪಕ್ಷಗಳೊಂದಿಗೆ ಹೆಗಲಿಗೆ ಹೆಗಲುಕೊಟ್ಟು ಹೋರಾಡುತ್ತೇನೆ. ಅಭ್ಯರ್ಥಿಯಾಗಿ ನಿಲ್ಲುವ ಅಥವಾ ಯಾವುದೇ ಪಕ್ಷ ಅಥವಾ ಒಕ್ಕೂಟಕ್ಕೆ ಸೇರುವ ಇಚ್ಛೆ ನನಗಿಲ್ಲ.

ಆದರೆ ವಿರೋಧಪಕ್ಷ ಜಯಗಳಿಸುವಂತೆ ನಾನು ನನ್ನೆಲ್ಲಾ ಪ್ರಯತ್ನಗಳನ್ನು ಮಾಡುತ್ತೇನೆ. ದೇಶದ ಭವಿಷ್ಯ ಇದರ ಮೇಲೆ ಇಷ್ಟೊಂದು ಅವಲಂಬಿಸಿರುವಾಗ, ಈ ಸಮಯದಲ್ಲಿ ನನ್ನ ಜವಾಬ್ದಾರಿಯನ್ನು ಕೈಬಿಡುವುದು ರಾಜಕೀಯ ಅಪರಾಧವಾಗುತ್ತದೆ.

ಮತ್ತೇನು? ಜನತಾ ಆಂದೋಲನವನ್ನು ಕುರಿತ ನನ್ನ ಸಿದ್ಧಾಂತ ಹಾಗೂ ಸಂಪೂರ್ಣ ಕ್ರಾಂತಿಯಲ್ಲಿ ಅದರ ಪಾತ್ರದ ಬಗ್ಗೆ? ಆ ಕಡೆಗೇ ನನ್ನ ಮುಖ್ಯ ಗಮನ ಇರುವುದು; ನಾನೀಗ ಬರೆಯುತ್ತಿರುವ ಟಿಪ್ಪಣಿಗಳಲ್ಲೇ ಈ ಕುರಿತ ನನ್ನ ಅಭಿಪ್ರಾಯಗಳನ್ನು ಕಾಣಬಹುದು.

ಆಗಸ್ಟ್ 23

(ಆಂದೋಲನವನ್ನು ಕುರಿತ ಟಿಪ್ಪಣಿಗಳು ಮುಂದುವರಿದಿವೆ. ಕಾರಂಜಿಯಾರ ಸಂದರ್ಶನ ಕುರಿತ ನಿನ್ನೆಯ ಟಿಪ್ಪಣಿಯನ್ನು ಈ ಟಿಪ್ಪಣಿಗಳ ಭಾಗವೆಂದು ಪರಿಗಣಿಸಬೇಕು.)

ಸ್ವಾತಂತ್ರ್ಯ ಬಂದಾಗಿನಿಂದೀಚೆಗೆ - ಅಂದರೆ ಇಂದಿಗೆ 28 ವರ್ಷಗಳಾದರೂ - ನಮ್ಮ ಸಮಾಜದ ಸಾಮಾಜಿಕ, ಅರ್ಥಿಕ ಹಾಗೂ ರಾಜಕೀಯ ಸ್ವರೂಪದಲ್ಲಿ ಯಾವುದೇ ನಿಜವಾದ ಬದಲಾವಣೆಯಾಗಿಲ್ಲ. ಜಮೀನ್‌ದಾರಿಯನ್ನು ರದ್ದುಗೊಳಿಸಲಾಗಿದೆ, ಭೂ ಸುಧಾರಣಾ ಕಾನೂನುಗಳನ್ನು ಅನುಮೋದಿಸಲಾಗಿದೆ ಮತ್ತು ಅಸ್ಪೃಶ್ಯತೆಯನ್ನು ಕಾನೂನು ರೂಪದಲ್ಲಿ ನಿಷೇಧಿಸಲಾಗಿದೆ, ಹೀಗೇ ಇನ್ನು ಏನೇನೋ ಮಾಡಲಾಗಿದೆ. ಆದರೆ ಭಾರತದ ಹೆಚ್ಚಿನ ಭಾಗಗಳಲ್ಲಿ ಹಳ್ಳಿ ಇನ್ನೂ ಉಚ್ಚ ಜಾತಿಯವರ ಹಾಗೂ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಭೂಮಾಲೀಕರ ಹಿಡಿತದಲ್ಲೇ ಇದೆ. ಸಣ್ಣ ಹಾಗೂ ಸಾಧಾರಣ ಭೂಮಾಲೀಕರು ಮತ್ತು ಭೂರಹಿತರು, ಹಿಂದುಳಿದ ವರ್ಗದವರು ಹಾಗೂ ಹರಿಜನರು - ಇವರೇ ಹೆಚ್ಚಿನ, ಬಹುಶಃ ಹತ್ತರಲ್ಲಿ ಒಂಭತ್ತು ಭಾಗದಷ್ಟು ಹಳ್ಳಿಗಳಲ್ಲಿ ಬಹುಸಂಖ್ಯಾತರಾಗಿದ್ದಾರೆ. ಆದರೂ ಇವರ ಸ್ಥಿತಿ ಚಿಂತಾಜನಕವಾಗಿದೆ; ಹರಿಜನರನ್ನು ಬಿಟ್ಟರೆ ಆದಿವಾಸಿಗಳೂ ಈಗ ಕೂಡಾ ಅತಿ ಹಿಂದುಳಿದಿದ್ದಾರೆ. ಲೇವಾದೇವಿಗಾರರು(ಭೂಮಾಲೀಕರು ಹಾಗೂ ಅಂಗಡಿಕಾರರೂ - ಸಣ್ಣ ಅಂಗಡಿ ಇಟ್ಟಿದ್ದರೂ ಸರಿಯೇ - ಸೇರಿದಂತೆ) ಆದಿವಾಸಿಗಳಿಗೆ ಮೋಸಮಾಡಿ ಶೋಷಿಸುತ್ತಿದ್ದಾರೆ(ಬಿಹಾರದಲ್ಲಿ ಆದಿವಾಸಿಗಳು ಇವರನ್ನು ಅಂದರೆ ಬಯಲು ಸೀಮೆಯವರನ್ನು 'ಡಿಕ್ಕು' ಅಂದರೆ 'ಹೊರಗಿನವ' ಎಂದು ಕರೆಯುತ್ತಾರೆ).

ಕೆಲವು ಕೈಗಾರಿಕೆಗಳು, ಬ್ಯಾಂಕುಗಳು ಹಾಗೂ ಜೀವವಿಮಾ ಸಂಸ್ಥೆಗಳನ್ನು ರಾಷ್ಟ್ರೀಕರಿಸಲಾಗಿದೆ. ರೈಲ್ವೆಯನ್ನು ಬಹಳ ಹಿಂದೆಯೇ ರಾಷ್ಟ್ರೀಕರಿಸಲಾಯಿತು. ಸರ್ಕಾರೀ ವಲಯದಲ್ಲಿ ಭಾರಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ. ಆದರೆ ಇದೆಲ್ಲಾ ಬಂಡವಾಳಶಾಹಿ ಆಡಳಿತ ಅದಕ್ಷತೆ, ಸಂಪನ್ಮೂಲಗಳ ಪೋಲು ಮತ್ತು

ಭ್ರಷ್ಟಾಚಾರಕ್ಕೆ ದಾರಿಮಾಡಿಕೊಟ್ಟಿದೆ. ರಾಜ್ಯ ಬಂಡವಾಳಶಾಹಿ ಎಂದರೆ, ರಾಜ್ಯಕ್ಕೆ(ಸರ್ಕಾರಕ್ಕೆ) ಪ್ರಮುಖವಾಗಿ ರಾಜ್ಯ ಅಧಿಕಾರಶಾಹಿಗೆ ಅಥವಾ ಗಾಲ್‌ಬ್ರೇತ್ ಸೂಕ್ತವಾಗಿ ವರ್ಣಿಸಿದ 'ಸಾರ್ವಜನಿಕ ಅಧಿಕಾರಶಾಹಿ'ಗೆ ಹೆಚ್ಚು ಅಧಿಕಾರ ಎಂದರ್ಥ. ಇವಾವುದರಲ್ಲೂ ಸಮಾಜವಾದೀ ಗುಣವೆಂಬುದು ಒಂದಿಷ್ಟೂ ಇಲ್ಲ. ಕಾರ್ಮಿಕವರ್ಗ ಮತ್ತು ಸಾರ್ವಜನಿಕರು ಅಥವಾ ಜನರು ಎಂದೇ ಕರೆಯೋಣ - ಇವರಿಗೆ ಈ ವ್ಯವಸ್ಥೆಯ ಕಾರ್ಮಿಕರು ಅಥವಾ ಗ್ರಾಹಕರು ಎಂಬುದನ್ನು ಬಿಟ್ಟರೆ ಬೇರಾವ ಸ್ಥಾನವೂ ಇಲ್ಲ. ಈಗ ಬಹಳಷ್ಟು ಪ್ರಸ್ತಾಪಿಸಲ್ಪಡುತ್ತಿರುವ 'ಆರ್ಥಿಕ ಪ್ರಜಾಪ್ರಭುತ್ವ' ಎಂಬುದು ಇಲ್ಲವೇ ಇಲ್ಲ. ನಾನು ಸಮಾಜವಾದವನ್ನು ವಿರೋಧಿಸುತ್ತೇನೆ ಎಂದು ಇದರರ್ಥವಲ್ಲ. ಸಮಾಜವಾದದ ಬಗ್ಗೆ ಅಪಾರ ಕಳಕಳಿ ಇರುವುದರಿಂದಲೇ ನಾನಿದನ್ನೆಲ್ಲಾ ಎತ್ತಿ ಹೇಳುತ್ತಿರುವುದು. ನಮ್ಮ ಸಮಾಜವಾದಿಗಳು ಸಮಾಜವಾದವನ್ನು ಬಹುವಾಗಿ ರಾಷ್ಟ್ರೀಕರಣದೊಂದಿಗೆ ಸಮೀಕರಿಸುತ್ತಿರುವುದು ಖೇದಕರ ಸಂಗತಿಯಾಗಿದೆ.

ಹಲವಾರು ಸಮಿತಿಗಳ ಹಾಗೂ ಆಯೋಗಗಳ ನೇಮಕವಾದರೂ ನಮ್ಮ ಶಿಕ್ಷಣ ವ್ಯವಸ್ಥೆ ಮೂಲಭೂತವಾಗಿ, ಬ್ರಿಟಿಷರ ಕಾಲದಲ್ಲಿ ಹೇಗಿತ್ತೋ ಹಾಗೇ ಉಳಿದಿದೆ ; ಅಧಿಕಾರದ ಏಣಿ ಏರಿ ಹೋಗಲು ರೂಪಿಸಿದ ತರಗತಿ ಪದ್ಧತಿ. ಇದರ ಬಗ್ಗೆ ಹೇಳಬೇಕೆನಿಸಿರುವುದು ಬೇಕಾದಷ್ಟಿದೆಯಾದರೂ, ಇದು ಸೂಕ್ತ ಸ್ಥಳವಲ್ಲ. ಸ್ವಾತಂತ್ರ್ಯ ಬಂದ ಇಷ್ಟು ವರ್ಷಗಳ ನಂತರವೂ ನಮ್ಮ ಸಮಾಜದ ರಚನೆ ಬದಲಾವಣೆಯನ್ನು ಕಾಣದೆಯೇ ಹಾಗೇ ಉಳಿದಿದೆ ಎಂಬುದನ್ನು ತೋರಿಸುವುದಷ್ಟೆ ನನ್ನ ಇಲ್ಲಿನ ಪ್ರಯತ್ನ.

ಸಂಪ್ರದಾಯಗಳು, ಶಾಸ್ತ್ರಗಳು, ಹರಕೆಗಳು, ಮೂಢ ನಂಬಿಕೆಗಳು ಎಲ್ಲವೂ ಜನಸಾಮಾನ್ಯರಲ್ಲಿ ಹಾಗೇ ಉಳಿದಿದೆ. ವರ್ಗ ಸ್ವರೂಪದಲ್ಲಿ ಉಂಟಾಗಿರುವ ಬದಲಾವಣೆಗಳೂ ಹೆಚ್ಚಿನ ಭಾಗಗಳಲ್ಲಿ ಮೇಲ್ಮೈ ಮಟ್ಟದ್ದು ಮಾತ್ರ.

ಸ್ವಾತಂತ್ರ್ಯ ಬಂದಾಗಿನಿಂದೀಚೆಗೆ, ರಾಜಕೀಯ, ಸಾರ್ವಜನಿಕ ಹಾಗೂ ವಾಣಿಜ್ಯಕ್ಷೇತ್ರಗಳಲ್ಲಿನ ನೈತಿಕ ಮಟ್ಟ ಒಂದೇ ಸಮನೆ ಕುಸಿಯುತ್ತಿದೆ.

ನಾವು ಸಾಮಾಜಿಕತೆ ಮತ್ತು ಅಭಿವೃದ್ಧಿಯ ಕಡೆ ನೋಡಿದರೂ ಚಿತ್ರ ಭಯಾನಕವಾಗಿದೆ. ಜನಸಂಖ್ಯಾಗತಿ ಭರದಿಂದ ಮನ್ನುಗ್ಗುತ್ತಿದೆ. ಬಡತನ ಕೂಡಾ ಹೆಚ್ಚುತ್ತಿದೆ. ಶೇಕಡಾ 40 ಭಾಗಕ್ಕೂ ಹೆಚ್ಚು ಜನರು ಬಡತನ ರೇಖೆಯ ಕೆಳಗಿದ್ದಾರೆ. ಆಹಾರ ಹಾಗೂ ಬಟ್ಟೆಯುನ್ನುಳಿದೂ, ಕುಡಿಯುವ ನೀರು, ಮನುಷ್ಯ ವಾಸಿಸಬಹುದಾದ(ದನಕರುಗಳು ವಾಸಿಸಬಹುದಾದ ಅಲ್ಲ) ಮನೆ, ವೈದ್ಯಕೀಯ ಉಪಚಾರ - ಈ ಅನಿವಾರ್ಯ ಅಗತ್ಯಗಳೂ ಇಲ್ಲವಾಗಿವೆ. ಇರುವ ಕೆಲವೇ ಶಾಲೆಗಳಲ್ಲೂ ಪಾಠ ಪ್ರವಚನ ಕೆಟ್ಟದಾಗಿದೆ. ಬಿಹಾರ ಖನಿಜಸಂಪತ್ತಿನಲ್ಲಿ ದೇಶದಲ್ಲೇ

ಅತ್ಯಂತ ಶ್ರೀಮಂತ ರಾಜ್ಯವೆಂದು ಇಂದು ಪತ್ರಿಕೆಗಳು ಹೇಳುತ್ತಿವೆ. ಬಿಹಾರದಲ್ಲಿ ಒಳ್ಳೆಯ ಭೂಮಿ ಇದೆ. ಹಾಗೂ ವರ್ಷದುದ್ದಕ್ಕೂ ತುಂಬಿಹರಿಯುವ ನದಿಗಳಿವೆ. ಆದರೂ ಬಿಹಾರ ದೇಶದ ಅತ್ಯಂತ ಬಡರಾಜ್ಯವಾಗಿಯೇ ಏಕೆ ಉಳಿದಿದೆ? ಹೀಗೇ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು.

ಪ್ರಸ್ತುತ ಪ್ರಶ್ನೆ ಎಂದರೆ, ಸಾಮಾನ್ಯ ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕ ಈ ಚಿತ್ರವನ್ನು ಮೂಲಭೂತವಾಗಿ ಬದಲಾಯಿಸಲು ಸಾಧ್ಯವೇ? ಇಲ್ಲ ಎಂಬ ಭಯವಿದೆ. ಕಾನೂನುಗಳನ್ನು ಅನುಮೋದಿಸಲಾಗುತ್ತದೆ, ಜಾರಿಗೆ ತರಲಾಗುತ್ತದೆ, ಹಣವನ್ನು ಖರ್ಚುಮಾಡಲಾಗುತ್ತದೆ - ಇದೆಲ್ಲಾ ಮಾಡಿದರೂ, ಭ್ರಷ್ಟಾಚಾರವನ್ನು ನಿವಾರಿಸಲಾಗುತ್ತದೆ ಎಂದು ಇಟ್ಟುಕೊಂಡರೂ, ನಮ್ಮ ಸಮಾಜದ ಈ ರಚನೆ ಈ ವ್ಯವಸ್ಥೆ, ಈ 'ವರ್ಗಕ್ರಮ' ಬದಲಾಗುತ್ತದೆಯೇ? ಇಲ್ಲವೆಂದೆನಿಸುತ್ತದೆ. ಏಕೆ?

ಇದಕ್ಕೆ ಉತ್ತರ ಕೊಡುವ ಮುನ್ನ, ಇವೆಲ್ಲದರ ಅರ್ಥ ಏನು ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿಬಿಡುತ್ತೇನೆ. ಬಿಹಾರ, ಉತ್ತರಪ್ರದೇಶ, ಬಂಗಾಳ ಹಾಗೂ ಇತರ ಕೆಲವು ರಾಜ್ಯಗಳಲ್ಲಿ ಪದ್ಧತಿಯಾಗಿ ಹೋಗಿರುವ ಮದುವೆ ಶಾಸ್ತ್ರಗಳನ್ನೇ - ಅದರಲ್ಲೂ ವರೋಪಚಾರ ಹಾಗೂ ವರದಕ್ಷಿಣೆ ಪದ್ಧತಿಗಳನ್ನು - ತೆಗೆದುಕೊಳ್ಳಿ. ಈ ಪಿಡುಗನ್ನು ಕಾನೂನಿನ ಮೂಲಕ ತೊಲಗಿಸುವ ಪ್ರಯತ್ನ ಮಾಡಲಾಗಿದೆ; ಆದರೆ ಕಾನೂನು ಕಾಗದದ ಮೇಲೆ ಸತ್ತುಹೋಗಿದೆ. ಹಲವಾರು ಸಂಸಾರಗಳನ್ನು ನಾಶಮಾಡುತ್ತಾ ಹಲವಾರು ಹುಡುಗಿಯರ ಜೀವನವನ್ನೇ ಹಾಳುಗೆಡುಹುತ್ತಾ ಈ ರೋಗ ತೀವ್ರಗತಿಯಲ್ಲಿ ಹರಡುತ್ತಲೇ ಇದೆ. ಈವರೆಗೆ ಈ ಪಿಡುಗಿನಿಂದ ದೂರವಾಗಿದ್ದ ಕೆಲವು ಜಾತಿಗಳೂ ಈಗ ಇದಕ್ಕೆ ಬಲಿಯಾಗುತ್ತಿವೆ. ಯಾಕೆಂದರೆ ಇದು ಸಾಮಾಜಿಕ ಪಿಡುಗಾಗಿ ಕಾಣುತ್ತಿದ್ದರೆ ಅವರಿಗೆ ಉನ್ನತ ಸ್ಥಾನಮಾನದ ಪ್ರತೀಕವಾಗಿ ಕಾಣುತ್ತಿದೆ. ಈ ಪಿಡುಗಿನ ವಿರುದ್ಧ ಒಂದು ತೀವ್ರ ಸಾಮಾಜಿಕ ಆಂದೋಲನ, ಒಂದು ಶಾಂತಿಯುತ ಹೋರಾಟ ಬಿಟ್ಟು ಬೇರೆ ಪರಿಹಾರವೇ ಇಲ್ಲ. ಇದೇ ರೀತಿ ಭೂಸುಧಾರಣಾ ಕಾನೂನುಗಳ, ಮನೆ ಸುತ್ತಲಿನ ಭೂಮಾಲೀಕತ್ವ ಶಾಸನದ ಅನುಷ್ಠಾನ ಹಾಗೂ ಆಡಳಿತ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ ನಿರ್ಮೂಲನೆ ಬಗ್ಗೆ ಕೂಡಾ ಕ್ರಮ ಅಗತ್ಯ. ಸಹಜವಾಗಿ, ವಿದ್ಯಾರ್ಥಿಗಳೂ ಸೇರಿದಂತೆ ಎಲ್ಲ ಯುವಜನರೂ ಈ ಹೋರಾಟದ ಮುಂಚೂಣಿಯಲ್ಲಿರಬೇಕು.

ಆಗಸ್ಟ್ 23

ನಿಜವಾದ ಪ್ರಶ್ನೆ ಇನ್ನೂ ದೊಡ್ಡದಾಗಿದೆ. ಇದು, ಸಮಾಜದಲ್ಲಿ ವ್ಯವಸ್ಥಿತ ಬದಲಾವಣೆಯೊಂದನ್ನು ಹೇಗೆ ತರುವುದು ಎಂಬುದು; ಅಂದರೆ, ನಾನು ಪ್ರತಿಪಾದಿಸಿದಂತಹ ಸಂಪೂರ್ಣ ಕ್ರಾಂತಿಯನ್ನು ಸಮಾಜದ ಪ್ರತಿಯೊಂದು ಕ್ಷೇತ್ರ,

ಪ್ರತಿಯೊಂದು ದಿಕ್ಕಿನಲ್ಲೂ ಕ್ರಾಂತಿಯನ್ನು - ಹೇಗೆ ತರುವುದು ಎಂಬುದು. ಈ ಸಂಪೂರ್ಣ ಕ್ರಾಂತಿಯನ್ನು ನಮ್ಮ ಸಮಾಜದ ಪ್ರಜಾಸತ್ತಾತ್ಮಕ ಸ್ವರೂಪಕ್ಕೆ ಧಕ್ಕೆಯಾಗದಂತೆ ಮತ್ತು ನಮ್ಮ ಜನರ ಪ್ರಜಾಸತ್ತಾತ್ಮಕ ರೀತಿಯ ಬದುಕಿಗೆ ತೊಂದರೆಯಾಗದಂತೆ ಶಾಂತಿಯು ರೀತಿಯಲ್ಲಿ ನಡೆಸಬೇಕು ಎಂದಾಗ, ಈ ಪ್ರಶ್ನೆ ಇನ್ನಷ್ಟು ಕಠಿಣವಾಗುತ್ತದೆ. ಹೀಗಿರುವಾಗ ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಯನ್ನು ಚುನಾವಣೆಗಳು, ಅಭಿವೃದ್ಧಿ ಆಯೋಜನೆ ಹಾಗೂ ಆಡಳಿತ ನಿರ್ವಹಣೆಯಷ್ಟಕ್ಕೆ ಸೀಮಿತಗೊಳಿಸಿದಲ್ಲಿ, ಈ ತರದ ಬದಲಾವಣೆಗಳನ್ನು ಎಂದೂ ತರಲು ಸಾಧ್ಯವಿಲ್ಲ ಎಂಬುದನ್ನು ಯಾವನೇ ಪ್ರಜಾಪ್ರಭುತ್ವವಾದಿಯೂ ಒಪ್ಪುತ್ತಾನೆ. ಜನತೆಯ ನೇರ ಭಾಗವಹಿಸುವಿಕೆಯೂ ಬೇಕು. ಈ ಭಾಗವಹಿಸುವಿಕೆ ಅಥವಾ ಕ್ರಿಯಾಶೀಲತೆಯಲ್ಲಿ, ಹೆಚ್ಚು ಕಡಿಮೆ ಖಂಡಿತವಾಗಿ, ಇತರ ಕ್ರಿಯೆಗಳಲ್ಲದೆ, ಸವಿನಯ ಕಾನೂನು ಭಂಗ, ಶಾಂತಿಯುತ ಪ್ರತಿಭಟನೆ, ಅಸಹಕಾರ-ಚಿಕ್ಕದಾಗಿ ಹೇಳುವುದಾದರೆ, ತನ್ನ ವಿಶಾಲಾರ್ಥದಲ್ಲಿ ಸತ್ಯಾಗ್ರಹ- ಸೇರಿರುತ್ತದೆ. ಇಂತಹ ಸತ್ಯಾಗ್ರಹದ ಆಂತರ್ಯದಲ್ಲಿ ಆತ್ಮಪರಿವರ್ತನೆಯೂ ಸೇರಿದೆ; ಅಂದರೆ, ಬದಲಾವಣೆಯನ್ನು ಬಯಸುವ ಯಾರೇ ಆಗಲಿ, ಆ ದಿಕ್ಕಿನಲ್ಲಿ ಯಾವುದೇ ಕ್ರಿಯೆಗೆ ತೊಡಗುವ ಮುನ್ನ, ಸ್ವತಃ ತಾವೂ ಬದಲಾಗಬೇಕು.

ಕಾಂಗ್ರೆಸ್ ಸರ್ಕಾರದ ಸ್ಥಾನದಲ್ಲಿ ವಿರೋಧಪಕ್ಷದ ಸರ್ಕಾರವನ್ನು ತರುವುದೇ ಬಿಹಾರ ಆಂದೋಲನದ ಗುರಿಯಾಗುವುದಾದರೆ, ಇಂತಹ ಆಂದೋಲನದಿಂದ ಏನು ತಾನೆ ಸಾಧಿಸದಂತಾಗುತ್ತದೆ ಎಂದು ಚಂದ್ರಶೇಖರ್* ನನ್ನನ್ನು ಹಲವಾರು ಬಾರಿ ಕೇಳುತ್ತಿದ್ದುದು ನೆನಪಿಗೆ ಬರುತ್ತಿದೆ. ಹೊಸ ಸರ್ಕಾರ ಹಿಂದಿನದಕ್ಕಿಂತಲೂ ಉತ್ತಮವಾಗಿರುವುದೇ? ಇದು ವಿರೋಧಪಕ್ಷಗಳು ಯೋಚಿಸಬೇಕಾದ, ಸಾಧುವಾದ ಪ್ರಶ್ನೆಯೇ. 1967ರಲ್ಲಿ ಈ ಪಕ್ಷಗಳ ಕಾರ್ಯನಿರ್ವಹಣೆ ಖಂಡಿತವಾಗಿಯೂ, ತುಂಬಾ ನಿರಾಶಾದಾಯಕವಾಗಿತ್ತು.

ಚಂದ್ರಶೇಖರ್‌ಗೆ ನನ್ನ ಉತ್ತರ ಹೀಗಿರುತ್ತಿತ್ತು : ಆಂದೋಲನದ ಗುರಿ ಬಿಹಾರ ಸರ್ಕಾರದ ಪದಚ್ಯುತಿ ಮಾತ್ರವಾಗಿರದೆ, ಸಂಪೂರ್ಣ ಕ್ರಾಂತಿ ಎಂಬ ಶಬ್ದದಲ್ಲಿ ನಾನು "ಕೋಶೀಕರಿಸಿದ್ದ"(ಇಂತಹ ಪದವೇನಾದರೂ ಇದ್ದರೆ)[23] ಎಲ್ಲವೂ ಆಗಿದೆ. ಆಂದೋಲನ ನಿರಂತರವಾದದ್ದು ಆದುದರಿಂದಲೇ ವಿರೋಧಪಕ್ಷದ ಸರ್ಕಾರ ಯಾವಾಗಲೂ ತುದಿಗಾಲ ಮೇಲೆ ನಿಂತಿರುವ ಖಚಿತ ಭರವಸೆ ನಮಗೆ ದೊರೆಯುತ್ತದಲ್ಲದೆ, ಹೊಸ ಸರ್ಕಾರ ತನ್ನ ಪೂರ್ಣ ಸಹಕಾರ ನೀಡುವುದರಿಂದ ಅದು ತ್ವರಿತವಾಗಿ ಹಾಗೂ ಸುಗಮವಾಗಿ ನಡೆಯುತ್ತದೆ. ವಾಸ್ತವವಾಗಿ, ಇಲ್ಲಿ

*** ಭಿನ್ನಮತೀಯ ಕಾಂಗ್ರೆಸ್(ಯುವ) ನಾಯಕ**

23. "Capsulised"

ಒತ್ತಿ ಹೇಳಬೇಕಾದ ಒಂದು ಅಂಶವೆಂದರೆ - ಬಿಹಾರ ಆಂದೋಲನದುದ್ದಕ್ಕೂ ನಾನು ಇದನ್ನು ಹಲವಾರು ಬಾರಿ ಮಾಡಿರುವೆನಾದರೂ - ಒಂದು ಪಕ್ಷ ಬಿಹಾರ ಸರ್ಕಾರ ಆರಂಭದಲ್ಲಿಯೇ ವಿದ್ಯಾರ್ಥಿಗಳೊಂದಿಗೆ, ಅವರು ಸಲ್ಲಿಸಿದ 12 ಬೇಡಿಕೆಗಳ ಬಗ್ಗೆ ಗಂಭೀರ ಪರಿಶೀಲನೆ ನಡೆಸಿ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನಗಳಲ್ಲಿ ಸಹಕರಿಸಲು ನಿರ್ಧರಿಸಿದ್ದಲ್ಲಿ, ಬಿಹಾರ ಸರ್ಕಾರವನ್ನು ತೆಗೆದುಹಾಕಲು ಬಯಸುವ ಬಿಹಾರ ವಿದ್ಯಾರ್ಥಿ ಆಂದೋಲನದ ಪ್ರಶ್ನೆಯೇ ಏಳುತ್ತಿರಲಿಲ್ಲ. ಈಗಾಗಲೇ ಸ್ಪಷ್ಟವಾಗಿರುವಂತೆ, ಆಗಿನ ಬಿಹಾರ ಸರ್ಕಾರವು ಹಿಂಸೆ ಹಾಗೂ ದಮನಕಾರೀ ಕೃತ್ಯಗಳಲ್ಲಿ ತೊಡಗಿ ಸುಳ್ಳುಗಳನ್ನು ಹೇಳಲಾರಂಭಿಸಿದ ಪರಿಣಾಮವಾಗಿಯೇ, ಆಂದೋಲನ ಆರಂಭವಾದ ಎಷ್ಟೋ ಕಾಲದ ನಂತರ ಮಂತ್ರಿಮಂಡಲದ ರಾಜೀನಾಮೆ ಹಾಗೂ ವಿಧಾನಸಭೆಯ ವಿಸರ್ಜನೆಯ ಬೇಡಿಕೆಯನ್ನು ಮಂಡಿಸಿದ್ದು.

ನಾನು ಒಟ್ಟಾರೆ ಹೇಳುತ್ತಿರುವುದೆಂದರೆ, ನಾನಿಲ್ಲಿ ವಿವರಿಸುತ್ತಿರುವ ರೀತಿಯ ಜನತಾ ಆಂದೋಲನವು ಸಂಬಂಧಿತ ಸರ್ಕಾರದೊಂದಿಗೆ ಘರ್ಷಣೆಯನ್ನು ನಡೆಸಿಕೊಂಡೇ ಹೋಗಬೇಕೆಂದಿಲ್ಲ; ಅದು ಸರ್ಕಾರದ ಸಹಕಾರದೊಂದಿಗೂ ಸಾಗಬಹುದು. ನಾನು ಈ ಸೂತ್ರವನ್ನು ಸ್ಪಷ್ಟವಾಗಿ ಮೊಟ್ಟಮೊದಲ ಬಾರಿಗೆ, ಪುಣೆಯಲ್ಲಿ ನಡೆದ ನಾಗರಿಕಸನ್ಮಾನ ಸಮಾರಂಭದಲ್ಲಿ(1975ರ ಜನವರಿ 23ರಂದು) ವಿವರಿಸಿದೆ. ಈ ಆಲೋಚನೆಯೇನೋ ಸಮಾರಂಭದಲ್ಲಿ ನನಗೆ ತಟಕ್ಕನೆ ನೆನಪಿಗೆ ಬಂದಿದ್ದಲ್ಲ. ಇದು ಎಂದಿನಿಂದಲೂ ನನ್ನ ಮನಸ್ಸಿನಲ್ಲಿತ್ತು; ಮತ್ತು ಆ ಬಗ್ಗೆ ಹಿಂದೆಯೂ - ನನಗೆ ನೆನಪಿದೆ - ಹಲವಾರು ಬಾರಿ ಮಾತನಾಡಿದ್ದೆ. ಆದರೆ, ಪುಣೆ ಪುರಸಭೆಯು ಸಮಾಜವಾದೀ ಮೇಯರ್ ನೇತೃತ್ವದಲ್ಲಿ ವಿರೋಧಪಕ್ಷದ ನಿಯಂತ್ರಣದಲ್ಲಿದ್ದು, ಪುರಸಭೆಯಲ್ಲಿದ್ದ ಕಾಂಗ್ರೆಸ್ ಸದಸ್ಯರೂ ಸಹ ನನಗೆ ಸನ್ಮಾನ ಮಾಡುವ ನಿರ್ಣಯಕ್ಕೆ ಒಪ್ಪಿದ್ದರಾದ್ದರಿಂದ, ಈ ನನ್ನ ಸೂತ್ರವನ್ನು ಆದಷ್ಟೂ ಸ್ಪಷ್ಟವಾಗಿ ವಿವರಿಸಲು ಇದೇ ಸೂಕ್ತ ಸಂದರ್ಭ ಎಂದು ಭಾವಿಸಿದೆನಷ್ಟೆ. ಪುಣೆಯ ಪತ್ರಿಕೆಗಳಿಗೆ ಇದು ಹೊಸತರದ ಅನುಭವವಾಗಿದ್ದು, ಅವು ಈ ನನ್ನ ಆಲೋಚನೆಗೆ ಪ್ರಾಮುಖ್ಯತೆ ನೀಡಿದವು ; ರಾಷ್ಟ್ರೀಯ ಪತ್ರಿಕೆಗಳು ಸಹ ಈ ಬಗ್ಗೆ ಆಸಕ್ತಿಯಿಂದ ವರದಿ ಮಾಡಿದವು. ಈ ಕಾರಣದಿಂದಲೇ, ನಾನು ಹೊಸ ಹಾದಿ ಹಿಡಿದಿದ್ದೇನೆ ಎಂದು ಆಗ ಕೆಲವರು ಅಭಿಪ್ರಾಯಪಟ್ಟದ್ದು. ಹೌದು, ಬಿಹಾರದಲ್ಲಿ ಕೂಡಾ ವಿರೋಧ ಪಕ್ಷಗಳ ಕೆಲವು ಮುಖಂಡರೂ ಹೀಗೇ ಅಭಿಪ್ರಾಯಟ್ಟರು. ಆದರೆ ಆಂದೋಲನವೊಂದನ್ನು ಆರಂಭಿಸಲು ಹಾಕಲಾದ ಅಡಿಪಾಯದಲ್ಲೇ ಇದು ಅಂತರ್ಗತವಾಗಿರುತ್ತದೆ. ಮೊದಲು ಜನರಿಗೆ ಬಹಳ ಮುಖ್ಯವಾದ ಹಲವಾರು ಬೇಡಿಕೆಗಳನ್ನು ಪಟ್ಟಿಮಾಡಿ, ಮುಖ್ಯಮಂತ್ರಿಗೆ ಸಲ್ಲಿಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿ ಒಂದು ಪಕ್ಷ 'ಪರಿ ಈ ಬಗ್ಗೆ ನಾವೆಲ್ಲ ಕೂತು ವಿಚಾರಿಸೋಣ ; ಈ ಸಮಸ್ಯೆಗಳನ್ನು ಪರಿಹರಿಸುವಲ್ಲಿ,

ಈ ಪಿಡುಗುಗಳನ್ನು(ಉದಾಹರಣೆಗೆ ಮಂತ್ರಿಮಂಡಲದಲ್ಲಿನ ಭ್ರಷ್ಟಾಚಾರ ಎನ್ನೋಣ) ನಿವಾರಿಸುವಲ್ಲಿ ನಾನು ನಿಮ್ಮೊಂದಿಗೆ ಸಹಕರಿಸುವೆ' ಎಂದು ಹೇಳಿದರೆ, ಈ ಹೋರಾಟ(ಇನ್ನೂ ಇದು ಹೋರಾಟವಾಗಿಯೇ ಉಳಿದಿರುತ್ತದೆ - ಸರ್ಕಾರವಿರೋಧೀ ಹೋರಾಟವಲ್ಲ; ಕೆಲವು ಬದಲಾವಣೆಗಳು ಹಾಗೂ ಉದ್ದೇಶಗಳಿಗಾಗಿ ಮತ್ತು ಕೆಲವು ದುಷ್ಟ ಪ್ರವೃತ್ತಿಗಳ ವಿರುದ್ಧದ ಹೋರಾಟ) ಸಹಕಾರದ ಮಾರ್ಗ ಹಿಡಿಯುತ್ತದೆ. ಈವರೆಗೆ ಒಂದು ಕಾಂಗ್ರೆಸ್ ಸರ್ಕಾರ ಕೂಡಾ ಈ ಮಾರ್ಗವನ್ನು ಅನುಸರಿಸಲು ಮುಂದೆ ಬಂದಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ ಅವುಗಳಿಂದ ಉತ್ತರವೇ ಇರುವುದಿಲ್ಲ, ಇದ್ದರೂ ಅದು ವಿಷಯದಿಂದ ನುಣಿಚಿಕೊಳ್ಳುವ ಮತ್ತು ಪ್ರಸ್ತುತ ವಿಷಯದಿಂದಲೇ ದೂರವಾದ ಉತ್ತರವಾಗಿರುತ್ತದೆ.

ಆಗಸ್ಟ್ 27

ಈ ಟಿಪ್ಪಣಿಗಳನ್ನು ಮತ್ತೊಮ್ಮೆ ನಿಲ್ಲಿಸಬೇಕಾಗಿದೆ. ನಿನ್ನೆ ನಾನು ಪ್ರಭಾ ಹಾಗೂ ಶೀಲಾರಿಗೆ[24] ಬರೆದಾಗ, ಪಟ್ನಾದಲ್ಲಿನ ಪ್ರವಾಹ ಪರಿಸ್ಥಿತಿ ಅಷ್ಟೊಂದು ಭೀಕರವಾಗಿದೆ ಎಂದು ನನಗೆ ತಿಳಿದೇ ಇರಲಿಲ್ಲ. ಇಂದು ಮುಂಜಾನೆಯ 'ಹಿಂದೂಸ್ಥಾನ್ ಟೈಮ್ಸ್' ಎದೆನಡುಗಿಸುವ ವಿವರಗಳನ್ನು ಕೊಟ್ಟಿದೆ. ಅಲ್ಲಿನ ನನ್ನ ಜನ, ಎಂದೆಂದೂ ಕಾಣದ ಅಂತಹ ಅನಾಹುತದಲ್ಲಿ ಸಿಕ್ಕಿ ನರಳುತ್ತಿರುವಾಗ ನಾನಿಲ್ಲಿ ಸುಮ್ಮನೆ ಕೈಕಟ್ಟಿ ಕುಳಿತಿರುವ ಬಗ್ಗೆ ನನಗೆ ಬಹಳ ಜಿಗುಪ್ಸೆಯೆನಿಸುತ್ತಿದೆ; ನಾನು ನಿಸ್ಸಹಾಯಕವಾಗಿದ್ದೇನೆ.* ಬಡ ಹಾಗೂ ಕೆಳ ಮಧ್ಯಮವರ್ಗದ ಜನರ ಸ್ಥಿತಿ ನರಕಸದೃಶವಾಗಿರಬೇಕು. ಒಂದಸ್ತಿನ ಹೆಂಚಿನ ಮನೆಗಳಲ್ಲಿ, ಏಕೆ ಪಕ್ಕಾಮನೆಗಳಲ್ಲಿ ವಾಸಿಸುತ್ತಿದ್ದವರೂ ತಮ್ಮೆಲ್ಲವನ್ನೂ ಕಳೆದುಕೊಂಡಿರಬೇಕು. ತಮ್ಮ ಮನೆಗಳಲ್ಲಿನ ಸಾಮಾನುಗಳನ್ನು ಅವರು ಎಲ್ಲಿಗೆ ಸಾಗಿಸಿಯಾರು? ಕೆಳ ಅಂತಸ್ತಿನ ಮಹಿಳಾ ಚರಕಾಸಮಿತಿಯಲ್ಲಿ ಏನಾಗುತ್ತಿದೆಯೋ ನನಗೆ ತಿಳಿಯದು. ಅಲ್ಲಿ 6ರಿಂದ 8 ಅಡಿಗಳಷ್ಟು ನೀರು ನಿಂತಿರಬೇಕು. ನಗರದ ಸಾಮಾನ್ಯ ಜನ ಹಸಿವಿನಿಂದ ನರಳುತ್ತಿರಬಹುದು. ಕುಡಿಯುವ ನೀರಿನ ಬಗ್ಗೆ ಏನು ಮಾಡಿಯಾರು? ಆಹಾರಕ್ಕಿಂತಲೂ ದೊಡ್ಡ ಸಮಸ್ಯೆ ಅಲ್ಲಿ ಉಂಟಾಗಿರಬಹುದು. ಹೆಚ್ಚಿನ ಜನರು ಮಲಿನಗೊಂಡ ಪ್ರವಾಹದ ನೀರನ್ನೇ ಕುಡಿಯುತ್ತಿರಬಹುದು. ಅಲ್ಲಿ ಎಂತಹ ಪರಿಹಾರ ಕಾರ್ಯಾಚರಣೆ ನಡೆಯುತ್ತಿದೆಯೋ ನನಗೆ ಗೊತ್ತಿಲ್ಲ. ಇಂತಹ ಬಿಕ್ಕಟ್ಟಿನಲ್ಲಿ ಸಾಕಷ್ಟು ಕೆಲಸ

---

24. ಶ್ರೀಮತಿ ಪ್ರಭಾ ಚೌಧುರಿ ಹಾಗೂ ಶ್ರೀಮತಿ ಶೀಲಾ ರುಖಿಸೂರ್, ಮಹಿಳಾ ಚರಕಾ ಸಮಿತಿಯ ಕಾರ್ಯಕರ್ತರು.

* ಹಿಂದೆಂದೂ ಕಂಡರಿಯದ ಈ ಮಹಾನ್ ಪ್ರವಾಹ ಇಡೀ ಪಟ್ನಾ ನಗರವನ್ನು ಆವರಿಸಿತ್ತು. ಅಸಂಖ್ಯಾತ ಜನ ಸತ್ತರು ಇಲ್ಲವೇ ಕಾಣೆಯಾದರು ಇಲ್ಲವೇ ನಿರ್ಗತಿಕರಾದರು.

ಮಾಡುವಷ್ಟು ಸಾಮರ್ಥ್ಯ ಬಿಹಾರ ಸರ್ಕಾರಕ್ಕಿದೆ ಎಂದು ನನಗನ್ನಿಸುವುದಿಲ್ಲ. ಸೇನೆ ಹಾಗೂ ವಿಮಾನ ಬಲ ಹೆಚ್ಚಿನ ನೆರವಾಗಬಹುದು.

ಪರಿಹಾರ ಕಾರ್ಯವನ್ನು ಸಂಘಟಿಸಲು ವಾಗ್ದಾನದ ಆಧಾರದ ಮೇಲೆ ಒಂದು ತಿಂಗಳ, ಕೊನೆಗೆ ಹದಿನೈದು ದಿನಗಳಮಟ್ಟಿಗೆ ನನ್ನನ್ನು ಬಿಡುಗಡೆ ಮಾಡುವಂತೆ ಕೇಳಲೇ ಎಂಬ ಬಗ್ಗೆ ನಾನು ಯೋಚಿಸುತ್ತಿದ್ದೇನೆ. ಸಂಪರ್ಕ ವ್ಯವಸ್ಥೆ ಅಸ್ತವ್ಯಸ್ತಗೊಂಡಿದ್ದು, ನನ್ನ ಕೆಲಸ ಬಹಳ ಕಷ್ಟಕರವಾಗಿರುತ್ತದೆ. ಆದರೆ ನಾನು ಪ್ರವಾಹಕ್ಕೆ ಸಿಕ್ಕದ ಪ್ರದೇಶಗಳ ಯುವಜನರನ್ನು ಸಂಘಟಿಸಬಹುದು; ಬೇರೆ ರಾಜ್ಯಗಳಿಂದಲೂ ನೆರವನ್ನು ಕ್ರೋಢೀಕರಿಸಬಹುದು. ಹೌದು ನಾನು ಈ ಬಗ್ಗೆ ಹೆಚ್ಚು ಚಿಂತಿಸಿದಂತೆ, ಹೆಚ್ಚು ಕೆಲಸ ಮಾಡಬಹುದು. ರಾಜ್ಯದ ಎಲ್ಲ ಜನಪ್ರಿಯ ನಾಯಕರೂ ಸೆರೆಮನೆಯಲ್ಲಿದ್ದಾರೆ. ಹೆಚ್ಚಿನ ಕಾಂಗ್ರೆಸ್ ನಾಯಕರು ಭ್ರಷ್ಟಾಚಾರಿಗಳು ಮತ್ತು ಉದಾಸೀನದವರು. ಬಿಹಾರದ ಆಡಳಿತ ವ್ಯವಸ್ಥೆ ಸಹ ಅಷ್ಟೇನೂ ದಕ್ಷವಾಗಿಲ್ಲ. ಸರಿ, ಈ ಮಧ್ಯಾಹ್ನದೊಳಗಾಗಿ, ವಾಗ್ದಾನದ ಮೇಲೆ ಬಿಡುಗಡೆ ಕೇಳಲೇ ಬೇಡವೇ ನಿರ್ಧರಿಸುವೆ. 1934ರಲ್ಲಿ ಸಂಭವಿಸಿದ ಘೋರ ಭೂಕಂಪದ ಸಮಯದಲ್ಲಿ[25] ಬ್ರಿಟಿಷರು ರಾಜೇನ್ ಬಾಬುವನ್ನು* - ಆತನ ಕೋರಿಕೆಯ ಅನುಸಾರವಾಗಿಯಲ್ಲ, ಸ್ವತಃ ತಾವಾಗಿಯೇ - ಹಜಾರಿ ಬಾಗ್ ಸೆರೆಮನೆಯಿಂದ ಬಿಡುಗಡೆ ಮಾಡಿದ್ದು ನೆನಪಿಗೆ ಬರುತ್ತಿದೆ. ಆದರೆ ಶ್ರೀಮತಿ ಗಾಂಧಿ ಅಷ್ಟು ಮಾನವೀಯ ಅಥವಾ ದುರ್ಬಲಳಲ್ಲ; ನೀವಿಷ್ಟಪಟ್ಟರೆ, ಬ್ರಿಟಿಷ್ ಸಾಮ್ರಾಜ್ಯವಾದಿಗಳಷ್ಟಾದರೂ!

ಈ ಕೆಳಗಿನ ಸಂದೇಶವನ್ನು DC(ಡೆಪ್ಯುಟಿ ಕಮೀಷನರ್: ಚಂಢೀಘಡ) ಮೂಲಕ ಪ್ರಧಾನಿಗೆ ಕಳಿಸಲು ನಿರ್ಧರಿಸಿದ್ದಾಗಿದೆ:

ಇವರಿಗೆ:
ಪ್ರಧಾನಮಂತ್ರಿ
ಹೊಸ ದೆಹಲಿ

ಪಟ್ನಾ ಹಾಗೂ ಬಿಹಾರದ ಪ್ರವಾಹವನ್ನು ಕುರಿತ ವರದಿಗಳನ್ನೋದಿ ತುಂಬಾ ವಿಚಲಿತನಾಗಿದ್ದೇನೆ. ನಮಗೆ ತಿಳಿದ ಇತಿಹಾಸದಲ್ಲಿಯೇ ಹಿಂದೆಂದೂ, ಪಟ್ನಾ ಇಷ್ಟು ತೊಂದರೆಗೆ ಈಡಾಗಿದ್ದಿಲ್ಲ. ರಾಜ್ಯದೊಳಗೆ ಮತ್ತು ಹೊರಗೆ ಜನರ ನೆರವನ್ನು

---

25. 1934ರ, ಜನವರಿ 15ರಂದು ಸಂಭವಿಸಿದ ಈ ಭೂಕಂಪ 6 ಸಾವಿರ ಚದರ ಮೈಲಿಗಳ ಪ್ರದೇಶದ ವ್ಯಾಪ್ತಿಯ ಎಲ್ಲ ಕಟ್ಟಡಗಳಿಗೂ ಹಾನಿ ಮಾಡಿತು. 10 ಸಾವಿರ ಜನರು ಸತ್ತರು. ದರ್ಭಾಂಗಾ, ಚಂಪಾರಣ್ಯ ಹಾಗೂ ಮುಜಾಫರ್‌ಪುರ ಇವು ಅತ್ಯಂತ ಹೆಚ್ಚಿನ ಹಾನಿಗೀಡಾದವು.

* ಮುಂದೆ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದ್.

ಸಂಘಟಿಸಲು ಮತ್ತು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಸಹಕಾರದೊಂದಿಗೆ ಪರಿಹಾರವನ್ನು ವ್ಯವಸ್ಥೆಗೊಳಿಸಲು ಅನುಕೂಲವಾಗುವಂತೆ ವಾಗ್ದಾನದ ಮೇಲೆ ಒಂದು ತಿಂಗಳ ಮಟ್ಟಿಗೆ ಬಿಡುಗಡೆಗಾಗಿ ಪ್ರಾರ್ಥನೆ. ಪ್ರವಾಹ ಇಳಿದರೂ ಕೂಡಾ ಮಾಡಬೇಕಾದ ಕೆಲಸ ಬಹಳವಿರುತ್ತದೆ. 1934ರ ಆ ಘೋರ ಬಿಹಾರ ಭೂಕಂಪ ಸಂಭವಿಸಿದಾಗ, ಬ್ರಿಟಿಷರು, ರಾಜೇನ್ ಬಾಬುವನ್ನು ಇಂತಹುದೇ ಕೆಲಸಕ್ಕಾಗಿ ಹಜಾರಿಬಾಗ್ ಸೆರೆಮನೆಯಿಂದ ಬಿಟ್ಟಿದ್ದರು. ತುರ್ತಾಗಿ ಗಮನ ನೀಡಿ ಕ್ರಮ ಕೈಗೊಳ್ಳಲು ಕೋರಿಕೆ.

- ಜಯಪ್ರಕಾಶ್

ಈ ಸಂದೇಶವನ್ನು ದೂರವಾಣಿ ಅಥವಾ ತುರ್ತು ತಂತಿಯ ಮೂಲಕ ತಲುಪಿಸಲು ಕೇಳಿಕೊಂಡಿದ್ದೇನೆ.

ಆಗಸ್ಟ್ 28

ದೆಹಲಿಯಿಂದ ಇಷ್ಟು ಬೇಗ ಉತ್ತರ ಬರುವುದೆಂದು ನಿರೀಕ್ಷಿಸಲಾಗದು. ಪ್ರಾಯಶಃ ಏನೂ ಆಗಲಾರದು. ಇದೊಂದು ಶೋಚನೀಯ ಸಂಗತಿ, ಏಕೆಂದರೆ ಪ್ರಸಕ್ತ ಸಂದರ್ಭ ಮತ್ತು ನನ್ನ ಪ್ರಸಕ್ತ ಕೋರಿಕೆಯು, ಪ್ರಾಮಾಣಿಕ ಹಾಗೂ ನಿಷ್ಪಕ್ಷಪಾತವಾದ ಭಾರತೀಯ ಹಾಗೂ ವಿಶ್ವ ಅಭಿಪ್ರಾಯದ ವಿರುದ್ಧ ತನ್ನನ್ನು ಸಮರ್ಥಿಸಿಕೊಳ್ಳಲು ಕಷ್ಟಪಡಬೇಕಾಗಿರುವ ಸ್ಥಿತಿಯಿಂದ ಪಾರಾಗಲು ಆಕೆಗೆ ಒಂದು ಒಳ್ಳೆಯ ಅವಕಾಶವನ್ನು ಒದಗಿಸುತ್ತದೆ. ಆದರೆ ಹೀಗೆ ಮಾಡದಿರಲು ಆಕೆಗಿರುವ ಒಂದೇ ಒಂದು ದಾರಿ ಎಂದರೆ, ಆಂತರಿಕ ಗಲಭೆಯ ಅಪಾಯವನ್ನು ನೂರುಪಟ್ಟು ಉತ್ಪ್ರೇಕ್ಷಿಸಿ ಹೇಳುವುದು. ಇದು ಯಾರನ್ನೂ ತೃಪ್ತಿಪಡಿಸಲಾರದು. ತಾನೇ ಉಂಟುಮಾಡಿಕೊಂಡ ಗೊಂದಲ - ಅಸ್ತವ್ಯಸ್ತತೆಯಿಂದ ಹೊರಬರಲು ಆಕೆ ಇಷ್ಟಪಡುತ್ತಾಳೆ(ದೇಶವನ್ನು ಎಂತಹ ಅಸ್ತವ್ಯಸ್ತತೆ-ಗೊಂದಲಗಳಲ್ಲಿ ಆಕೆ ಮುಳುಗಿಸಿದ್ದಾಳೆ ಎಂಬುದನ್ನು ಹೇಳುವುದೇ ಬೇಡ) ಎಂದು ಅಂದುಕೊಂಡರೂ, ಆಕೆಗೆ ಇರುವ ದಾರಿಯೆಂದರೆ, 1934ರ ಬಿಹಾರದ ಭೂಕಂಪ ಸಮಯದಲ್ಲಿ ಕೈಗೊಂಡ ಕ್ರಮಗಳಿಗೆ ಸಮನಾದ ಕ್ರಮಗಳನ್ನು ಕೈಗೊಳ್ಳುವುದು. ದುಂಡುಮೇಜಿನ ಪರಿಷತ್ತು ವಿಫಲಗೊಂಡು, ಗಾಂಧೀಜಿ ವಾಪಸಾದ ನಂತರ ಬ್ರಿಟಿಷರು ಇದ್ದಕ್ಕಿದ್ದಂತೆ ದಾಳಿ ನಡೆಸಿದರು. ಮುಂಬೈನ ಗಾಮ್‌ದೇವಿಯ ಮಣಿಭವನದಲ್ಲಿ(ಕಾಂಗ್ರೆಸ್) ಕಾರ್ಯಕಾರೀ ಸಮಿತಿ ಸಭೆಯ ಏರ್ಪಾಡಾಗುತ್ತಿದ್ದಂತೆಯೇ ಜವಾಹರಲಾಲ್‌ರನ್ನು ಮಾಣಿಕ್‌ಪುರದಲ್ಲಿ ಬಂಧಿಸಲಾಯಿತು. ಆಗ ಅವರು ಅಲಹಾಬಾದ್‌ನಿಂದ ಮುಂಬೈಗೆ ಮುಂಬೈ ಮೇಲ್‌ನಲ್ಲಿ ಬರುತ್ತಿದ್ದರೆಂದು ಕಾಣುತ್ತದೆ. ಆಗ ನಾನೂ ಅವರ ಜೊತೆಯಲ್ಲಿದ್ದೆ

- ಆ ಕಾಲದಲ್ಲಿ ನಾನು ಸ್ವರಾಜ್ ಭವನದ ಎ.ಐ.ಸಿ.ಸಿ. ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದೆ.(ಅಷ್ಟು ಹೊತ್ತಿಗಾಗಲೇ ಖಾನ್ ಅಬ್ದುಲ್ ಗಫಾರ್ ಖಾನರನ್ನು ಪೆಷಾವರ್‌ನಲ್ಲಿ ಬಂಧಿಸಲಾಗಿತ್ತು) ದೇಶದ್ಯಾಂತ ಕಾಂಗ್ರೆಸಿಗರನ್ನು ಬಂಧಿಸುವ ಕಾರ್ಯಾಚರಣೆ ನಡೆಯಿತು. ಗಾಂಧೀಜಿಯನ್ನು ಕೂಡಾ ಬಂಧಿಸಿ ಯರವಾಡಾ ಸೆರೆಮನೆಯಲ್ಲಿಡಲಾಯಿತು. ಇದಕ್ಕೆ ಪ್ರತಿಕ್ರಿಯೆಯಾಗಿ, ಗಾಂಧಿ ಇರ್ವಿನ್ ಸಂಧಾನದ ಪರಿಣಾಮವಾಗಿ ನಿಲ್ಲಿಸಲಾಗಿದ್ದ ನಾಗರಿಕ ಅಸಹಕಾರ ಚಳವಳಿಯನ್ನು ಪುನರಾರಂಭಿಸಲಾಯಿತು. ಇದು ನಡೆದದ್ದು 1933ರ ಜನವರಿಯಲ್ಲಿ.

1934ರ ಆದಿಭಾಗದಲ್ಲೂ ಈ ಚಳವಳಿ ಔಪಚಾರಿಕವಾಗಿ ನಡೆದೇ ಇತ್ತು. ಆದರೆ ಸಾಮೂಹಿಕ ಕಾನೂನುಭಂಗಕ್ಕೆ ಬದಲಾಗಿ, ಅದಕ್ಕೆಂದೇ ರಹಸ್ಯವಾಗಿ ನೇಮಿಸಲಾಗಿದ್ದ ವ್ಯಕ್ತಿಗಳು ಕೆಲವು ನಿಗದಿಯಾದ ದಿನಗಳಂದು ಹೊರಬಂದು, ಭೂಗತ ರಾಜ್ಯ ಅಥವಾ ಜಿಲ್ಲಾ ಕಾಂಗ್ರೆಸ್ ಸಮಿತಿಗಳು-ಇವು ವಾಸ್ತವವಾಗಿ, ಸವಿನಯ ಕಾನೂನಭಂಗ ಸಮಿತಿಗಳಾಗಿದ್ದವು-ಹಾಕಿರುತ್ತಿದ್ದ ಕಾರ್ಯಕ್ರಮ ಗಳಿಗನುಗುಣವಾಗಿ ಸಾರ್ವಜನಿಕರಿಗೆ ಗೊತ್ತಾಗುವಂತೆ ಕಾನೂನುಗಳನ್ನು ಉಲ್ಲಂಘಿಸಿಸುತ್ತಿದ್ದರು. ಆದುದರಿಂದ ರಾಜೇನ್‌ಬಾಬುವನ್ನು ಬಿಡುಗಡೆ ಮಾಡಿದಾಗ - ಅವರ ಸೆರೆಮನೆ ಅವಧಿಯು ಮುಗಿಯುವ ಕೆಲವು ತಿಂಗಳುಗಳ ಮುನ್ನ - ನಾಗರಿಕ ಅಸಹಕಾರವನ್ನು ವಿಧ್ಯುಕ್ತವಾಗಿ ಇನ್ನೂ ಹಿಂತೆಗೆದುಕೊಂಡಿರಲಿಲ್ಲ. ಕಾರ್ಯಕಾರಿ ಸಮಿತಿಯ ಸದಸ್ಯರು ಇನ್ನೂ ಸೆರೆಮನೆಯಲ್ಲಿದ್ದುದರಿಂದ, ಈ ಚಳವಳಿಯನ್ನು ಮುಂದುವರಿಸುವ ಯೋಚನೆಗೆ ಕೈಹಾಕಲಾರದಾದರು. ಹಾಗಾಗಿ ಅವರ ಮೊದಲ ಮತ್ತು ತುರ್ತು ಕರ್ತವ್ಯವೆಂದರೆ ಸಂಕಷ್ಟಕ್ಕೀಡಾದ ಜನರ ಸೇವೆಗಾಗಿ ಅವಕಾಶ ಒದಗಿಸಿಕೊಳ್ಳುವುದಾಗಿತ್ತು. ಪರಿಹಾರ ಸಮಿತಿಯೊಂದನ್ನು ಆಗಲೇ ರಚಿಸಲಾಗಿತ್ತಾದರೂ, ರಾಜೇನ್‌ಬಾಬುವಿನ ನೇತೃತ್ವ ದೊರಕಿದ ಕೂಡಲೇ ಇಡೀ ಪರಿಸ್ಥಿತಿಗೆ ಚೈತನ್ಯ ತುಂಬಿದಂತಾಯಿತು. ಪರಿಹಾರ ಕಾರ್ಯಾಚರಣೆಗಳು ಭಾರಿ ಪ್ರಮಾಣದಲ್ಲಿ ನಡೆದು, ರಾಜೇನ್‌ಬಾಬು ಸಂಗ್ರಹಿಸಿದ ಪರಿಹಾರ ನಿಧಿ ವೈಸ್‌ರಾಯ್‌ರ ಪರಿಹಾರನಿಧಿಗೆ ಹತ್ತಿರ ಹತ್ತಿರವಾಗಿದ್ದುದು ನನಗಿನ್ನೂ ನೆನಪಿದೆ. ಆ ತಕ್ಷಣವೇ ಎಲ್ಲೆಲ್ಲೂ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಲಾಯಿತು. ಸ್ವತಃ ಗಾಂಧೀಜಿಯೇ ನೆರವಿಗಾಗಿ ರಾಜ್ಯಕ್ಕೆ ಬಂದರು. ಜವಾಹರ್‌ಲಾಲ್ ಸಹ. ಜಮ್ನಾಲಾಲ್‌ಜಿ[26] ಪರಿಹಾರ ಕಾರ್ಯಕ್ರಮಗಳಲ್ಲಿ ಕೆಲಮಟ್ಟಿನ ಪಾತ್ರ ವಹಿಸಿದರು. ಪ್ರೊ. ಜೆ.ಸಿ. ಕುಮಾರಪ್ಪ[27] ಲೆಕ್ಕಪತ್ರಗಳ ವಿಭಾಗದ ಕೆಲಸ ನೋಡಿಕೊಂಡರು. ಹೀಗೆ ಯಾರೂ ಚಳವಳಿಯನ್ನು

---

26. ದಿವಂಗತ ಜಮ್ನಾಲಾಲ್ ಬಜಾಜ್: ಗಾಂಧೀವಾದಿಯಾದ ಕೈಗಾರಿಕೋದ್ಯಮಿ: ಹಲವಾರು ವರ್ಷಗಳ ಕಾಲ ಕಾಂಗ್ರೆಸ್ ಪಕ್ಷದ ಖಜಾಂಜಿಯಾಗಿದ್ದರು.
27. ದಿವಂಗತರಾದ ಇವರು, ಗಾಂಧಿತತ್ವಗಳ ಆಧಾರದ ಅರ್ಥಶಾಸ್ತ್ರಜ್ಞರಾಗಿದ್ದರು.

ಅಧಿಕೃತವಾಗಿ ಹಿಂದೆಗೆದುಕೊಳ್ಳದೆಯೇ, ಪ್ರಕೃತಿ ವಿಕೋಪವು ರಾಷ್ಟ್ರೀಯ ನಾಯಕರ ಎಲ್ಲ ಗಮನ ಹಾಗೂ ಶಕ್ತಿಯನ್ನು ಸೆಳೆದು ತೊಡಗಿಸಿಕೊಂಡಿದ್ದರಿಂದಾಗಿ, ಸವಿನಯ ಕಾನೂನುಭಂಗ ಚಳುವಳಿ ಗೌರವಪೂರ್ಣವಾದ ರೀತಿಯಲ್ಲಿ ಕೊನೆಗೊಂಡಿತು. ಬ್ರಿಟಿಷ್ ಸರ್ಕಾರ ಕೂಡಾ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ವಿಶೇಷವಾದ ದಮನಕಾರೀ ಕಾನೂನುಗಳನ್ನು ಹಿಂತೆಗೆದುಕೊಂಡಿತು ಇಲ್ಲವೇ ನಿಷ್ಕ್ರಿಯವಾಗುವಂತೆ ಬಿಟ್ಟುಬಿಟ್ಟಿತು. ಕೆಲವೇ ತಿಂಗಳುಗಳಲ್ಲಿ ಎಲ್ಲ ಬಂದಿಗಳನ್ನೂ ಬಿಡುಗಡೆ ಮಾಡಲಾಯಿತು. ಕೆಲವರು ಪೂರ್ಣಾವಧಿಯನ್ನು ಮುಗಿಸಿದ್ದರು; ಕೆಲವರು ಸರ್ಕಾರದ ನೀತಿಯ ಸೌಲಭ್ಯ ಪಡೆದರು.

ಪರಿಸ್ಥಿತಿಯನ್ನು ಸಹಜಗೊಳಿಸುವ ಕಳಕಳಿ ಶ್ರೀಮತಿ ಗಾಂಧಿಗೆ ಇದ್ದಲ್ಲಿ, ಆಕೆಗೆ ಈ ಬಿಹಾರಪ್ರವಾಹ ಅವಕಾಶವೊಂದನು ಒದಗಿಸಿದೆ. ನನ್ನನ್ನು ವಾಗ್ದಾನದ ಮೇಲೆ ಅಥವಾ ಹಾಗೆಯೇ ಬಿಡುಗಡೆ ಮಾಡಿದಲ್ಲಿ, ನನ್ನ ಮೊಟ್ಟಮೊದಲ ಕರ್ತವ್ಯವೆಂದರೆ, ನಾನು, ನನ್ನ ಸ್ನೇಹಿತರು ಹಾಗೂ ಬಿಹಾರ ಮತ್ತು ಇತರ ರಾಜ್ಯಗಳ ನನ್ನ ಸಹಕಾರ್ಯಕರ್ತರು ಜನತೆಗೆ ಪರಿಹಾರ ಒದಗಿಸಲು ತೊಡಗುವುದು. ಇಂತಹ ಸಮಯದಲ್ಲಿ ಚಳವಳಿ ಅಥವಾ ಹೋರಾಟದ ಬಗ್ಗೆ ಚಿಂತಿಸುವುದು, ಹಿಂದೆಂದೂ ಅನುಭವಿಸಿದಂತಹ ಸಂಕಷ್ಟಗಳನ್ನು ಅನುಭವಿಸುತ್ತಿರುವ ಜನರನ್ನು ಅಪಹಾಸ್ಯ ಮಾಡಿದಂತಾಗುತ್ತದಷ್ಟೆ. ಬಿಹಾರ ಆಂದೋಲನವು ಹೀಗೆ ಸಹಜವಾಗಿ, ಬದಿಗೆ ಸರಿಯುತ್ತದೆ. ಪ್ರಧಾನಮಂತ್ರಿಗೆ ಕಳಿಸಿರುವ ಸಂದೇಶದಲ್ಲಿ, ನಾನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಕಾರದೊಂದಿಗೆ ಕೆಲಸ ಮಾಡುವುದಾಗಿ ತಿಳಿಸಿದ್ದೇನೆ. ಇದಾದರೂ ಆಕೆ ಅನಗತ್ಯ ಭಯಪಡದಂತೆ ಮಾಡಬೇಕು. ಇಂತಹ ಸಂದರ್ಭದಲ್ಲಿ, ಆಂದೋಲನದೊಂದಿಗೆ ಸಂಬಂಧವಿಟ್ಟುಕೊಂಡಿದ್ದ ಜನರನ್ನು ಬಿಡುಗಡೆ ಮಾಡುವುದು ತರ್ಕಬದ್ಧಕ್ರಮವಾಗಿರುತ್ತದೆ. ಅವರೆಲ್ಲರನ್ನೂ ಪರಿಹಾರ ಕಾರ್ಯಕ್ಕಾಗಿ ಸಂಘಟಿಸಬೇಕು. ನಾನು ಅಖಿಲಭಾರತ ನಾಯಕರನ್ನೂ ಸಹ ನೆರವು ನೀಡಲು ಬಿಹಾರಕ್ಕೆ ಆಹ್ವಾನಿಸುವೆ. ದೇಶಾದ್ಯಂತ ನಡೆಸಿದ ಬಂಧನಗಳು ಪೂರ್ಣವಾಗಿ ಅಸಮರ್ಥನೀಯ; ನಮ್ಮೆಲ್ಲರ ಗಮನ ಹಾಗೂ ಕ್ರಿಯಾಶೀಲತೆ ಪರಿಹಾರ ಕಾಮಗಾರಿಗಳ ಕಡೆ ತಿರುಗಿರುವಾಗ, ಪ್ರಕೃತಿ ವಿಕೋಪವನ್ನು ನಾನು ಆಂದೋಲನವನ್ನು ಬೆಳೆಸಲು ಉಪಯೋಗಿಸಿಕೊಳ್ಳುವೆ ಎಂಬ ಭಯ ಶ್ರೀಮತಿ ಗಾಂಧಿಯ ಮನಸ್ಸಿನಲ್ಲಿರಕೂಡದು. ಈ ರೀತಿ, ದೇಶದಲ್ಲಿರುವ ಬಿಗುವು ಸಡಿಲಗೊಂಡು, ಪ್ರಜಾಸತ್ತೆ ಪುನರ್‌ನೆಲೆಗೊಂಡು, ಶ್ರೀಮತಿ ಗಾಂಧಿ ಪದೇಪದೇ ಪ್ರಸ್ತಾಪಿಸುವ "ಸಹಜ ಸ್ಥಿತಿ" ಪುನರ್‌ಸ್ಥಾಪನೆಯಾಗುತ್ತದೆ ಎಂದು ನಂಬಿರುವೆ.

ಮುಖ್ಯ ಪ್ರಶ್ನೆ ಎಂದರೆ, ಇದನ್ನೆಲ್ಲಾ ಅರ್ಥಮಾಡಿಕೊಳ್ಳುವಷ್ಟು ಆಲೋಚನಾ ಸಾಮರ್ಥ್ಯ ಶ್ರೀಮತಿ ಗಾಂಧಿಗೆ ಇದೆಯೆ? ಪ್ರಾಯಶಃ ಇನ್ನೂ ಆಳದ ಪ್ರಶ್ನೆ

ಎಂದರೆ, ಪ್ರಜಾಪ್ರಭುತ್ವ ಹಾಗೂ ಸಹಜ ಸ್ಥಿತಿ ಹಿಂತಿರುಗುವುದನ್ನು ಆಕೆ ಬಯಸುವಳೆ? 1971ರಿಂದ ಆಕೆ ಮಾಡುತ್ತಿರುವುವನ್ನೆಲ್ಲಾ ನೋಡಿದರೆ, ಆಕೆಗೆ ಪ್ರಜಾಪ್ರಭುತ್ವದ ಹೆಸರು ಕೇಳಿದರೇ ಭಯ - ಏಕೆಂದರೆ ಆಗ ತಾನು ಅಧಿಕಾರದಲ್ಲಿ ಮುಂದುವರಿಯುವುದು ಖಚಿತವಿರುವುದಿಲ್ಲ - ಎಂದು ಕಾಣುತ್ತದೆ. ಹೌದು, ಏನೇ ಬೆಲೆ ತೆರಬೇಕಾಗಲಿ, ಇಂದಿರಾಗಾಂಧಿ ಅಧಿಕಾರದಲ್ಲಿ ಉಳಿಯಬೇಕು! ಆದುದರಿಂದ, ಆಕೆಯಿಂದ ಉತ್ತರ ಬರುವುದಿಲ್ಲ, ಬಂದರೂ 'ಬಿಡುಗಡೆ ಸಾಧ್ಯವಿಲ್ಲ' ಎಂಬ ಉತ್ತರ ಬರುತ್ತದೆ ಎಂಬುದು ಖಂಡಿತ. ಹಾಗೇ ಆಗಲಿ, ಪ್ರಾಯಶಃ ಅದೇ ಒಳ್ಳೆಯದು. ಯಾವ ಮಟ್ಟದವರೆಗೆ ಆಕೆ ಇಳಿಯಬಲ್ಲಳು ಎಂಬುದನ್ನು ಜನ ಕಾಣಲಿ. ಅಂತಿಮ ವಿಜಯ ಜನತೆಯ ವಿಜಯವೇ ಆಗಿರುತ್ತದೆ.

ಈ ಭಯಾನಕ ಪ್ರಕೃತಿವಿಕೋಪವನ್ನು ಬಳಸಿಕೊಂಡು, ಬಿಹಾರದ(ರಾಜಕೀಯ) ಪರಿಸ್ಥಿತಿಯನ್ನು ಸಹಜಗೊಳಿಸುವ ಕ್ರಮಗಳನ್ನು ತಡೆಯುವ ಸ್ವಾರ್ಥಪರ ಯೋಚನೆಯೂ ಶ್ರೀಮತಿ ಗಾಂಧಿಯ ಮನಸ್ಸಿನಲ್ಲಿರಬಹುದು ಎಂದು ನನಗನ್ನಿಸುತ್ತದೆ. ಜಯಪ್ರಕಾಶ್ ಹಾಗೂ ವಿರೋಧಪಕ್ಷಗಳು ಮತ್ತು ಸರ್ವೋದಯ ಕಾರ್ಯಕರ್ತರು ಏನೂ ಮಾಡಲಾಗದ ಈ ಸಮಯದಲ್ಲಿ, ಮಹಾನ್ ಸಂಕಷ್ಟದಿಂದ ಬಿಹಾರವನ್ನು ಉಳಿಸಿದ ಇಡೀ ಕೀರ್ತಿ ತನ್ನ ಪಕ್ಷ ಹಾಗೂ ಬಿಹಾರ ಮತ್ತು ಕೇಂದ್ರದಲ್ಲಿನ ತನ್ನ ಸರ್ಕಾರಗಳಿಗೆ ಸಲ್ಲುತ್ತದೆಂದು ಆಕೆ ಭಾವಿಸಿರಬಹುದು. ಒಳ್ಳೆಯದು, ಆಕೆ ಹಾಗೆಯೇ ಭಾವಿಸಲಿ; ಆದರೆ ಇದಂತೂ ಖಂಡಿತ: ಸೇನಾಬಲ ಹಾಗೂ ವಿಮಾನಬಲಗಳು, ಪರಿಹಾರ ಕಾರ್ಯಾಚರಣೆಗಳ ಹೊಣೆಯನ್ನು ನಾಗರಿಕ ಅಧಿಕಾರಿಗಳಿಗೆ ವಹಿಸಿಕೊಟ್ಟ ಕೂಡಲೇ ಬಿಹಾರ ಸರ್ಕಾರ ಹಾಗೂ ಆಡಳಿತದ ಮತ್ತು ಬಿಹಾರದ ಕಾಂಗ್ರೆಸ್ಸಿಗರ ಅದಕ್ಷತೆ ಮತ್ತು ಭ್ರಷ್ಟಾಚಾರ ಪ್ರಕಟವಾಗತೊಡಗುತ್ತದೆ. ಇದೆಲ್ಲದರ ಫಲ ಶ್ರೀಮತಿ ಗಾಂಧಿ ನಿರೀಕ್ಷಿಸಿದಷ್ಟು ಸಂತೋಷದಾಯಕವಾಗಿರುವುದಿಲ್ಲ. 1966-67ರ ಬಿಹಾರ ಕ್ಷಾಮ ಪರಿಹಾರ ಕಾರ್ಯಕ್ರಮದ ಅನುಭವವನ್ನು ಬೇಕಾದರೆ ನೆನಪುಮಾಡಿಕೊಳ್ಳಬಹುದು. 1967ರ ಮಾರ್ಚ್‌ನಲ್ಲಿ ಅಧಿಕಾರ ವಹಿಸಿಕೊಂಡ ಸಮ್ಮಿಶ್ರ ಸರ್ಕಾರದ ತಪ್ಪುಗಳು ಏನೇ ಇರಲಿ, ಅದು ನಿಜವಾಗಿಯೂ, ಕಾಂಗ್ರೆಸ್ ಸರ್ಕಾರ ಕೈಗೊಂಡಿದ್ದುದಕ್ಕಿಂತ ಒಳ್ಳೆಯ ಪರಿಹಾರ ಕಾರ್ಯಕ್ರಮವನ್ನು ಕೈಗೊಂಡಿತ್ತು. ಅದಿರಲಿ, ಬಿಹಾರದ ಜನತೆಯ ಹಿತದೃಷ್ಟಿಯಿಂದ ಬಿಹಾರ ಸರ್ಕಾರ ಹಾಗೂ ಕಾಂಗ್ರೆಸ್ ಈ ಸರ್ತಿಯಾದರೂ ಉತ್ತಮ ಪರಿಹಾರ ಕಾಮಗಾರಿ ಕೈಗೊಳ್ಳಲಿ ಎಂದು ಆಶಿಸುವೆ. ಇದರ ಕೀರ್ತಿ ಅವರಿಗೆ ಮತ್ತು ಶ್ರೀಮತಿ ಗಾಂಧಿಗೆ ಸಂದರೆ ಅದಕ್ಕೆ ಅವರು ಬಾಧ್ಯರು ; ಆ ಬಗ್ಗೆ ಯಾರೂ ಕರುಬುವುದಿಲ್ಲ.

ವಿಶೇಷ ಟಿಪ್ಪಣಿ: ಬಿಹಾರದಲ್ಲಿ, 'ಆಂದೋಲನ ಅಥವಾ ಹೋರಾಟ'ದ ಎಲ್ಲ ಆಲೋಚನೆಗಳನ್ನೂ, ಪರಿಹಾರ ಕಾರ್ಯಾಚರಣೆಯತ್ತ ಗಮನಕೊಡುವ ದೃಷ್ಟಿಯಿಂದ ಬದಿಗೆ ಸರಿಸಬೇಕು ಎಂದು ಈ ಮೇಲೆ ಬರೆದಿದ್ದನ್ನು ಬಂಧನದಿಂದ

ಮುಕ್ತನಾಗಲು ನಾನು ನನ್ನ ಒಳಮನಸ್ಸಿನಲ್ಲಿ ಅಥವಾ ಹೊರ ಮನಸ್ಸಿನಲ್ಲಿಯೇ ಹಾಕಿಕೊಂಡಿರುವ ಆದರೆ ಹೊರ ಪ್ರಕಟಿಸದ ಉಪಾಯ ಎಂದು ಭಾವಿಸಿದರೂ ಭಾವಿಸಬಹುದು. ಆದರೆ ಬಿಹಾರದಲ್ಲಿ ಈಗ ಉಂಟಾಗಿರುವ ಪರಿಸ್ಥಿತಿ ಉಂಟಾದಾಗಲೆಲ್ಲಾ ನಾನು ಇದೇ ರೀತಿ ವರ್ತಿಸಿದ್ದೇನೆ ಎಂಬುದನ್ನು ನಾನಿಲ್ಲಿ ತಿಳಿಸಬಯಸುವೆ: 1966-67ರ ಬಿಹಾರದ ಕ್ಷಾಮದ ಸಮಯದಲ್ಲಿ, ನಾನು ಈ ಮುನ್ನ ವಿವರಿಸಿದಂತೆಯೇ ಕಾರ್ಯ ನಿರ್ವಹಿಸಿದ್ದೆ. ಸಂಕಷ್ಟಕ್ಕೀಡಾದ ಪ್ರದೇಶಗಳ ಎಲ್ಲ ಸರ್ವೋದಯ ಕಾರ್ಯವನ್ನು ನಿಲ್ಲಿಸಿ, ಅಕ್ಕಪಕ್ಕದ ಪ್ರದೇಶಗಳ ಸರ್ವೋದಯ ಕಾರ್ಯಕರ್ತರನ್ನು ಸಹ ಕರೆಸಿಕೊಂಡು ಪರಿಹಾರ ಕಾರ್ಯಗಳಿಗಾಗಿ ನೇಮಿಸಲಾಯಿತು. ಸಿದ್ಧರಾಜ್ ಧಡ್ಡಾ ಅವರಂತಹ ಪ್ರಮುಖರೂ ಸೇರಿದಂತೆ ಅಖಿಲಭಾರತ ಸರ್ವೋದಯ ಕಾರ್ಯಕರ್ತರನ್ನು ಬರಮಾಡಿಕೊಂಡು ಈ ಕಾರ್ಯದಲ್ಲಿ ತೊಡಗಿಸಲಾಯಿತು.

ಆ ಸಮಯದಲ್ಲಿ ಸರ್ವೋದಯ ಕಾರ್ಯಕರ್ತರಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಇದ್ದುವಾದರೂ, ಪರಿಹಾರ ಕಾರ್ಯದ ವಿಷಯದಲ್ಲಿ ಹೆಚ್ಚು ಕಡಿಮೆ ಎಲ್ಲರ ಬೆಂಬಲ ದೊರೆಯಿತು. ಗ್ರಾಮಸಭೆಗಳ ಮೂಲಕ ಪರಿಹಾರಕಾರ್ಯ ಕೈಗೊಳ್ಳುವುದನ್ನು ರಾಮಮೂರ್ತಿಜೀ[28] ಪ್ರಸ್ತಾಪಿಸಿದರು. ಅದಕ್ಕೆ ವಿನೋಬಾಜಿಯವರ ಅಂಗೀಕಾರ ದೊರೆಯಿತಾದರೂ, ಪರಿಹಾರ ಕಾಮಗಾರಿಯಂತಹ ಭಾರೀ ಕಾರ್ಯವನ್ನು ನಿರ್ವಹಿಸಬಲ್ಲ ಕ್ರಿಯಾಶೀಲ ಗ್ರಾಮಸಭೆಗಳು ಹತ್ತು ಹನ್ನೆರಡೂ ಇಲ್ಲದಿದ್ದುದು ದುರದೃಷ್ಟಕರ ಸಂಗತಿಯಾಗಿತ್ತು. ಗ್ರಾಮಗಳಲ್ಲಿ ಕಂಡುಬಂದ ಸಾಮಾನ್ಯ ಪ್ರವೃತ್ತಿ ಎಂದರೆ, ಪರಿಹಾರ ಕಾಮಗಾರಿಯ ಪ್ರಯೋಜನಗಳ ಭಾರೀ ಪಾಲು ಶ್ರೀಮಂತ ವರ್ಗಕ್ಕೆ ಸಲ್ಲುವಂತೆ ನೋಡಿಕೊಳ್ಳಲಾಗುತ್ತಿತ್ತು. ಪರಿಹಾರ ಕಾರ್ಯಾಚರಣೆಯನ್ನು ಗ್ರಾಮಸಭೆಗಳ ಮೂಲಕ ನಿರ್ವಹಿಸಬೇಕೆನ್ನುವುದಕ್ಕೆ ನನ್ನ ಅಭ್ಯಂತರವೇನೂ ಇರಲಿಲ್ಲವಾದರೂ - ಹಾಗೆ ನೋಡಿದರೆ, ನಾನದನ್ನು ಹೃದಯಪೂರ್ವಕವಾಗಿ ಬಯಸಿದ್ದೆ - ಬಿ.ಪ.ಸ[29] ಕೈಗೊಂಡಿದ್ದ ಬೃಹತ್ ಪ್ರಮಾಣದ ಕಾರ್ಯಾಚರಣೆಯ ದೃಷ್ಟಿಯಿಂದ, ಕೆಲವೇ ಕೆಲವು ಸ್ಥಳಗಳ ಹೊರತಾಗಿ ಇಡಿಯಾಗಿ ಗ್ರಾಮಸಭೆಗಳನ್ನೇ ಅವಲಂಬಿಸುವುದು ಅಸಾಧ್ಯಮಾತ್ರವಾಗಿತ್ತು. 1961ರಲ್ಲೂ ಪ್ರವಾಹವನ್ನೇ ಕಂಡರಿಯದ ಮೊಂಘೇರ್ ಜಿಲ್ಲೆಯ ಕೆಲವು ಭಾಗಗಳು - ಲಕ್ಷ್ಮೀಸರಾಯ್, ಖರಗಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳೆಂದು ಕಾಣುತ್ತದೆ - ವಿಪರೀತ ಮಳೆಯಿಂದಾಗಿ ಮಹಾಪೂರಕ್ಕೆ ಒಳಗಾದಾಗ - ಅದರಲ್ಲೂ ಬೆಟ್ಟಗುಡ್ಡ ಪ್ರದೇಶಗಳು ತೀವ್ರ ತೊಂದರೆಗೆ ಈಡಾಗಿದ್ದವು - ನಾನು ಇದೇ ನೀತಿಯನ್ನು ಅನುಸರಿಸಿದ್ದೆ.

---

28. ಆಚಾರ್ಯ ರಾಮಮೂರ್ತಿ, ಪ್ರಮುಖ ಸರ್ವೋದಯ ಕಾರ್ಯಕರ್ತರು ಹಾಗೂ ಬುದ್ಧಿಜೀವಿಗಳು.
29. 1967ರಲ್ಲಿ ಬಿಹಾರದಲ್ಲಿ ಕಂಡುಬಂದ, ಹಿಂದೆಂದೂ ಕಾಣದಂತಹ ಅನಾವೃಷ್ಟಿ ಹಾಗೂ ಕ್ಷಾಮವನ್ನೆದುರಿಸಲು ಜೆ.ಪಿ. ಸ್ಥಾಪಿಸಿದ ಬಿಹಾರ ಪರಿಹಾರ ಸಮಿತಿ.

ಮತ್ತೊಂದು ವಿಷಯ: ಬಹುಶಃ ನಾನು ಮೇಲೆ ಬರೆದಂತೆ ಸವಿನಯ ಕಾನೂನುಭಂಗ ಚಳವಳಿ ಕೊನೆಗೊಂಡಂತೆ ಅಥವಾ ಕೊನೆಗೊಳ್ಳುತ್ತಿದ್ದಂತೆಯೇ, ವಾಸ್ತವವಾಗಿ ಅದನ್ನು, ಪಟ್ನಾದ ಎಐಸಿಸಿ ಸಭೆಯಲ್ಲಿ - 1934ರ ಮೇನಲ್ಲಿ ಎಂದು ಕಾಣುತ್ತದೆ - ವಿಧ್ಯುಕ್ತವಾಗಿ ಸಹ ಹಿಂತೆಗೆದುಕೊಳ್ಳಲಾಯಿತು. 'ನಾವು'(ಕಾಂಗ್ರೆಸ್ ಸೋಶಲಿಸ್ಟರು) ಈ ಕ್ರಮವನ್ನು ಅನುಮೋದಿಸಿ, ರಚನಾತ್ಮಕ ಕಾರ್ಯಕ್ರಮವೊಂದನ್ನು ಅಂಗೀಕರಿಸಿದ್ದು ನಿಜ. ಸಮಾಜವಾದದಲ್ಲಿ ನಂಬಿಕೆ ಇರಿಸಿರುವ ಕಾಂಗ್ರೆಸ್ಸಿಗರ ಸಮ್ಮೇಳನವೊಂದನ್ನು ಬಿಹಾರ ಸಮಾಜವಾದಿ ಪಕ್ಷದ ಪರವಾಗಿ ನಾನು ಕರೆದದ್ದು ಇದೇ ಸಂದರ್ಭದಲ್ಲೇ. ಆಚಾರ್ಯ ನರೇಂದ್ರದೇವ ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು ಹಾಗೂ ಪ್ರೊಫೆಸರ್ ಅಬ್ದುಲ್‌ಬರಿ ಅವರು ಸ್ವಾಗತಸಮಿತಿಯ ನೇತೃತ್ವ ವಹಿಸಿದ್ದರು. ಸಮ್ಮೇಳನ, ಅಂಜುಮಾನ್ ಇಸ್ಲಾಮಿಯಾ ಆವರಣದಲ್ಲಿ ಸಭೆ ನಡೆದು ಭಾರತದ ರಾಷ್ಟ್ರೀಯ ಕಾಂಗ್ರಸ್ಸಿನೊಳಗೇ ಅಖಿಲ ಭಾರತ ಸಮಾಜವಾದಿ ಕಾಂಗ್ರಸ್ಸಿಗರ ಪಕ್ಷವನ್ನು ಸಂಘಟಿಸಲು ನನ್ನನ್ನು ಸಂಘಟನಾ ಕಾರ್ಯದರ್ಶಿಯಾಗಿ ನೇಮಿಸಿತು. ಈಗ ಅದನ್ನು ನೆನೆಸಿಕೊಂಡು ಯೋಚಿಸಿದರೆ, ತನ್ನದೇ ಆದ ನೀತಿ ಮತ್ತು ಕಾರ್ಯಕ್ರಮ, ಸದಸ್ಯತ್ವ, ಅಂಗರಚನೆ ಹಾಗೂ ನಿಯಮಗಳನ್ನು ಹೊಂದಿದ ಪಕ್ಷವೊಂದನ್ನು ಸ್ಥಾಪಿಸಲು ನಿರ್ಧರಿಸಿದ್ದು ತಪ್ಪೆಂದು ತೋರುತ್ತಿದೆ. ಪ್ರತ್ಯೇಕ ಅಸ್ತಿತ್ವವಿಲ್ಲದ, ಒಂದು ವಿಶಿಷ್ಟ ತಂಡ ಅಥವಾ ವಿಭಾಗವನ್ನು ರೂಪಿಸಿದ್ದರೆ ಉತ್ತಮವಿತ್ತು ಮತ್ತು ಘಟನಾಬದ್ಧವಾಗಿಯೂ ಇರುತ್ತಿತ್ತು. ಕಾಂಗ್ರೆಸ್ಸಿನ ವರಿಷ್ಠಮಂಡಳಿ ಈ ಬಗ್ಗೆ ನಮ್ಮ ವಿರುದ್ಧಕ್ರಮವನ್ನೇನೂ ಕೈಗೊಳ್ಳಲಿಲ್ಲ; ಯಾಕೆಂದರೆ, ಸಮಾಜವಾದೀ ಕಾಂಗ್ರೆಸ್ಸಿಗರಿಗೆ ಸ್ವಾತಂತ್ರ್ಯ ಸಾಧನೆಯ ಬಗ್ಗೆ ಇದ್ದ ಪ್ರಾಮಾಣಿಕ ಉತ್ಸಾಹ, ನಿಷ್ಠೆ ಹಾಗೂ ಅರ್ಪಣಾಮನೋಭಾವ ಪ್ರಶ್ನಾತೀತವಾಗಿತ್ತು.

ಆಗಸ್ಟ್ 30

ಹೋರಾಟದ ನನ್ನ ಕಲ್ಪನೆಯಲ್ಲಿ, ಸರ್ಕಾರದ ವಿರುದ್ಧ ಹೋರಾಟ ಒಳಗೊಂಡಿರುವುದು ಅನಿವಾರ್ಯವೇನಲ್ಲ ಎಂಬುದನ್ನು ಈ ಹಿಂದೆಯೇ ವಿವರಿಸಿದ್ದೇನೆ. ಸಹಕಾರ ಮತ್ತು ಘರ್ಷಣೆ - ಇವುಗಳಲ್ಲಿ ಯಾವ ನೀತಿಯನ್ನು ಅನುಸರಿಸಬೇಕೆಂದು ಸಂಬಂಧಿತ ಸರ್ಕಾರವನ್ನು ಅವಲಂಬಿಸಿರುತ್ತದೆ. ಪ್ರಶ್ನೆ ಅಂದರೆ, ಕಾಂಗ್ರೆಸ್ ಸರ್ಕಾರಗಳು ಜನತೆಯ ಬೇಡಿಕೆಗಳ ಮಂಡನೆಯ ಸಮಯದಲ್ಲೆಲ್ಲಾ, ಒಮ್ಮೆಯೂ ಸಹಕಾರದ ಹಾದಿಯನ್ನು ಅನುಸರಿಸಲು ಏಕೆ ಹಿಂಜರಿಯುತ್ತಿದ್ದವು? ಇದಕ್ಕೆ ಉತ್ತರ, ಪ್ರಧಾನಮಂತ್ರಿಗೆ ನಾನು ಬರೆದಿರುವ ಪತ್ರದಲ್ಲಿ ಸೂಚಿಸಿರುವಂತೆ, ಕಾಂಗ್ರೆಸ್ ಮಂತ್ರಿಗಳಲ್ಲೇ ಇರುವ ಭ್ರಷ್ಟಾಚಾರದಲ್ಲೇ ಅಡಗಿದೆ. ಪಕ್ಷ ಹಾಗೂ ಚುನಾವಣೆಗಳಿಗಾಗಿ ಶ್ರೀಮಂತ ವಾಣಿಜ್ಯೋದ್ಯಮಿಗಳಿಂದ ಕೋಟ್ಯಾಂತರ ರೂಪಾಯಿಗಳ ಹಣ ಸಂಗ್ರಹಿಸುವ

ಶ್ರೀಮತಿ ಗಾಂಧಿಯ ವರ್ತನೆಯೇ ರಾಜಕೀಯ ಭ್ರಷ್ಟಾಚಾರದ ಒಂದು ಉದಾಹರಣೆಯಾಗಿದ್ದು, ಅದು ಅಧಿಕಾರ ದಾಹಿ ಕಾಂಗ್ರೆಸ್ಸಿಗರ, ಸೂಕ್ಷ್ಮವಾದ ನೈತಿಕತೆಯನ್ನು ನಾಶಮಾಡಿದೆ. ಪಕ್ಷದ ಹಾಗೂ ಚುನಾವಣಾನಿಧಿಗಳನ್ನು ಜವಾಹರಲಾಲರ ಕಾಲದಲ್ಲೂ ಸಂಗ್ರಹಿಸಲಾಗುತ್ತಿತ್ತು. ಶ್ರೀ ಬಾಬೂ[30] ಅವರ ಕಾಲದಲ್ಲೂ(ಬಿಹಾರದ ಬಗ್ಗೆ ಮಾತ್ರ ಹೇಳುವುದಾದರೆ; ಆದರಿದು ಎಲ್ಲ ಕಡೆ ನಡೆಯುತ್ತಿತ್ತು) ಸಂಗ್ರಹಿಸಲಾಗುತ್ತಿತ್ತು ; ಆದರೆ ಸಂಗ್ರಹಣೆಯ ಪ್ರಮಾಣ ಬಹಳ ಕಡಿಮೆ ಇರುತಿತ್ತು ಮತ್ತು ಹೆಚ್ಚು ಕಡಿಮೆ ಎಲ್ಲ ಹಣದ ಲೆಕ್ಕ ಇಡಲಾಗುತ್ತಿತ್ತು. ಯಾವುದೇ ಸಂದರ್ಭದಲ್ಲಿ, ಹಣ ಸಂಗ್ರಹಣೆ ಎಷ್ಟಾಗಿದೆ ಎಂಬುದು ಜವಾಹರಲಾಲ್‌ರಿಗೆ ಮಾತ್ರ ಗೊತ್ತಿರುವಂತಹ ವ್ಯವಸ್ಥೆ ಇರಲಿಲ್ಲ ; ಇತರರಿಗೂ - ಉದಾಹರಣೆಗೆ ಸರ್ದಾರ್ ಪಟೇಲ್ ಹಾಗೂ ಎಸ್.ಕೆ. ಪಾಟೀಲರಿಗೆ - ಗೊತ್ತಿರುತ್ತಿತ್ತು. ಅಲ್ಲದೆ, ಪಕ್ಷದ ನಿಧಿಗಾಗಿ ವಾಣಿಜ್ಯ ಸಂಸ್ಥೆಗಳೊಂದಿಗೆ ನಡೆಸುವ ಚೌಕಾಶಿಯಲ್ಲಿ, ಶ್ರೀಮತಿ ಗಾಂಧಿಯ ಕಾಲದಲ್ಲಿ ಕೇಳಿಬರುತ್ತಿದ್ದಂತಹ, ಯಾರಾದರೂ ನಾಚಿಕೆಪಡುವಷ್ಟು ಪ್ರಮಾಣದ ಭ್ರಷ್ಟಾಚಾರ ಎಂದೂ ಕೇಳರಿಯದಂತಹದ್ದು.

ಅಂತೂ ಒಟ್ಟಿನಲ್ಲಿ, ಇತ್ತೀಚಿನ ವಿದ್ಯಾರ್ಥಿ ಹಾಗೂ ಜನತಾ ಆಂದೋಲನಗಳ ಮುಖ್ಯ ಗುರಿ ಭ್ರಷ್ಟಾಚಾರ ನಿವಾರಣೆಯಾಗಿದ್ದುದರಿಂದ; ರಾಜ್ಯಗಳಲ್ಲಿನ ಅಥವಾ ಕೇಂದ್ರದಲ್ಲಿನ ಕಾಂಗ್ರೆಸ್ ಮಂತ್ರಿಗಳು ವಾಸ್ತವವನ್ನು ಎದುರಿಸಲು ಸಿದ್ಧವಾಗಿಲ್ಲದೆ ಅವರು ಈ ಆಂದೋಲನದ ಬಗ್ಗೆ ತೋರಿದಂತೆ, ಏಕಪ್ರಕಾರದ ಆಕ್ರಮಣಕಾರೀ ಧೋರಣೆಯನ್ನು ತಳೆಯದೇ ಬೇರೆ ಮಾರ್ಗವೇ ಇರಲಿಲ್ಲ. ಬಹುಶಃ ಇದಕ್ಕೆ, ಹೊರನೋಟಕ್ಕೆ ಕಾಣದ ಪ್ರಬಲ ಕಾರಣವೂ ಇದೆ. ಆಂದೋಲನ ಕೇವಲ ತಾತ್ಕಾಲಿಕ ಪರಿಹಾರಗಳಿಂದ ತೃಪ್ತವಾಗದು; ಅದರ ಗುರಿ ಮೂಲಭೂತ ರಾಜಕೀಯ ಬದಲಾವಣೆಗಳೂ ಸೇರಿದಂತೆ, ಸಮಾಜದಲ್ಲಿ ಅತ್ಯಂತ ಮೂಲಭೂತ ಬದಲಾವಣೆಗಳನ್ನು-ಚಿಕ್ಕದಾಗಿ ಹೇಳುವುದಾದರೆ, ಸಂಪೂರ್ಣ ಕ್ರಾಂತಿ ತರುವುದು ಎಂಬುದು ಕಾಂಗ್ರೆಸ್ಸಿಗೆ ಗೊತ್ತಾದಾಗ- ಅದಕ್ಕೆ ಇದನ್ನೆಲ್ಲಾ ಜೀರ್ಣಿಸಿಕೊಳ್ಳುವುದು ಕಷ್ಟವಾಯಿತು. 'ಪ್ರಜಾಪ್ರಭುತ್ವಕ್ಕೆ ಅಪಾಯವಿದೆ', 'ಆಂತರಿಕ ಗೊಂದಲ'ದ ಅಪಾಯವಿದೆ ಮುಂತಾದ ಗುಲ್ಲೆಬ್ಬಿಸುವ ಮೂಲಕ ಸರ್ಕಾರ ಇದನ್ನು ವಿರೋಧಿಸಿದ್ದು ಸಹಜವಾಗಿಯೇ ಇದೆ.

ಈಗ ನಮ್ಮ ಮುಂದಿರುವ ಪ್ರಶ್ನೆ ಎಂದರೆ, ವಿರೋಧ ಪಕ್ಷಗಳು ಜವಾಬ್ದಾರಿಯುತವಾಗಿ ವರ್ತಿಸುತ್ತವೆಯೇ? ಇದನ್ನು ಕಾದು ನೋಡಬೇಕಾಗಿದೆ. ಆಂದೋಲನದಲ್ಲೊಮ್ಮೆ ಭಾಗಿಯಾಗಿರುವುದಿಂದ, ಇದನ್ನು ತಮ್ಮ ಪಕ್ಷವನ್ನು ಬೆಳೆಸಲು

30. ಶ್ರೀ ಬಾಬು ಎಂದೇ ಜನಪ್ರಿಯರಾಗಿದ್ದ ಶ್ರೀಕೃಷ್ಣ ಸಿನ್ಹ : ಬಿಹಾರದ ಮೊಟ್ಟಮೊದಲ ಮುಖ್ಯಮಂತ್ರಿ.

ಹಾಗೂ ಚುನಾವಣೆಗಳಲ್ಲಿ ಗೆಲ್ಲಲು ಉಪಯೋಗಿಸಿಕೊಳ್ಳುವ ಉದ್ದೇಶ ಅವುಗಳದ್ದು ಎಂಬುದು ನಿಸ್ಸಂದೇಹವಾದರೂ, (ಇದು ಎಲ್ಲ ರಾಜಕೀಯ ಪಕ್ಷಗಳ ಹುಟ್ಟುಗುಣವೇ ಆಗಿದೆ) ಸಂಪೂರ್ಣ ಕ್ರಾಂತಿಯ ಅಂತಿಮಗುರಿಗೆ ಬದ್ಧವಾಗಿರಬೇಕಾದ ಅರಿವು ಅವಕ್ಕೆ ಉಂಟಾಗಿದೆಯಲ್ಲದೆ, ಹೋರಾಟದ ಮೂಸೆಯಲ್ಲಿ ಮೂಲಭೂತ ಬದಲಾವಣೆಗೆ ಒಳಪಡುತ್ತಿವೆ. ಆಂದೋಲನವನ್ನು ಪಕ್ಷದ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಬಗ್ಗೆ ಹೇಳುವುದಾದರೆ, ಬಿಹಾರದಲ್ಲಿ ಅವು ಹಾಗೆ ಮಾಡಲು ಪ್ರಯತ್ನಿಸಿದೆ ಎಂಬುದನ್ನು ಹೇಳದಿರಲಾರೆ. ಹೆಚ್ಚು ಸಂಘಟಿತವಾಗಿದ್ದ ಹಾಗೂ ಶಿಸ್ತಿನಿಂದ ಕೂಡಿದ್ದ ಪಕ್ಷ ಈ ವಿಷಯದಲ್ಲಿ ಹೆಚ್ಚು ಅನುಕೂಲ ಮಾಡಿಕೊಂಡಿದೆ. ಆದರೆ ಒಟ್ಟಾರೆ ಪಕ್ಷದ ಉದ್ದೇಶಗಳಿಗಿಂತ ಹೋರಾಟದ ಉದ್ದೇಶಗಳಿಗೆ ಹೆಚ್ಚು ಮಹತ್ವ ಕೊಡಲಾಗಿತ್ತು ಎಂದು ಹೇಳಿದರೆ ತಪ್ಪಾಗಲಾರದು. ಒಂದು ಪಕ್ಷ ಅತಿ ಪ್ರಬಲವಾಗಿದ್ದು, ವಿದ್ಯಾರ್ಥಿಸಮುದಾಯ, ಪ್ರಜಾವರ್ಗ ಹಾಗೂ ಸರ್ವೋದಯ ಕಾರ್ಯಕರ್ತರ ಪೈಕಿ ಪಕ್ಷೇತರ ಶಕ್ತಿ ಬಹಳ ದುರ್ಬಲವಾಗಿದ್ದ ಸ್ಥಳಗಳಲ್ಲಿನ ಪರಿಸ್ಥಿತಿ ಮಾತ್ರ ಇದಕ್ಕೆ ಅಪವಾದವಾಗಿತ್ತು; ಇಂತಹ ಕಡೆ ಆ ಪಕ್ಷ ತನ್ನ ಹಿತಗಳನ್ನು ಹೋರಾಟದ ಹಿತಗಳೊಂದಿಗೆ ಗುರುತಿಸಿಕೊಳ್ಳುತ್ತಿತ್ತು. ಯಾವಪಕ್ಷಕ್ಕೂ ಬದ್ಧವಾಗದ ಶಕ್ತಿಗಳನ್ನು ಬಲಗೊಳಿಸುವ ದೃಷ್ಟಿಯಿಂದಲೇ ನಾನು ಛಾತ್ರ - ಯುವ ಸಂಘರ್ಷ ವಾಹಿನಿಯ ಹೆಸರಿನಲ್ಲಿ ಪಕ್ಷಾತೀತ ಯುವಜನ ಹಾಗೂ ವಿದ್ಯಾರ್ಥಿಗಳ ಹೊಸ ಸ್ವಯಂಸೇವಕ ಬಲವೊಂದನ್ನು ಸಂಘಟಿಸುವಲ್ಲಿ ನಿರತವಾಗಿದ್ದುದು. ನನ್ನನ್ನು ಬಂಧಿಸಲಾದ 1975ರ ಜೂನ್ 26ರಂದು ಪಟ್ನಾದಲ್ಲಿ ಈ ಯುವಜನರ ಭಾರೀ ಸಭೆಯೊಂದು ವ್ಯವಸ್ಥೆಯಾಗಿದ್ದು, ನಾನು ಆ ಸಭೆಯನ್ನು ಉದ್ದೇಶಿಸಿ ಮಾತನಾಡಬೇಕಿತ್ತು.

ಶಾಂತಿಯುತವಾದ ಸಾಮಾಜಿಕ ಅಥವಾ ಸಂಪೂರ್ಣ ಕ್ರಾಂತಿಯ ಈ ಕಲ್ಪನೆಯಲ್ಲಿ ಒಂದು ತೊಂದರೆ ಇದೆ. ಹೋರಾಟಕ್ಕೆ ಅಗತ್ಯವಾದ ಮಾನಸಿಕ ವಾತಾವರಣವನ್ನು ಇಷ್ಟ ಬಂದಾಗ ನಿರ್ಮಿಸಲು ಸಾಧ್ಯವೇ? ಇಲ್ಲದಿದ್ದರೆ, ವಿನೋಬಾಜಿಯ ಗ್ರಾಮಸ್ವರಾಜ್ಯ ಆಂದೋಲನದಂತೆ ಈ ಆಂದೋಲನದ ಕಲ್ಪನೆ ಕಲ್ಪನೆಯಾಗಿಯೇ ಉಳಿಯುತ್ತದೆ. ನಿಜ, ಸಾಮಾಜಿಕ ಹೋರಾಟವೊಂದಕ್ಕೆ(ಸಾಮಾಜಿಕ ಎಂಬುದನ್ನು ಅದರ ವಿಶಾಲ ಅರ್ಥದಲ್ಲಿ ಉಪಯೋಗಿಸಲಾಗಿದೆ) ಅಗತ್ಯವಾದ ಪೂರ್ವ ಪರಿಸ್ಥಿತಿಗಳು ಬಡತನ, ನಿರುದ್ಯೋಗ, ಕೆಟ್ಟ ಶಿಕ್ಷಣ ಮುಂತಾದವು ಇದ್ದಕಡೆ ಯಾವಾಗಲೂ ಇದ್ದೇ ಇರುತ್ತದೆ. ಆದರೂ ಕೂಡಾ ಹೋರಾಟದ ಕಿಡಿಗಳನ್ನು ಹೊತ್ತಿಸಲು, ಭಾರತೀಯ ಸಮಾಜದ ಥಣ್ಣನೆಯ ಹೃದಯ ಭುಗಿಲೇಳುವಂತೆ ಮಾಡಲು ಪ್ರಯತ್ನದ ಅಗತ್ಯವಿದೆ.

ಮತ್ತೊಂದು ಸಣ್ಣ ತೊಂದರೆಯೂ ಇದೆ. ಇದು ಕಾಂಗ್ರೆಸ್ಸೇತರ ಹಾಗೂ CPI ಯೇತರ ವಿರೋಧ ಪಕ್ಷಗಳಿಗೆ ಸಂಬಂಧಿಸಿದ್ದು, ಯಾವುದೇ ಹೋರಾಟದಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧದ ಹೋರಾಟ ಒಳಗೊಳ್ಳದಿದ್ದರೆ, ಅವು ಈ ಹೋರಾಟದಲ್ಲಿ

ಆಸಕ್ತಿ ವಹಿಸುವುದಿಲ್ಲ ; ಯಾಕೆಂದರೆ, ಅಂತಹ ಹೋರಾಟದಿಂದ ಅವಕ್ಕೇನೂ ವೈಯಕ್ತಿಕ ಲಾಭ ದೊರೆಯುವುದಿಲ್ಲ. ಹೋರಾಟ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧವಾಗಿದ್ದಲ್ಲಿ(ಹೋರಾಟಕ್ಕೇನಾದರೂ ಅರ್ಥ ಬರಬೇಕಾದರೆ ಇದು ಅಗತ್ಯ) ಅಂತಹ ಹೋರಾಟದಲ್ಲಿ ಭಾಗವಹಿಸುವುದರಿಂದ, ಚುನಾವಣೆಗಳಲ್ಲಿ ವಿಜಯ ಕಷ್ಟವಾಗಬಹುದು ಎಂಬ ಆತಂಕ ಅವಕ್ಕಿರಬಹುದು. ಆದರೆ ಎಡಪಕ್ಷಗಳಿಗೆ ಈ ಮಾತು ಅನ್ವಯಸಿದಿರುವ ಸಂಭವವುಂಟು.

ಈ ತೊಂದರೆಗಳಿಗೆ ಹೊಸದಾಗಿ ಪರಿಹಾರವೇನಾದರೂ ಇದೆಯೇ? ನಾವು ಮತ್ತೆ ಎಲ್ಲವನ್ನೂ ಹೊಸದಾಗಿ ಆರಂಭಿಸಹೊರಟರೆ, ನಮಗೆ ಈ ತೊಂದರೆಗಳು ತಪ್ಪಿದ್ದಲ್ಲ. ನಮ್ಮ ಮುಂದಿನ ಹೋರಾಟವನ್ನು ರೂಪಿಸಬೇಕು : ಬಂಧನಗಳು ನಡೆದು, ತುರ್ತುಪರಿಸ್ಥಿತಿಯನ್ನು ಹೇರಿದಾಗ ನಾವು ತಲುಪಿದ್ದ ಘಟ್ಟದಿಂದ ಮುಂದುವರಿಯಬೇಕು. ಹೋರಾಟಗಾರರನ್ನು ಹೆಚ್ಚು ಕಾಲ ಬಂಧಿಸಿಟ್ಟಿದ್ದಷ್ಟೂ, ಹೋರಾಟದ ಪುನರಾರಂಭಕ್ಕೆ ಭೂಮಿಕೆ ಹೆಚ್ಚು ಸೂಕ್ತವಾಗಿರುತ್ತದೆ. ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಚುನಾವಣೆಗಳು ನಡೆಯುವುದಿದ್ದರೆ, ಎಂದು ನಡೆಯಬಹುದು ಎಂದು ಊಹಿಸುವುದು ಈಗಲೇ ಸಾಧ್ಯವಿಲ್ಲ. 'ನಡೆಯುವುದಿದ್ದರೆ' ಎಂಬ ಹಿಂದಿನ ವಾಕ್ಯದ ಭಾವನೆ ತಪ್ಪೆಂದು ಕಾಣುತ್ತದೆ. ಕಳೆದೆರಡು ತಿಂಗಳುಗಳಲ್ಲಿ ನೀಡಿರುವ ಸಂದರ್ಶನ ಹಾಗೂ ಹೇಳಿಕೆಗಳಲ್ಲಿ, ಶ್ರೀಮತಿ ಗಾಂಧಿ ಚುನಾವಣೆಗಳನ್ನು ನಡೆಸಲು ಬದ್ಧವಾಗಿದ್ದಾಳೆ. ಯಾವಾಗ ನಡೆಸುತ್ತಾಳೆ ಎಂಬುದೇ ಪ್ರಶ್ನೆ. ಆಕೆಯ ಪ್ರಕಾರ ಚುನಾವಣೆಗೆ ಸೂಕ್ತ ಕಾಲ ಎಂದರೆ, ವಿರೋಧಪಕ್ಷಗಳು ಸಾಕಷ್ಟು ಹತಾಶವಾಗಬೇಕು, ಆಕೆಯ 20 ಅಂಶಗಳ ಕಾರ್ಯಕ್ರಮ, ಸಕ್ಕರೆಯಂತಹ ಮಾತುಗಳು ಹಾಗೂ ದಿಢೀರನೆ ಪ್ರಕಟವಾಗುವ ನೀತಿಗಳು-ಇವು ಪಟಾಕಿಗಳಂತೆ ಪಟಪಟನೆ ಸಿಡಿಯುತ್ತವಷ್ಟೆ; ನಂತರ ಎಲ್ಲಾ ಮೊದಲಿದ್ದಂತೆಯೇ - ಜನರನ್ನು ಮರಳು ಮಾಡಿರಬೇಕು. ಅಂತಹ ಘಳಿಗೆ ಬಂದ ತತ್‌ಕ್ಷಣವೇ ಶ್ರೀಮತಿ ಗಾಂಧಿ ಚುನಾವಣಾ ದಿನಾಂಕಗಳನ್ನು ಪ್ರಕಟಿಸುವಳು ಮತ್ತು ಬಂದಿಗಳನ್ನು ಬಿಡುಗಡೆ ಮಾಡುವಳು. ವಿರೋಧ ಪಕ್ಷಗಳ ಎಲ್ಲ ನಾಯಕರೂ ಮತ್ತು ಇತರ ಸ್ಥಾನಬದ್ಧರು ಇನ್ನೂ ಸೆರೆಮನೆಯಲ್ಲಿದ್ದಂತೆ ಚುನಾವಣೆ ನಡೆದರೆ, ಅದೊಂದು ದೊಡ್ಡ ತಮಾಷೆ ಆಗಿರುತ್ತದಷ್ಟೆ. ಇಂತಹ ಪರಿಸ್ಥಿತಿಯೊಂದಿಗೆ ಯಾವುದೇ ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳನ್ನು ನಡೆಸುವ ಪರವಾಗಿ ಭಾರತದಲ್ಲಾಗಲೀ ಅಥವಾ ವಿದೇಶಗಳಲ್ಲಾಗಲಿ, ಅದರಲ್ಲೂ ವಿಶೇಷವಾಗಿ ಅಮೇರಿಕಾದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಢಿಸುವುದು ಶ್ರೀಮತಿ ಗಾಂಧಿಗೆ ಕಷ್ಟವೇ ಆಗುತ್ತದೆ.

ಈಗ ನ್ಯಾಯಸಮ್ಮತವಾದ ಹಾಗೂ ಮುಕ್ತವಾದ ಚುನಾವಣೆಗಳು ನಡೆದಲ್ಲಿ, ಇತರ ರಾಜ್ಯಗಳಲ್ಲಿ ಏನೇ ಆಗಲಿ, ಬಿಹಾರದಲ್ಲಿ ಕಾಂಗ್ರೆಸ್ಸಿಗೆ ಭವಿಷ್ಯವೇ ಇಲ್ಲ.

ನಂತರ, ಹೋರಾಟಪರವಾದ ಸರ್ಕಾರವೊಂದು ರಚಿತವಾಗಿ, ಹೋರಾಟ ಮತ್ತೆ ಮುಂದುವರಿಯುತ್ತದೆ.(ಹಾಗೆ ನೋಡಿದರೆ ಈ ದಿನಗಳಲ್ಲೇ ಗುಜರಾತ್‌ನಲ್ಲಿ ಹೀಗೆ ಮಾಡಬಹುದು ; ಆದರೆ ನವನಿರ್ಮಾಣ ಆಂದೋಲನವನ್ನು ರಾಜ್ಯದಲ್ಲಿ ಈಗಿರುವ ಅತ್ಯಂತ ಅನುಕೂಲಕರವಾದ ರಾಜಕೀಯ ಪರಿಸ್ಥಿತಿಯೊಂದಿಗೆ ಬೆಸೆಯಲು ಸಮರ್ಥರಾದವರು ಅಲ್ಲಿ ಯಾರೂ ಇಲ್ಲವೆಂದು ಕಾಣುತ್ತದೆ)* ಜನತೆ ಹಾಗೂ ಸರ್ಕಾರದ ನಡುವಣ ಸಕ್ರಿಯ ಸಹಕಾರದ ಮೂಲಕ ಸಮಾಜವೊಂದನ್ನು ಹೇಗೆ ಬದಲಾಯಿಸಬಹುದು ಎಂಬುದನ್ನು ತೋರಿಸುವ ಅವಕಾಶ ಮತ್ತು ಅದೃಷ್ಟ ಬಿಹಾರದ್ದಿರಬಹುದೇನೋ.

ನಾನಿಲ್ಲಿ 'ಜನತೆಯ ಸಹಕಾರ', 'ಜನತೆಯ ಭಾಗವಹಿಸುವಿಕೆ' ಮುಂತಾದ ಸಾಮಾನ್ಯ ಹೇಳಿಕೆಗಳ ಬಗ್ಗೆ ಒಂದಿಷ್ಟು ಹೇಳಬಯಸುವೆ. ಶ್ರೀಮತಿ ಗಾಂಧಿ ಸಹ ಈ ಬಗ್ಗೆ ತುಂಬಾ ಮಾತನಾಡುತ್ತಿದ್ದಾಳೆ ಮತ್ತು ಶ್ರೀ ಬರೂವಾ - ಹೌದು, ಶ್ರೀ ಬರೂವಾರನ್ನು ಹೇಗೆ ಮರೆಯಲಾದೀತು - ಇದನ್ನು ಕಾರ್ಯಗತಗೊಳಿಸಲು ಜನತಾ ಸಮಿತಿಗಳನ್ನು ರಚಿಸುವಲ್ಲಿ ನಿರತರಾಗಿದ್ದಾರೆ. ಸಾಮುದಾಯಿಕ ಅಭಿವೃದ್ಧಿಯ ಆ ಉತ್ಸಾಹದ ದಿನಗಳಲ್ಲಿ ಅದು ಬರೀ ಶಬ್ದಬಡಾಯಿ ಮಾತ್ರವಾಗಿತ್ತು. ಆದರೆ ಕೆಳಹಂತದಲ್ಲಿ - ಹಳ್ಳಿಗಳಲ್ಲಿ - ಕೆಲಸ ಮಾಡುತ್ತಿದ್ದ ನಮಗೆ ಅದೆಲ್ಲದರ ಗುಟ್ಟು ಗೊತ್ತಾಯಿತು : ಸಾಮುದಾಯಿಕ ಅಭಿವೃದ್ಧಿ ಕಾರ್ಯಕ್ರಮದ ಹೆಸರಲ್ಲಿ ಬರುತ್ತಿದ್ದ ಎಲ್ಲವನ್ನೂ ಅಥವಾ ಹೆಚ್ಚು ಕಡಿಮೆ ಎಲ್ಲವನ್ನೂ, ಹಳ್ಳಿಗಳಲ್ಲಿನ ಶ್ರೀಮಂತ ವರ್ಗ ಕಬಳಿಸುತ್ತಿತ್ತು.

ಬಿಹಾರಕ್ಕಾಗಿ ನಾನು ಕಲ್ಪಿಸಿರುವ ಕಾರ್ಯಕ್ರಮದ ಅರ್ಥವೇ ಬೇರೆ. ಹೋರಾಟ ಸಮಿತಿಗಳು ಮತ್ತು ಜನತಾ ಸರ್ಕಾರಗಳು ಆಂದೋಲನ ಕೈಗೆತ್ತಿಕೊಂಡಿದ್ದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ತುರ್ತು ಪರಿಸ್ಥಿತಿ ಘೋಷಣೆಯವರೆಗೆ ತಲುಪಿದ್ದ ಹಂತದಿಂದ ಮುನ್ನಡೆಯುತ್ತವೆ ; ರಾಜ್ಯ ಸರ್ಕಾರ ಎಲ್ಲಿ ತನ್ನ ಸಹಾಯದ ಅಗತ್ಯವಿದೆಯೋ ಅಲ್ಲಿ, ಈ ಆಂದೋಲನಕ್ಕೆ ಸಹಾಯ ಮಾಡುತ್ತದೆ ಮತ್ತು ಎಲ್ಲಿ ಸ್ವತಃ ತನಗೇ ಸಹಾಯ ಬೇಕೋ, ಅಲ್ಲಿ ಆಂದೋಲನದಿಂದ ಸಹಾಯ ಪಡೆಯುತ್ತದೆ. ಇದೊಂದು ಅದ್ಭುತ ಚಿತ್ರವಾಗಿದ್ದು, ಈ ಐತಿಹಾಸಿಕ ಕಾರ್ಯಾಚರಣೆಯಲ್ಲಿ ನಾನು ವಹಿಸಬಹುದಾದ ಪಾತ್ರಕ್ಕೆ ಅವಕಾಶ ಕೊಡು ಎಂದು ದೇವರನ್ನು ಪ್ರಾರ್ಥಿಸುವೆ.

ಇತರ ರಾಜ್ಯಗಳು? ಹೌದು, ಬಿಹಾರದ ಉದಾಹರಣೆ ಮಿಕ್ಕೆಲ್ಲ ರಾಜ್ಯಗಳಿಗೆ ಸ್ಫೂರ್ತಿದಾಯಕವಾಗುತ್ತದೆ ಮತ್ತು ಆಂದೋಲನ -ಅಂದರೆ ಹೋರಾಟ ಮತ್ತು ಪುನರ್‌ನಿರ್ಮಾಣ, ಘರ್ಷಣೆ ಮತ್ತು ಸಹಕಾರ -ವ್ಯಾಪಿಸುತ್ತದೆ ಎಂದು ನನ್ನ ಭಾವನೆ.

---

* ಇದನ್ನು ಬರೆದಾಗ, ಶ್ರೀ ಬಾಬೂಭಾಯಿ ಪಟೇಲ್ ನೇತೃತ್ವದ ಜನತಾರಂಗ ಅಧಿಕಾರದಲ್ಲಿತ್ತು.

ಆಗಸ್ಟ್ 31

ಪ್ರೀತಿಯ ಶ್ರೀ ದೇವಸಹಾಯಂ,[31]

ವಾಗ್ದಾನದ ('ಪರೋಲ್') ಮೇಲೆ ಬಿಡುಗಡೆ ಮಾಡಬೇಕೆಂಬ ಬಗ್ಗೆ ಪ್ರಧಾನಮಂತ್ರಿಯವರಿಗೆ ಸಲ್ಲಿಸಿದ ಕೋರಿಕೆಯನ್ನು ಕುರಿತು ನಾನೀಗ ಯೋಚಿಸುತ್ತಿರುವೆ. ನಾನು ಈ ಅವಕಾಶವನ್ನು ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಳ್ಳುವ ಸಾಧ್ಯತೆಯೇ ಪ್ರಧಾನಮಂತ್ರಿಯವರ ಮನಸ್ಸನ್ನು ಹೆಚ್ಚು ಕಾಡಿ, ನನ್ನ ಕೋರಿಕೆಯನ್ನು ಅಂಗೀಕರಿಸುವ ನಿರ್ಧಾರ ಕೈಗೊಳ್ಳಲು ಅವರಿಗೆ ಕಷ್ಟವಾಗಬಹುದೆಂದು ನನಗನ್ನಿಸುತ್ತದೆ. ಆದರೆ ಈ ಬಗ್ಗೆ ಆತಂಕಪಡಬೇಕಾದ ಅಗತ್ಯವೇ ಇಲ್ಲವೆಂದು ಪ್ರಧಾನಮಂತ್ರಿಯವರಿಗೆ ಆದಷ್ಟು ಬೇಗ ತಿಳಿಸಬೇಕೆಂದು ಈ ಮೂಲಕ ಕೋರುತ್ತೇನೆ. ನನಗೆ ನೀಡಲಾಗುವ ಸ್ವಾತಂತ್ರ್ಯದ ಅವಧಿಯನ್ನು ಯಾವುದೇ ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದನ್ನು ನಾನು ಅನೈತಿಕ ಹಾಗೂ ಅಸಭ್ಯವರ್ತನೆ ಎಂದು ಪರಿಗಣಿಸುವೆ. ನಿಜವಾಗಿಯೂ ಈ ಸಂದರ್ಭದಲ್ಲಿ ರಾಜಕೀಯದ ಬಗ್ಗೆ ಯೋಚಿಸುವುದು, ಜನತೆಯ ನೋವು ಮತ್ತು ಸಂಕಷ್ಟಗಳ ಬಗ್ಗೆ ಪರಿಹಾಸ್ಯ ಮಾಡಿದಂತೆಯೇ. ಕಿಂಚಿತ್ತಾದರೂ ಮಾನವೀಯ ಅಂತಃಕರಣವುಳ್ಳ ಯಾರೇ ಆಗಲಿ ಇಂತಹ ಕೆಲಸ ಮಾಡುವ ಯೋಚನೆ ಮಾಡಲಾರರು.

ಈಗತಾನೇ ನಾನು, ಪ್ರಧಾನಮಂತ್ರಿಗೆ ಕಳಿಸಿದ ಸಂದೇಶದ ಕರಡನ್ನು ಮತ್ತೆ ಓದಿರುವೆ (ಇದನ್ನು ದೂರವಾಣಿ ಅಥವಾ ತಂತಿಯ ಮೂಲಕ ಕಳುಹಿಲಾಗುವಂತೆ, ಒಂದು ರೀತಿಯ ತಂತಿಸಂದೇಶದ ಭಾಷೆಯಲ್ಲಿ ಬರೆಯಲಾಗಿತ್ತು). ಸಂದೇಶವನ್ನು ಮತ್ತೆ ಓದಿದ ನಂತರ, ಪರಿಹಾರ ಕಾರ್ಯಾಚರಣೆಗೆ ಮಾತ್ರ ನನ್ನ ಚಟುವಟಿಕೆಗಳನ್ನು ಸೀಮಿತಗೊಳಿಸುವೆ ಎಂಬ ಭರವಸೆ ಅದರಲ್ಲೇ ಈಗಾಗಲೇ ಮೂಡಿದೆ ಎಂದು ನನಗನ್ನಿಸುತ್ತದೆ. 'ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಸಹಕಾರದೊಡನೆ' ಎಂಬ ಶಬ್ದಗಳಲ್ಲಿ ಅದು ಹೆಚ್ಚು ಕಡಿಮೆ ಸ್ಪಷ್ಟವಾಗಿದೆ.

ಪ್ರಧಾನಮಂತ್ರಿಯವರು ನನ್ನ ಕೋರಿಕೆಯ ಬಗ್ಗೆ ತೀರ್ಮಾನ ಕೈಗೊಳ್ಳುವ ಮುನ್ನವೇ ನನ್ನ ಈ ಸ್ಪಷ್ಟೀಕರಣವನ್ನು ಅವರಿಗೆ ತಲುಪಿದರೆ ನಾನು ನಿಮಗೆ ಕೃತಜ್ಞನಾಗಿರುವೆ.

ನಿಮ್ಮ ವಿಶ್ವಾಸಿ

ಜಯಪ್ರಕಾಶ್ ನಾರಾಯಣ್

---

31. ಶ್ರೀ ಎಂ.ಜಿ. ದೇವಸಹಾಯಂ, ಚಂಡೀಘಡದ ಡೆಪ್ಯುಟಿ ಕಮೀಷನರ್.

ಆಗಸ್ಟ್ 31

(ಟಿಪ್ಪಣಿಗಳ ಮುಂದುವರಿಕೆ)

ನಿನ್ನೆ ನಾನು ಬರೆದಿದ್ದು ಆಂದೋಲನ ಇತರ ರಾಜ್ಯಗಳಿಗೆ ಹಬ್ಬಬಹುದಾದ ಒಂದು ಮಾರ್ಗವನ್ನು ಕುರಿತಂತೆ ಮಾತ್ರ. ಆದರೆ ಬೇರೊಂದು, ಪ್ರಾಯಶಃ ಇನ್ನೂ ಹೆಚ್ಚು ವ್ಯಾಪಕವಾಗಿರುವ ಮಾರ್ಗವೂ ಇದೆ. ಗುಜರಾತ್ ಹಾಗೂ ಬಿಹಾರ ಆಂದೋಲನ ತೋರಿಸಿದಂತೆ, ಅದು ಒಂದು ಸಣ್ಣ ಚಳವಳಿಯಿಂದ ಬೆಳೆದು ನಂತರ ಕಾಡ್ಗಿಚ್ಚಿನಂತೆ ಹಬ್ಬಬಹುದು. ಗುಜರಾತ್‌ನಲ್ಲಿ ಅದು ವಿದ್ಯಾರ್ಥಿನಿಲಯವೊಂದರ ಮೇಲ್ವಿಚಾರಕರೊಬ್ಬರ ವಿರುದ್ಧ ಚಳವಳಿಯಾಗಿ ಹುಟ್ಟಿ, ತೀವ್ರಗತಿಯಲ್ಲಿ ಬೆಳೆದು, ಗುಜರಾತ್ ಮಂತ್ರಿಮಂಡಳ ರಾಜೀನಾಮೆ ನೀಡುವಂತೆ ಮತ್ತು ಅಂತಿಮವಾಗಿ ವಿಧಾನಸಭೆಯನ್ನು ವಿಸರ್ಜಿಸುವಂತೆ ಶ್ರೀಮತಿ ಗಾಂಧಿ ಹಾಗೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಯಶಸ್ವಿಯಾಯಿತು. ದುರದೃಷ್ಟವಶಾತ್ ಈ ಆಂದೋಲನವನ್ನು, ಅದರ ಇತರ ಗುರಿಗಳೂ - ಭ್ರಷ್ಟಾಚಾರದ ನಿರ್ಮೂಲನೆ, ಶೈಕ್ಷಣಿಕ ಸುಧಾರಣೆ, ನಿರುದ್ಯೋಗ ಸಮಸ್ಯೆಯ ಪರಿಹಾರ - ಈಡೇರುವವರೆಗಾದರೂ ಮುಂದುವರಿಸಲು ಯಾರೂ ಮುಂದೆ ಬರಲಿಲ್ಲ. ಗುಜರಾತಿನ ವಿದ್ಯಾರ್ಥಿಗಳಿಗೆ ಇದೊಂದು ಅದ್ಭುತ ವಿಜಯ; ತಮ್ಮ ಯಶಸ್ಸಿನಿಂದ ಅವರು ದಿಗ್ಭ್ರಮೆಗೆ ಒಳಗಾಗಿದ್ದರೆ, ಯಾರೂ ಅವರನ್ನು ದೂಷಿಸಲಾಗದು. ಈ ಯಶಸ್ಸು ಹಾಗೂ ಮೊರಾರ್ಜಿ ಭಾಯಿಯ ಉಪವಾಸ, ಚುನಾವಣೆಗಳು ನಡೆಯಲು ಮತ್ತು ಜನತಾರಂಗ ಜಯಗಳಿಸಲು ದಾರಿಮಾಡಿದವು. ಇದು ಕೂಡಾ ಹೋರಾಟದ ಅಪೂರ್ವ ಕೊಡುಗೆಯಾಗಿತ್ತು. ಆದರೆ ಚಂದ್ರಶೇಖರ್ ಕೇಳಿದಂತೆ, ಚರಿತ್ರೆಕಾರರು ಈ ಪ್ರಶ್ನೆ ಕೇಳಬಹುದು: ಇದೆಲ್ಲಾ ಏತಕ್ಕಾಗಿ? ಇಷ್ಟೇ ಆಗಿದ್ದರೆ, ಮುಂದಿನ ಚುನಾವಣೆಗಳವರೆಗೆ ಏಕೆ ಕಾಯಬಾರದಿತ್ತು? ಇದು ಶ್ರೀಮತಿ ಗಾಂಧಿಯ ಅಪಪ್ರಚಾರದ ಪ್ರಮುಖ ವಸ್ತುವೂ ಆಗಿದೆ.

ಹೌದು, ಗುಜರಾತ್ ಆಂದೋಲನ ಕಾಂಗ್ರೆಸ್ಸಿನ ಸ್ಥಾನದಲ್ಲಿ ಜನತಾರಂಗವನ್ನು ಅಧಿಕಾರಕ್ಕೆ ತರುವುದರಲ್ಲೇ ಕೊನೆಗೊಂಡಿದ್ದರೆ ಈ ಪ್ರಶ್ನೆಗೆ ಮತ್ತು ಈ ಪ್ರಚಾರ ವೈಖರಿಗೆ ಅರ್ಥವಿರುತ್ತಿತ್ತು. ಮೇಲ ಮೇಲಕ್ಕೆ ಇದು ಹಾಗೆ ಕಂಡರೂ ಕಾಣಬಹುದು. ಆದರೆ ಆಳವಾಗಿ ನೋಡಿದಾಗ ಗುಜರಾತ್ ಆಂದೋಲನ, ಭಾರತ ಪ್ರಜಾಪ್ರಭುತ್ವದ ಗುರಿ ಕಾಣಲು ದಾರಿ ತೋರಿಸಿತು ಎಂಬ ತೀರ್ಮಾನಕ್ಕೆ ಬರುವುದು ಅನಿವಾರ್ಯ. ಇಲ್ಲಿ ಪ್ರಜಾಪ್ರಭುತ್ವ ಎಂದರೆ ಸಂಸದೀಯ ಪ್ರಜಾಪ್ರಭುತ್ವ - ಇಲ್ಲಿ ಪ್ರಜೆಗಳು ಕೇವಲ ಮೂಕಪ್ರೇಕ್ಷಕರಾಗಿ ಉಳಿಯದೆ ಸಕ್ರಿಯವಾಗುತ್ತಾರೆ, ಪ್ರಶ್ನೆಗಳನ್ನು ಕೇಳುತ್ತಾರೆ, ಕೊನೆಯಲ್ಲಿ ಅಂತಿಮ ತೀರ್ಮಾನ ಕೊಡುವ ಪ್ರಭುಗಳಾಗಿ ಹೊರಹೊಮ್ಮುತ್ತಾರೆ.

ಗುಜರಾತ್ ಆಂದೋಲನ ಭಾರತದಲ್ಲಿಯೇ ಮೊಟ್ಟಮೊದಲಬಾರಿಗೆ. ಸಂಘಟಿತ ಪಕ್ಷಗಳ ಹೆಗಲೇರಿ ತಮ್ಮ ದಿಕ್ಕನ್ನು ಸೂಚಿಸುವ ಜನತೆಯ ಮೂಲಾಧಿಕಾರವನ್ನು ಎತ್ತಿ ಹಿಡಿಯಿತು ನಿಜ. ಈ ಕುರುಕ್ಷೇತ್ರದ ನೇತೃತ್ವವನ್ನು ವಿದ್ಯಾರ್ಥಿಗಳು ಹಾಗೂ ಯುವಜನರು ವಹಿಸಿದಂತೆ ಕಾಣುತ್ತಿತ್ತು; ಆದರೆ ಅವರ ಹಿಂದೆ ಜನತೆಯ ಬೆಂಬಲವಿಲ್ಲದಿದ್ದಲ್ಲಿ ಹೋರಾಟ ಯಶಸ್ವಿಯಾಗುವುದು ಅಸಾಧ್ಯವಾಗಿತ್ತು. ಜನತೆ ವಿದ್ಯಾರ್ಥಿಗಳನ್ನು ಬೆಂಬಲಿಸಿದ್ದೇಕೆಂದರೆ, ಅವರ ಸಂಕಷ್ಟಗಳನ್ನು ಆಸೆ ಆಕಾಂಕ್ಷೆಗಳನ್ನು(ಅವು ಎಷ್ಟೇ ಅಸ್ಪಷ್ಟವಾಗಿದ್ದರೂ) ವಿದ್ಯಾರ್ಥಿಗಳು ಪ್ರತಿಬಿಂಬಿಸಿದರು - ಅವುಗಳಿಗೊಂದು ಚೌಕಟ್ಟು ನಿರ್ಮಿಸಿದರು. ಭಾರತ ಮತ್ತು ಭಾರತೀಯ ಪ್ರಜಾಸತ್ತೆ ಗುಜರಾತ್ ಆಂದೋಲನದ ನಂತರವೂ ಹಾಗೆಯೇ ಉಳಿಯುವುದು ಅಸಾಧ್ಯ. ಇದನ್ನು ಹೇಳಿದ ನಂತರವೂ ನಾನು ಈ ಅಂಶಗಳನ್ನು ಒತ್ತಿ ಹೇಳಲೇಬೇಕು: (ಅ) ಗುಜರಾತ್ ಆಂದೋಲನ ವಿಧಾನಸಭೆಯ ವಿಸರ್ಜನೆಯೊಂದಿಗೇ ಕೊನೆಗೊಂಡದ್ದು ಮತ್ತು (ಆ) ಸಮಾಜದಲ್ಲಿ ಸಂಪೂರ್ಣ ಕ್ರಾಂತಿಯನ್ನು ತರುವಲ್ಲಿ ಘರ್ಷಣೆಗೆ ಬದಲಾಗಿ ಸಹಕಾರ ಹೇಗೆ ಏರ್ಪಡಬಹದು ಎಂಬುದಕ್ಕೆ ಉದಾಹರಣೆಯಾಗಬಲ್ಲ ಕ್ರಾಂತಿಕಾರೀ ಆಂದೋಲನವೊಂದನ್ನು - ಅದನ್ನು ನವ ನವನಿರ್ಮಾಣ ಆಂದೋಲನ ಅಥವಾ ಇನ್ನಾವ ಹೆಸರಿನಿಂದಾದರೂ ಕರೆಯಿರಿ - ಪುನರಾರಂಭಿಸಲು, ಸ್ನೇಹಪರ ಹಾಗೂ ಅನುಕೂಲಕರವಾಗಿರುವ ಪ್ರಸಕ್ತ ರಾಜ್ಯಸರ್ಕಾರವನ್ನು ಬಳಸಿಕೊಳ್ಳುವುದಕ್ಕಾಗಿ ಯಾರೂ ಮುಂದೆ ಬರದಿದ್ದುದು ನನ್ನ ಪಾಲಿಗೆ ಖೇದಕರ ಸಂಗತಿಗಳಾಗಿವೆ.

ನಾನು ಆರಂಭದಲ್ಲಿ ಹೇಳಹೊರಟ ವಿಷಯದಿಂದ ಬಹಳ ದೂರ ಹೋಗಿದ್ದೇನೆಂದು ಕಾಣುತ್ತದೆ. ಗುಜರಾತ್ ಹಾಗೂ ಬಿಹಾರದ ನಂತರ ಯಾವುದೇ ರಾಜ್ಯ ಅಥವಾ ಪ್ರದೇಶದಲ್ಲಿ ಯಾವ ಸಣ್ಣ ಕಿಡಿಯೊಂದು, ಕ್ರಾಂತಿಕಾರಿ ಆಂದೋಲನಕ್ಕೆ ಕಾರಣವಾಗುತ್ತದೆಂಬುದನ್ನು ಯಾರೂ ಹೇಳಲಾರದು ಎಂದಷ್ಟೇ ನಾನು ಹೇಳಬಯಸುವುದು. ಮೇಲೆ ತಿಳಿಸಿದ ಎರಡು ರಾಜ್ಯಗಳಲ್ಲಿದ್ದಂತೆ, ಎಲ್ಲ ಕಡೆಗಳಲ್ಲೂ ಆಂದೋಲನಕ್ಕೆ ಅಗತ್ಯವಾದ ಪೂರ್ವ ಪರಿಸ್ಥಿತಿಗಳಿದ್ದು, ಅದು ದೇಶದ ಯಾವುದೇ ಕಡೆ ಆರಂಭವಾಗಿ ಹರಡಬಹುದಾಗಿದೆ. ಇದು ಬಿಹಾರ ಆಂದೋಲನ ಭಾರತದ ಇತರ ಭಾಗಗಳಲ್ಲೂ ಹರಡಬಹುದಾದ ಇನ್ನೊಂದು -ಈ ಬಗ್ಗೆ ಈಗಲೇ ವಿವರವಾಗಿ ಏನೂ ಹೇಳಲಾಗದ - ರೀತಿಯಾಗಿದೆ.

ಸೆಪ್ಟೆಂಬರ್ 1

(ಮುಂದುವರೆದ ಟಿಪ್ಪಣಿಗಳು)

ತನ್ನ ಹೇಳಿಕೆಯೊಂದರಲ್ಲಿ, ನನ್ನ ಹಾಗೂ ಆಂದೋಲನದಲ್ಲಿ ಒಳಗೊಂಡಿದ್ದ ನನ್ನ ಮಿತ್ರರ ಬಗ್ಗೆ ಅಪರೋಕ್ಷವಾಗಿ ಪ್ರಸ್ತಾಪಿಸಿರುವ ಶ್ರೀಮತಿ ಗಾಂಧಿ ವಿದ್ಯಾರ್ಥಿಗಳು

ತಪ್ಪನ್ನೇ ಮಾಡಲಾರರು ಎಂದು ಅವರು ಭಾವಿಸಿದ್ದಾರೆ; ಅವರು ಬಸ್ಸುಗಳನ್ನು ಸುಡಬಹುದು ಮತ್ತು ಇತರ ರೀತಿಯ ಹಿಂಸಾಚಾರ ನಡೆಸಬಹುದು, ರೌಡಿತನಕ್ಕೆ ಇಳಿಯಬಹುದು, ಆದರೆ ನಮಗವರು ಪವಿತ್ರವಾದವರಾದ್ದರಿಂದ ಅವರ ವಿರುದ್ಧ ಏನೂ ಹೇಳಲಾಗದು ಮುಂತಾಗಿ ತಿಳಿಸಿದ್ದಾಳೆ. ಈಗ ನಾನು ಶ್ರೀಮತಿ ಗಾಂಧಿಯ ಹೇಳಿಕೆಗಳ ಬಗ್ಗೆ ಯಾವುದೇ ಟೀಕೆ ಮಾಡದಿರಲು ನಿರ್ಧರಿಸುವೆನಾದರೂ, ವಿದ್ಯಾರ್ಥಿಗಳು ಬಿಹಾರ ಹಾಗೂ ಗುಜರಾತ್ ಆಂದೋಲನಗಳೆರಡರಲ್ಲೂ ಅತ್ಯಂತ ಮಹತ್ವದ ಪಾತ್ರ ವಹಿಸುವುದರಿಂದ ಮತ್ತು ಮುಂದೆ ಕೂಡಾ ಇದಕ್ಕಿಂತ ಹೆಚ್ಚಿನ ಮಹತ್ವದ ಪಾತ್ರ ವಹಿಸಲಿರುವುದರಿಂದ ಈ ಬಗ್ಗೆ ನಾನು ನನಗನ್ನಿಸಿದ ಒಂದಿಷ್ಟನ್ನು ಹೇಳಲೇಬೇಕಾಗಿದೆ. ಗುಜರಾತ್‌ನಲ್ಲಿ ಆಸ್ತಿ ಹಾಗೂ ಜೀವಹಾನಿ ಆಗುವಂತಹ ಹಿಂಸೆ ನಡೆದದ್ದು ನಿಜ. ಆದರೆ ಇಂತಹ ಕೃತ್ಯಗಳಲ್ಲಿ ತೊಡಗಿದ್ದು ನಾವು ಎಂತಹ ಬಲಿಷ್ಠ ಶಕ್ತಿ ಎಂಬುದನ್ನು ತೋರಿಸಲು ಆತುರಗೊಂಡಿದ್ದ ಸಣ್ಣ ವಿದ್ಯಾರ್ಥಿವರ್ಗ ಅಥವಾ ಶಾಂತಿಯುತ ಮಾರ್ಗಗಳಿಗೆ ಬದ್ಧವಾಗಿಲ್ಲದ ರಾಜಕೀಯ ಪಕ್ಷದಿಂದ ಪ್ರಭಾವಿತರಾದ ಜನರು ಮಾತ್ರ. ಹೆಚ್ಚಿನ ಸಂದರ್ಭಗಳಲ್ಲಿ, ಹಿಂಸಾಚಾರ ನಡೆದದ್ದು ಕೆಲವೇಳೆ ತೀವ್ರ ಘಟ್ಟವನ್ನು ಮುಟ್ಟಿದ ಪೋಲೀಸರ ಪ್ರಚೋದನೆ ಮತ್ತು ಅಸಭ್ಯ ವರ್ತನೆಯಿಂದಾಗಿ. ಯಾರು ಏನಾದರೂ ಹೇಳಿಕೊಳ್ಳಲಿ, ಗುಜರಾತ್ ಆಂದೋಲನದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಸಮುದಾಯದ ಹೆಚ್ಚಿನ ಭಾಗ ಶಾಂತಿಯುತ ವಿಧಾನಗಳಲ್ಲಿ ನಂಬಿಕೆ ಇರಿಸಿದ್ದು ಅವಕ್ಕೆ ಬದ್ಧವಾಗಿವೆ. ಕುತೂಹಲದ ಸಂಗತಿ ಎಂದರೆ, ಹಿಂಸಾ ವಿಧಾನವನ್ನು ತೀವ್ರವಾಗಿ ಪ್ರತಿಪಾದಿಸುತ್ತಿದ್ದ ನವ ನಿರ್ಮಾಣ ಸಮಿತಿಯ ಪ್ರಮುಖ ನಾಯಕನೊಬ್ಬ ಈಗ ಶ್ರೀಮತಿ ಗಾಂಧಿಯ ಪಕ್ಷ ಸೇರಿದ್ದಾನೆ.

ಬಿಹಾರದ ಬಗ್ಗೆ ಹೇಳುವುದಾದರೆ, ನಾನು ಮಧ್ಯ ಪ್ರವೇಶಿಸದಿದ್ದರೆ ಮತ್ತು ಸಕ್ರಿಯ ಮಾರ್ಗದರ್ಶನ ನೀಡಿರದಿದ್ದರೆ, ವಿದ್ಯಾರ್ಥಿಗಳಿಂದ ವ್ಯಾಪಕ ಹಿಂಸಾಚಾರ ನಡೆಯುತ್ತಿತ್ತೆಂಬುದನ್ನು ಅಧಿಕೃತ ವಲಯಗಳಲ್ಲೂ ಸಹ ಒಪ್ಪಿಕೊಳ್ಳಲಾಗಿದೆ. ಆದರೆ (ಬೆನ್ನು ಹಿಡಿದಿರುವ) ಭೂತಕ್ಕೆ ಸಲ್ಲಲೇಬೇಕಾದ ಮೆಚ್ಚುಗೆಯನ್ನು ಸಲ್ಲಿಸುವ ಪ್ರಮಾಣಿಕತೆ ಆಕೆಗಿಲ್ಲ. ವಿದ್ಯಾರ್ಥಿಗಳು ಬಸ್ಸುಗಳನ್ನು ಸುಟ್ಟು ನಾಶಮಾಡಬಹುದು. ಆದರೆ ಅವರ ಈ ವರ್ತನೆಯನ್ನು ನಾನು ಮಾತ್ರ(ಆಕೆ ಯಾವಾಗಲೂ ನನ್ನ ಬಗ್ಗೆ ಪರೋಕ್ಷವಾಗಿ ಮಾತ್ರ ಪ್ರಸ್ತಾಪಿಸುತ್ತಾಳೆ) ಖಂಡಿಸಲೇ ಇಲ್ಲ ಎಂದು ಹೇಳಿ ನನ್ನನ್ನು ದೂಷಿಸಿದ್ದಾಳೆ. ಇದು ಸುಳ್ಳು. ಒಂದೇ ಒಂದು ಉದಾಹರಣೆ ಕೊಡಬೇಕೆಂದರೆ, ಆಂದೋಲನದ ಆರಂಭ ದಿನಗಳಲ್ಲಿ ಬಿಹಾರದಲ್ಲಿನ ಸತ್ಯಾಗ್ರಹಿಗಳು ಕೋರಿಕೆಯ ಮೂಲಕ ಮತ್ತು ದಾರಿಗಡ್ಡವಾಗಿ ಮಲಗುವ ಮೂಲಕ ಶಾಸಕರು ವಿಧಾನ ಸಭೆಗೆ ಹೋಗುವುದನ್ನು ತಡೆಯಲು ಯತ್ನಿಸುತ್ತಿದ್ದಾಗ, ಕೆಲವು ಶಾಸಕರು ಗುಂಪಿನ ಗೊಂದಲಕ್ಕೆ ಸಿಕ್ಕಿ ಅವರಲ್ಲೊಬ್ಬ ಶಾಸಕರೊಬ್ಬರ ಅಂಗಿ ಹರಿದುಹೋದ ಸಂದರ್ಭದಲ್ಲಿಯೂ

ನಾನದನ್ನು ಸಾರ್ವಜನಿಕವಾಗಿ ಖಂಡಿಸಿದ್ದೆನಲ್ಲದೆ, ಈ ಬಗ್ಗೆ ನನ್ನ ಖೇದವನ್ನು ವ್ಯಕ್ತಪಡಿಸಿ ಸಂಬಂಧಿತ ಶಾಸಕರಿಗೆ ನನ್ನ ವಿಷಾದ ಹಾಗೂ ಕ್ಷಮಾಪಣೆಯನ್ನು ತಲುಪಿಸುವಂತೆ ವಿಧಾನ ಸಭಾಧ್ಯಕ್ಷ ಶ್ರೀ ಹರಿನಾಥಮಿಶ್ರರಿಗೆ ಪತ್ರವೊಂದನ್ನು ಬರೆದೆ. (ಅಧ್ಯಕ್ಷರು ನನ್ನ ಪತ್ರವನ್ನು ಸಭೆಯಲ್ಲಿ ಓದುವಷ್ಟು ದಯಾಪರವಾಗಿದ್ದರು) ನಾನು ಹಿಂಸೆಯನ್ನು ಖಂಡಿಸಿದ ಹಾಗೂ ಶಾಂತಿಯುತ ವಿಧಾನಗಳಿಗೆ ಬದ್ಧರಾಗಬೇಕೆಂದು ಒತ್ತಾಯಿಸಿದ ಇತರ ಹಲವಾರು ಸಂದರ್ಭಗಳೂ ಇವೆ. ಅನಗತ್ಯವಾಗಿ ಪ್ರಚೋದಿಸಲ್ಪಟ್ಟ ಗುಂಪೊಂದು ಹಿಂಸೆಯಲ್ಲಿ ತೊಡಗಿ ಮುಗ್ಧನಾದ ಕಾನ್‌ಸ್ಟೇಬಲ್‌ನೊಬ್ಬ ಮೃತಹೊಂದಿದಾಗ, ನಾನು ಆ ಕೃತ್ಯವನ್ನು ಖಂಡಿಸಿದ್ದು ಮಾತ್ರವಲ್ಲದೆ, ಬಿಹಾರ ಪೋಲೀಸರಲ್ಲಿ ಸಾರ್ವಜನಿಕವಾಗಿ ಕ್ಷಮಾಪಣೆ ಕೇಳಿ, ಸತ್ತ ವ್ಯಕ್ತಿಯ ಪತ್ನಿಗೆ ನನ್ನ ಸಂತಾಪವನ್ನು ವ್ಯಕ್ತಪಡಿಸಿ, ಪರಿಹಾರವಾಗಿ 5 ಸಾವಿರ ರೂಪಾಯಿಗಳನ್ನು ಕಳುಹಿಸಿದೆ. ಇಲ್ಲ, ಬಿಹಾರ ಆಂದೋಲನವಾಗಲಿ, ಅಥವಾ ಬಿಹಾರದ ರೀತಿಯ ಇತರ ಯಾವುದೇ ಆಂದೋಲನವಾಗಲಿ, ವಿದ್ಯಾರ್ಥಿಗಳು ಅಥವಾ ಇನ್ನಾರೇ ಆಗಲಿ ಕಾನೂನಿಗಿಂತ ಮೇಲಿರುವವರು, ಅವರು ಇಷ್ಟಬಂದಂತೆ ಮಾಡಬಹುದು ಎಂದು ನಾನು ನಂಬಿಲ್ಲ; ಮತ್ತು ಮುಂದೆ ಕೂಡಾ ಅದು ಸಾಧ್ಯವಿಲ್ಲ. ಯಾವುದೇ ನಿರ್ದಿಷ್ಟ ಕಾನೂನನ್ನು ಉಲ್ಲಂಘಿಸಬೇಕಾದ ಸಂದರ್ಭದಲ್ಲಿ, ಅದನ್ನು ಸಂಘಟಿತ ಹಾಗೂ ಶಾಂತಿಯುತ ರೀತಿಯಲ್ಲಿ ಮಾಡಬೇಕು. ಕಾನೂನನ್ನು ತಮ್ಮ ಕೈಗೇ ತೆಗೆದುಕೊಳ್ಳಲು, ಆಂದೋಲನದಲ್ಲಿ ಯಾರಿಗೇ ಆಗಲಿ ಅವಕಾಶ ಕೊಟ್ಟಿಲ್ಲ ಮತ್ತು ಕೊಡುವುದೂ ಇಲ್ಲ.

ಇಷ್ಟೂ ಹಿಂಸೆ ಹಾಗೂ ಆಂದೋಲನದ ವಿದ್ಯಾರ್ಥಿಗಳನ್ನು ಕುರಿತದ್ದು. ಆದರೆ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ಏಕೆ ಬಸ್ಸುಗಳನ್ನು ಸುಡುತ್ತಾರೆ ಮತ್ತು ಇಂತಹ ಕೃತ್ಯಗಳಲ್ಲಿ ತೊಡಗುತ್ತಾರೆ ಎಂಬುದು ಶ್ರೀಮತಿ ಗಾಂಧಿ ಯೋಚಿಸಬೇಕಾದ ವಿಚಾರ. ಇದು ದೇಶದ ಮುಂದಿರುವ ಪ್ರಮುಖ ಪ್ರಶ್ನೆಗಳಲ್ಲೂ ಒಂದಾಗಿದೆ. ವಿದ್ಯಾರ್ಥಿಗಳ ಅಶಾಂತಿಯ ಬಗ್ಗೆ ಅಧ್ಯಯನ ಮಾಡುವುದರಿಂದಲೇ ಎಲ್ಲ ಪ್ರಶ್ನೆಗಳಿಗೂ ಉತ್ತರ ಸಿಗುವುದಿಲ್ಲ. ದೊರಕುವ ಕೆಲವೇ ಉತ್ತರಗಳ ಆಧಾರದ ಮೇಲಾದರೂ ಸೂಕ್ತವಾದ ವ್ಯಾಪಕ ನೀತಿಯೊಂದನ್ನು ರೂಪಿಸಲು ಸಾಧ್ಯ. ಆದರೆ ಈ ನೀತಿಯನ್ನು ಜಾರಿಗೆ ತರುವ ಧೈರ್ಯ ಯಾರಿಗಿದೆ? ಈ ನೀತಿ ಕೇವಲ ಶೈಕ್ಷಣಿಕರಂಗಕ್ಕೆ ಸೀಮಿತವಾಗದೆ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಮತ್ತು ಅವುಗಳ ಪರಿಣಾಮವಾದ ಸಮಾಜದ ವರ್ಗವ್ಯವಸ್ಥೆಯ ಪುನಾರಚನೆ - ಈ ಎಲ್ಲ ವಲಯಗಳಿಗೂ ವ್ಯಾಪಿಸಬೇಕಾಗುತ್ತದೆ. ಹೆಚ್ಚಿನ ರಾಜಕಾರಣಿಗಳು, ಅಧಿಕಾರಶಾಹಿ, ಅಧ್ಯಾಪಕರು, ವಾಣಿಜ್ಯೋದ್ಯಮಿಗಳು, ವೃತ್ತಿನಿರತರು ಮುಂತಾದವರನ್ನು ನೀಡಿರುವ ಮಧ್ಯಮ ವರ್ಗಗಳು ಒಂದಲ್ಲ ಒಂದು ನೆಪದಿಂದ, ಶಿಕ್ಷಣ ವ್ಯವಸ್ಥೆಯಲ್ಲಿನ ಅಥವಾ ಸಾಮಾಜಿಕ, ಆರ್ಥಿಕ, ರಾಜಕೀಯ,

ಸಾಂಸ್ಕೃತಿಕ ವಲಯಗಳಲ್ಲಿನ ಯಾವುದೇ ಕ್ರಾಂತಿಕಾರಿ ಬದಲಾವಣೆಯನ್ನು ತಡೆಯುತ್ತವೆ ಎಂಬ ಸಂದೇಹ ನನಗಿದೆ. ಈ ಬಗ್ಗೆ ನಾನು ಈ ಟಿಪ್ಪಣೆಗಳಲ್ಲಿಯೇ ಎಂದಾದರೊಂದು ದಿನ ವಿವರವಾಗಿ ತಿಳಿಸಲೂಬಹುದು.

ತುರ್ತುಪರಿಸ್ಥಿತಿಯಲ್ಲಿ ಇಂದು, ಬಸ್ಸುಗಳನ್ನು ಸುಡದಿರಬಹುದು ಮತ್ತು ಶ್ರೀಮತಿ ಗಾಂಧಿ ವಿದ್ಯಾರ್ಥಿ ಅಶಾಂತಿ, ಅಶಿಸ್ತು ಹಾಗೂ ಹಿಂಸಾಚಾರದ ಸಮಸ್ಯೆಯನ್ನು ತಾನು ಬಗೆಹರಿಸಿರುವುದಾಗಿ ತಿಳಿದಿರಬಹುದು. ಆದರೆ ತುರ್ತುಪರಿಸ್ಥಿತಿ ಇನ್ನೂ ಹೀಗೇ ಮುಂದುವರಿದರೆ, ಶ್ರೀಮತಿ ಗಾಂಧಿ ಅತ್ಯಂತ ಅನಿರೀಕ್ಷಿತ ಅಸ್ಫೋಟನೆಯನ್ನು ಎದುರಿಸಬೇಕಾಗಬಹುದು.

ಸೆಪ್ಟೆಂಬರ್ 1

(ಮುಂದುವರಿದ ಟಿಪ್ಪಣಿಗಳು)

ಇದೇ ಟಿಪ್ಪಣಿಗಳಲ್ಲಿ ಈ ಮುನ್ನ ನಾನು,- (ಜುಲೈ 21ರ ಟಿಪ್ಪಣಿಗಳನ್ನು ನೋಡಿ) ಬಿಹಾರ ಆಂದೋಲನದ ಎಲ್ಲ ಅಂಗಗಳ ಮೂಲಕ ನಾನು ಮೂಡಿಸಬಯಸಿದ್ದ ಎರಡು ಮುಖ್ಯ ಆಶಯಗಳನ್ನು ಸೂಚಿಸಿದ್ದೆ. ಬಿಹಾರದ ರೀತಿಯ ಜನತಾ ಆಂದೋಲನದ ಉದ್ದೇಶಗಳನ್ನು ಪಟ್ಟಿಮಾಡಬೇಕಾದರೆ, ಮೇಲೆ ತಿಳಿಸಿದ ಟಿಪ್ಪಣಿಗಳಲ್ಲಿ ಸೂಚಿಸಿದ ಎರಡು ಉದ್ದೇಶಗಳು ಮೊದಲಸ್ಥಾನ ಪಡೆಯುತ್ತವೆ. ಇನ್ನೊಂದು ಉದ್ದೇಶವೆಂದರೆ, ಜನತೆಯ ಭಾಗವಹಿಸುವಿಕೆಯೊಂದಿಗೆ - ಬಹುಶಃ ವಿದ್ಯಾರ್ಥಿಗಳು ಹಾಗೂ ಯುವಜನರ ನೇತೃತ್ವದಲ್ಲಿ - ಸರ್ಕಾರದೊಂದಿಗೆ ಸಹಕಾರ ಏರ್ಪಡಿಸಿ ಕೊಂಡೋ ಅಥವಾ ಘರ್ಷಣೆಯನ್ನು ಮುಂದುವರಿಸಿಕೊಂಡೋ, ಸಮಾಜದ ಸಂಪೂರ್ಣ ಬದಲಾವಣೆಗಾಗಿ ಕ್ರಾಂತಿಕಾರಿ ಆಂದೋಲನವೊಂದನ್ನು ಆರಂಭಿಸುವುದು. ಈ ವಿಷಯದಲ್ಲಿ ರಾಜಕೀಯ ಪಕ್ಷಗಳ ಪಾತ್ರದ ಬಗ್ಗೆ ಸಹ ಚರ್ಚಿಸಬೇಕಾಗಿದೆ. ಬದಲಾವಣೆಯ ಸಾಧನಗಳಾದ ನೇತೃತ್ವ; ಆದರ್ಶವಾದೀ ಯುವಜನರ ಪಾತ್ರ ; ಬದಲಾವಣೆಗಾಗಿ ವ್ಯಾಪಕ ಹೋರಾಟವೊಂದರ ಅಗತ್ಯ - ಈ ಎಲ್ಲ ಅಂಶಗಳನ್ನು ಸುದೀರ್ಘವಾಗಿ ವಿವರಿಸಬೇಕು. ನನ್ನ ನೆನಪಿಗೆ ನೆರವಾಗಿ, ನಾನು ಇವನ್ನು ಇಲ್ಲಿ ಬರೆದಿಟ್ಟಿರುವೆ. ಮುಂದಿನ ಕೆಲವು ದಿನಗಳಲ್ಲಿ ಈ ಬಗ್ಗೆ ವಿವರವಾಗಿ ಬರೆಯಬೇಕು.

ಸೆಪ್ಟೆಂಬರ್ 4

ಪ್ರಧಾನಮಂತ್ರಿಗೆ ಬರೆದಿರುವ ಪತ್ರ[32] ಇನ್ನೂ ಮುಗಿದಿಲ್ಲ. ಅದರ ಅಂತಿಮ ಪ್ರತಿ ಸಿದ್ಧಪಡಿಸುವ ಗೋಜಿಗೂ ಈಗ ನಾನು ಹೋಗಿಲ್ಲ. ನಾನು ದೆಹಲಿಯಿಂದ ಪ್ರತಿಕ್ರಿಯೆಯೊಂದಕ್ಕಾಗಿ ಕಾಯುತ್ತಿರುವೆ.

---

32. ಅನುಬಂಧ-2 ನೋಡಿ. ಈ ಪತ್ರವನ್ನು ಸೆಪ್ಟೆಂಬರ್ 3ರಂದು ಬರೆಯಲಾಯಿತಾದರೂ, ಪ್ರಧಾನಮಂತ್ರಿಗೆ ಕಳಿಸಲಿಲ್ಲ.

ಇಂದು ಒಂದು ರೀತಿಯ ಪ್ರತಿಕ್ರಿಯೆ ಬಂದಿದೆ ಎಂದೇ ಹೇಳಬಹುದು. ದೆಹಲಿಯಿಂದ ಆಹಾರ ಹಾಗೂ ನೀರಾವರಿ ಖಾತೆಯ ಅಧೀನ ಕಾರ್ಯದರ್ಶಿ ಶ್ರೀ ವೊಹ್ರಾ[33] ಅವರು ಇಂದು ಮಧ್ಯಾಹ್ನ ಬಂದಿದ್ದರು. ನನ್ನನ್ನು ಕಾಣುವಂತೆ ಶ್ರೀ ಪಿ.ಎನ್. ಧರ್, ಅವರಿಗೆ ತಿಳಿಸಿದ್ದರು. ಶ್ರೀ ವೊಹ್ರಾ ತಾವು ಪಟ್ನಾಗೆ ಹೋದ ಬಗ್ಗೆ ಮತ್ತು ಅಲ್ಲಿ ತಾವು ಕಂಡ ಹಾಗೂ ನಿರ್ವಹಿಸಿದ ಕಾರ್ಯಗಳನ್ನು ಕುರಿತು ಮಾತನಾಡಿದರು. ನಾನು ಅವರಿಂದ ತಿಳಿದ ಅತ್ಯಂತ ಅಸಾಮಾನ್ಯ ಸಂಗತಿ ಎಂದರೆ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿ ಹಾಗೂ ಇತರ ಮಂತ್ರಿಗಳು ಹಾಗೂ ಅಧಿಕಾರಿಗಳು -ಪಟ್ನಾದ ಕಮೀಷನರ್ ಹಾಗೂ ಡಿಎಂ[34]ರನ್ನು ಬಿಟ್ಟು- ಗರಬಡಿದವರಂತೆ ಹೇಗೆ ಯಾವುದೇ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದರು ಎಂಬುದು. ಮುಖ್ಯಮಂತ್ರಿಗಳ ಮನೆ ನೀರಿನಿಂದ ಸುತ್ತುವರಿಯಲ್ಪಟ್ಟಿದ್ದು, ದೋಣಿಯ ಮೂಲಕ ಅಥವಾ ಹಾಗೆಯೇ ನೀರಲ್ಲಿ ನಡೆದು ಮನೆಯಿಂದ ಹೊರಬರುವ ಮನಸ್ಸು ಮುಖ್ಯಮಂತ್ರಿಗಳಿಗೆ ಇರಲಿಲ್ಲ. ಶ್ರೀ ವೊಹ್ರಾ ಹಿರಿಯ ಅಧಿಕಾರಿಯಾಗಿದ್ದು ಸಂದರ್ಭವನ್ನು ಅರ್ಥಮಾಡಿಕೊಂಡು, ಈ ನಿಷ್ಕ್ರಿಯತೆಯನ್ನು ಸಹಿಸಿದರು. ಇವರ ವರದಿಯಿಂದ ಸ್ಪಷ್ಟವಾದ ಅಂಶವೆಂದರೆ, ಈ ಬಗ್ಗೆ ಕೇಂದ್ರ ಸರ್ಕಾರ ಗಮನ ನೀಡಿ ವಿಮಾನ ಬಲವನ್ನು ಬಳಸಿ ರಾಜ್ಯ ಸರ್ಕಾರವನ್ನು ಸ್ವಲ್ಪ ಚುರುಕುಗೊಳಿಸಿರದಿದ್ದರೆ, ಪ್ರವಾಹದ ನೀರು ಇಳಿದು ಪರಿಸ್ಥಿತಿ ಸಾಕಷ್ಟು ಉತ್ತಮಗೊಳ್ಳುವವರೆಗೆ ರಾಜ್ಯ ಸರ್ಕಾರ ಏನನ್ನೂ ಮಾಡುತ್ತಿರಲಿಲ್ಲ. ಈ ಎಲ್ಲದರಲ್ಲಿ ಶ್ರೀ ವೊಹ್ರಾ ಹಿರಿಯ ಪಾತ್ರ ವಹಿಸಿದ್ದರೆಂದು ಕಾಣುತ್ತದೆ.

ಶ್ರೀ ವೊಹ್ರಾ ಹೇಳಿದ್ದನ್ನೆಲ್ಲಾ ಕೇಳುತ್ತಿರುವಾಗ, ಈತನನ್ನು ನನ್ನಲ್ಲಿಗೇಕೆ ಕಳಿಸಿದರು ಎಂದು ಆಶ್ಚರ್ಯವಾಯಿತು. ಈಗ ಕೂಡಾ ಈತ ಸಂದರ್ಭವನ್ನು ತುಲನೆ ಮಾಡುತ್ತಿದ್ದಂತೆ ಕಂಡು, ಈ ಎಲ್ಲದರ ಬಗ್ಗೆ ನನ್ನ ಪ್ರತಿಕ್ರಿಯೆ ಏನು ಎಂಬುದನ್ನು ಪ್ರೊಫೆಸರ್ ಧರ್ ತಿಳಿಯಬಯಸಿದ್ದರು ಎಂಬುದು ಸ್ಪಷ್ಟವಾಗಿತ್ತು. ಶ್ರೀ ವೊಹ್ರಾ ತನ್ನ ವರದಿಯೊಪ್ಪಿಸಿದ ಮೇಲೆ, ಅದರೆಲ್ಲ ವಿವರಗಳನ್ನು ಕೇಳಿದ ಮೇಲಂತೂ, ನನ್ನೆಲ್ಲಾ ಸಾಮರ್ಥ್ಯವನ್ನುಪಯೋಗಿಸಿ ನೆರವಾಗಲು ಪಟ್ನಾ ಹಾಗೂ ಬಿಹಾರದ ಸಂಕಷ್ಟಕ್ಕೀಡಾದ ಜನತೆಯ ಬಳಿಗೆ ಹೋಗಲು ನಾನು ಹೆಚ್ಚು ಉತ್ಸುಕನಾಗಿದ್ದೇನೆ, ಆತುರದಿಂದಿದ್ದೇನೆ ಎಂದು ತಿಳಿಸಿದೆ. ಜನರು ತಮ್ಮ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳುವಂತೆ ಅವರಿಗೆ ನೆರವು ನೀಡಬೇಕು ಮತ್ತು ಅವರಿಗೆ ಬಡಿದಿರುವ ಗರದಿಂದ ಜಾಗೃತಗೊಳಿಸಿ ಸಂಘಟಿತರನ್ನಾಗಿ ಮಾಡಬೇಕು ಎಂದು ನಾನು ತಿಳಿಸಿದೆ.

---

33. ಶ್ರೀ ಬಿ.ಬಿ. ವೊಹ್ರಾ, ಭಾರತದಲ್ಲಿನ ಮಣ್ಣು ಹಾಗೂ ಜಲ ಸಂರಕ್ಷಣೆಯ ಸಮಸ್ಯೆಗಳನ್ನು ಕುರಿತ ಪರಿಣತರು.

34. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್

ಇದನ್ನು ಸರ್ಕಾರ, ಕಾಂಗ್ರೆಸ್ ನಾಯಕರು ಮಾಡಬಲ್ಲರು ಎಂಬ ಬಗ್ಗೆ ನನಗೆ ಸಂದೇಹವಿದೆ. ಇದನ್ನು ಸಹ ನಾನು ಶ್ರೀ ವೊಹ್ರಾರಿಗೆ ತಿಳಿಸಿದೆ. ಬಿಹಾರಕ್ಕೊದಗಿರುವ ಅನಿಷ್ಟ ರಾಷ್ಟ್ರಕ್ಕೊದಗಿರುವ ಅನಿಷ್ಟವಾಗಿದ್ದು ಅದಕ್ಕಾಗಿ ರಾಷ್ಟ್ರೀಯ ಪ್ರಯತ್ನ ಅಗತ್ಯವಾಗಿದೆ. ನಾನು ಸ್ವತಂತ್ರನಾಗಿದ್ದಿದ್ದರೆ, ದೇಶದ ಇತರ ಭಾಗಗಳಿಂದ ಸ್ವಯಂಸೇವಕರನ್ನು ಸಂಘಟಿಸುತ್ತಿದ್ದೆ, ನಿಧಿ ಸಂಗ್ರಹಿಸುತ್ತಿದ್ದೆ - ಹೀಗೆ ನನ್ನ ಕೈಲಾದದ್ದನ್ನೆಲ್ಲಾ ಮಾಡುತ್ತಿದ್ದೆ. ಸ್ವಯಂಸೇವಾ ಪರಿಹಾರ ಸಂಸ್ಥೆಯೊಂದು ಕಳಿಸುವ ಒಂದು ರೂಪಾಯಿ, ಸರ್ಕಾರದ ಖರ್ಚುಮಾಡುವ ಹತ್ತು ರೂಪಾಯಿಗಳಿಗೆ ಸಮ ಎಂದು ನಾನು ತಿಳಿಸಿದೆ. ಆದುದರಿಂದ, ನನ್ನ ಈ ಮುಂಚಿನ ಕೋರಿಕೆಯನ್ನು ಗಂಭೀರವಾಗಿ ಮತ್ತು ಸಹಾನುಭೂತಿಯಿಂದ ಪರಿಶೀಲಿಸಬೇಕೆಂದು ಸರ್ಕಾರವನ್ನು, ಅಂದರೆ ಪ್ರಧಾನಮಂತ್ರಿಯನ್ನು ಬೇಡಿಕೊಂಡೆ.

ಇದೇ ಸಮಸ್ಯೆಗೆ ಸಂಬಂಧಿಸಿದ ಮತ್ತೊಂದು ವಿಷಯವನ್ನು ನಾನು ಶ್ರೀ ವೊಹ್ರಾ ಅವರಿಗೆ ತಿಳಿಸಿದೆ - ಆತ ಈ ಸಮಸ್ಯೆಯ ಯಾವುದೇ ರಾಜಕೀಯ ಮುಖದ ಬಗ್ಗೆ ಚರ್ಚಿಸಲು ಮುಜುಗರಪಡುತ್ತಿದ್ದರಾದರೂ. ತುರ್ತುಪರಿಸ್ಥಿತಿಯ ಹೆಸರಿನಲ್ಲಿ ಅನುಸರಿಸಲಾದ ಇಡೀ ನೀತಿಯನ್ನು ಪುನರ್‌ವಿಮರ್ಶಿಸಲು ಇದು ಸಕಾಲ ಎಂಬುದನ್ನು ನಾನು ತಿಳಿಸಿದನೆಂದು ಪ್ರೊ. ಧರ್ ಅವರಿಗೆ ತಿಳಿಸಲು ಶ್ರೀ ವೊಹ್ರಾರಿಗೆ ಸೂಚಿಸಿದೆ. ಹಾಗೇ ಯಾರೇ ಆಗಲಿ ಈ ಪ್ರಾಕೃತಿಕ ಅನಾಹುತವನ್ನು ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಳ್ಳುವ ಪ್ರಶ್ನೆಯೇ ಇಲ್ಲವೆಂದು ಅವರಿಗೆ ಭರವಸೆ ನೀಡಿದೆ. ಬಿಹಾರದ ಪರಿಸ್ಥಿತಿಯನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದು ಜನತೆಗೆ ಬಗೆಯುವ ದ್ರೋಹವಾಗುತ್ತದಷ್ಟೆ.

ನಾನು ಕಂಡ ಕುತೂಹಲಕಾರಿಯಾದ ಮತ್ತು ಉತ್ತೇಜನಕಾರಿಯಾದ ಅಂಶವೆಂದರೆ, ಶ್ರೀ ವೊಹ್ರಾ ಅವರು ನೀರಿನ ಚಲನ ವ್ಯವಸ್ಥೆ, ಪ್ರತಿವರ್ಷ ನೆಲದ ಮೇಲ್ಮೈಯಲ್ಲಿರುವ ಫಲವತ್ತಾದ ಮಣ್ಣು ಸಮುದ್ರಕ್ಕೆ ಕೊಚ್ಚಿಹೋಗುವ ಹಾಗೂ ಇತರ ಸಂಬಂಧಿತ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಿದ್ದರು. ಈ ಬಗ್ಗೆ ಏನಾದರೂ ಒಂದು ಗಂಭೀರವಾದ ಮತ್ತು ದೀರ್ಘಕಾಲಿಕವಾದ ವ್ಯವಸ್ಥೆ ಮಾಡಲೇಬೇಕು ಎನ್ನುವ ಅಭಿಪ್ರಾಯ ಹೊಂದಿದ್ದಂತೆ ಕಂಡ ಅವರು, ಇದಕ್ಕೆ ಎಲ್ಲಕ್ಕಿಂತ ಹೆಚ್ಚು ಅಗತ್ಯವಾದದ್ದು ರಾಜಕೀಯ ಇಚ್ಛೆ ಎಂದು ತಿಳಿಸಿದರು. ನನ್ನ ಅಭಿಪ್ರಾಯವೂ ನಿಖರವಾಗಿ ಇದೇ ಆಗಿತ್ತು. ಬಿಹಾರದಲ್ಲಿ 1966-67ರಲ್ಲಿ ಉಂಟಾದ ಭೀಕರ ಕ್ಷಾಮದಂತಹ ಪ್ರಾಕೃತಿಕ ಸಂಕಷ್ಟಗಳು ಉಂಟಾದಾಗಲೆಲ್ಲಾ ದೀರ್ಘಕಾಲಿಕ ಪರಿಹಾರ ಕ್ರಮಗಳು, ಬೃಹತ್ ಪ್ರಮಾಣದ ಕಾರ್ಯಾಚರಣೆಗಳ ಬಗ್ಗೆಯೆಲ್ಲಾ ಮಾತನಾಡಲಾಗುತ್ತಿತ್ತಾದರೂ, ಒಮ್ಮೆ ಸಂಕಷ್ಟ ಮುಗಿಯಿತೆಂದರೆ ಮತ್ತೆ ಸ್ವಾರ್ಥ ರಾಜಕೀಯದ ಕೊಳಕು ಆಟ ಪ್ರಾರಂಭವಾಗುತ್ತಿತ್ತು. ಈ ಸರ್ತಿಯೂ ಫಲಿತಾಂಶ ಇದಕ್ಕೆ ಬೇರೆಯಾಗಿರುತ್ತದೆ ಎಂಬ ಬಗ್ಗೆ ನನಗೆ ಸಂದೇಹವಿದೆ ಎಂದು ಮಾತ್ರ ನಾನು ಶ್ರೀ ವೊಹ್ರಾಗೆ ತಿಳಿಸಲಿಲ್ಲ.

ನೀರಿನ ವ್ಯವಸ್ಥೆ ಹಾಗೂ ಭೂ ಸಂರಕ್ಷಣೆಯ ವ್ಯಾಪಕ ಯೋಜನೆಗಾಗಿ ಸುಮಾರು 50 ಸಾವಿರ ಕೋಟಿ ರೂಪಾಯಿಗಳು ಅಗತ್ಯ - ಬಡದೇಶವೊಂದಕ್ಕೆ ಇದು ಭಾರೀ ಮೊತ್ತವೇ - ಎಂಬುದು ಶ್ರೀ ವೊಹ್ರಾ ಅವರ ಅಂದಾಜಾಗಿತ್ತು. ಆದರೆ ಸ್ವಾತಂತ್ರ್ಯ ಬಂದಾಗಿನಿಂದೀಚಿಗೆ ಇಂತಹ ಸಂಕಷ್ಟಗಳ ಮೂಲಕ ಆಗಿರುವ ನಷ್ಟಗಳ ಒಟ್ಟು ಮೌಲ್ಯ 50 ಸಾವಿರ ಕೋಟಿ ರೂಪಾಯಿಗಳನ್ನು ಮುಟ್ಟಿರಬಹುದು. ಬಿಹಾರ ಕ್ಷಾಮದ ಸಂದರ್ಭದಲ್ಲಿ ಆದ ಒಟ್ಟು ನಷ್ಟ 600 ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿತ್ತು. ಈ ವರ್ಷದ ಪ್ರವಾಹದಿಂದ ಆಗಿರುವ ನಷ್ಟ 500 ಕೋಟಿ ರೂಪಾಯಿಗಳೆಂದು - ಇವರಲ್ಲಿ ಪಟ್ನಾದ ಪಾಲು 100 ಕೋಟಿ ರೂಪಾಯಿಗಳು - ಬಿಹಾರದ ಮುಖ್ಯಮಂತ್ರಿ ಅಂದಾಜು ಮಾಡಿದ್ದಾರೆ.

ಬಿಹಾರ, ಪ್ರಾಕೃತಿಕ ಸಂಪತ್ತಿನಿಂದ ಶ್ರೀಮಂತವಾಗಿದ್ದರೂ ಅದೇಕೆ ಭಾರತದಲ್ಲಿನ ಅತ್ಯಂತ ಬಡ ರಾಜ್ಯವಾಗಿ ಉಳಿದಿದೆ ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ ನೋಡಿ.(ಈ ಪ್ರಶ್ನೆ ಕೇಳುವುದರಲ್ಲಿ ನಾನೂ ಸೇರಿರುವೆ.) ಖಂಡಿತವಾಗಿ ಇದೇ ಅತ್ಯಂತ ಪ್ರಮುಖ ಕಾರಣವೂ ಆಗಿದೆ : 1966ರಿಂದ ಒಂದು ದಶಕದಲ್ಲಿ ಬಿಹಾರ 1100ಕೋಟಿ ರೂಪಾಯಿಗಳ ನಷ್ಟಕ್ಕೀಡಾಗಿದೆ - ಅದೂ ಎರಡೇ ಅನುಹುತಗಳಿಂದ, ಕ್ಷಾಮ ಹಾಗೂ ಈ ವರ್ಷದ ಪ್ರವಾಹ. ಇದಲ್ಲದೆ ಪ್ರತಿವರ್ಷ ರಾಜ್ಯದ ಒಂದಲ್ಲ ಒಂದು ಭಾಗ ಅನಾವೃಷ್ಟಿ ಅಥವಾ ಅತಿವೃಷ್ಟಿಗೆ ಈಡಾಗಿರುತ್ತದೆ.

ಸೆಪ್ಟೆಂಬರ್ 5

ಇವತ್ತಿನ 'ಹಿಂದೂಸ್ತಾನ್ ಟೈಮ್ಸ್'ನಲ್ಲಿ ಪಟ್ನಾದಿಂದ ತಪನ್ ದಾಸ್‌ಗುಪ್ತ ಕಳಿಸಿರುವ ಸಂಕ್ಷಿಪ್ತ ವರದಿಯೊಂದು ಪ್ರಕಟವಾಗಿದೆ. ಅದರಲ್ಲಿ ಅದೆಷ್ಟು ಗಂಭೀರ ಹಾಗೂ ಭಯಾನಕವಾದ ಚಿತ್ರವನ್ನು ನಿರೂಪಿಸಲಾಗಿದೆ! ಬಿಹಾರ ಮಂತ್ರಿಮಂಡಳ ಮತ್ತು ರಾಜ್ಯದ ಶ್ರೀಮತಿ ಗಾಂಧಿಯ ಅದ್ಭುತ ಪಕ್ಷದಲ್ಲಿ ನಾಯಕತ್ವ ಹಾಗೂ ಉತ್ಸಾಹದ ಎಂತಹ ಕೊರತೆ ಕಾಣುತ್ತಿದೆ! 25, 26, 27 - ಈ ದಿನಾಂಕಗಳಂದು ಪರಿಸ್ಥಿತಿ ಅತ್ಯಂತ ಭಯಾನಕವಾಗಿದ್ದು, ಈ ದಿನಗಳಲ್ಲಿ ಇವರೆಲ್ಲಾ ಸಂಪೂರ್ಣವಾಗಿ ನಿಷ್ಕ್ರಿಯರಾಗಿದ್ದರೆಂದು ಕಾಣುತ್ತದೆ. ನಿನ್ನೆ ಶ್ರೀ ವೊಹ್ರಾ ಹೇಳಿದಂತೆ, ಮುಖ್ಯಮಂತ್ರಿ ಹಾಗೂ ಇತರರು ದಿಕ್ಕೆಟ್ಟು, ಕೇಂದ್ರಸರ್ಕಾರದ ಗಮನ ಇತ್ತ ಹರಿಯುವವರೆಗೆ ಅವರು ಏನೂ ಮಾಡಲಾಗದ ಸ್ಥಿತಿಯಲ್ಲಿದ್ದರು. ಮುಖ್ಯಮಂತ್ರಿಗಳಿಂದ 'ಕರೆಯಲ್ಪಟ್ಟ' ರಾಜ್ಯಸರ್ಕಾರದ ಹಿರಿಯ ಅಧಿಕಾರಿಗಳು, ವಿದ್ಯುಚ್ಛಕ್ತಿ ಮಂಡಳಿಯ ಮುಖ್ಯಾಧಿಕಾರಿ, ರೈಲ್ವೇಸ್‌ನ ಡಿವಿಷನಲ್ ಸೂಪರಿಂಟೆಂಡೆಂಟ್ ಹಾಗೂ ವಿಮಾನ ಬಲ ಮತ್ತು ಸಶಸ್ತ್ರ ಪಡೆಯ ಮುಖ್ಯಸ್ಥರು ಭಾಗವಹಿಸಿದ್ದ ಸಭೆ ಏರ್ಪಾಡಾಗಿದ್ದೂ ಶ್ರೀ ವೊಹ್ರಾರ ಪ್ರಯತ್ನದಿಂದಲೇ! ಆದರೆ, ಎಲ್ಲ ಪ್ರಜೆಗಳೂ ದಿಕ್ಕೆಡದೆ, ಕೆಲವು ಸಾಮಾನ್ಯ ಜನರು

ಪರಿಸ್ಥಿತಿಯನ್ನು ಎದುರಿಸುವ ಪ್ರಯತ್ನ ಮಾಡಿದ್ದಾರೆ, ಪರಿಹಾರ ಮಾರ್ಗಗಳ ಬಗ್ಗೆ ಯೋಚಿಸಿದ್ದಾರೆ ಎಂಬ ಸುದ್ದಿ ಯಾರ ಹೃದಯವನ್ನಾದರೂ ಅರಳಿಸುತ್ತದೆ. ಸುರೇಶ್ ಎಂಬ ಈ ಯುವಕ ಯಾರು? ಈತ ಮಹಾನ್ ಸಾಹಸಿ, ಬುದ್ಧಿವಂತ ಹಾಗೂ ಅಂತಃಕರಣವುಳ್ಳವನೇ ಆಗಿರಬೇಕು. ತಪನ್‌ರ ವರದಿಯ ಪ್ರಕಾರ, ಈತ ಮೊಟ್ಟಮೊದಲು ಪರಿಹಾರ ಕಾರ್ಯಾಚರಣೆಯನ್ನು ಆರಂಭಿಸಿದ: ಎದೆಯೆತ್ತರದ ನೀರಿನಲ್ಲಿ ಈಜುತ್ತಾ ಬಿಸ್ಕತ್ತು ಹಾಗೂ ಇತರ ಸಾಮಗ್ರಿಗಳನ್ನು ಹಂಚತೊಡಗಿದ್ದ. ಇತರ ಪ್ರದೇಶಗಳಲ್ಲಿ ಇಂತಹ ಸಾಹಸಗಳಲ್ಲಿ ತೊಡಗಿರುವ ಇಂತಹ ತರುಣರು ಅಥವಾ ಹಿರಿಯರಾದ ಪುರುಷರು ಮತ್ತು ಮಹಿಳೆಯರು ಎಷ್ಟಿದ್ದಾರೋ ದೇವರಿಗೇ ಗೊತ್ತು. ಓ! ಈ ಕ್ಷಣದಲ್ಲಿ ಪಟ್ನಾದಲ್ಲಿ ಮತ್ತು ಬಿಹಾರದಲ್ಲಿ ಇರಬೇಕೆಂದು ನನ್ನ ಮನಸ್ಸು ಎಷ್ಟೊಂದು ಹಂಬಲಿಸುತ್ತಿದೆ! ದೇವರ ಇಚ್ಛೆ ಇದ್ದರೆ, ನಾನಲ್ಲಿರುವೆ.

ಸೆಪ್ಟೆಂಬರ್ 5

ಈಜಿಪ್ಟ್ - ಇಸ್ರೇಲ್ ಒಪ್ಪಂದಕ್ಕೆ ಎರಡೂ ಪಕ್ಷಗಳು ಜಿನಿವಾದಲ್ಲಿ ಸಹಿ ಹಾಕಿವೆ. ನಿರೀಕ್ಷಿದಂತೆಯೇ ರಷ್ಯ ತನ್ನ ಪ್ರತಿನಿಧಿಯನ್ನು ಕಳಿಸಲು ನಿರಾಕರಿಸಿದೆ; ಹೀಗಾಗಿ ಅಮೇರಿಕಾ ಕೂಡಾ ಈ ಬಗ್ಗೆ ಹಿಂಜರಿದಿದೆ.

ಈ ದಿಕ್ಕಿನಲ್ಲಿ ಒಂದಿಷ್ಟು ಪ್ರಗತಿಯನ್ನುಂಟುಮಾಡಿದ್ದಕ್ಕಾಗಿ ಡಾ. ಕಿಸಿಂಜರ್ ಅವರು ಮಾನವಕೋಟಿಯ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇದೆಲ್ಲಾ ಇಷ್ಟು ಮುಖ್ಯ ಎನಿಸುವುದು ಒಂದೇ ಒಂದು ಕಾರಣದಿಂದ : ಇದು ಈ ಎರಡು ದೇಶಗಳ ನಡುವೆ ಮಾತ್ರವಲ್ಲದೆ ಆ ಮಹಾನ್ ಹಠಮಾರಿ ಹಾಗೂ ಸಾಹಸಿಯಾದ ಅರಾಫತ್‌ರನ್ನು ಮತ್ತು ಆ ಮೂಲಕ ಸಹಜವಾಗಿ ಸಿರಿಯಾವನ್ನು ಒಳಗೊಂಡಂತೆ ಇನ್ನೂ ಹೆಚ್ಚು ದೃಢವಾದ ವ್ಯಾಪಕವಾದ ಒಪ್ಪಂದದ ಭರವಸೆ ನೀಡುತ್ತದೆ. ಅಧ್ಯಕ್ಷ ಸಾದಾತ್ ಖಂಡಿತ ಬಹಳ ಬುದ್ಧಿವಂತನಾದ ಮತ್ತು ಮುಂದಾಲೋಚನೆಯುಳ್ಳ ಮನುಷ್ಯ. ಆತ ಈಗ ಮಾಡಿರುವುದನ್ನು ಮಾಡಬೇಕಾದರೆ, ಎಂತಹವನಿಗೂ ಎಂಟೆದೆ ಬೇಕು. ಅಂತಿಮ ಶಾಂತಿ ಒಪ್ಪಂದ ಮೂಡುವವರಿಗೂ ಈತ ಬದುಕಿರುತ್ತಾನೆ ಮತ್ತು ಶಾಂತಿಪೂರ್ಣ ಹಾಗೂ ಸಮೃದ್ಧ ಪಶ್ಚಿಮ ಏಷ್ಯಾದ ಬಗ್ಗೆ ಹೊಸದಾಗಿ ಹುಟ್ಟಿರುವ ಆಶಯವನ್ನು ಹತ್ಯೆಯ ಮೂಲಕ ಚಿವುಟಿ ಹಾಕುವ ಯಾವುದೇ ಪ್ರಯತ್ನ ಯಶಸ್ವಿಯಾಗದಿರಲಿ ಎಂದು ನಾನು ಹಾರೈಸುವೆ. ಹಾಗೆ ನೋಡಿದರೆ ಈ ಹಾರೈಕೆ ಬರೀ ಪಶ್ಚಿಮ ಏಷ್ಯಕ್ಕೆ ಸಂಬಂಧಿಸದೆ, ಇಡೀ ವಿಶ್ವಕ್ಕೇ ಸಂಬಂಧಿಸಿದೆ.

ಸಿರಿಯಾ ಹಾಗೂ ಪ್ಯಾಲೇಸ್ಟೇನಿಯನ್ನರಿಗೆ ಮಹತ್ವದ್ದಾಗಿರುವ ಗೋಲನ್ ಹೈಟ್ಸ್ ಪ್ರಶ್ನೆಯ ಕಡೆ ತನ್ನ ಗಮನಹರಿಸಲು ಸಾದಾತ್ ಉದ್ಯುಕ್ತವಾಗಿರುವುದು ಹರ್ಷದ ಸಂಗತಿಯಾಗಿದೆ. ಆದರೆ ಇಸ್ರೇಲಿಗೆ ಕೂಡಾ ಸ್ವತಂತ್ರ ಅಸ್ತಿತ್ವದ ಮತ್ತು

ಸುಭದ್ರ ಹಾಗೂ ಖಚಿತವಾದ ಗಡಿಯೊಳಗೆ ಬದುಕುವ ಹಕ್ಕಿದೆ ಎಂಬುದನ್ನು ಮಾನ್ಯ ಮಾಡಬೇಕು. ಯಾರೇ ಗೆಲ್ಲಲಿ, ಭಯೋತ್ಪಾದನೆ ಮತ್ತು ಯುದ್ಧ ಶಾಶ್ವತ ಪರಿಹಾರವನ್ನು ಒದಗಿಸಲಾರವು ಎಂಬ ಅಂಶವನ್ನೂ ಅವು ತಿಳಿಯಬೇಕು. ಅವರು ನೆನಪಿನಲ್ಲಿಡಬೇಕಾದ ಮತ್ತೊಂದು ಅಂಶವೆಂದರೆ, ಪಶ್ಚಿಮ ಏಷ್ಯಾದಲ್ಲಿ ಉಂಟಾಗುವ ಯಾವುದೇ ಗಂಭೀರ ಸಮರ ಖಂಡಿತವಾಗಿಯೂ ಎರಡು ಬೃಹತ್ ಶಕ್ತಿಗಳನ್ನು ರಣಾಂಗಣಕ್ಕೆ ಆಹ್ವಾನಿಸುತ್ತದೆ; ಅಂದರೆ ಜಗತ್ತು ಕೊನೆಗೊಂಡಂತೆಯೇ. ಬಹುಶಃ ಮಾನವತೆಯ ಸುಭದ್ರತೆ ಅಡಗಿರುವುದು ಈ ಅಂಶದಲ್ಲೇ ಎಂದು ಕಾಣುತ್ತದೆ. ಯುದ್ಧ ಅಥವಾ ಶಾಂತಿ - ಇವು ಅಂತಿಮ ಆಯ್ಕೆಗಾಗಿ ಅವರ ಮುಂದೆ ಬಂದರೆ, ಅವರು ವಿನಾಶದ ಅಂಚಿನಿಂದ ದೂರ ಸರಿದು, ಶಾಂತಿಯನ್ನು ಆಯ್ಕೆಮಾಡಬೇಕು. ಮಾನವೀಯ ಪ್ರೇಮದಿಂದಲ್ಲ; ಈ ಭೂಮಿಯ ಮೇಲಿನ ತಮ್ಮ ಸ್ವಂತ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ. ಆದುದರಿಂದ ಈ ದಿಸೆಯಲ್ಲಿನ ಯಾವುದೇ ಬಾಧ್ಯತೆ ಸೂಕ್ತವಾಗಿಯೇ, ನಾಸೆರ್ ಹಾಗೂ ಅಧ್ಯಕ್ಷ ಅನ್ವರ್ ಸಾದಾತ್‌ರೂ ಸೇರಿದಂತೆ ಇತ್ತೀಚಿನ ಅರಬ್ ನಾಯಕರಿಗೇ ಸೇರಿದ್ದಾಗಿದೆ. ದೃಢ ಅಧಿಕಾರದ ಹಾಗೂ ರಾಜಕೀಯವಾಗಿ ಸಮತುಲಿತವಾಗಿರುವ ಸೌದಿ ಅರೇಬಿಯಾ ಸಾದಾತ್‌ರ ಕಡೆ, ನ್ಯಾಯ ಹಾಗೂ ಶಾಶ್ವತ ಶಾಂತಿ ಬಯಸುವ ಪಕ್ಷದ ಕಡೆ ಇರುತ್ತದೆಂದು ಬಯಸುವಾ.

ಬಹುಶಃ ರಷ್ಯಾಕ್ಕೆ ಪಶ್ಚಿಮ ಏಷ್ಯಾದಲ್ಲಿನ ಈ ಅಧಿಕಾರ ಸಮತೋಲನದ ಪ್ರಯತ್ನ ಆತಂಕ ಉಂಟುಮಾಡಿದೆ ಎಂದು ಕಾಣುತ್ತದೆ. ರಷ್ಯಾ ಶಾಂತಿಯ ಅಪೂರ್ವ ಅಗತ್ಯವಿರುವ ಒಂದು ಅಪೂರ್ವ ದೇಶವಾಗಿದೆ. ಅರಬ್-ಇಸ್ರೇಲೀ ಘರ್ಷಣೆ ಕ್ರಮೇಣ ಕೊನೆಗೊಳ್ಳುತ್ತಿದ್ದಂತೆ, ತನ್ನ ವ್ಯವಹಾರಗಳಲ್ಲಿ ಇತರರು ಹಸ್ತಕ್ಷೇಪ ನಡೆಸುವುದನ್ನು ಅರಬ್ ರಾಷ್ಟ್ರೀಯತೆ ಸಹಿಸುವುದಿಲ್ಲವೆಂಬುದನ್ನು ರಷ್ಯ ಮತ್ತು ಅಮೇರಿಕಾ ಕಂಡುಕೊಳ್ಳುತ್ತವೆ. ರಷ್ಯನರು ಪ್ರತಿ ದೇಶದಲ್ಲೂ ಒಬ್ಬ ವಿಶ್ವಾಸಾರ್ಹ ಏಜೆಂಟರನ್ನು - ದೇಶೀಯ ಕಮ್ಯುನಿಸ್ಟ್ ಪಕ್ಷವನ್ನು -ಹೊಂದಿರುತ್ತಾರೆ. ಆದರೆ ಇಂತಹ ಪಕ್ಷಗಳಿಗೆ ಯಾವುದೇ ಭವಿಷ್ಯವಿದೆ ಎಂದು ನನಗನ್ನಿಸುವುದಿಲ್ಲ, ಏಕೆಂದರೆ ಪ್ರಸಕ್ತ ಜಾಗತಿಕ ವ್ಯವಸ್ಥೆಯಲ್ಲಿ ನಿಜವಾದ ರಾಷ್ಟ್ರೀಯತೆ ಹಾಗೂ ವಿದೇಶೀ ನಿಷ್ಠೆಯುಳ್ಳ ಕಮ್ಯೂನಿಸಂ ನಡುವೆ ಉಂಟಾಗುವ ಯಾವುದೇ ಘರ್ಷಣೆಯಲ್ಲಿ - ಪೂರ್ವ ಐರೋಪ್ಯ ದೇಶಗಳಲ್ಲಿ ಮಾಡಿದಂತೆ ರಷ್ಯ ಈ ದೇಶಗಳಿಗೆ ಸೈನ್ಯ ನುಗ್ಗಿಸದ ಹೊರತಾಗಿ - ಸೋಲು ಯಾವಾಗಲೂ ಕಮ್ಯೂನಿಷ್ಟರ ಪಾಲಾಗಿರುತ್ತದೆ. ಆದರೆ ರಷ್ಯ ಇಂತಹ ಕೆಲಸ ಮಾಡುವಷ್ಟು ಈಗಲೂ ಅಪ್ರಬುದ್ಧವಾಗಿದ್ದರೆ, ಅದು ನೇರವಾಗಿಯೇ ಅಮೇರಿಕಾವನ್ನು ಎದುರಿಸಬೇಕಾಗಬಹುದು. ಇಲ್ಲ ಅಮೆರಿಕಾ ಅಥವಾ ರಷ್ಯಾ ಅನುಸರಿಸಬಹುದಾದ ಸಾಧ್ಯಮಾರ್ಗ ಇದು ಎಂದು ನನಗನ್ನಿಸುವುದಿಲ್ಲ, ಪ್ರಪಂಚ ಎಷ್ಟು ನಿಕಟವಾಗಿದೆ ಮತ್ತು ಎರಡು ಬೃಹತ್ ಶಕ್ತಿಗಳು ವಿಶ್ವದ ಮೇಲೆ ಹೇಗೆ ಕಿಸಿಗಾಲು ಹಾಕಿ ಕೂತಿವೆ ಎಂದರೆ, ಈಗ ಐರೋಪ್ಯ ಸಾಮ್ರಾಜ್ಯವಾದದ ಪುರಾತನ

ದಿನಗಳಲ್ಲಿದ್ದಂತೆ, ಅಧಿಕಾರ ಸಮತೋಲನ ಎಂಬುದು ಪ್ರಾದೇಶಿಕ ಎಲ್ಲೆಗಳಿಗೆ ಸೀಮಿತವಾಗಿ ಉಳಿದಿಲ್ಲ. ಹಾಗಾಗಿ ಈಗ ಅವುಗಳಿಗೆ ವಾಸ್ತವವಾಗಿ, ವಿಶ್ವದ ಅಧಿಕಾರ ಸಮತೋಲನದ ಮೇಲೇ ಕಣ್ಣು. ಈ ವಿಷಯದಲ್ಲಿ ಮುಂದುವರಿದು ಹೇಳುವುದಾದರೆ, ಹೋರಾಟದ ಸಾಮರ್ಥ್ಯದಲ್ಲಿ ಎರಡೂ ದೇಶಗಳು ಸಮ ಎಂದು ಕಂಡರೂ, ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆ ಮತ್ತು ಅದಕ್ಕಗತ್ಯವಾದ ತಂತ್ರಜ್ಞಾನದ ವಿಷಯದಲ್ಲಿ ರಷ್ಯ, ಅಮೇರಿಕಾದ ಮಟ್ಟವನ್ನು ಇನ್ನೂ ಮುಟ್ಟಬೇಕಾಗಿದೆ.

ಮತ್ತೆ ಪಶ್ಚಿಮ ಏಷ್ಯಾದಲ್ಲಿನ ಕಮ್ಯೂನಿಸಂಗೆ ಬಂದರೆ, ರಷ್ಯನ್ ಬ್ರ್ಯಾಂಡ್, ಚೀನಾ ಬ್ರ್ಯಾಂಡ್‌ನೊಂದಿಗೆ ಸ್ಪರ್ಧಿಸಬೇಕಾಗುತ್ತದೆ; ಇದು ರಷ್ಯನ್ ಮಹಾಶಯನಿಗೆ ಸಹಿಸಲಾಗದ ಸಂಗತಿ. ಚೀನೀ ಮಹಾಶಯ ಮಿಲಿಟರಿ ಹಾಗೂ ಆರ್ಥಿಕ ಶಕ್ತಿಯಾಗಿ ಸ್ಪರ್ಧಿಯಾಗದಿದ್ದರೂ, ಮನುಷ್ಯರ ಮನಸ್ಸು ಹಾಗೂ ಹೃದಯವನ್ನು ಗೆಲ್ಲುವ ಯುದ್ಧದಲ್ಲಿ ಪ್ರಬಲ ಪ್ರತಿಸ್ಪರ್ಧಿಯೇ ಆಗಬಹುದು. ಆದರೆ ಇದು, ಪಶ್ಚಿಮ ಏಷ್ಯಾದ ಅಧಿಕಾರ ಸಮತೋಲನಕ್ಕೆ - ಇದರ ಸಾಮಾನ್ಯ ಅರ್ಥಕ್ಕನುಗುಣವಾಗಿ ಹೇಳುವುದಾದರೆ - ಧಕ್ಕೆಯುಂಟು ಮಾಡಲಾರದು ಅಥವಾ ಅದು ನನಗೆ ಹಾಗೆ ಕಾಣುವುದೇನೋ ಗೊತ್ತಿಲ್ಲ!

ಸೆಪ್ಟೆಂಬರ್ 5

ತಾರ್ಕುಂಡೆ ಮತ್ತೆ ವಿಶ್ವಾಸದಿಂದ ರಜನಿ ಕೊಠಾರಿ ಹಾಗೂ ಡಿ.ಎಲ್. ಸೇಠ್ ಅವರ ನಾಲ್ಕು ಪುಸ್ತಕಗಳನ್ನು ಕಳಿಸಿದ್ದಾರೆ(ಈ ಮುನ್ನ ಅವರು ಒಂದು ಭಗವದ್ಗೀತೆಯ ಪ್ರತಿ, ಉಪನನಿಷತ್ತುಗಳ ಎರಡು ಸಂಪುಟಗಳು ಹಾಗೂ ಸ್ವಾಮಿ ರಂಗನಾಥಾನಂದರು ಈ ಸಂಪುಟಗಳ ಬಗ್ಗೆ ಬರೆದಿರುವ ಒಂದು ಒಳ್ಳೆಯ ಪುಸ್ತಕವನ್ನು ಕಳಿಸಿದ್ದರು). ಇವುಗಳಲ್ಲಿ ಒಂದು ರಜನಿ ಸಂಪಾದಿಸುವ ಒಳ್ಳೆಯ ಭವಿಷ್ಯ ಇರುವಂತೆ ಕಾಣುವ Alternative ಎಂಬ ನಿಯತಕಾಲದ ಮೊದಲ ಸಂಚಿಕೆ. Fritz Schumacher ಇದರಲ್ಲಿ ಬರೆದಿರುವ ಲೇಖನ ಮೊದಲನೆಯದು - ಅದ್ಭುತವಾಗಿದೆ.

Fritz ಅವರ ಲೇಖನವನ್ನು ಓದುತ್ತಿದ್ದಂತೆ ಹಲವಾರು ನೆನಪುಗಳು ನನ್ನ ಮನಸ್ಸನ್ನು ಮುತ್ತಿಗೆ ಹಾಕತೊಡಗಿದವು. ಇವುಗಳಲ್ಲ ಮುಖ್ಯವಾದದ್ದೆಂದರೆ, ನಾನು ಎರಡು ಬಾರಿ (ಆಯೋಜನಾ ಮಂಡಳಿಯ ಮೂಲಕ) Fritz ಅವರನ್ನು ಭಾರತಕ್ಕೆ ಕರೆಸಿದ್ದು, ಅವರು ಸಖೊದಿವ್ರೋರಾಕ್ಕೆ* ಬಂದದ್ದು ಮತ್ತು ವಾರಾಣಾಸಿ ಗಾಂಧಿ ಕೇಂದ್ರದಲ್ಲಿ ಭಾಷಣ ನೀಡಿ ಅಲ್ಲಿಯೇ ತಂಗಿದ್ದು, ಅವರ ಭಾಷಣ ಗಾಂಧೀವಾದಿಗಳ, ಶಿಕ್ಷಣತಜ್ಞರ, ವಿಜ್ಞಾನಿಗಳ ಹಾಗೂ ಇತರರ ಮನಸ್ಸನ್ನು ಪ್ರಭಾವಿಸಿತು. ಅವರ

---

* ಜೆ.ಪಿ.ಯವರ ಸರ್ವೋದಯ ಆಶ್ರಮವಿದ್ದ ಸ್ಥಳ

ಕಳೆದ ಭೇಟಿಯ ಸಂದರ್ಭದಲ್ಲಿ ಶ್ರೀಮತಿ ಗಾಂಧಿಯನ್ನು 45 ನಿಮಿಷಗಳ ಕಾಲ ಕಂಡಿದ್ದರು (ಆಯೋಜನಾ ಮಂಡಳಿಯ ಉಪಾಧ್ಯಕ್ಷ ಡಿ.ಪಿ. ಧರ್ ಅವರು Fritzಗೆ 10 ನಿಮಿಷಗಳ ಕಾಲಾವಧಿಯನ್ನು ಮಾತ್ರ ನೀಡಿದ್ದರು ಮತ್ತು ಪ್ರಧಾನಮಂತ್ರಿ ಕೂಡಾ ಅದಕ್ಕಿಂತ ಹೆಚ್ಚಿನ ಕಾಲ ತೆಗೆದುಕೊಳ್ಳುವುದಿಲ್ಲ ಎಂದು ನಿರೀಕ್ಷಿಸಿದ್ದರು) ಸಂದರ್ಶನದ ಕೊನೆಯಲ್ಲಿ ಶ್ರೀಮತಿ ಗಾಂಧಿ, ತನ್ನ ಆರ್ಥಿಕ ಸಲಹಾಕಾರರು ನಿರ್ವಹಿಸುವಂತೆ ತಾನು ಸೂಚಿಸಬಹುದಾದ ಕೆಲವು ಅಂಶಗಳನ್ನು ಬರೆದುಕೊಡುವಂತೆ Fritzರನ್ನು ಕೇಳಿದ್ದಳು. Fritz ಬರೆದೇನೋ ಕೊಟ್ಟರು. ಆದರೆ ಆ ಅಂಶಗಳನ್ನು ಅಲ್ಲಿಗೇ ಕೈಬಿಡಲಾಯಿತು. ಪ್ರಸಕ್ತ ಲೇಖನದಲ್ಲಿ (Alternatives in technology) Fritz ಹೇಳಿದ ಹಾಗೆ 'ಸರ್ಕಾರ ಪ್ರಚಲಿತ ವ್ಯವಸ್ಥೆಯ ಕಾರ್ಯಾಂಗವಾಗಿ, ಅದರ ತತ್ವಾದರ್ಶಗಳನ್ನು ಜಾರಿಗೆ ತರುವುದಕ್ಕಿಂತ ಹೆಚ್ಚಿನ ಎತ್ತರಕ್ಕೆ ಎಂದೂ ಏರಿಲ್ಲ.' ಇದು ಇಂದಿನ ವಿಶ್ವದ ವಾಸ್ತವಾಂಶಗಳಿಗೆ, ಮಾರ್ಕ್ಸ್‌ನ ವ್ಯಾಖ್ಯೆಃಗಿಂತ (ಅದು ಅವನ ಕಾಲಕ್ಕೆ ನಿಜವಾಗಿತ್ತು) ಹೆಚ್ಚು ಹತ್ತಿರವಾಗಿದೆ. (ಇಲ್ಲಿ ನೆನಪು ಮಾಡಿಕೊಳ್ಳಬಹುದಾದ ಇನ್ನೊಂದು ವಿಷಯವೆಂದರೆ: ನಾನು ಈ ಗಾಂಧಿ ಕೇಂದ್ರವನ್ನು ಸ್ಥಾಪಿಸಿದಾಗ, ಕೆಲವು ವರ್ಷಗಳ ಕಾಲ ಅದರ ನೀತಿ ನಿರ್ದೇಶನ ವ್ಯವಸ್ಥೆಯನ್ನು ನೋಡಿಕೊಳ್ಳುವಂತೆ ನಾನು Fritzರನ್ನು ಆಹ್ವಾನಿಸಿದ್ದೆ. ಅವರು ನಿಜವಾಗಿಯೂ ಸಂತೋಷದಿಂದ ಒಪ್ಪಿಕೊಂಡಿದ್ದರೂ ಸಹ. ಆದರೆ ದುರದೃಷ್ಟವಶಾತ್ ಅದೇ ಸಮಯದಲ್ಲಿ ಅವರ ಹೆಂಡತಿ ನಾಲ್ಕಾರು ಮಕ್ಕಳನ್ನು ಅಗಲಿ, ಕ್ಯಾನ್ಸರ್‌ನಿಂದ ಎಂದು ಕಾಣುತ್ತದೆ, ಮೃತಿಹೊಂದಿದರು. ಆಗ Fritz ಇನ್ನೂ ರಾಷ್ಟ್ರೀಯ ಕಲ್ಲಿದ್ದಲು ಮಂಡಳಿಯ ಸಲಹೆಗಾರರಾಗಿಯೇ ಇದ್ದರು. ಈ ದುರಂತ ಅವರ ಎಲ್ಲ ಯೋಜನೆಗಳನ್ನೂ ಅಸ್ತವ್ಯಸ್ತಗೊಳಿಸಿತು. ಒಂದು ವರ್ಷದ ನಂತರವೋ ಏನೋ ಅವರು ಮರುಮದುವೆಯಾದರು. ನಂತರ ಅವರು ಭಾರತಕ್ಕೆ ಬರುವ ಸ್ಥಿತಿಯಲ್ಲಿರಲಿಲ್ಲ ; ನಾನು ಕೂಡಾ ಒತ್ತಾಯಪಡಿಸಲಾಗಲಿಲ್ಲ. ನಾನು ಮತ್ತು ಪ್ರಭಾ ಮೊದಲಬಾರಿಗೆ ಬ್ರಿಟನ್ ಹಾಗೂ ಯೂರೋಪ್‌ಗೆ ಹೋಗಿದ್ದಾಗ Fritzರನ್ನು ಭೇಟಿಮಾಡಿದ್ದೆ. ಬಹುಶಃ 1958ರಲ್ಲಿ ಎಂದು ಕಾಣುತ್ತದೆ. ರೀಟಾ ಹಿಂಡೆನ್‌ರ ಉತ್ಸಾಹಪೂರ್ಣ ನೇತೃತ್ವದ ಸೋಶಿಯಲಿಸ್ಟ್ ಯೂನಿಯನ್ ನಮ್ಮನ್ನು ಆಹ್ವಾನಿಸಿತ್ತು. Fritz ಕೂಡಾ ಈ ಯೂನಿಯನ್‌ನಲ್ಲಿದ್ದರು. ಈಗ ಈ ಯೂನಿಯನ್ ಸತ್ತುಹೋಗಿದೆಯಾದರೂ, ರೀಟಾ ಮೃತಿಹೊಂದಿದ ನಂತರವೂ, 'ಸೋಶಿಯಲಿಸ್ಟ್ ಕಾಮೆಂಟರಿ' ಪತ್ರಿಕೆ ನಡೆಯುತ್ತಿದೆ).

ಈಗ ಭಾರತದ 'ಪ್ರಚಲಿತ ವ್ಯವಸ್ಥೆ' ಯಾವುದು ಮತ್ತು ಅದರ ತತ್ವಾದರ್ಶನಗಳೇನು ಎಂಬ ವಿಷಯಕ್ಕೆ ಬರೋಣ. ಇದು ಬಹಳ ಕುತೂಹಲಕಾರಿಯಾದ ಪ್ರಶ್ನೆ. ಮೊದಲಾಗಿ ವ್ಯವಸ್ಥೆಯೆಂಬುದೊಂದು ಇದೆಯೇ? ಜನಸಂಖ್ಯೆಯ ಶೇಕಡಾ 80ರಷ್ಟು ಜನ ಹಳ್ಳಿಗಳಲ್ಲಿ ವಾಸಿಸಿದರೆ, ಶೇಕಡಾ 20ರಷ್ಟು ಜನ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಇವರಲ್ಲಿ ಕೈಗಾರಿಕಾ ಕಾರ್ಮಿಕರು,

ನಾಲ್ಕನೇ ದರ್ಜೆಯ ನೌಕರರು ಹಾಗೂ ಮೂರನೆಯ ದರ್ಜೆಯ ನೌಕರರೂ ಸೇರಿದ್ದಾರೆ. ಪಟ್ಟಣ ಪ್ರದೇಶಗಳಲ್ಲಿ ಸಾಕಷ್ಟು ಬಡತನ, ಕೊಳಕು, ಜುಗ್ಗಿ - ಜೋಪಡಿಗಳು ಇದ್ದೇ ಇದೆ. ಆದರೂ ಪಟ್ಟಣಗಳಿಗೆ ಸ್ಥಳಾಂತರ ಏಕಪ್ರಕಾರವಾಗಿ ನಡೆಯುತ್ತಿದೆ. ಕೆಲವೇ ಜನರಿಗೆ ಉದ್ಯೋಗ ಸಿಗುವುದಾದರೂ, ಜನ ಪಟ್ಟಣಗಳಿಗೆ ಬರುತ್ತಲೇ ಇದ್ದಾರೆ. ಕೈಗಾರಿಕಾ ಕಾರ್ಮಿಕರು, ಮೂರನೇ ಹಾಗೂ ನಾಲ್ಕನೇ ದರ್ಜೆ ನೌಕರರು ಬಿಟ್ಟರೆ, ಆರ್ಥಿಕವಾಗಿ ಉತ್ತಮವಾಗಿರುವ - ಇವರಲ್ಲಿ ಸ್ವಲ್ಪ ಜನರು ಪಾಶ್ಚಿಮಾತ್ಯ ರೀತಿ ನೀತಿಗಳಿಗನುಗುಣವಾಗಿ ಶ್ರೀಮಂತ ಜೀವನ ನಡೆಸುವ - ಜನರಿದ್ದಾರೆ. ನಂತರ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿದ್ದಾರೆ. ಸರ್ಕಾರೀ ಅಧಿಕಾರಿಗಳಿದ್ದಾರೆ, ಮಂತ್ರಿಗಳಿದ್ದಾರೆ (ರಾಜಧಾನಿ ನಗರಗಳಲ್ಲಿ). ವ್ಯವಸ್ಥೆಯೊಂದಿದ್ದರೆ ಅದು ಈ ಎಲ್ಲರಿಂದೊಡಗೂಡಿದೆ ಮತ್ತು ಅದರ ತತ್ವಾದರ್ಶಗಳು, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಉತ್ತಮವಾಗಿರುವ ಜನರ ತತ್ವಾದರ್ಶಗಳಾಗಿವೆ. ಹಳ್ಳಿ ಪ್ರದೇಶಗಳ ಈ ಉತ್ತಮ ವರ್ಗದವರೂ ಒಂದೇ ಸಮನೆ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ.

ಹೋಗಲಿ ಈ ವ್ಯವಸ್ಥೆಯ ತತ್ವಾದರ್ಶಗಳಾದರೂ ಏನು? ಇರುವುದನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವುದು, ತಮ್ಮವರೇ ಆದ ಹೆಚ್ಚೆಚ್ಚು ಜನರು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುವಂತೆ - ಅಂದರೆ ಪ್ರಯೋಜನಗಳು ವಿಸ್ತರಿಸುವಂತೆ - ಮೂಲಭೂತ ಬದಲಾವಣೆ ಎಂಬ ನಾಟಕಕ್ಕೆ ಹೊಸ ಹೊಸ ಅಂಶಗಳನ್ನು (ಸಮಾಜವಾದ, ಕಮ್ಯೂನಿಸಂ ಮುಂತಾದವು) ಸೇರಿಸುತ್ತಾ ಹೋಗುವುದು. ರಾಜಕೀಯ, ಶಿಕ್ಷಣ ಮತ್ತು ಎಲ್ಲ ತರದ ಹಕ್ಕುಗಳೂ ಸಂಪೂರ್ಣವಾಗಿ ಸಮಾಜದ ಈ ಸಣ್ಣ ಉನ್ನತ ವರ್ಗಕ್ಕೆ - ಎಲ್ಲ ಬಂಡವಾಳವಾದಿಗಳಿಗೂ ಇದು ಅನ್ವಯಿಸದಾದರೂ- ಕೃಷಿಯನ್ನು ಬಿಟ್ಟು ನಮ್ಮ ಕೈಗಾರಿಕಾ ಆರ್ಥಿಕತೆಯ ಬಹುಶಃ ಅತಿ ಹೆಚ್ಚಿನ ಭಾಗವನ್ನು ಆವರಿಸಿರುವ ಸರ್ಕಾರೀ ವಲಯಕ್ಕೆ ಸೀಮಿತವಾಗಿವೆ.

ಭಾರತದಲ್ಲಿ ಉತ್ತಮರ ಈ ಸಣ್ಣವರ್ಗ - ಕೆಲವು ಅಪರೂಪ ವ್ಯಕ್ತಿಗಳನ್ನುಳಿದು - ಹೆಚ್ಚೆಚ್ಚು ಆಧುನಿಕ ತಂತ್ರಜ್ಞಾನ, ಹೆಚ್ಚೆಚ್ಚು ಕೈಗಾರಿಕೀಕರಣ, ಹೆಚ್ಚೆಚ್ಚು ಯಂತ್ರೀಕರಣ ಮತ್ತು ಕೃಷಿವಲಯದ ಹೆಚ್ಚೆಚ್ಚು ರಸಾಯನೀಕರಣವನ್ನು (chemicalisation) ಬಯಸುತ್ತದೆ. ಇದೇ ಭಾರತದ ಆಧುನೀರಕಣದ ನೀತಿ ಸೂತ್ರ. ಆದುದರಿಂದ, Fritz ತನ್ನ ಸರಳ ಸಿದ್ಧಾಂತದ ಮೂಲಕ ಶ್ರೀಮತಿ ಗಾಂಧಿಯನ್ನು ಆ ಕ್ಷಣದಲ್ಲಿ ಪ್ರಭಾವಿತಗೊಳಿಸಿದರಾದರೂ, ಈ ವ್ಯವಸ್ಥೆಯ ಈ ಅಭಿವೃದ್ಧಿ ನೀತಿ ಸೂತ್ರ ಅದನ್ನು ಆಳಕ್ಕೆ ಹುಗಿದು ಮಣ್ಣು ಮುಚ್ಚಿತು.

ಸೆಪ್ಟೆಂಬರ್ 6

(ಮುಂದುವರೆದ ಟಿಪ್ಪಣಿಗಳು)

ಬಿಹಾರ ಆಂದೋಲನದಲ್ಲಿ ಅಥವಾ ಇಂತಹ ಇತರ ಆಂದೋಲನಗಳಲ್ಲಿ ವಿರೋಧಿ ರಾಜಕೀಯ ಪಕ್ಷಗಳನ್ನು ತೊಡಗಿಸುವ ಪ್ರಶ್ನೆ, ಹಲವಾರು ಬುದ್ಧಿಜೀವಿ ಸ್ನೇಹಿತರು ಹಾಗೂ ಹಿತೈಷಿಗಳನ್ನು ಆಲೋಚನೆಗೆ ಹಚ್ಚಿದೆ. ಈ ಬಗ್ಗೆ ನನ್ನ ಚಿಂತೆ ಕೂಡಾ ಕಡಿಮೆಯೇನಿಲ್ಲ. ಹಿಂದಿನ ದಿನಗಳನ್ನು ಅವಲೋಕಿಸಿದಂತೆ, ನಾನು ತಪ್ಪು ಮಾಡಿದೆನೆ? ಹಾಗಿದ್ದರೆ ಅದೇನು ಎಂಬ ಪ್ರಶ್ನೆಯನ್ನು ನನಗೆ ನಾನೇ ಕೇಳಿಕೊಳ್ಳುತ್ತೇನೆ. ಆಂದೋಲನದ ದಿನಗಳಲ್ಲೂ ಸಹ ಈ ಪ್ರಶ್ನೆಯನ್ನು ನಾನು ಮತ್ತೆ ಮತ್ತೆ ಕೇಳಿಕೊಳ್ಳುತ್ತಿದ್ದೆ. ಈ ಪ್ರಶ್ನೆಗೆ ದೊರೆತ, ದೊರೆಯುತ್ತಿರುವ ಉತ್ತರಗಳಾವುವು? ಆಂದೋಲನ ವಿರೋಧಪಕ್ಷಗಳೊಂದಿಗೆ ಬೆರೆಯದೇ ಇದ್ದಿದ್ದರೆ, ಅದರ ಸ್ವರೂಪ, ಅದರ ಪ್ರಾಯೋಗಿಕ ಪ್ರಯೋಜನ, ಅದರ ಶೈಕ್ಷಣಿಕ ಮೌಲ್ಯ, ಜನತೆ ತಮ್ಮ ಸಮಸ್ಯೆಗಳನ್ನು ತಾವೇ ಗುರುತಿಸಿಕೊಳ್ಳುವ (ರಾಜಕೀಯ ಪಕ್ಷಗಳ ಮೂಲಕ ಅಲ್ಲ) ಮತ್ತು ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ತಮಗಿರುವ ಅಧಿಕಾರವನ್ನು - ಅದು ಎಷ್ಟೇ ಸೀಮಿತವಾಗಿರಲಿ - ಚಲಾಯಿಸಬೇಕಾದ, ತಮ್ಮನ್ನು ಬದಲಿಸಿಕೊಳ್ಳಬೇಕಾದ, ತಮ್ಮ ಸುತ್ತಮುತ್ತಲಿನ ಭೌತಿಕ ಹಾಗೂ ಸಾಮಾಜಿಕ ವಾತಾವರಣವನ್ನು ಪುನರ್ರೂಪಿಸಿಕೊಳ್ಳಬೇಕಾದ ಹಾಗೂ ಈ ಬದಲಾವಣೆಗಾಗಿ ಶಾಂತಿಯುತ ಪ್ರತಿಭಟನೆ ನಡೆಸಬೇಕೆ ಅಥವಾ ಅಸಹಕಾರ ಚಳವಳಿಯನ್ನು ನಡೆಸಬೇಕೇ, ನಡೆಸುವುದಾದರೆ ಅದನ್ನು ವೈಯಕ್ತಿಕ ಮಟ್ಟದಲ್ಲಿ ನಡೆಸಬೇಕೇ ಅಥವಾ ಗುಂಪುಗುಂಪಾಗಿ ಇಲ್ಲವೇ 'ಸಾಮೂಹಿಕ'ವಾಗಿ (ಅಂದರೆ ಜನತಾ ಆಂದೋಲನದ ರೂಪದಲ್ಲಿ) ನಡೆಸಬೇಕೆ ಎಂಬುದನ್ನು ನಿರ್ಧರಿಸಬೇಕಾದ ಅವರ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಡುವ ಅದರ ಸಾಮರ್ಥ್ಯ - ಈ ಎಲ್ಲ ವಿಷಯಗಳಲ್ಲಿ 'ರಾಜಿ' ಮಾಡಿಕೊಳ್ಳುವ ಅಗತ್ಯವೇ ಇರುತ್ತಿರಲಿಲ್ಲ ಎಂಬುದರಲ್ಲೇನೂ ಸಂದೇಹವಿಲ್ಲ.

ಆದರೆ ಯಾವುದೇ ಆದರ್ಶ ಒಂದಿಷ್ಟು ವಿಕಾರಗೊಳ್ಳದೆಯೇ ಅನುಷ್ಠಾನಕ್ಕೆ ಬರಲಾರದು. ಎದುರಾದ ಮೊದಲ ತೊಂದರೆ - ಈಗ ಎಲ್ಲವನ್ನು ಹೊಸದಾಗಿ ಆರಂಭಿಸಿದರೂ ಎದುರಾಗುವ ಮೊದಲ ತೊಂದರೆ ಎಂದರೆ- ಮುಕ್ತ ಜನತಾ ಆಂದೋಲನವೊಂದರಲ್ಲಿ ರಾಜಕೀಯ ಪಕ್ಷಗಳು ಭಾಗವಹಿಸದಂತೆ ತಡೆಯುವುದು ಅಸಾಧ್ಯ ಮಾತ್ರ ಎಂಬ ವಾಸ್ತವಾಂಶ. ನಿಜ, ಆಂದೋಲನವನ್ನು ಸರ್ವೋದಯ ಕಾರ್ಯಕರ್ತರಿಗೇ ಸೀಮಿತಗೊಳಿಸಿದ್ದಲ್ಲಿ, ಮತ್ತು (ಆಡಳಿತ ಪಕ್ಷವೂ ಸೇರಿದಂತೆ) ಎಲ್ಲ ರಾಜಕೀಯ ಪಕ್ಷಗಳನ್ನೂ ಅದರಿಂದ ದೂರ ಇಡುವುದೇ ಅದರ ತತ್ವವಾಗಿದ್ದಲ್ಲಿ, ಅವುಗಳನ್ನು ದೂರವಿಡುವುದು ಅಸಾಧ್ಯವೇನಾಗಿರಲಿಲ್ಲ, ಆದರೆ ಆಗ ಜನತಾ ಆಂದೋಲನವೆಂಬುದೇ ಇರುತ್ತಿರಲಿಲ್ಲ.

ಈ ತೊಂದರೆಯ ಇನ್ನೊಂದು ಮುಖವೆಂದರೆ, ಈ ಆಂದೋಲನವನ್ನು ನಾನು ಆರಂಭಿಸಲಿಲ್ಲ ಎಂಬುದು. ಆಗಲೇ ಆರಂಭವಾಗಿದ್ದ ಆಂದೋಲನದ ನೇತೃತ್ವ ವಹಿಸಿ ಅದಕ್ಕೊಂದು ದಿಕ್ಕು, ವಿಸ್ತಾರ ಹಾಗೂ ಆಳವನ್ನು ನಾನು ಒದಗಿಸಬೇಕಾಯಿತಷ್ಟೆ. ಬೇರೆಲ್ಲಾದರೂ, ಇತರ ಯಾವುದೇ ಕಾಲದಲ್ಲಿ ಯಾರಾದರೂ ಇಂತಹ ಜನತಾ ಆಂದೋಲನವೊಂದನ್ನು ಸಂಘಟಿಸಬೇಕಾದಲ್ಲಿ ಇಂತಹ ಪರಿಸ್ಥಿತಿಯನ್ನೇ ಎದುರಿಸಬೇಕಾಗುತ್ತದೆ ಎಂಬುದರ ಬಗ್ಗೆ ನನಗೆ ಸಂದೇಹವಿದೆ. ಅಲ್ಲದೆ, ಆರಂಭದಲ್ಲಿ ಬಿಹಾರದ ವಿದ್ಯಾರ್ಥಿ ಆಂದೋಲನ ಪಕ್ಷೇತರವಾಗಿದ್ದು, ಅದರ ಕಾರ್ಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ಶೇಕಡಾ ೮೦ರಿಂದ ೯೦ ಮಂದಿ ಯುವಕ ಯುವತಿಯರು ಯಾವುದೇ ಪಕ್ಷಕ್ಕೆ ಸೇರದಿದ್ದರೂ, ನಾಯಕತ್ವ ಮಾತ್ರ ತೀವ್ರ ಪಕ್ಷನಿಷ್ಠೆ ಹೊಂದಿದ್ದ ಮತ್ತು ಬಾಹ್ಯವಾಗಿ ತಮ್ಮ ರಾಜಕೀಯ ಪಕ್ಷದ ಮುಖಂಡರ ಮಾರ್ಗದರ್ಶನ ಪಡೆಯುತ್ತಿದ್ದ ವಿದ್ಯಾರ್ಥಿಗಳು ಹಾಗೂ ಮಾಜಿ ವಿದ್ಯಾರ್ಥಿಗಳ ಕೈಯಲ್ಲಿತ್ತು. ಇದರಲ್ಲಿ ನಾಲ್ಕು ಪ್ರಮುಖ ರಾಜಕೀಯ ಪಕ್ಷಗಳು ತೊಡಗಿದ್ದವು - ಜನಸಂಘ, ಸಮಾಜವಾದಿ ಪಕ್ಷ ಭಾರತೀಯ ಲೋಕದಳ ಹಾಗೂ ಸಂಸ್ಥಾ ಕಾಂಗ್ರೆಸ್. ಹಲವಾರು ವಿಶ್ವವಿದ್ಯಾಲಯ ಕೇಂದ್ರಗಳಲ್ಲಿ ಜನಸಂಘ ಪ್ರಬಲವಾಗಿದ್ದರೆ, ಕೆಲವು ಕಡೆ ಭಾ.ಲೋ.ದ. ಹಾಗೂ ಸಮಾಜವಾದೀ ಪಕ್ಷಗಳೂ ಪ್ರಬಲವಾಗಿದ್ದವು. ಸಂಸ್ಥಾ ಕಾಂಗ್ರೆಸ್ ಸದಸ್ಯಬಲದ ದೃಷ್ಟಿಯಿಂದ ದುರ್ಬಲವಾಗಿದ್ದರೂ, ಆಂದೋಲನದ ಮಾರ್ಗದರ್ಶನ ಸಮಿತಿಯಲ್ಲಿನ ಅದರ ನಾಯಕತ್ವ ಬಹಳ ಪ್ರಬುದ್ಧವಾಗಿತ್ತು ಮತ್ತು ಪ್ರಭಾವಪೂರ್ಣವಾಗಿತ್ತು.

ಇದು, ನಾನು ಬಿಹಾರ ವಿದ್ಯಾರ್ಥಿ ಆಂದೋಲನದ ಸಂಪರ್ಕ ಬೆಳೆಸಿಕೊಂಡಾಗ ಇದ್ದ ಪರಿಸ್ಥಿತಿ. ಆಗ್ಗೆಯಾಗಲೇ ರಾಜಕೀಯ ಪಕ್ಷಗಳು ಅಖಾಡಕ್ಕಿಳಿದಿದ್ದವು. ನಿಜಸಂಗತಿ ಎಂದರೆ, ನನ್ನ ಪ್ರಭಾವವು ರಾಜಕೀಯ ಪಕ್ಷಗಳ ಪ್ರಭಾವವನ್ನು ಕಡಿಮೆ ಮಾಡಿತು ಮತ್ತು ಎಲ್ಲರಲ್ಲಿ ಏಕಾಭಿಪ್ರಾಯವನ್ನು ಮೂಡಿಸಲು ಹಾಗೂ ಆಂದೋಲನಕ್ಕೆ - ಮೊದಲು ವಿದ್ಯಾರ್ಥಿ ಆಂದೋಲನಕ್ಕೆ, ನಂತರ ಜನತಾ ಆಂದೋಲನಕ್ಕೆ - ಪಕ್ಷೇತರ ರಾಜಕೀಯ ಸ್ವರೂಪ ಒದಗಲು ಸಹಾಯವಾಯಿತು ಎಂಬುದನ್ನು ಎಲ್ಲ ಅಲಿಪ್ತ ವೀಕ್ಷಕರೂ ಒಪ್ಪುತ್ತಾರೆ.

ಆದರೂ, ಈ ಪಕ್ಷ ಸಂಬಂಧಿಯಾದ ಮತ್ತು ಪಕ್ಷೇತರ ಜನತಾ ಆಂದೋಲನದ ಸಮಸ್ಯೆಗೆ ಮತ್ತೊಂದು ಮತ್ತು ಸೈದ್ಧಾಂತಿಕವಾಗಿ ಮಹತ್ವವಾಗಿರುವ ಮುಖವಿದೆ. ಗುಜರಾತ್ ಹಾಗೂ ಬಿಹಾರ ಆಂದೋಲನಗಳೆರಡೂ ಆರಂಭವಾದದ್ದು ಕೆಲವು ಬೇಡಿಕೆಗಳು ಹಾಗೂ ಆರೋಪಗಳನ್ನು - ಭ್ರಷ್ಟಾಚಾರ (ವಿಶೇಷವಾಗಿ ಸರ್ಕಾರದಲ್ಲಿ), ನಿರುದ್ಯೋಗ, ಶೈಕ್ಷಣಿಕ ಸುಧಾರಣೆಗಳು (ಅಥವಾ ಕ್ರಾಂತಿ) ಮತ್ತು ಪರೀಕ್ಷೆಗಳು ಹಾಗೂ ಕಾಲೇಜು, ಹಾಸ್ಟೆಲುಗಳಲ್ಲಿನ ಪ್ರವೇಶವನ್ನು ಕುರಿತ ಕೆಲವು ಸಣ್ಣಮಟ್ಟ

ದೂರುಗಳು ಮುಂತಾದವು - ರಾಜ್ಯಸರ್ಕಾರದ ಹೊಸ್ತಿಲ ಬಳಿ ಇಡುವುದರೊಂದಿಗೆ ಎಂಬುದು ಎಲ್ಲರಿಗೂ ಚೆನ್ನಾಗಿ ಗೊತ್ತು. ಆದುದರಿಂದ, ಈಗಾಗಲೇ ನಾನು ಈ ಟಿಪ್ಪಣಿಗಳಲ್ಲಿ ಹೇಳಿರುವಂತೆ, ವಿದ್ಯಾರ್ಥಿಗಳನ್ನು ಸ್ನೇಹಪರವಾಗಿ ಬರಮಾಡಿಕೊಂಡು ಅವರ ಬೇಡಿಕೆಗಳನ್ನು ಗಂಭೀರವಾಗಿ ಪರಿಶೀಲಿಸಿ ಆ ಬಗ್ಗೆ ಏನಾದರೂ ಮಾಡಬೇಕಾದುದು ರಾಜ್ಯಸರ್ಕಾರದ ಕರ್ತವ್ಯವಾಗಿತ್ತು. ಆದರೆ ಎರಡೂ ರಾಜ್ಯಗಳಲ್ಲಿನ ಸರ್ಕಾರಗಳು ಘರ್ಷಣೆಯ ಹಾದಿಯನ್ನು ಹಿಡಿದಾಗ ಸರ್ಕಾರ ವಿರೋಧೀ ಹೋರಾಟವೊಂದು ಅನಿವಾರ್ಯವಾಯಿತು. ಈ ಸನ್ನಿವೇಶ ತತ್‌ಕ್ಷಣವೆ ಮಧು, ಕೀಟಗಳನ್ನು ಆಕರ್ಷಿಸುವಂತೆ ರಾಜಕೀಯ ಪಕ್ಷಗಳನ್ನು ಆಕರ್ಷಿಸಿತು. ಇಂತಹ ಸಮಯದಲ್ಲಿ ಮಾಡುವುದಾದರೂ ಏನು? ಉಳಿದ ಒಂದೇ ದಾರಿ ಎಂದರೆ ವಿನೋಬಾಜಿ ನನ್ನಿಂದ ಬಯಸಿದಂತೆ (ಇದಕ್ಕೆ ಅವರು ಕೊಟ್ಟ ಕಾರಣಗಳೇ ಬೇರೆ; ಅವನ್ನು ಈ ಪುಟಗಳಲ್ಲಿ ಈಗಾಗಲೇ ವಿವರಿಸಿದ್ದೇನೆ) ಸರ್ಕಾರದೊಂದಿಗೆ ಘರ್ಷಣೆಯನ್ನು ಏನಾದರೂ ಮಾಡಿ ತಪ್ಪಿಸುವ ಪ್ರಯತ್ನ ಮಾಡುವುದು. ಸಮಸ್ಯೆ ಎಂದರೆ ಇದು ಸಾಧ್ಯವೇ ಅಂತ. ಯಾವುದೇ ರಾಜಕೀಯ ನಿಷ್ಠೆ ಹೊಂದದ, ಆದುದರಿಂದ ಯಾವುದೇ ಪರಿಸ್ಥಿತಿಯನ್ನು ಏಕಪಕ್ಷೀಯ ಗುರಿಸಾಧನೆಗಾಗಿ ಬಳಸಿಕೊಳ್ಳುವ ದುರುದ್ದೇಶ ಹೊಂದದ, ಆದರೂ ಶಾಂತಿಯುತವಾದ ಕ್ರಾಂತಿಕಾರೀ ಆಂದೋಲನವೊಂದನ್ನು - ಅಂದರೆ ಸಮಾಜ ಹಾಗೂ ಸಾಮಾಜಿಕ ಮನೋಭಾವಗಳಲ್ಲಿ ಮೂಲಭೂತ ಬದಲಾವಣೆಗಳನ್ನು ತರುವ ಆಂದೋಲನವೊಂದನ್ನು - ಆರಂಭಿಸುವ ಆಕಾಂಕ್ಷೆ ಹೊಂದಿರುವ ಯಾರೇ ಆಗಲಿ ನಾವು ಹೊಂದಿರುವಂತಹ ಸರ್ಕಾರದೊಂದಿಗೆ ಘರ್ಷಣೆಯನ್ನು ತಪ್ಪಿಸಿಕೊಳ್ಳಲಾರರು. ಆದರೆ ಪವಾಡ ನಡೆದೇ ಹೋಗಿ, ಆಡಳಿತ ಪಕ್ಷ ಕ್ರಾಂತಿಕಾರೀ ಆಂದೋಲನದೊಂದಿಗೆ ಸಹಕರಿಸಲು ಮುಂದೆ ಬಂದರೆ, ನಮಗೆ ಅಂದು ನಿಜವಾಗಿ ಆನಂದದ ದಿನ, ಸಂತಾಪದ ದಿನವಲ್ಲ. ಆದರೆ ಶ್ರೀಮತಿ ಗಾಂಧಿಯ ನೇತೃತ್ವ ಪಡೆದ ಕಾಂಗ್ರೆಸ್ ಹಾಗೆ ವರ್ತಿಸೀತು ಎಂದು ನನಗನ್ನಿಸುವುದಿಲ್ಲ. ವಿರೋಧ ಪಕ್ಷಗಳು? ಅವು ಕಾಂಗ್ರೆಸ್ಸಿಗಿಂತ ಉತ್ತಮ ರೀತಿಯಲ್ಲಿ ವರ್ತಿಸೀಯಾವೆ? ಕಾದು ನೋಡಬೇಕಾಗಿದೆ. ನನ್ನ ವೈಯಕ್ತಿಕ ಅಭಿಪ್ರಾಯವೆಂದರೆ ಅವು ಕನಿಷ್ಠಪಕ್ಷ ಬಿಹಾರದಲ್ಲಾದರೂ ಉತ್ತಮವಾಗಿ ವರ್ತಿಸುತ್ತವೆ; ಮತ್ತು ಬದಲಾವಣೆಗಾಗಿ ಜನತಾ ಆಂದೋಲನಗಳು ನಡೆದಿರುವ ಇತರ ರಾಜ್ಯಗಳಲ್ಲೂ ಸಹ ಅವು ಉತ್ತಮ ರೀತಿಯಲ್ಲಿ ವರ್ತಿಸುತ್ತಿವೆ ಎಂಬ ಆಶಯವು ನನಗಿದೆ.

ಈಗ ನಾವು ಸಮಸ್ಯೆಯ ಕೊನೆಯ ಹಂತ ತಲುಪಿದ್ದೇವೆ. ಬಿಹಾರದ ರೀತಿಯ ಜನತಾ ಆಂದೋಲನದಲ್ಲಿ ರಾಜಕೀಯ ಪಕ್ಷಗಳು ಸೇರುವುದರಿಂದ ಬರೀ ಕೆಡುಕೇ ಆಗುತ್ತದೆಯೇ? ಇದರಿಂದಾಗುವ ತೊಂದರೆಗಳು (ಅಥವಾ ತಪ್ಪುಗಳು) ಈ ಪುಟಗಳಲ್ಲಿಯೇ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲ್ಪಟ್ಟಿವೆ ಮತ್ತು ಸ್ನೇಹಪೂರ್ಣ ಹಾಗೂ ಪ್ರಜ್ಞಾವಂತರಾದ ವಿಮರ್ಶಕರಿಗೆ ಸಾಮಾನ್ಯವಾಗಿ ತಿಳಿದಿರುವಂತಹುಗಳೇ ಆಗಿವೆ.

ಆದರೆ ನಾವು ಎಲ್ಲಕ್ಕಿಂತ ಮೊದಲು ತಿಳಿಯಬೇಕಾದ ವಿಷಯವೆಂದರೆ, ದೊಡ್ಡ ಸಂಖ್ಯೆಯಲ್ಲಿ ಕಾಲೇಜ್ ವಿದ್ಯಾರ್ಥಿಗಳನ್ನು ಹಾಗೂ ಜನರನ್ನು ತೊಡಗಿಸಿಕೊಂಡ ಯಾವುದೇ ಮುಕ್ತ ಆಂದೋಲನದಲ್ಲಿ ಯಾರನ್ನೇ ಆಗಲಿ, ಮೇಲಾಗಲೇ ವಿವರಿಸುವಂತೆ, ಆಂದೋಲನದಿಂದ ದೂರವಿಡುವುದು ಅಸಾಧ್ಯ. ಹಾಗೆ ನೋಡಿದರೆ, ಬಿಹಾರದಲ್ಲಿ ಆಂದೋಲವನ್ನು ಪ್ರವೇಶಿಸಿದ ಪಕ್ಷಗಳು ಪಕ್ಷಗಳಾಗಿ ಪ್ರವೇಶಿಸಲಿಲ್ಲ, ಅವುಗಳ ನಾಯಕರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ವೈಯಕ್ತಿಕವಾಗಿ ಬಂದರು. ಈ ಪಕ್ಷಗಳೇನೋ ಆಂದೋಲನದ ಕಾರ್ಯವ್ಯಾಪ್ತಿಯ ಹೊರಗೆ ನಡೆಸಿದ ತಮ್ಮ ಅಧಿಕೃತ ಸಭೆಗಳಲ್ಲಿ ಆಂದೋಲನದ ಪರವಾಗಿ ನಿರ್ಣಯಗಳನ್ನು ಅಂಗೀಕರಿಸಿದವು ಮತ್ತು ಪೂರ್ಣ ಬೆಂಬಲ ನೀಡಿ ಹೇಳಿಕೆಗಳನ್ನು ಹೊರಡಿಸಿದವು. ಆದರೆ ನಿಜವಾದ ಪ್ರಶ್ನೆ ಎಂದರೆ: ವಿರೋಧಪಕ್ಷಗಳ ಭಾಗವಹಿಸುವಿಕೆ ಎಂದರೆ ಬರೀ ಗೊಂದಲಕಾರಿಯಾದ ಪಿಡುಗೇ? ಇದಕ್ಕೆ ನನ್ನ ನಿಸ್ಸಂಕೋಚವಾದ ಉತ್ತರ: ಅಲ್ಲ. ಪಕ್ಷಗಳ ಭಾಗವಹಿಸುವಿಕೆಯ ಮೊದಲ ಫಲಿತಾಂಶವೆಂದರೆ - ಇದನ್ನು ಬಹಳ ಸಹಜವಾಗಿ ವಾದಿಸಬಹುದು - ಅಂದೋಲನ ಇದರಿಂದ ಶಕ್ತಿಗಳಿಸಿಕೊಳ್ಳುತ್ತದೆ. ಆದರೆ ಇದಕ್ಕಿಂತ ಮಹತ್ವದ ಅಂಶವೆಂದರೆ, ಆಂದೋಲನದಲ್ಲಿ ತೊಡಗುವ ಮೂಲಕ ಪಕ್ಷಗಳು ಅಗಾಧ ಮಾರ್ಪಾಡುಗಳಿಗೆ ಒಳಗಾಗುತ್ತವೆ. ನಿಜ, ಆಂದೋಲನಕ್ಕೆ ಒಂದು ಬಲಿಷ್ಠ ಪಕ್ಷೇತರ ನಾಯಕತ್ವವಿಲ್ಲದ ರಾಜ್ಯದಲ್ಲಿ ಇದು ಸಾಧ್ಯವಿಲ್ಲ. ಆದರೆ ಬಿಹಾರದಲ್ಲಿ ಇದು ಸಾಧ್ಯವಾಗಿದೆ. ಆಂದೋಲನದಲ್ಲಿ ಭಾಗವಹಿಸಿರುವ ಎಲ್ಲ ಪಕ್ಷಗಳೂ ಸಂಪೂರ್ಣ ಕ್ರಾಂತಿಯ ಧ್ಯೇಯೋದ್ದೇಶಗಳಿಗೆ ಮತ್ತು ಬದಲಾವಣೆಯ ಚೈತನ್ಯ ಶಕ್ತಿಯಾದ ಹೋರಾಟಕ್ಕೆ ಬದ್ಧವಾಗಿವೆ. ಇದೇನೂ ಸಣ್ಣ ಸಾಧನೆಯಲ್ಲ. ಈ ಅಪೂರ್ವ ಸಾಧ್ಯತೆಯ ಬಗ್ಗೆ ಸಹಾನುಭೂತಿಯ ಪುನರಾಲೋಚನೆ ನಡೆಸಲು ನಾನು ನನ್ನ ಬುದ್ಧಿಜೀವಿ ಸ್ನೇಹಿತರಿಗೆ ಮನವಿ ಮಾಡಿಕೊಳ್ಳುತ್ತೇನೆ. ಈವರೆಗೆ ನಾವು ಸರ್ಕಾರದೊಂದಿಗೆ ಘರ್ಷಣೆಯಲ್ಲಿರುವ ವಿದ್ಯಾರ್ಥಿ ಹಾಗೂ ಜನತಾ ಆಂದೋಲನಗಳನ್ನು ಕಂಡಿದ್ದೇವೆ. ಬಿಹಾರದಲ್ಲಿ, ಮುಂದಿನ ಚುನಾವಣೆಗಳ ನಂತರ ಸರ್ಕಾರದ ಸಹಕಾರದೊಂದಿಗೇ ನಡೆಯುವ ಜನತಾ ಆಂದೋಲನವನ್ನು ಕಾಣುವ ಎಲ್ಲ ಸಾಧ್ಯತೆಗಳೂ ಇವೆ. ವಿರೋಧ ಪಕ್ಷಗಳು ಹಾದು ಹೋಗಿರುವ ಮತ್ತು ಬಿಹಾರದಲ್ಲಿ ಈಗ ಹಾದುಹೋಗುತ್ತಿರುವ ಅಗ್ನಿಕುಂಡದ ಶಾಖವಾದರೂ ಸಂಪೂರ್ಣ ಕ್ರಾಂತಿಯನ್ನು ಕುರಿತ ಅವುಗಳ ನಿಷ್ಠೆಯನ್ನು ಮತ್ತಷ್ಟು ಗಟ್ಟಿಗೊಳಿಸುವುದೆಂದು ನಾನು ಆಶಿಸುವೆ. ಅಷ್ಟರೊಳಗಾಗಿ ದೇವರು ನನ್ನನ್ನು ಹಿಂದಕ್ಕೆ ಕರೆದುಕೊಂಡುಬಿಟ್ಟರೆ ಇದೆಲ್ಲಾ ಕನಸಾಗಿಯೇ ಉಳಿಯುತ್ತದೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಈಗ ಗಳಿಸಿರುವ ಅನುಭವ ಹಾಳಾಗಬಾರದು; ಮುಂದೊಂದು ದಿನ ಯಾರಾದರೊಬ್ಬರು ಮುಂದೆ ಬಂದು ಅಪೂರ್ಣ ಹೋರಾಟವನ್ನು ಪೂರ್ಣಗೊಳಿಸಬಹುದು.

ಸೆಪ್ಟೆಂಬರ್ 7

ನಾನು ಮೇಲೆ ಬರೆದಿರುವುದಕ್ಕೆ ನನ್ನ ಮತ್ತೊಂದು ಆಲೋಚನೆಯನ್ನು ಸೇರಿಸಬಯಸುವೆ. ನಿಕಟ ಭವಿಷ್ಯದಲ್ಲಿ ಭಾರತ, ಈಗ ಆಕೆ ನಡೆಸುತ್ತಿರುವ ರೀತಿಯ ಪ್ರಜಾಪ್ರಭುತ್ವಕ್ಕಿಂತ ಭಿನ್ನವಾದದ್ದನ್ನು ಪಡೆಯುವ ಸಾಧ್ಯತೆ ನನಗೆ ಕಾಣುತ್ತಿಲ್ಲ. ಮುಂದಿನ ಸಂಸದೀಯ ಚುನಾವಣೆಗಳಲ್ಲಿ ವಿರೋಧಪಕ್ಷಗಳು ಜಯಗಳಿಸಿದ್ದಲ್ಲಿ - ಹಾಗೆಂದು ನಾವು ಆಶಿಸೋಣ - ಪ್ರಸಕ್ತ ಸಂವಿಧಾನ ಮತ್ತು ಚುನಾವಣಾ ಕಾನೂನುಗಳು ಮುಂತಾದವನ್ನು ಉತ್ತಮಪಡಿಸಬಹುದು. ಆದರೆ ಪ್ರಜಾಪ್ರಭುತ್ವದ 'ರೀತಿ' ಮಾತ್ರ ಹೆಚ್ಚು ಬದಲಾಗಬಾರದು. ಆದುದರಿಂದ, ಜನತಾ ಆಂದೋಲನ (ಜನತಾ ಎಂಬ ಶಬ್ದದಲ್ಲಿ ವಿದ್ಯಾರ್ಥಿ ಹಾಗೂ ಯುವಜನರೂ ಸೇರಿದ್ದಾರೆ) ತನ್ನ ಕ್ರಾಂತಿಕಾರಿ ಕಾರ್ಯಕ್ರಮಗಳನ್ನು ಪಕ್ಷ (ಅಥವಾ ಹಲವು ಪಕ್ಷಗಳ ಸಮ್ಮಿಶ್ರ) ಸರ್ಕಾರವೊಂದರ ವ್ಯವಸ್ಥೆಯಲ್ಲಿ ಮುಂದುವರಿಸಿಕೊಂಡು ಹೋಗುವುದರ ಹೊರತಾಗಿ ಅನ್ಯಮಾರ್ಗವಿಲ್ಲ ಎಂದು ಕಾಣುತ್ತದೆ. ಈ ವ್ಯವಸ್ಥೆ ಈ ಹಿಂದೆ ಚರ್ಚಿಸಿದಂತೆ ನಮ್ಮ ಕಾರ್ಯಕ್ರಮಗಳ ಬಗ್ಗೆ ದ್ವೇಷ ತಾಳಿರಬಹುದು ಅಥವಾ ಸಹಾನುಭೂತಿಯನ್ನೂ ಹೊಂದಿರಬಹುದು.

ಪ್ರಸಕ್ತ ಪ್ರಜಾಪ್ರಭುತ್ವದ ಮಾದರಿಯನ್ನು 'ಉತ್ತಮಪಡಿಸಬೇಕಾದ' ಸಂಬಂಧವಾಗಿ ನಾನು ವಿರೋಧಪಕ್ಷಗಳ ಸರ್ಕಾರದಡಿಯಲ್ಲಿ ಮಾಡಬೇಕಾದ ಸಂವಿಧಾನಾತ್ಮಕ ಹಾಗೂ ಶಾಸನಾತ್ಮಕ ತಿದ್ದುಪಡಿಗಳನ್ನು ಸೂಚಿಸಿದ್ದೇನೆ. ಆದರೆ ಸಂವಿಧಾನೇತರ ಹಾಗೂ ಶಾಸನೇತರ ವಿಧಾನಗಳಿಂದಲೂ ಇದನ್ನು ಮಾಡಬಹುದು. ಆದರೆ ಇದು ನಿರಂತರ ಜನತಾ ಆಂದೋಲನವಿರುವ ಪರಿಸ್ಥಿತಿಯಲ್ಲಿ ಮಾತ್ರ ಸಾಧ್ಯ. ಇಲ್ಲಿನ ಹೋರಾಟ ಸಮಿತಿಗಳು ಅಥವಾ ನವನಿರ್ಮಾಣ ಸಮಿತಿಗಳು, ವಿಪ್ಲವ ಸಮಿತಿಗಳು (ಜನತಾ ಹೋರಾಟದ ಅಂಗಗಳಿಗೆ ಏನಾದರೂ ಹೆಸರಿರಲಿ) ನಾವು ಉದ್ದೇಶಿಸಿರುವ ಮತ್ತು ನಾವು ಮತ್ತೆ ಕೈಗೆತ್ತಿಕೊಳ್ಳಲು ಬಯಸುವ ಕೆಲಸಗಳಾದ (ಅ) ಅಭ್ಯರ್ಥಿಗಳ ಆಯ್ಕೆಯ ಸಮಯದಲ್ಲಿ ದನಿ ಎತ್ತುವಲ್ಲಿ ಅಥವಾ ಸಮಾಲೋಚನೆಗೆ ಅನುವಾಗುವಲ್ಲಿ ಮತ್ತು (ಆ) ಸ್ಥಳೀಯ ಪ್ರತಿನಿಧಿಗಳ ಮತ್ತು ಆ ಮೂಲಕ ಸರ್ಕಾರದ ಒಟ್ಟಾರೆ ಕೆಲಸ - ಕಾರ್ಯಗಳ ಬಗ್ಗೆ 'ಕಾವಲು ನಾಯಿ'ಯಾಗಿ ವರ್ತಿಸುವಲ್ಲಿ, ತಪ್ಪುನೆಪ್ಪುಗಳನ್ನು ವಿಚಾರಿಸುವಲ್ಲಿ ನಿರತವಾಗಿರಬೇಕು.

ಈ ನಡುವೆ ನಾವು, ಇದರಲ್ಲಿ ಅದರಲ್ಲಿ ಎನ್ನದೆ, ಎಲ್ಲದರಲ್ಲಿಯೂ ಜನತೆಯ ಭಾಗವಹಿಸುವಿಕೆಯ ಬಗ್ಗೆ ಕೇಳುತ್ತಿದ್ದೇವೆ. ಶ್ರೀಮತಿ ಗಾಂಧಿಯೇ ಈ ಕಪಟ ನಾಟಕದ ಲೇಖಕಿ. ಆದರೆ ಇದೆಲ್ಲಾ ಬರೀ ಠಕ್ಕು. ಒಮ್ಮೆ ನೀವು ಜನತೆಯ ಬಾಯಿಗೆ ಬಟ್ಟೆ ತುರುಕಿ ಅವರು ತಮ್ಮ ಪ್ರಮಾಣಿಕ ಭಾವನೆಗಳು ಹಾಗೂ ಸಂಕಷ್ಟಗಳನ್ನು

ಹೇಳಿಕೊಳ್ಳುವುದನ್ನು ತಡೆದ ನಂತರ ಜನತೆಯ ಸಹಕಾರದ ಬಗ್ಗೆ, ಅವರ ಆ ಈ ಸಾಧನೆಗಳ ಬಗ್ಗೆ ಮಾತನಾಡುವುದೆಂದರೆ ಗಾಯಕ್ಕೆ ಉಪ್ಪು ಸವರಿದಂತೆ ಅಷ್ಟೆ. ಇಂದು ಜನತೆ ಏನಾದರೂ ಮಾಡುವ ಅವಕಾಶ ಪಡೆದಿದ್ದರೆ ಅದು, ಶ್ರೀಮತಿ ಗಾಂಧಿಯ ಸ್ತುತಿಗೀತೆಯನ್ನು ಹಾಡುವ ಅವಕಾಶ ಮಾತ್ರ.

ಸೆಪ್ಟೆಂಬರ್ 7

ಸಂಸತ್ತೇ ಸರ್ವೋಚ್ಚ ಮತ್ತು ಅದು ಸಂವಿಧಾನಕ್ಕೆ ತನಗಿಷ್ಟ ಬಂದುದನ್ನು ಮಾಡಬಹುದು- ತನಗಿಷ್ಟ ಬಂದ ರೀತಿಯಲ್ಲಿ ಸಂವಿಧಾನದ ಯಾವುದೇ ಭಾಗವನ್ನು ಬದಲಾಯಿಸಬಹುದು ಎಂದು ಅಟಾರ್ನಿ ಜನರಲ್ ಅವರು ಅಭಿಪ್ರಾಯಪಟ್ಟಿದ್ದಾರೆ. ಇದು ನಿಜವಾಗಿಯೂ ಪ್ರಜಾಪ್ರಭುತ್ವದ ಒಂದು ಘೋರ ಚಿತ್ರ. ಗಾಂಧೀಜಿ ಸಂಸದೀಯ ಪ್ರಜಾಪ್ರಭುತ್ವವನ್ನು ಬಹುಸಂಖ್ಯಾತರ ದಬ್ಬಾಳಿಕೆ ಎಂದು ಕರೆದಿದ್ದರಲ್ಲಿ ಆಶ್ಚರ್ಯವೇನಿಲ್ಲ. ಯಾವುದೇ ವಿಷಯವಾಗಲಿ ಅದರ ಬೇರುಗಳನ್ನೇ ಮುಟ್ಟುವ ಈತ ಎಂತಹ ಅಪೂರ್ವ ವ್ಯಕ್ತಿ! ಶ್ರೀ ಡೇ ಹೇಳುವುದು ಸರಿಯಾದರೆ, ಸಂವಿಧಾನವನ್ನು ಇಡಿಯಾಗಿಯೇ ಬದಲಾಯಿಸಬೇಕಾಗುತ್ತದೆ. ಸಂಸತ್ತು ಬದಲಿಸಲು ಸಾಧ್ಯವಿಲ್ಲದ ಸಂವಿಧಾನದ 'ಮೂಲಸ್ವರೂಪ' ಎಂದರೇನು ಎಂಬುದನ್ನು ಸುಪ್ರೀಂಕೋರ್ಟು ಸ್ಪಷ್ಟವಾಗಿ ಹಾಗೂ ನಿಖರವಾಗಿ ವಿವರಿಸಬೇಕು. ಇಲ್ಲದಿದ್ದಲ್ಲಿ, ಮೂಲಸ್ವರೂಪದ ಕಲ್ಪನೆಯೇ ಒಂದು ಕಟ್ಟುಕತೆ ಮತ್ತು ಅಂತಹ ಕಲ್ಪನೆ ಎಂಬುದೊಂದು ಇಲ್ಲವೇ ಇಲ್ಲ ಎಂದು ಸುಪ್ರೀಂಕೋರ್ಟು ಸ್ಪಷ್ಟ ನಿರ್ಣಯ ನೀಡಬೇಕು. ಸುಪ್ರೀಂಕೋರ್ಟಿನ ರಾಜ್ಯಾಂಗ ಪೀಠವನ್ನು ಎಲ್ಲ ಕಾಲಕ್ಕೂ ರದ್ದು ಮಾಡಲೂಬಹುದು, ಏನೀಗ?

ಈಗ ನಾವು ರಾಜಕೀಯದತ್ತ ತಿರುಗೋಣ. ಸಂಸತ್ ಸದಸ್ಯರಿಗೆ - ಅವರು ಯಾವ ಪಕ್ಷಕ್ಕೇ ಸೇರಿರಲಿ - 'ಸಂಸತ್ತೇ ಸರ್ವೋನ್ನತ' ಎಂಬ ಶಬ್ದಗಳು ಅಮೋಘವಾಗೇ ಕೇಳಬೇಕು. ಈ ಶಬ್ದಗಳು ಅವರ ಅಹಂಕಾರವನ್ನು ತಣಿಸುತ್ತವೆ, ಹಾಗೆಯೇ ಅವರ ತಲೆಯನ್ನು ತಿರುಗಿಸುತ್ತವೆ. ಆದರೆ ರಾಜಕೀಯ ಅರ್ಥದಲ್ಲಿ, ಸಂಸತ್ತೇ ಸರ್ವೋಚ್ಚ ಎಂಬುದರ ಅರ್ಥವಾದರೂ ಏನು? ಪ್ರಜಾಪ್ರಭುತ್ವವಾದಿಗೆ ಇದೆಲ್ಲಾ ಅಸಹ್ಯವಾಗಿ ಕಾಣುತ್ತದೆ, ಆತನನ್ನು ಬಡಿದೆಬ್ಬಿಸುತ್ತದೆ. ಸಂಸತ್ತು ಎಂದರೆ ಕಾರ್ಯತಃ ಸಚಿವ ಸಂಪುಟ ಎಂದೇ (ಈ ಮಾತು ಭಾರತಕ್ಕೆ ಅನ್ವಯಿಸುವಷ್ಟೇ ಬ್ರಿಟನ್ನಿಗೂ ಅನ್ವಯಿಸುತ್ತದೆ); ಸಚಿವ ಸಂಪುಟ ಎಂದರೆ ಅದರ ನಾಯಕ(ಕಿ) ಪ್ರಧಾನಮಂತ್ರಿ ಎಂದೇ. ಕಾಂಗ್ರೆಸ್‌ನಂತಹ ನರಸತ್ತ ಪಕ್ಷದಲ್ಲಿ ನಾಯಕ ಅಂದರೆ, ವಾಸ್ತವವಾಗಿ ಸರ್ವಾಧಿಕಾರಿ ಎಂದೇ. ಭಾರತದಲ್ಲಿ ಸಚಿವ ಸಂಪುಟ ಎಂದರೆ ಶ್ರೀಮತಿ ಗಾಂಧಿ. ಹೀಗಾಗಿ 'ಸಂಸತ್ತೇ ಸರ್ವೋಚ್ಚ' ಎಂಬ ಮಂಜುಳ ನಿನಾದ ಕೇಳಿಬಂದರೆ, ಶ್ರೀಮತಿ ಗಾಂಧಿಯೇ ಸರ್ವೋಚ್ಚ ಎಂಬ ಘೋಷಣೆ ಕೇಳಿಬಂದಂತೆಯೇ.

ಇನ್ನಾವುದೇ ಬೇರೆ ರೀತಿಯ ಪಕ್ಷದಲ್ಲಿ, ಉದಾಹರಣೆಗೆ (ಬ್ರಿಟನ್ನಿನ) ಕನ್ಸರ್ವೇಟಿವ್ ಪಕ್ಷ ಅಥವಾ ಲೇಬರ್ ಪಕ್ಷದಲ್ಲಿ ಪ್ರಧಾನಮಂತ್ರಿ ಎಂದರೆ, 'ಸಮಾನರಲ್ಲಿ ಮೊದಲಿಗರು' ಎಂಬುದಕ್ಕಿಂತ ಸ್ವಲ್ಪ ಹೆಚ್ಚಿನವರಾದರೂ - ವಿಲ್ಸನ್‌ರಂತೆ - ಆ ಪಕ್ಷಗಳಲ್ಲಿ ಆಂತರಿಕ ಜೀವವಿದೆ, ಚೈತನ್ಯವಿದೆ, ಬೀಜಾಂಶವಿದೆ; ಅಲ್ಲದೆ ಆಗಾಗ್ಗೆ ನಾಯಕರನ್ನು ಬದಲಾಯಿಸಲಾಗುತ್ತದೆ. ಸಾರ್ವಜನಿಕಾಭಿಪ್ರಾಯದ ಪಾತ್ರವಿರುತ್ತದೆ; ಅಭಿಪ್ರಾಯಗಳು ಬದಲಾಗುತ್ತವೆ; ತೆರೆದ ಮನಸ್ಸಿನ ಮತದಾರರು ಹಲವಾರು ಬಾರಿ ನಿರ್ಣಯಾತ್ಮಕ ಪಾತ್ರವಹಿಸುತ್ತಾರೆ. ರೊಟ್ಟಿ, ಬೆಣ್ಣೆ ಮತ್ತು ಮಾಂಸದ ಬೆಲೆಗಳು, ಅಂತರರಾಷ್ಟ್ರೀಯ ಪರಿಸ್ಥಿತಿ, ಉದ್ಯೋಗ ಪರಿಸ್ಥಿತಿ - ಇವು ಮತ್ತು ಇನ್ನೂ ಹಲವಾರು ಅಂಶಗಳು ತಮ್ಮ ಪಾತ್ರ ನಿರ್ವಹಿಸುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಮೇಲೆ ತಿಳಿಸಿದ ಮತ್ತು ಇತರ ಅಂಶಗಳನ್ನವಲಂಬಿಸಿ ಒಂದು ಪಕ್ಷ ಮತ್ತೊಂದು ಪಕ್ಷವನ್ನು ಪದಚ್ಯುತಗೊಳಿಸಲಾಗುವ ಎರಡು ಪಕ್ಷಗಳ ವ್ಯವಸ್ಥೆಯು ಬ್ರಿಟನ್ನಿನಲ್ಲಿ ಪ್ರಧಾನಮಂತ್ರಿಯ ಸರ್ವಾಧಿಕಾರಿತ್ವವನ್ನು ಬೇರು ಹಿಡಿದು ಅಲ್ಲಾಡಿಸುತ್ತದೆ. ಭಾರತದಲ್ಲಿ ಎಲ್ಲವೂ ಎಷ್ಟು ಬೇರೆಯಾಗಿದೆಯಲ್ಲವೇ? ಆದುದರಿಂದ ಸಂಸತ್ತಿನ ಪರಮೋಚ್ಚತೆಯ ಕಲ್ಪನೆಯ ಮೂಲಕ ಯಾರನ್ನಾದರೂ ವಂಚಿಸಬಹುದಾಗಿದೆ. ಕಲ್ಪನೆಯು ಮೊದಲಾಗಿ ಈ ಪರಿಸ್ಥಿತಿಗೆ ಹೊಂದಿಕೊಳ್ಳುವುದಿಲ್ಲ - ಅಷ್ಟೆ. ಈ ಸಂಬಂಧವಾಗಿ ಕೆಲವು ಅಡೆತಡೆಗಳನ್ನು ಮತ್ತು ಸಮತೋಲನ ಶಕ್ತಿಗಳನ್ನು ಸ್ಪಷ್ಟವಾಗಿ ರೂಪಿಸಬೇಕು. 'ರಾಜ್ಯ'ದ ಯಾವುದೇ ಅಂಗ ಸರ್ವೋಚ್ಚವಾಗಿರಕೂಡದು. ಈ ಅಭಿಪ್ರಾಯಗಳನ್ನು ಹೊಂದಿರುವ ಸಮರ್ಥರು ಈ ಬಗ್ಗೆ ವಿವರಗಳನ್ನು ಸಿದ್ಧಪಡಿಸಬೇಕಾಗಿದೆ.

ಸೆಪ್ಟೆಂಬರ್ 9

ರಜ್ನೀ ಕೊಠಾರಿ ಅವರ ಸಂಪಾದಕತ್ವದ ಆ ಅಮೂಲ್ಯ ನಿಯತಕಾಲಿಕದ ಎರಡನೇ ಲೇಖನ Jimoh Omo - Fadaka ಅವರದ್ದು : 'ಅಭಿವೃದ್ಧಿ - ಮೂರನೆಯ ದಾರಿ.' ನಾನು ಇದನ್ನು ಓದುತ್ತಾ ಹೋದಂತೆ 1954ರಿಂದ ನಾನು ಮಂಡಿಸಿದ ವಿಚಾರಗಳನ್ನೇ ಈ ಲೇಖಕ ಪ್ರತಿಪಾದಿಸಿದ್ದಾನೆ ಎಂಬುದು ಗೊತ್ತಾಯಿತು. ಇದರಿಂದಾಗಿ ನನಗೊಂದು ವಿಷಯ ಹೊಳೆದಿದೆ. ನಾನು ವಿವಿಧ ಸಂದರ್ಭಗಳಲ್ಲಿ ಪ್ರತಿಪಾದಿಸಿದ ವಿವಿಧ ವಿಚಾರಗಳನ್ನು ಸಮಗ್ರೀಕರಿಸಿ - ಅಂದರೆ ಎಲ್ಲವನ್ನೂ ಒಟ್ಟಿಗೆ ಪೇರಿಸುವುದು ಎಂದರ್ಥವಲ್ಲ, ಒಂದಕ್ಕೊಂದು ಹೊಂದುವ ಭಾಗಗಳನ್ನು ಒಟ್ಟಿಗೆ ಅರ್ಥಪೂರ್ಣವಾಗಿ ಜೋಡಿಸಿ- ಸಂಪೂರ್ಣ ಸಮನ್ವಯವಿರುವಂತೆ ಈ ಎಲ್ಲ ವಿಚಾರಗಳ ಬಗ್ಗೆ ಪುಟ್ಟ ಪುಸ್ತಕವೊಂದನ್ನು ಯೋಜಿಸಿದರೆ ಒಳ್ಳೆಯದು ಎಂದೆನಿಸಿದೆ.

ನಾನು ಒಂದಲ್ಲ ಒಂದು ಸಂದರ್ಭದಲ್ಲಿ ಚರ್ಚಿಸಿರುವ ವಿಷಯಗಳನ್ನು ಇಲ್ಲಿ ವಿಂಗಡಣೆ ಮಾಡುವೆ (ಸಂಕ್ಷಿಪ್ತವಾಗಿ):

1. ನೈತಿಕ-ಆಧ್ಯಾತ್ಮಿಕ ಚೌಕಟ್ಟು

ಅ) ಮನುಷ್ಯ ವಸ್ತುವೂ ಹೌದು, ಚೈತನ್ಯವೂ ಹೌದು. ಆತನ ಬದುಕು ಆತನ ಲೌಕಿಕ ಹಾಗೂ ಆಧ್ಯಾತ್ಮಿಕ ಅಗತ್ಯಗಳೆರಡನ್ನೂ ಪೂರೈಸಬೇಕು.

ಆ) ಲೌಕಿಕ ಅಗತ್ಯಗಳನ್ನು ಈಡೇರಿಸಲೇಬೇಕು - ಅನ್ನ, ಬಟ್ಟೆ, ಮನೆ ಇತ್ಯಾದಿ. ಅನ್ನ (ಆಹಾರ) ಸಾಕಷ್ಟಿರಬೇಕು, ಸರಳವಾಗಿರಬೇಕು, ಪುಷ್ಟಿಕರವಾಗಿರಬೇಕು ಮತ್ತು ರುಚಿಕರವಾಗಿರಬೇಕು. ಆದರೆ ಅದು ಅತಿಯಾಗಬಾರದು. ಬಟ್ಟೆ ಕೇವಲ ಪ್ರಯೋಜನಕಾರಿಯಾಗಿರದೆ, ಕಣ್ಣುಗಳಿಗೆ ಅಂದವಾಗಿರಬೇಕು ಮತ್ತು ಮುಟ್ಟಲು ಸೊಗಸಾಗಿರಬೇಕು. ಎಲ್ಲ ಹವಾಮಾನಕ್ಕೂ ಒಗ್ಗುವಂತಹ ಬಟ್ಟೆಗಳಿರಬೇಕು. ಆದರೆ ಅಗತ್ಯಕ್ಕಿಂತ ಹೆಚ್ಚಿರಬಾರದು. ಮೋಜಿನ ಗೀಳಿರಬಾರದು ಮತ್ತು ಬಟ್ಟೆಯನ್ನು ಸುಮ್ಮನೆ ಪೋಲುಮಾಡುವಂತಿರಬಾರದು. ಬಟ್ಟೆ ನಿರ್ಮಾಣಕ್ಕೆ (ಆದಷ್ಟು ಮಟ್ಟಿಗೆ) ಸಾವಯವ ವಸ್ತುಗಳನ್ನು ಬಳಸಬೇಕೇ ಹೊರತು ರಾಸಾಯನಿಕ ಹಾಗೂ ಕೃತಕ ಸಾಮಗ್ರಿಗಳನ್ನಲ್ಲ. ವಸತಿ ಸಾಧಾರಣವಾಗಿರಬೇಕು, ಮನುಷ್ಯರು ವಾಸಿಸುವಂತಿರಬೇಕು (ಸೂಕ್ತ ಗಾಳಿ ಹಾಗೂ ಬೆಳಕಿನ ವ್ಯವಸ್ಥೆ ಇರಬೇಕು). ವಿಶಾಲವಾದ, ವೈಭವಪೂರ್ಣವಾದ ಬಂಗಲೆಗಳನ್ನು ಬಹಿಷ್ಕರಿಸಿಬೇಕು. ಶ್ರೀಮಂತ ಜೀವನವನ್ನು ನಿರುತ್ತೇಜಿಸಬೇಕು. ಶ್ರೀಮಂತಿಕೆ ಎನ್ನುವುದು ಸಾಪೇಕ್ಷ ಶಬ್ದವಾಗಿದ್ದು ಅದು ಸಾಮಾಜಿಕ ಅಗತ್ಯಗಳಿಗೆ ಮತ್ತು ಸಾರ್ವಜನಿಕ ಜೀವನ ಮಟ್ಟಗಳಿಗೆ ಸಂಬಂಧಿಸಿದಂತಿರಬೇಕು.

ಹೀಗೇ ಲೌಕಿಕ ಅಗತ್ಯಗಳ ಬಗ್ಗೆ ನನ್ನ ವಿಚಾರ ಮುಂದುವರಿಯುತ್ತದೆ. ಒಟ್ಟಿನಲ್ಲಿ ಹೇಳುವುದೆಂದರೆ ನಮ್ಮ ಬಳಕೆಯನ್ನು ಸ್ವಯಂಪ್ರೇರಣೆಯಿಂದ ಪರಿಮಿತಗೊಳಿಸಬೇಕು - ಇದೊಂದು ನೈತಿಕ ಅಂಶ. ನಾನ ವಿರಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಮಾತು ಹೇಳುತ್ತಿಲ್ಲ, ಅದೆಲ್ಲಾ ಯೋಗಿಗಳಿಗೆ. ಸಾಮಾನ್ಯ ಮನುಷ್ಯನಿಗೆ ಅಂದರೆ ನಮ್ಮೆಲ್ಲರಿಗೆ - ಆಧ್ಯಾತ್ಮಿಕ ಪರಿಪೂರ್ಣತೆಗೆ ಅಥವಾ ಗುರಿಸಾಧನೆಗೆ ವಿರಕ್ತಿಯೇ ಮಾರ್ಗ ಎಂದು ನಂಬಿರುವವರನ್ನು ಬಿಟ್ಟು-ಪೂರ್ಣ ಲೌಕಿಕ ತೃಪ್ತಿಯೇ ಆಧ್ಯಾತ್ಮಿಕ ಬದುಕೂ ಆಗಿರುತ್ತದೆ. ಆಸೆ, ಅತಿ ಸೌಲಭ್ಯ, ಸಂಪತ್ತಿಗಾಗಿ ದುರ್ಮಾರ್ಗ - ಈ ಎಲ್ಲವೂ ಆಧ್ಯಾತ್ಮ ವಿರೋಧಿಯಾದವುಗಳು.

ನೈತಿಕ - ಆಧ್ಯಾತ್ಮಿಕವಲ್ಲದೆ, ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಜೀವಪರ ಪರಿಸರಕ್ಕೆ ಮತ್ತು ಶಾಂತಿಯುತ ಉದ್ದೇಶಗಳಿಗಾಗಿರುವ ಅಣುಶಕ್ತಿಯ ಬಗ್ಗೆ, ಪ್ರಕೃತಿ ಮಾಲಿನ್ಯಕ್ಕೆ ಸಂಬಂಧಿಸಿದ ವಿಚಾರಗಳನ್ನೂ ಮಂಡಿಸಬೇಕು.

ಅಭಿವೃದ್ಧಿ ಏತಕ್ಕಾಗಿ ಮತ್ತು ಯಾರಿಗಾಗಿ ಎಂಬ ಪ್ರಶ್ನೆ, ಯುದ್ಧ ಮತ್ತು

ಶಾಂತಿ ಹಾಗೂ ಆಧ್ಯಾತ್ಮಿಕ ಸೌಂದರ್ಯ ಮತ್ತು ಸೃಷ್ಟಿಶೀಲತೆಯ ಪ್ರಶ್ನೆ ಮುಂತಾದವು.

ಭೌತಿಕ ಅಭಿವೃದ್ಧಿಯ ಮೇಲಿರುವ ನೈತಿಕ ಆಧ್ಯಾತ್ಮಿಕ ನಿರ್ಬಂಧಗಳು...

2. ಪ್ರಕೃತಿ-ಪರಿಸರ ಚೌಕಟ್ಟು

ಹಳ್ಳಿ, ಪಟ್ಟಣ ಹಾಗೂ ನಗರಗಳ ಪ್ರಶ್ನೆ. ಹುಚ್ಚಾಪಟ್ಟೆ ಬೆಳೆಯುತ್ತಿರುವ ನಗರಗಳು ಮತ್ತು ಹಾಳು ಬೀಳುತ್ತಿರುವ ಗ್ರಾಮಾಂತರ ಪ್ರದೇಶಗಳು. ಹಳ್ಳಿಗಳ ಮರು ವಿಂಗಡನೆ - ಸಣ್ಣ ಹಳ್ಳಿಗಳನ್ನು ಒಂದುಗೂಡಿಸುವುದು, ದೊಡ್ಡ ಹಳ್ಳಿಗಳನ್ನು ಪುನರ್ ಘಟಿಸುವುದು. ಆದಿವಾಸಿ ಪ್ರದೇಶಗಳು, ಮಲೆನಾಡು ಹಾಗೂ ಅರಣ್ಯಗಳು, ಬಯಲು ಸೀಮೆಗಳು... ಬಯಲು ಸೀಮೆಯಲ್ಲಿ ಹಳ್ಳಿಗಳ ಸೂಕ್ತ ವಿಸ್ತಾರವನ್ನು ನಿರ್ಧರಿಸುವುದು - ನಗರಗಳ ಸೂಕ್ತ ವಿಸ್ತಾರದ ಬಗ್ಗೆ ಸಹ. ಕೇಂದ್ರ ಪಟ್ಟಣಗಳು- ಅಂದರೆ ಸುತ್ತಮುತ್ತಲಿನ ಹಳ್ಳಿಗಳಿಗೆ ರಸ್ತೆ, ವಿದ್ಯುತ್‌ಮಾರ್ಗ ಮುಂತಾದವುಗಳನ್ನು ಹರಡಿರುವ ಒಂದು ಸಣ್ಣ ಪಟ್ಟಣ. ಸಾಮುದಾಯಿಕ ಅಭಿವೃದ್ಧಿ ಕೇಂದ್ರಗಳು ಇಂತಹ ಪಟ್ಟಣವಲಯ ನಿರ್ಮಾಣಕ್ಕೆ ಸಂಪನ್ಮೂಲ ಸ್ಥಳಗಳಾಗಬಲ್ಲವು. ಬ್ಯಾಂಕು, ಉಗ್ರಾಣ, ಆಸ್ಪತ್ರೆ ಮುಂತಾದ ಸೌಲಭ್ಯಗಳು.

ಜನಸಂಖ್ಯೆಯ ಭೌಗೋಳಿಕ ವ್ಯಾಪ್ತಿಯನ್ನು - ಇಂತಿಷ್ಟೇ ಜನ ಹಳ್ಳಿಗಳಲ್ಲಿ, ಇಂತಿಷ್ಟೇ ಜನ ಪಟ್ಟಣಗಳಲ್ಲಿ ವಾಸಿಸಬೇಕೆಂಬುದನ್ನು - ಬಲವಂತವಾಗಿ ನಿರ್ಧರಿಸಲು ಸಾಧ್ಯವಿಲ್ಲ. ಇದು ಜನತೆ ಒಪ್ಪಿಕೊಂಡಿರುವ ಮತ್ತು 'ರಾಜ್ಯ' ವಿವಿಧ ಅಂಗಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳು ಪ್ರಜಾಸತ್ತಾತ್ಮಕ ರೀತಿಯಲ್ಲಿ ಜಾರಿಗೆ ತರಬೇಕಾದ ಸಾಮಾಜಿಕ - ಆರ್ಥಿಕ ಹಾಗೂ ರಾಜಕೀಯ ಅಭಿವೃದ್ಧಿಯ ರೀತಿ - ವಿಧಾನಗಳಿಗೆ ಅಗೌರವವಾಗುತ್ತದೆ ಮತ್ತು ವಿರುದ್ಧವಾಗುತ್ತದೆ.

3. ಆರ್ಥಿಕ ಚೌಕಟ್ಟು

ಆರ್ಥಿಕ ಅಭಿವೃದ್ಧಿ ಮನುಷ್ಯನನ್ನು ದೃಷ್ಟಿಯಲ್ಲಿಟ್ಟುಕೊಂಡಿರಬೇಕು, ಪ್ರತಿ ವಯಸ್ಕ ಅಥವಾ ಕುಟುಂಬದ ಮುಖ್ಯನಿಗೆ ಕೆಲಸವಿರಬೇಕು(ಹೆಂಡತಿ, ಅಪ್ರಾಪ್ತ ಮತ್ತು ಅವಿವಾಹಿತ ಮಕ್ಕಳು, ವೃದ್ಧ ತಂದೆತಾಯಿಗಳು, ನಿರುದ್ಯೋಗಿ ಸೋದರರು - ಕಷ್ಟದ ಪ್ರಶ್ನೆ) ಜೀವನಮಟ್ಟ - ಕನಿಷ್ಠಮಟ್ಟ ಇವೆಲ್ಲ ಯೋಚಿಸಬೇಕಾದ ವಿಚಾರಗಳು.

ಪ್ರಾಯಶಃ ಭಾರತದಲ್ಲಿ ನಾವು ಸಾಕಷ್ಟು, ಭಾರಿ, ಆಧುನಿಕ ಹಾಗೂ ಬಂಡವಾಳ ಮೂಲ ಕೈಗಾರಿಕೆಗಳನ್ನು ಹೊಂದಿದ್ದೇವೆ. ಮಿಲಿಟರಿ ಅಗತ್ಯಗಳ ಹೊರತಾಗಿ ಈ ಕೈಗಾರಿಕೆಗಳ ಬೆಳವಣಿಗೆಗೆ ಉದ್ದೇಶಪೂರ್ವಕವಾಗಿಯೇ ಕಡಿವಾಣ ಹಾಕುವುದು ಒಳ್ಳೆಯದೆಂದು ಕಾಣುತ್ತದೆ. ದುಬಾರಿಯ, ಪ್ರದರ್ಶನದ, ಮೂಲೋಪಯೋಗವಿಲ್ಲದ ಮತ್ತು ಪ್ರತಿಷ್ಠೆ ಹೆಚ್ಚಿಸುವುದೆಂದು ಹೇಳಲಾಗುವ ಭೂ ಉಪಗ್ರಹ ಅಭಿವೃದ್ಧಿ ಯೋಜನೆಗಳಂತಹ ಸಾಹಸಗಳನ್ನು ಕೈಬಿಡಬೇಕು. ವೈಜ್ಞಾನಿಕ ಸಂಶೋಧನೆ ಹಾಗೂ

ಅಭಿವೃದ್ಧಿ ಮತ್ತು ವಿಜ್ಞಾನವನ್ನು ಕೇವಲ ತಂತ್ರಪರಿಣತಿಗಾಗಿ ಅನ್ವಯಿಸುವುದರ (ಚಂದ್ರಾನ್ವೇಷಣೆ ಮುಂತಾದದ್ದರ) ನಡುವೆ Fritz ಹಾಕಿದ ಗೆರೆ ನಮಗೆ ಅರ್ಥಪೂರ್ಣವಾಗಿ ಹಾಗೂ ಮಹತ್ವದ್ದಾಗಿ ಕಾಣುತ್ತದೆ. ಅಂದರೆ ನಾನೇನೂ ವೈಜ್ಞಾನಿಕ ಸ್ಥಗಿತತೆಯನ್ನು ಪ್ರತಿಪಾದಿಸುತ್ತಿಲ್ಲ. ವಿಜ್ಞಾನದ ಬಳಕೆಯು, ಭಾರತದ ಪ್ರಸಕ್ತ ಪರಿಸ್ಥಿತಿಯನ್ನು ಗಮನಿಸಿದಂತೆ, ಸಾಮಾನ್ಯ ಜನರ ಮೂಲ ಅಗತ್ಯಗಳೊಂದಿಗೆ ನೇರ ಸಂಬಂಧ ಹೊಂದಿರಬೇಕೆಂದಷ್ಟೇ ನಾನು ಹೇಳುವುದು.

ಆದುದರಿಂದ ಕೈಗಾರಿಕಾಭಿವೃದ್ಧಿಯು ಮಧ್ಯಮ ಪ್ರಮಾಣದ ಕೈಗಾರಿಕೆ, ಸಣ್ಣ ಕೈಗಾರಿಕೆ ಹಾಗೂ ಗ್ರಾಮೀಣ ಕೈಗಾರಿಕಾಭಿವೃದ್ಧಿಯಾಗಿ ಮಾರ್ಪಡಬೇಕು. ಇದಕ್ಕೆ, ಗ್ರಾಮೀಣ ಹಾಗೂ ಸಣ್ಣ ಕೈಗಾರಿಕೆಗಳಲ್ಲಿ ಬಳಸುವುದಕ್ಕಾಗುವಂತೆ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕಾಗಿದೆ. ಸೂಕ್ತ ತಂತ್ರಜ್ಞಾನ ಅಭಿವೃದ್ಧಿಯ ವಿಷಯದಲ್ಲಿ (ಮೂಲ ಅಗತ್ಯಗಳ) ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ತೀವ್ರಗತಿಯ ಸಂಶೋಧನೆಗಳನ್ನು ಕೈಗೊಂಡು ಸಮುದಾಯಗಳನ್ನು ಮುನ್ನಡೆಸಿಕೊಂಡು ಹೋಗಬೇಕು. ಗ್ರಾಮಾಂತರ ಶಾಲೆಗಳಲ್ಲಿ, ಸ್ಥಳೀಯ ಪದ್ಧತಿ ಹಾಗೂ ಸ್ಥಳೀಯ ಅಗತ್ಯಗಳಿಗೆ ಸಂಬಂಧಿಸಿದ ಸೈದ್ಧಾಂತಿಕ ಹಾಗೂ ವ್ಯಾವಹಾರಿಕ ತಂತ್ರಜ್ಞಾನ - ಅಧ್ಯಯನದ ವಿಭಾಗವಿರಬೇಕು.

ಒಡೆತನ ಪದ್ಧತಿ: ಸ್ವಂತ ಉದ್ಯೋಗ - ವೈಯಕ್ತಿಕ(ಕೌಟುಂಬಿಕ) ಒಡೆತನ, ಸಾಮುದಾಯಿಕ(ಹಳ್ಳಿಮಟ್ಟದ) ಒಡೆತನ, ಸಹಕಾರೀ ಒಡೆತನ, ಸಾಧಾರಣ ಸಂಖ್ಯೆಯ ಉದ್ಯೋಗಿಗಳನ್ನು ಕೆಲಸಕ್ಕಿಟ್ಟುಕೊಂಡು ಅವರಿಗೆ ಕಾನೂನುಬದ್ಧ ಹಕ್ಕುಗಳು ಹಾಗೂ ವೇತನ ಒದಗಿಸುವ, ಲಾಭವನ್ನು ಆಧರಿಸಿದ ಸಣ್ಣ ಉದ್ಯಮಗಳ ಖಾಸಗಿ ಒಡೆತನ. ದೊಡ್ಡ ಉದ್ಯಮಗಳು ಕೆಲವು ನಿರ್ಬಂಧಗಳೊಂದಿಗೆ ಬಂಡವಾಳವಾದಿಯಾಗಿ ಉಳಿಯಬಹುದು ; ಆದರೆ ಸರ್ಕಾರೀ ಕಾರ್ಪೋರೇಷನ್ ಪದ್ಧತಿಗೇ ಹೆಚ್ಚು ಆದ್ಯತೆ ಅಗತ್ಯ. ಇಂತಹ ಸರ್ಕಾರೀ ಕಾರ್ಪೋರೇಷನ್ನುಗಳ ಕಾರ್ಯನಿರ್ವಹಣೆ, ಅವುಗಳ ನಿರ್ದೇಶಕರಿಗೆ ಮತ್ತು ವ್ಯವಸ್ಥಾಪಕರಿಗೆ ನೀಡಬೇಕಾಗುವ ಪ್ರೋತ್ಸಾಹ, ಸೌಲಭ್ಯಗಳು; ಅವುಗಳ ಪ್ರಜಾಸತ್ತಾತ್ಮಕ ಕಾರ್ಯಕ್ಷಮತೆ, ದಕ್ಷತೆ, ವ್ಯರ್ಥ ವೆಚ್ಚ ಮುಂತಾದ ಅಂಶಗಳ ಬಗ್ಗೆ ವಿವರವಾದ ಅಧ್ಯಯನ ಮಾಡಿ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಬೇಕು. ಸದ್ಯದ ಪರಿಸ್ಥಿತಿಯಲ್ಲಿ ಕಾರ್ಮಿಕರ ಒಡೆತನ ಹಾಗೂ ವ್ಯವಸ್ಥಾಪನೆಯ ಯೋಜನೆ ಯಶಸ್ವಿಯಾಗಬಲ್ಲದೆ? ದೊಡ್ಡ ದೊಡ್ಡ ಉದ್ಯಮ ಕೇಂದ್ರಗಳಲ್ಲಿ, ಈ ಯೋಜನೆಯ ಅನುಷ್ಠಾನ ಅಸಾಧ್ಯ. ಅಂತಹ ಸಂದರ್ಭಗಳಲ್ಲಿ ಸಾಮಾಜಿಕ ಒಡೆತನದ ಕಲ್ಪನೆಯನ್ನು ಪರಿಚಯಿಸಬೇಕು. ಆದರೆ ಕೈಗಾರಿಕೆಯಲ್ಲಿನ ಕಾರ್ಮಿಕರೇ ಸಂಸ್ಥೆಯನ್ನು ಮೊಕ್ತೇಸರರಂತೆ (ಟ್ರಸ್ಟೀಗಳಂತೆ) ಅಂದರೆ ಕೇವಲ ಲಾಭದ ದೃಷ್ಟಿಯಿಂದ ಮಾತ್ರವಲ್ಲದೆ, ಗ್ರಾಹಕರ, ಜನಸಮುದಾಯದ ಮತ್ತು ಸಮಾಜದ, ಒಟ್ಟಾರೆಯಾಗಿ ರಾಷ್ಟ್ರದ ಹಿತದೃಷ್ಟಿಯಿಂದಲೂ ನೋಡಿಕೊಳ್ಳಬಲ್ಲರಾದರೆ, ಅದೇ ಎಲ್ಲಕ್ಕಿಂತ ಉತ್ತಮ ಮಾರ್ಗ

ಎಂಬುದು ನನ್ನ ಅಭಿಪ್ರಾಯ. ಸರ್ವಾಧಿಕಾರೀ ಪ್ರವೃತ್ತಿ ಇಲ್ಲದ ಯುಗೋಸ್ಲಾವಿಯಾ ವ್ಯವಸ್ಥೆ ಸಂಪೂರ್ಣ ಸಮ್ಮತಾರ್ಹವಾದದ್ದು.

ದೊಡ್ಡ ಕ್ಷೇತ್ರಗಳಲ್ಲಿ - ಅದು ಸರ್ಕಾರೀ ವಲಯವೇ ಆಗಿರಲಿ ಅಥವಾ ಖಾಸಗೀ ವಲಯವೇ ಆಗಿರಲಿ - ನಿಯಮಿತ ಕಂಪನಿ ಒಡೆತನ ಮುಂದುವರಿಯಲು ಬಿಡಬಹುದು. ಖಾಸಗಿ ವಲಯಕ್ಕೂ ಸಹ ಉತ್ಪಾದನೆ, ಅಭಿವೃದ್ಧಿ ಹಾಗೂ ಬೆಳವಣಿಗೆಗೆ ಪೂರಕವಾದ ಉತ್ತೇಜನಗಳನ್ನು ಒದಗಿಸಬೇಕು. ಈ ವಲಯದ ಸಂಸ್ಥೆಗಳು ಕಾನೂನು ನಿಗದಿ ಮಾಡುವ ಒಂದು ನಿರ್ದಿಷ್ಟ ಗುಣಮಟ್ಟ ಹಾಗೂ ನಿರ್ವಹಣೆಯನ್ನು ಕಾಪಾಡಿಕೊಂಡು ಬರುತ್ತಿದ್ದರೆ, ಅವುಗಳ ಮೇಲಿನ ಅನಗತ್ಯ ನಿರ್ಬಂಧಗಳನ್ನು (ನಿಯಂತ್ರಣ, ಪರವಾನೆ ಮುಂತಾದ) ತೆಗೆದುಹಾಕಬಹುದು.

ವ್ಯವಸ್ಥಾಪನೆಯಲ್ಲಿ ಕಾರ್ಮಿಕರ ಭಾಗವಹಿಸುವಿಕೆಯ ಪ್ರಯೋಗವನ್ನು ಮಾಡಬಹುದು ; ಆದರೆ ಕಾರ್ಮಿಕ ಸಂಘಗಳು ತಮ್ಮ ಪ್ರತಿನಿಧಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು ವಿಫಲವಾದರೆ ವ್ಯವಸ್ಥಾಪನೆಯ ವಿಷಯದಲ್ಲಿ ಕಾರ್ಮಿಕರು ಯಾವುದೇ ಅರ್ಥಪೂರ್ಣ ಪಾತ್ರವಹಿಸದೇ ಹೋಗಬಹುದು: ಅವರ ಪ್ರಭಾವ ಕೇವಲ ಕಾರ್ಮಿಕರ ಕಲ್ಯಾಣಕ್ಕೇ - ಕೆಲಸದ ಪರಿಸ್ಥಿತಿ, ವಸತಿ, ಶಾಲೆ ಮುಂತಾದವು - ಸೀಮಿತವಾಗಿಬಿಡಬಹುದು.

ಕೃಷಿಯೂ ಸೇರಿದಂತೆ ಎಲ್ಲ ಉತ್ಪಾದನಾ ಘಟಕಗಳು, ಅದರಲ್ಲೂ ನಿರ್ದಿಷ್ಟವಾಗಿ ಭಾರೀ ಸಂಸ್ಥಾಪನೆಗಳು, ಜೈವಿಕ ಪರಿಸರ, ಪ್ರದೇಶ ಸೌಂದರ್ಯ ಹಾಗೂ ಸ್ವಚ್ಛತೆಯ ಪರಿಗಣನೆಗಳತ್ತ ಸೂಕ್ಷ್ಮ ಗಮನ ಕೊಡಬೇಕು.

Omo Fadaka ವಿವರಿಸಿರುವಂತಹ ನವ ವಸಾಹತುಶಾಹಿ ಶೋಷಣೆಯ ಬಗ್ಗೆ ಭಾರತದಲ್ಲಿ ಆಳವಾದ ಅಧ್ಯಯನ ಮಾಡಬೇಕು. ಈ ಬಗ್ಗೆ ನಾನು ಅಸ್ಪಷ್ಟ ಆತಂಕವನ್ನು ವ್ಯಕ್ತಪಡಿಸಿರುವೆನಾದರೂ, ಇಂತಹ ಅಧ್ಯಯನ ನಡೆಸಲು ಅಸಮರ್ಥನಾಗಿದ್ದೇನೆ.

4. ರಾಜಕೀಯ ಚೌಕಟ್ಟು

ಮೂಲಭೂತ ಸ್ವಾತಂತ್ರ್ಯಗಳು, ವಿಕೇಂದ್ರೀಕರಣ, ಸಾಮೂಹಿಕ ಜವಾಬ್ದಾರಿ.

5. ಸಾಂಸ್ಕೃತಿಕ ಚೌಕಟ್ಟು

6. ಶೈಕ್ಷಣಿಕ ಚೌಕಟ್ಟು

ಒಂದು ಗ್ರಾಮಾಂತರ ಶಾಲೆ : ಕೃಷಿ ವಿಧಾನಗಳು, ಗ್ರಾಮಾಂತರ ಕೈಗಾರಿಕೆ, ಅರ್ಥಶಾಸ್ತ್ರ, ಸಮಾಜ ವಿಜ್ಞಾನ (ಆ ಪ್ರದೇಶಕ್ಕೆ ಸೂಕ್ತವಾದ

ವಿಷಯಗಳೊಂದಿಗೆ) ವಿಜ್ಞಾನ, ಭಾಷೆ ಹಾಗೂ ಸಾಹಿತ್ಯ, ಆರ್ಥಿಕ ಸಹಕಾರ ಹಾಗೂ ಸಹಕಾರ ಸಂಘಗಳು (ಅವುಗಳ ಕಾನೂನು, ನಿಯಮಗಳು, ಅಂಗರಚನೆ ಮುಂತಾದ್ದರ ಬಗ್ಗೆ ಗ್ರಾಮ ಪಂಚಾಯಿತಿ ನಿರ್ಧಾರ ಕೈಗೊಳ್ಳುವ ಹಾಗೂ ಜಾರಿಗೆ ತರುವ ವಿಧಾನ), ಗ್ರಾಮಪಂಚಾಯಿತಿ ಲೆಕ್ಕ ಹಾಗೂ ಪುಸ್ತಕ ನಿರ್ವಹಣೆ (ಕೃಷಿ, ವ್ಯಾಪಾರ ಹಾಗೂ ಗ್ರಾಮಾಂತರ ಕೈಗಾರಿಕೆಗೆ ಸಂಬಂಧಿಸಿದಂತೆ), ಆರೋಗ್ಯ, ಶೌಚವಿಜ್ಞಾನ (ಕಕ್ಕಸು ಹಾಗೂ ನೀರುಪೂರೈಕೆ ವ್ಯವಸ್ಥೆ) ಜೀವಾಣು ವಿಜ್ಞಾನ, ಜೀವಶಾಸ್ತ್ರ (ಹಳ್ಳಿ ಪ್ರದೇಶಗಳನ್ನು ದೃಷ್ಟಿಯಲ್ಲಿರಿಸಿಕೊಂಡು), ತೋಟಗಾರಿಕೆ, ಪ್ರಾಣಿಶಾಸ್ತ್ರ, ಆಹಾರ ಹಾಗೂ ಪೌಷ್ಟಿಕಾಂಶ (ಅವುಗಳ ಮೂಲಗಳನ್ನು ಕುರಿತು), ಇಂಧನ ಅನಿಲ ಕಾರ್ಯಾಗಾರ, ಕಾಂಪೋಸ್ಟ್ ಗೊಬ್ಬರ ಹಾಗೂ ಯೂರಿಯಾ ಗೊಬ್ಬರ ಉತ್ಪಾದನಾ ವಿಧಾನಗಳು.

7. ಸಾಮಾಜಿಕ ಚೌಕಟ್ಟು

6. ಬದಲಾವಣೆ ಹಾಗೂ ಪುನರ್‌ನಿರ್ಮಾಣದ ಚೈತನ್ಯ ಮೂಲಗಳು

ಸೆಪ್ಟೆಂಬರ್ 11

(ಹಿಂದಿಯಿಂದ ಅನುವಾದಿಸಿದ್ದು)

ಇವತ್ತು ವಿನೋಬಾರ ಹುಟ್ಟುಹಬ್ಬ. ಅವರು ಇಂದು ತಮ್ಮ ಬದುಕಿನ ೮೦ ವರ್ಷಗಳನ್ನು ಪೂರ್ಣಗೊಳಿಸುತ್ತಿದ್ದಾರೆ. ಅವರು ನೂರು ವರ್ಷಗಳ ಕಾಲ ಬದುಕಲಿ. ಅವರ ಆರೋಗ್ಯ ಉತ್ತಮಗೊಂಡಿದೆ ಎಂದು ನಿನ್ನೆ ಹಾಗೂ ಇಂದಿನ ಪತ್ರಿಕೆಗಳಿಂದ ತಿಳಿದು ಬರುತ್ತದೆ. ಕೆಮ್ಮು ಹಾಗೂ ಜ್ವರದಿಂದ ಮುಕ್ತರಾಗಿದ್ದಾರೆ.

ಮೃತ್ಯುಂಜಯ ಬಾಬೂಯಿಂದ ಪತ್ರ ಬಂದಿದೆ. ಈ ಪೋಸ್ಟ್‌ಕಾರ್ಡಿನಲ್ಲಿ, ಇನ್ನೊಬ್ಬ ಸ್ನೇಹಿತ ಬರೆದ ನಾಲ್ಕು ಪುಟಗಳ ಪತ್ರದಲ್ಲಿದ್ದುದಕ್ಕಿಂತ ಹೆಚ್ಚಿನ ವಿವರಗಳಿವೆ. ಬಿಹಾರದ ಪ್ರವಾಹ ಪರಿಹಾರ ಸಮಿತಿಯ ಸುದ್ದಿ ತಿಳಿಸುವುದನ್ನು ಮಾತ್ರ ಆತ ಮರೆತಿದ್ದಾನೆ. ಆದರೆ ಆತನಿಗೂ ಆ ಸಮಿತಿಗೂ ಇರುವ ಸಂಬಂಧ ಅಷ್ಟರಲ್ಲೇ ಇದೆ. ಗಂಗಾಬಾಬು, ಗಾಂಧಿಸ್ಮಾರಕ ವಸ್ತು ಸಂಗ್ರಹಾಲಯ ಹಾಗೂ ಡಾ. ರಜಿ ಅಹ್ಮದರ ಬಗ್ಗೆ ಕೂಡಾ ಒಂದಿಷ್ಟು ಸುದ್ದಿಯಿದೆ ಪತ್ರದಲ್ಲಿ. ಬಹುಶಃ ಆತನಿಗೆ ಮಹಿಳಾ ಚರಖಾ ಸಮಿತಿಯ ಬಗ್ಗೆ ಯಾವ ಸಮಾಚಾರವೂ ಬಂದಿಲ್ಲವೆಂದು ಕಾಣುತ್ತದೆ.

ಸೆಪ್ಟೆಂಬರ್ 12

ಕಾಂಗ್ರೆಸ್ಸಿಗರು ವಿನೋಬಾರನ್ನು ಓರ್ವ ಮಹಾ ಪೈಲ್ವಾನರನ್ನಾಗಿ ಪರಿವರ್ತಿಸಲು ಹೆಣಗುತ್ತಿರುವಂತೆ ಕಾಣುತ್ತದೆ. ಅವರಲೊಬ್ಬರಾದ ಶ್ರೀ ಖಾಡಿಲ್ಕರರು, 'ವಿನೋಬಾಜಿಯ ಒಂದು ಅನನ್ಯಗುಣವೆಂದರೆ ಸರ್ವೋದಯ ಚಳವಳಿ ಬಿಕ್ಕಟ್ಟನ್ನು ಎದುರಿಸಿದ ಸಮಯದಲ್ಲಿ ಅವರು ಬಂಡೆಯಂತೆ ಅಚಲವಾಗಿ ನಿಂತಿದ್ದು' ಎಂದು ಉದ್ಘೋಷಿಸಿದಾಗ ಅವರ ಸಾಮಾನ್ಯ ತಿಳುವಳಿಕೆಗೇ ಮಂಕು ಬಡಿದಿತ್ತು ಎಂದು ಕಾಣುತ್ತದೆ. ಇದೆಲ್ಲಾ ಎಷ್ಟೊಂದು ಅಸಹನೀಯವಾದಂತಹ ಕಪಟ ನಾಟಕವಾಗಿದೆ. ಶ್ರೀಮತಿ ಗಾಂಧಿ ಇದ್ದಕ್ಕಿದಂತೆ ವಿನೋಬಾರ ಬಳಿಗೆ ವಿಮಾನದಲ್ಲಿ ಹಾರಿಬಂದಿದ್ದು, ಆ ರಾತ್ರಿ ಅವರ ಆಶ್ರಮದಲ್ಲೇ ತಂಗಿದ್ದು ; ಈಗ ಹೊಸ ದೆಹಲಿಯಲ್ಲಿ ನಡೆದ ಅವರ ಹುಟ್ಟುಹಬ್ಬದಾಚರಣೆಯಲ್ಲಿ ಈ ಅಮೋಘ ಸ್ತುತಿ ಭಾಷಣಗಳು ನಡೆಯುತ್ತಿರುವುದು. ಪಾನಿರೋಧದ ಬಗ್ಗೆ ಶ್ರೀಮತಿ ಗಾಂಧಿ ಏನು ಮಾಡುತ್ತಾಳೆ ನೋಡುವಾ. ಬಹುಶಃ ಹೀಗೆ ಹೇಳಬಹುದು. 'ಎಷ್ಟಾದರೂ ರಾಜ್ಯಗಳಿಗೆ ಪತ್ರ ಬರೆಯಬಹುದು, ಸಲಹೆ ಕೊಡಬಹುದು, ಎಚ್ಚರಿಸಬಹುದು ಅಷ್ಟೆ'. ಬಡ ಗೋಕುಲ ಭಾಯಿಯೇ![37] ಪಾನ ನಿರೋಧದ ಪರವಾಗಿ ಈಗ ಮೂಡಬಹುದಾದ ಅನುಕೂಲ ಪರಿಸ್ಥಿತಿಯನ್ನು, ಆತ ಸದುಪಯೋಗಪಡಿಸಿಕೊಳ್ಳುತ್ತಾನೆ ಎಂದು ನಾನು ಪ್ರಾಮಾಣಿಕವಾಗಿ ಆಶಿಸುವೆ.

ಶ್ರೀಮತಿ ಗಾಂಧಿ ನೀಡುವ ಹೇಳಿಕೆಗಳ ಬಗ್ಗೆ ಏನನ್ನೂ ಹೇಳದಿರಲು ನಾನು ಹಲವಾರು ದಿನಗಳ ಹಿಂದೆ ನಿರ್ಧರಿಸಿದೆನಾದರೂ ವಿದ್ಯಾರ್ಥಿಗಳ ಬಗ್ಗೆ ಆಕೆ ಮಾಡುವ ಟೀಕೆಗಳ ಬಗ್ಗೆ ಮಾತ್ರ (ಇದನ್ನು ಆಕೆ ಮತ್ತೆ ಮತ್ತೆ ಮಾಡುತ್ತಾಳೆ) ನನಗನ್ನಿಸಿದ್ದನ್ನು ಹೇಳಲು ಬಯಸುತ್ತಿರುವೆ. ಮತ್ತೆ, ನನ್ನ ಅಥವಾ ನನ್ನ ಸಹಚರರ ಹೆಸರು ಹೇಳದೆಯೇ, ವಿದ್ಯಾರ್ಥಿಗಳನ್ನು ಕುರಿತ ನಮ್ಮ ಮನೋಭಾವದ ಬಗ್ಗೆ ಪ್ರಸ್ತಾಪಿಸಿ 'ಈ ಜನರ ಪ್ರಕಾರ' ವಿದ್ಯಾರ್ಥಿಗಳು ತಪ್ಪನ್ನೇ ಮಾಡಲಾರರು ಎಂದು ಹೇಳಿದ್ದಾಳೆ. ಅವರು ಬಸ್ಸುಗಳನ್ನು ಸುಡಬಹುದು, ಲೂಟಿ ಮಾಡಬಹುದು ಮತ್ತೆಲ್ಲಾ ರೀತಿಯ ಕುಚೇಷ್ಟೆಗಳನ್ನೂ ಮಾಡಬಹುದು; ಆದರೆ 'ಅವರಿಗೆ ಮಾತ್ರ' (ಅಂದರೆ ನಮಗೆ) ಅವರೆಲ್ಲಾ ಪರಮ ಪವಿತ್ರವಾದವರು ಎಂದು ತಿಳಿಸಿದ್ದಾಳೆ.

ಗುಜರಾತ್ ಹಾಗೂ ಬಿಹಾರ ಆಂದೋಲನಗಳಲ್ಲಿ ವಿದ್ಯಾರ್ಥಿಗಳು ಮಹತ್ತರ ಪಾತ್ರವಹಿಸಿದ್ದಾರೆ. ಮುಂದೆ ಕೂಡಾ ಅವರು ಅಂತಹುದೇ ಪಾತ್ರ ವಹಿಸಲಿದ್ದಾರೆ.

---

37. **ಗೋಕುಲ ಭಾಯಿ ಭಟ್, ರಾಜಸ್ಥಾನದಲ್ಲಿ ಪಾನ ನಿರೋಧ ಚಳವಳಿಯ ನಾಯಕರು. ಈ ಮುನ್ನ ಅವರು, ಸಂಪೂರ್ಣ ಪಾನ ನಿರೋಧವನ್ನು ಒತ್ತಾಯಿಸಿ ಆಮರಣಾಂತ ಉಪವಾಸ ಕೈಗೊಂಡಿದ್ದರು. ವಿನೋಬಾರ ಸೂಚನೆಯ ಮೇರೆಗೆ ಅದನ್ನು ಕೈಬಿಟ್ಟರು.**

ಈ ದೃಷ್ಟಿಯಿಂದ, ನಮ್ಮ ವಿದ್ಯಾರ್ಥಿಗಳಿಗೆ ಅನ್ಯಾಯವಾಗದಂತೆ, ಅವರನ್ನು ಕುರಿತ ಈ ದೋಷಾರೋಪಣೆಗೆ ಉತ್ತರ ಕೊಡದಿರಲು ನನಗೆ ಸಾಧ್ಯವಿಲ್ಲವಾಗಿದೆ.

ಕೆಲವು ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಬಸ್ಸಿಗೆ, ರೈಲ್ವೆ ನಿಲ್ದಾಣಕ್ಕೆ ಬೆಂಕಿ ಇಟ್ಟದ್ದು ರೈಲ್ವೇ ಹಳಿಗಳನ್ನು ಕಿತ್ತದ್ದು ಉಪಾಧ್ಯಾಯರನ್ನು ಹೊಡೆದಿದ್ದು - ಇಂತಹುದೇ ಮುಂತಾದ ಚೇಷ್ಟೆಗಳನ್ನು ಮಾಡಿದ್ದೇನೋ ನಿಜ. ಈ ದೇಶದ ವಿದ್ಯಾರ್ಥಿ ಹಾಗೂ ಯುವಸಮುದಾಯದ ಬಗ್ಗೆ ಜವಾಬ್ದಾರಿಯ ಪ್ರಜ್ಞೆ ಹೊಂದಿರುವ ಯಾರೇ ಆಗಲಿ ಇಂತಹ ಕೃತ್ಯಗಳನ್ನು ಕ್ಷಮಿಸಲಾರ. ಇದೆಲ್ಲಾ ಕ್ರಾಂತಿಗೆ - ಹಿಂಸಾಕ್ರಾಂತಿಗೆ ಭೂಮಿಕೆಯನ್ನು ಸಿದ್ಧಮಾಡುತ್ತದೆ ಎಂಬ ದುರದ್ದೇಶ ಅಥವಾ ತಪ್ಪು ಅಭಿಪ್ರಾಯದಿಂದ, ಜವಾಬ್ದಾರಿಹೀನ ರಾಜಕೀಯಸ್ಥರು ಕೆಲವೇಳೆ ಇದಕ್ಕೆ ಪ್ರೋತ್ಸಾಹ ನೀಡಿರಬಹುದು. ಆದರೆ ಅಂತಹ ಕೆಲವರನ್ನು ಕೆಲವರನ್ನುಳಿದರೆ ಮತ್ತಾರೂ ವಿದ್ಯಾರ್ಥಿಗಳ ಹಿಂಸಾಚಾರವನ್ನು ಕ್ಷಮಿಸುವುದಿಲ್ಲ. ಕ್ಷಮಿಸಲಾಗದು, ನಿಜ ; ಆದರೆ ಇಂತಹ ಪರಸ್ಥಿತಿಗಳಲ್ಲಿ ಏನು ಮಾಡುವುದು? ಕೆಲವು ವಿದ್ಯಾರ್ಥಿ 'ನಾಯಕರು' ಕ್ರೌರ್ಯದಲ್ಲಿ ತೃಪ್ತಿ ಕಾಣುವವರಾಗಿದ್ದು ವಿದ್ಯಾರ್ಥಿಗಳೇ ಅಲ್ಲದ ಪುಂಡು ಪೋಕರಿಗಳ ಗುಂಪನ್ನು ತಮ್ಮ ವಶದಲ್ಲಿರಿಸಿಕೊಂಡಿರಬಹುದು. ಆದರೆ ವಿದ್ಯಾರ್ಥಿ ಅಶಾಂತಿಯ ಕಾರಣಗಳನ್ನು ಅವರ ಅಪರಾಧ ಕೃತ್ಯಗಳಲ್ಲಿ ಕಾಣಲು ಯತ್ನಿಸುವುದು ವ್ಯರ್ಥ. ಅಶಾಂತಿಯ ಕಾರಣಗಳು ಅಡಗಿರುವುದು, ಅಸಮರ್ಪಕವಾದ ಮತ್ತು ಕೆಲವಂಶಗಳಲ್ಲಿ ಕೊಳೆತು ನಾರುತ್ತಿರುವ ನಮ್ಮ ಶಿಕ್ಷಣಪದ್ಧತಿಯಲ್ಲಿ; ನಿರುದ್ಯೋಗದಿಂದ ಉಂಟಾಗುವ ಹತಾಶೆಯಲ್ಲಿ ; ಸಾಮಾಜಿಕ - ಆರ್ಥಿಕ - ಅಭಿವೃದ್ಧಿಯ ತಲೆಕೆಟ್ಟ ನೀತಿಗಳಲ್ಲಿ. ಶ್ರೀಮತಿ ಗಾಂಧಿ ಮೊದಲು ಕೈಗೆತ್ತಿಕೊಳ್ಳಬೇಕಾದ ಮೂಲ ಸಮಸ್ಯೆ ಇದು. ಪ್ರಧಾನಮಂತ್ರಿಯಾಗಿರುವ ಮತ್ತು ಇಂದು ಎಲ್ಲ ಕಾರ್ಯೋದ್ದೇಶಗಳ ದೃಷ್ಟಿಯಿಂದಲೂ ಸರ್ವಾಧಿಕಾರಿಯಾಗಿರುವ ಆಕೆಯ ಜವಾಬ್ದಾರಿ ಇದು. ಆಕೆಯ 20 ಅಂಶಗಳು - ಅವನ್ನು ಜಾರಿಗೆ ತಂದರೂ ಸಹ - ಸಮಸ್ಯೆಯ ಮೇಲ್ಮೈಗೆ ಒಂದಿಷ್ಟು ಮುಲಾಮು ಹಚ್ಚಬಹುದಷ್ಟೆ. ಹೀಗಾಗಿ, ವಿದ್ಯಾರ್ಥಿ ಅಶಾಂತಿ ಕ್ರಮೇಣ ಬೆಳೆದು ಮುಂದೊಂದು ದಿನ ಇನ್ನೂ ಹೆಚ್ಚಿನ ತೀವ್ರತೆಯೊಡನೆ ಆಸ್ಫೋಟಿಸುತ್ತದೆ.

ನನ್ನಂತಹ ಅಥವಾ ನನ್ನೊಂದಿಗೆ ಕೆಲಸ ಮಾಡಿದಂತಹ ಜನ ಈ ಬಗ್ಗೆ ಏನು ಮಾಡಬಲ್ಲರು? ಹೌದು, ನಾವೇನೋ ವಿದ್ಯಾರ್ಥಿಗಳ ಹಿಂಸಾಚಾರವನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದೆವು. ನಾನಂತೂ, ಎಂದೂ ಆ ಹಿಂಸಾಚಾರವನ್ನು ಕ್ಷಮಿಸಲಿಲ್ಲ ಅಥವಾ ಮಾತಿನಲ್ಲಿ ಜಾರಿಸಿಬಿಡಲಿಲ್ಲ. ಆದರೆ ನಾನು ಮಾಡಿದ ರಚನಾತ್ಮಕ ಪ್ರಯತ್ನವೆಂದರೆ, ಯುವಜನರ ಕುರುಡು ಸಿಟ್ಟು ಹಾಗೂ ಉದ್ರೇಕಗಳನ್ನು ರಚನಾತ್ಮಕವಾಗಿ ಆಯೋಜಿಸಿದ್ದು. ಗುಜರಾತ್ ವಿದ್ಯಾರ್ಥಿ ಆಂದೋಲನದ ಮೇಲೆ ನನ್ನ ಪ್ರಭಾವ ಸೀಮಿತವಾಗಿತ್ತು. ಆದರೆ ವಿದ್ಯಾರ್ಥಿ ಆಂದೋಲನವನ್ನು ಅನಾವರಣಗೊಳಿಸಿದ ಈ ಆಂದೋಲನದ ಕೀರ್ತಿಗೆ ಮಸಿ ಬಳಿಯದೆ ಹೇಳುವುದಾದರೆ,

ಇಲ್ಲಿ ಒಟ್ಟಾರೆ ವಿದ್ಯಾರ್ಥಿ ನಾಯಕತ್ವ ಹಿಂಸಾವಿರೋಧಿಯಾಗಿತ್ತು. ಗಮನಿಸಬೇಕಾದ ಸಂಗತಿ ಎಂದರೆ, ನೇರವಾಗಿ ಹಿಂಸೆಯನ್ನು ಪ್ರಚೋದಿಸುತ್ತಿದ್ದ, ಬೆಂಕಿ ಕಾರುತ್ತಿದ್ದ ಹೆಚ್ಚು ಕಡಿಮೆ ಎಲ್ಲ ವಿದ್ಯಾರ್ಥಿ ನಾಯಕರೂ ಈಗ ಶ್ರೀಮತಿ ಗಾಂಧಿಯ ತೆಕ್ಕೆಯಲ್ಲಿದ್ದಾರೆ.

ಬಿಹಾರದ ವಿಷಯಕ್ಕೆ ಬಂದರೆ, ಅಲ್ಲಿ ನಡೆದ ಹಿಂಸಾಚಾರವೆಲ್ಲಾ ನಾನು ಆಂದೋಲನದ ಸಂಪರ್ಕ ಪಡೆಯುವುದಕ್ಕೆ ಮುನ್ನ. ನಂತರ ವಿದ್ಯಾರ್ಥಿಗಳು ಶಿಸ್ತಿನ ಸಿಪಾಯಿಗಳಂತೆ ವರ್ತಿಸಿದರು - ಅವರಲ್ಲಿ ಹೆಚ್ಚಿನವರಿಗೆ, ಎಲ್ಲ ಸಂದರ್ಭಗಳಲ್ಲೂ ಶಾಂತಿಯು ಮಾರ್ಗಗಳಲ್ಲೇ ನಡೆಯಬೇಕೆನ್ನುವುದರಲ್ಲಿ ನಂಬಿಕೆ ಇರದಿದ್ದರೂ ಸಹ. ಆದರೂ ಸಹ ಅವರು ಶಾಂತಿಯುತವಾಗಿಯೇ ವರ್ತಿಸಿದರು. ನವೆಂಬರ್ 4ರಂದು ನಮ್ಮ ಮೇಲೆ ಅಶ್ರುವಾಯು ಹಾಗೂ ಲಾಠಿ ಪ್ರಯೋಗ ನಡೆಸಿ, ತೀವ್ರವಾಗಿ ಪ್ರಚೋದಿಸಿದ ಆ ಸ್ಮರಣೀಯ ದಿನದಂದೂ, ವಿದ್ಯಾರ್ಥಿಗಳು ಶಿಸ್ತಿನಿಂದ, ಶಾಂತಿಯಿಂದ ವರ್ತಿಸಿದರು. ಅಂದ ಮಾತ್ರಕ್ಕೆ ಆಂದೋಲನದ ಸಂದರ್ಭದಲ್ಲಿ ಹಿಂಸಾಕೃತ್ಯ ನಡೆಯಲೇ ಇಲ್ಲವೆಂದಲ್ಲ. ಆದರೆ ಅಂತಹ ಕೆಲವೇ ಕೃತ್ಯಗಳು ನಡೆದದ್ದೂ ಕಾಂಗ್ರೆಸ್ ಏಜೆಂಟರ (ಹೆಚ್ಚಿನವರು ಸಿಪಿಐ ಜನ) ಪ್ರಚೋದನೆಯಿಂದ ಅಥವಾ ನಾಯಕತ್ವದ ಕೊರತೆಯಿಂದ.

ಆದ್ದರಿಂದ, ವಿದ್ಯಾರ್ಥಿಗಳು ತಪ್ಪೇಮಾಡಲಾರರು ಎಂಬುದು ನಮ್ಮ ಅಭಿಮತ ಎಂಬ ಶ್ರೀಮತಿ ಗಾಂಧಿಯ ಹೇಳಿಕೆ ಸರಿಯಲ್ಲ. ಅಗತ್ಯ ಸಂದರ್ಭಗಳಲೆಲ್ಲಾ ನಾವು ಅವರ ತಪ್ಪುಗಳನ್ನು ಎತ್ತಿತೋರಿಸಿ ಬದಲೀ ಮಾರ್ಗಗಳನ್ನು ಸೂಚಿಸಿಯೇ ಇದ್ದೇವೆ.

ಆದರೆ ಬಿಹಾರ ಆಂದೋಲನ ಎತ್ತ ಸಾಗುತ್ತಿತ್ತು ಮತ್ತು ವಿದ್ಯಾರ್ಥಿಗಳ ಆಕಾಂಕ್ಷೆಗಳನ್ನು ಪೂರೈಸುವ ಏಕೈಕ ಪರಿಹಾರಮಾರ್ಗವಾದ ಶಿಕ್ಷಣ ರಂಗದಲ್ಲಿ ಹಾಗೂ ಸಮಾಜದ ಸಾಮಾಜಿಕ-ಆರ್ಥಿಕ ಸ್ವರೂಪದಲ್ಲಿ ಕ್ರಾಂತಿಕಾರೀ ಬದಲಾವಣೆಗಳನ್ನು ತರುವ ಪ್ರಯತ್ನ ಹೇಗೆ ಸಾಗಬೇಕೆಂದು ನಾನು ಬಯಸಿದ್ದೆ? ಇದಕ್ಕೆ ಉತ್ತರ ದೃಢಗತಿಯಲ್ಲಿ ಆಂದೋಲನದ ಮೂಲಕ ಹೊರಹೊಮ್ಮುತ್ತಿತ್ತು. ಆದರೆ ಅದರ ಕ್ರಾಂತಿಕಾರೀ ಲಕ್ಷಣಗಳನ್ನು ಮುನ್ನೋಡಿದ ಶ್ರೀಮತಿ ಗಾಂಧಿ ಅದನ್ನು ಅಡ್ಡಗಟ್ಟಲು ಪ್ರಯತ್ನಿಸಿದಳು. ಆದರೆ ದಾರಿಯನ್ನು ಶಾಶ್ವತವಾಗಿ ಅಡ್ಡಗಟ್ಟುವುದು ಅಸಾಧ್ಯ. ಎಂದೇ ಆಗಲಿ, ಆಂದೋಲನವೊಂದರ ಒತ್ತಡ ಅಥವಾ ಆಂತರಿಕ ಚೈತನ್ಯ ಇಲ್ಲದೆಯೇ ರಾಷ್ಟ್ರಜೀವನದ ಯಾವುದೇ ವಲಯದಲ್ಲಿ ಯಾವುದೇ ಕ್ರಾಂತಿಕಾರಿ ಬದಲಾವಣೆಗಳನ್ನು ತರಲು ಸಾಧ್ಯ ಎಂದು ನನಗನ್ನಿಸುವುದಿಲ್ಲ. ನಿಜ, ಆಂದೋಲನದ ಸಂಚಾಲನ ಶಕ್ತಿಯಿಂದಾಗಿಯೇ ಕೆಲವು ಬದಲಾವಣೆಗಳು ಮೊಳೆಯಬಹುದು ; ಇನ್ನು ಕೆಲವು, ಆಂದೋಲನದ ಕರೆಗೆ ಓಗೊಟ್ಟು ಮಾಡಿದ ಪ್ರಜಾಸತ್ತಾತ್ಮಕ ಶಾಸನಗಳಿಂದಾಗಿ ಮೂಡಬಹುದು. ಜನತಾ ಆಂದೋಲನದಿಂದ ನೇರವಾಗಿ ಉದ್ಭವಿಸಿದ ಬದಲಾವಣೆಗಳನ್ನು, ನಂತರ ಶಾಸನದ ಮೂಲಕ ನಿಯಮಿತಗೊಳಿಸುವುದೂ ಅಗತ್ಯ.

ನೇರ ಬದಲಾವಣೆ ಅಥವಾ ಪರೋಕ್ಷ (ಶಾಸನ ರೂಪದ) ಬದಲಾವಣೆಯನ್ನುಂಟು ಮಾಡುವ ಆಂದೋಲನದ ಒತ್ತಡ ಅಥವಾ ಆಂತರಿಕ ಚೈತನ್ಯ ಹಲವು ರೂಪಗಳದ್ದಾಗಿರಬಹುದು : ಮನವೊಲಿಸುವಿಕೆ (ಸಾಮೂಹಿಕ ಒತ್ತಾಯದ ಪರಿಣಾಮವಾಗಿ) ಅಸಹಕಾರ, ನಾಗರಿಕ ಪ್ರತಿರೋಧ ಮತ್ತು ನಾಗರಿಕ ಅವಿಶ್ವಾಸ ಮುಂತಾಗಿ. ಕೈಗಾರಿಕಾ ಕ್ಷೇತ್ರದಲ್ಲಿ ಅದು ಬೇರೆ ರೂಪಗಳನ್ನು ತಳೆಯಬಹುದು: ಮುಷ್ಕರ, ಉದ್ಯಮದ ನೇರ ನಿಯಂತ್ರಣ ಪಡೆಯುವುದು - ಅದರ ವ್ಯವಸ್ಥಾಪನೆ ಹಾಗೂ ನಿರ್ವಹಣೆಯನ್ನು ತಾನೇ ವಹಿಸಿಕೊಳ್ಳುವುದು ಮುಂತಾಗಿ. (ಇದಕ್ಕೆ ಪ್ರಬುದ್ಧ ಕಾರ್ಮಿಕವರ್ಗ ಹಾಗೂ ಕಾರ್ಮಿಕ ಒಕ್ಕೂಟಗಳ ಒಗ್ಗಟ್ಟು ಅತ್ಯಗತ್ಯ).

ಕಳೆದ 10 ವಾರಗಳಲ್ಲಿ ನಾನು ಪತ್ರ ಬರೆದವರ ಹೆಸರುಗಳು ಇಲ್ಲಿವೆ:

ಶಿವನಾಥ ಪ್ರಸಾದ್ (ಭಾವಮೈದುನ)	1 ಪತ್ರ	ಕಲ್ಕತ್ತಾ
ಟಿ. ಅಬ್ರಹಾಂ (ನನ್ನ ಕಾರ್ಯದರ್ಶಿ)	2 ಪತ್ರಗಳು	ಪಟ್ನಾ
ಗುಲಾಬ್ ಯಾದವ್ (ನನ್ನ ಸೇವಕ)	2 ಪತ್ರಗಳು	ಪಟ್ನಾ
ಜೈ ನಾರಾಯಣ ಸಹಾಯ್ (ಗೆಳೆಯ)	2 ಪತ್ರಗಳು	ಪಟ್ನಾ
ಜೀವೇಶ್ (ಸೋದರಿಯ ಮೊಮ್ಮಗ)	1 ಪತ್ರ	ಪಟ್ನಾ
ಗಂಗಾಶರಣ ಸಿನ್ಹಾ (ಗೆಳೆಯ)	1 ಪತ್ರ	ಪಟ್ನಾ
ಅನಿಲ್‌ಪ್ರಸಾದ್ (ಸೋದರ ಸಂಬಂಧಿ)	1 ಪತ್ರ	ಪಟ್ನಾ
ಶ್ರೀಮತಿ ಮಾಲತಿಸಿಂಗ್ (ಸ್ನೇಹಿತೆ)	1 ಪತ್ರ	ಪಟ್ನಾ
ರಫೀಕ್ ಖಾನ್ (ಸ್ನೇಹಿತ)	1 ಪತ್ರ	ಹೊಸ ದೆಹಲಿ
ಸುಗತ ದಾಸ್‌ಗುಪ್ತ (ಸ್ನೇಹಿತ)	1 ಪತ್ರ	ವಾರಣಾಸಿ
ಡಿ.ಬಕ್ಷಿ (ಸೋದರ ಸಂಬಂಧಿ)	1 ಪತ್ರ	ಪಟ್ನಾ
ಸುಶೀಲಾ ಸಿನ್ಹಾ (ಸ್ನೇಹಿತೆ)	1 ಪತ್ರ	ಪಟ್ನಾ
ಪ್ರಭಾ ಚೌಧುರಿ (ಸ್ನೇಹಿತೆ)	1 ಪತ್ರ	ಬಲ್ಲಿಯಾ
ಜಗದೀಶ್ ಸಿಂಗ್ (ಸ್ನೇಹಿತ)	1 ಪತ್ರ	ಬಲ್ಲಿಯಾ
ಸ್ನೇಹಮಯಿ ಪ್ರಸಾದ್ (ತಮ್ಮನ ಹೆಂಡತಿ)	1 ಪತ್ರ	ಪಟ್ನಾ
ವಿಭಾ ಸಿಂಗ್ (ನನ್ನ ಮಗಳಂತಿರುವಾಕೆ)	1 ಪತ್ರ	ಪೌನಾರ್
ಕುಸುಮ್ ದೇಶಪಾಂಡೆ (ನನ್ನ ಮಗಳಂತಿರುವಾಕೆ)	1 ಪತ್ರ	ಪೌನಾರ್

ಒಟ್ಟು 20 ಪತ್ರಗಳು

ಸೆಪ್ಟೆಂಬರ್ 14

ಇಂದು ಬೆಳಗಿನ ಹಿಂದೂಸ್ಥಾನ್ ಟೈಮ್ಸ್‌ನಲ್ಲಿ ಶ್ರೀ ಬ್ರಹ್ಮಾನಂದ ರೆಡ್ಡಿಯವರು ಮದ್ರಾಸ್‌ನಲ್ಲಿ ಮಾಡಿದ ಭಾಷಣದ ಯು.ಎನ್.ಐ. ವರದಿ ಇದೆ. ಅದರ ಕೊನೆಯ ಸಾಲುಗಳು ಹೀಗೆವೆ: 'ಅವರು ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ, ಬಂಧಿಸಲಾದವರಲ್ಲಿ ಶೇಕಡಾ 30ರಷ್ಟು ಜನರನ್ನು ಸರ್ಕಾರ ಬಿಡುಗಡೆಮಾಡಿದೆ.' ಎಷ್ಟು ಜನರನ್ನು ಬಂಧಿಸಲಾಯಿತು ಈಗ ಎಷ್ಟು ಜನರನ್ನು ಬಿಡುಗಡೆ ಮಾಡಲಾಗಿದೆ ಮತ್ತು ಬಂಧಿಸಲಾದ ಹಾಗೂ ಬಿಡುಗಡೆ ಮಾಡಲಾದವರ ಪೈಕಿ ಎಷ್ಟು ಜನ ರಾಜಕೀಯಸ್ಥರು ಮತ್ತು ಎಷ್ಟು ಜನ ಕಳ್ಳಸಾಗಣೆದಾರರು ಎಂಬ ಬಗ್ಗೆ ಅವರನ್ನು ಕೇಳಬೇಕಾಗಿತ್ತು.

ಇಂದು ಬೆಳಗ್ಗಿನ 'ಟ್ರಿಬ್ಯೂನ್' ಸಹ ಇದೇ ಭಾಷಣದ ಪಿ.ಟಿ.ಐ. ವರದಿಯನ್ನು ಮೂರು ಅಂಕಣಗಳ ತಲೆ ಬರಹದಡಿ ಪ್ರಕಟಿಸಿದೆ - 'ಶೇಕಡಾ 30ರಷ್ಟು ಮಿಸಾ ಬಂಧಿತರನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ : ರೆಡ್ಡಿ.' ಎರಡೂ ವರದಿಗಳು ತಾಳೆಯಾಗುವುದಾದರೂ, 'ಟ್ರಿಬ್ಯೂನ್' ತನ್ನ ವರದಿಗೆ ತನ್ನದೇ ಒಂದು ಬಣ್ಣ ನೀಡಿ ಪ್ರಕಟಿಸಿದ್ದು ಇದನ್ನೇ 'ಹಿಂದೂಸ್ಥಾನ್ ಟೈಮ್ಸ್' ಒಂದೇ ಅಂಕಣದ ತಲೆಬರಹದಡಿ ಪ್ರಕಟಿಸಿದೆ : 'ಬಂಡಾಯ ಇನ್ನೇನು ಕೊನೆಗೊಳ್ಳಲಿದೆ : ರೆಡ್ಡಿ' ಎಂದು. (ಆದರೆ ಬಂಡಾಯ ಇಲ್ಲಿ ನಾಗಾ - ಮಿಜೊ ಪ್ರದೇಶಕ್ಕೆ ಸಂಬಂಧಿಸಿದ್ದು!)

'ಟ್ರಿಬ್ಯೂನ್'ನಲ್ಲಿ ಪ್ರಕಟವಾಗಿರುವ ಪಿ.ಟಿ.ಐ. ವರದಿಯಲ್ಲಿ ರೆಡ್ಡಿ ಹೀಗೆ ಹೇಳಿದರೆಂದು ತಿಳಿಸಲಾಗಿದೆ (ವರದಿಯ ಮೊದಲ ಭಾಗದ, ದೊಡ್ಡಕ್ಷರಗಳಲ್ಲಿ): 'ದೇಶಾದ್ಯಂತ ಸಹಜ ಪರಿಸ್ಥಿತಿ ಇದ್ದು ತುರ್ತುಪರಿಸ್ಥಿತಿಯ ನಂತರ ಬಂಧಿಸಲಾದ ಶೇಕಡಾ 30ರಷ್ಟು ಮಿಸಾ ಬಂಧಿಗಳನ್ನು ಬಿಡುಗಡೆ ಮಾಡಲಾಗಿದೆ.' ದೇಶಾದ್ಯಂತ ಸಹಜ ಸ್ಥಿತಿ ಇದೆ ಎಂದು ಗೃಹಮಂತ್ರಿಯುವರು ಒಪ್ಪಿಕೊಂಡಿರುವುದು ಗಮನಾರ್ಹವಾಗಿದೆ.

ಚಂಡೀಗಡ

15-9-1975

ಗೆ,
ಗೃಹ ಕಾರ್ಯದರ್ಶಿ
ಭಾರತ ಸರ್ಕಾರ
ಹೊಸ ದೆಹಲಿ.

ಮಾನ್ಯರೆ,

ನನ್ನನ್ನು ಬಿಹಾರಕ್ಕೆ ಅಥವಾ ಅದರ ನೆರೆಯ ರಾಜ್ಯವೊಂದಕ್ಕೆ ವರ್ಗಾಯಿಸಬೇಕೆಂದು ಕೋರಿ, 7-7-75ರಂದು ನಾನು ಬರೆದ ಪತ್ರಕ್ಕೆ ಇಂದಿನವರೆಗೂ ಉತ್ತರವಿಲ್ಲ. ನಾನು ಈ ಮೂಲಕ ಆ ಕೋರಿಕೆಯನ್ನು ಪುನರುಚ್ಚರಿಸುತ್ತಿದ್ದು ಈಸಲವಾದರೂ ಅನುಕೂಲಕರ ಉತ್ತರ ಬರುತ್ತದೆ ಎಂದು ಆಶಿಸಿರುವೆ.

ನಾನು ನಿಮ್ಮ ಗಮನಕ್ಕೆ ತರಬಯಸುವ ಮತ್ತೊಂದು ವಿಷಯವೂ ಉಂಟು.

ಈ ತಿಂಗಳ 10ರಿಂದ ಆರಂಭವಾಗುವ ವಾರವನ್ನು ಬಿಟ್ಟು, ನಾನಿಲ್ಲಿ 10 ವಾರಗಳಿಂದ ಬಂಧಿತನಾಗಿದ್ದೇನೆ. ಪ್ರಸಕ್ತ ನಿಯಮಗಳ ಪ್ರಕಾರ ವಾರಕ್ಕೆ ಎರಡು ಪತ್ರಗಳಂತೆ ನಾನು ಈವರೆಗೆ 20 ಪತ್ರಗಳನ್ನು ಬರೆದಿರುವೆ. ಅವುಗಳಲ್ಲಿ ಕೇವಲ ಒಂದು ಪತ್ರ ಮಾತ್ರ ತಲುಪಬೇಕಾದವರಿಗೆ ತಲುಪಿದೆ ಎಂದು ಕಾಣುತ್ತದೆ. ಕುಸುಮ್ ದೇಶಪಾಂಡೆ ಬರೆದಿರುವ ಉತ್ತರದಿಂದ ಇದು ಸ್ಪಷ್ಟವಾಗಿದೆ. ಮಿಕ್ಕವರಾರಿಂದಲೂ ಉತ್ತರ ಬಂದಿರದಿದ್ದು ಹೆಚ್ಚಿನ ಅವರಾರಿಗೂ ಪತ್ರಗಳೇ ತಲುಪಿಲ್ಲ ಎಂಬ ಖಚಿತ ಸುದ್ದಿ ನನಗೆ ತಲುಪಿದೆ.

ನಾನು ಬರೆದ ಕೆಲವು ಪತ್ರಗಳು ಸಂಬಂಧಿಕರಿಗಾಗಿತ್ತು, ಕೆಲವು ಸ್ನೇಹಿತರಿಗಾಗಿತ್ತು. ಸ್ಥಾನಬದ್ಧತೆಯಲ್ಲಿರುವ ಯಾರೇ ಆಗಲಿ ಸಂಬಂಧಿಕರಿಗೆ ಮತ್ತು ಸ್ನೇಹಿತರಿಗೆ ಪತ್ರ ಬರೆಯುವ ಅವಕಾಶ ಹೊಂದಿರುತ್ತಾರೆ. ಇದಕ್ಕೆ ಬ್ರಿಟಿಷರ ಕಾಲದಲ್ಲೂ ಅವಕಾಶವಿತ್ತು. ಕುಸುಮ್ ದೇಶ್‌ಪಾಂಡೆ ನನಗೆ ಯಾವ ರೀತಿಯ ರಕ್ತಸಂಬಂಧಿಯಲ್ಲದಿದ್ದರೂ, ನನ್ನ ಮಗಳಷ್ಟೇ ನನಗೆ ಪ್ರೀತಿಪಾತ್ರಳಾಗಿದ್ದಾಳೆ (ಆಕೆಗೆ ಬರೆದ ಪತ್ರವನ್ನು ಮಾತ್ರ ಏಕೆ ತಲುಪಿಸಲಾಗಿದೆ ಎಂಬುದು ಸಹಜ ಸ್ಪಷ್ಟ)[38]

ಮಾನ್ಯರೆ, ಈಗ, ನಾನು ಬರೆದ 20 ಪತ್ರಗಳಲ್ಲಿ 19ನ್ನು ತಡೆಹಿಡಿದಿರುವುದು ಕೇವಲ ಸೆನ್ಸಾರ್‌ಷಿಪ್‌ಗೆ ಸಂಬಂಧಿಸಿದ ವಿಷಯವಲ್ಲ. ಇದನ್ನು ನಾನು, ಸ್ಥಾನಬದ್ಧನಾಗಿ ನನಗಿರುವ ಹಕ್ಕುಗಳ ನಿರಾಕರಣೆ ಎಂದು ಪರಿಗಣಿಸುತ್ತೇನೆ. ವಾಸ್ತವಾಗಿ ಇದು ಮಾನಸಿಕ ಹಿಂಸೆಗೆ ಸಮವಾಗಿದೆ. ಆದುದರಿಂದ ಈ ಬಗ್ಗೆ ಗಂಭೀರ ಆಲೋಚನೆ ಮಾಡಿ ತಪ್ಪನ್ನು ಸರಿಪಡಿಸುವಿರಿ ಎಂದು ನಾನು ಆಶಿಸುತ್ತೇನೆ.

ನಿಮ್ಮ ವಿಶ್ವಾಸಿ

ಜಯಪ್ರಕಾಶ್ ನಾರಾಯಣ್

---

38. ಕುಸುಮ್ ದೇಶಪಾಂಡೆ, ಪೌನಾರ್ ಆಶ್ರಮದಲ್ಲಿ ವಿನೋಬಾರ ನಿಕಟವರ್ತಿ.

ಸೆಪ್ಟೆಂಬರ್ 18

ಶ್ರೀ ವಿ.ಸಿ. ಶುಕ್ಲ ಅವರು ಪತ್ರಿಕೆಗಳಿಗೆ ಶಹಭಾಸ್‌ಗಿರಿ ನೀಡಿದ್ದಾರೆ - ಪತ್ರಿಕೆಗಳಲ್ಲಿ ಒಂದು ತಲೆಬರಹ : 'ಹೆಚ್ಚಿನ ಪತ್ರಿಕೆಗಳು ಚೆನ್ನಾಗಿ ಕೆಲಸಮಾಡುತ್ತಿವೆ' ಎಂತಹ ಅದ್ಭುತ! ಈ ಜನಕ್ಕೆ ಯಾವುದರಲ್ಲೂ ಇತಿಮಿತಿಗಳ ಪ್ರಜ್ಞೆ ಇಲ್ಲವೆಂದೇ ಕಾಣುತ್ತದೆ; ಎಲ್ಲ ಮೌಲ್ಯಗಳನ್ನೂ ಗಾಳಿಗೆ ತೂರಿಬಿಟ್ಟಿದ್ದಾರೆಂದು ಕಾಣುತ್ತದೆ. ತಾವೆಷ್ಟು ಕ್ಷುದ್ರರಾಗಿ ಕಾಣುತ್ತಿದ್ದೇವೆ ಎಂಬ ಅರಿವೇ ಅವರಿಗಿಲ್ಲವೇನೋ. ಇದು ಶ್ರೀಮತಿ ಗಾಂಧಿಯ ಪ್ರಜಾಪ್ರಭುತ್ವ ತಾನೇ.

ರಾತ್ರಿ (ಎಂಟೂವರೆ ಗಂಟೆ) ಪಿ.ಜಿ.ಐ.ನ[39] ಅತಿಥಿಗೃಹವೊಂದಕ್ಕೆ ವರ್ಗಾಯಿಸಲಾಯಿತು. ಓಡಾಡಲು ಇಲ್ಲಿ ಚೆಂದದ ಹುಲ್ಲುಮೈದಾನವಿದೆ. ದಾದಿಗಳು ಬರುವುದಿಲ್ಲ. ಡಾ. ಕಲರಾ ಬೆಳಿಗ್ಗೆ ಮತ್ತು ಸಂಜೆ ಬರುತ್ತಾರೆ. ಆಗಾಗ್ಗೆ ಡಾ. ಖತ್ರಿ ಕೂಡಾ ಬರಬಹುದು. ಡಾ. ಚುಟ್ಟಾಣಿ[40] ಹಾಗೂ ಡಾ. ಮೆಹ್ರಾ ಸಹ ಬರಬಹುದು. ನನ್ನ ಆರೋಗ್ಯ ಸುಧಾರಿಸುವತ್ತ ಇದೊಂದು ಪ್ರಮುಖ ಹೆಜ್ಜೆ.

ಡಾ. ಕಲರಾ ರಾತ್ರಿ 9.30ರಲ್ಲಿ ನನ್ನನ್ನು ಪರೀಕ್ಷಿಸಿದರು - ನಾಡಿ 80, ಮಿಕ್ಕದ್ದು ಓಕೆ.

ಸೆಪ್ಟೆಂಬರ್ 19

ಹೊಸ ಸ್ಥಳವಾದ್ದರಿಂದ ನಿದ್ದೆ ಸರಿಯಾಗಿ ಬರಲಿಲ್ಲ. ಡಾ. ಕಲರಾ ಬೆಳಿಗ್ಗೆ 7.45ಕ್ಕೆ ಬಂದಿದ್ದರು. ನಾಡಿಯ ಗತಿ 80 ಆಗಿತ್ತು. ಮಿಕ್ಕದ್ದೆಲ್ಲಾ ಓಕೆ. ಬಿಸಿಲು ಹೆಚ್ಚಾಗಿದ್ದುದರಿಂದ ಬೆಳಗಿನ ವಾಯುಸಂಚಾರವನ್ನು ಕೈಬಿಡಲಾಯಿತು. ನಾಳೆಯಿಂದ ಬೆಳಿಗ್ಗೆ 7ಕ್ಕೇ ವಾಯುಸಂಚಾರಕ್ಕೆ ಹೊರಡಬೇಕು.

ಸೆಪ್ಟೆಂಬರ್ 20

ಇಂದು ಬೆಳಗ್ಗಿನ ಪತ್ರಿಕೆಗಳು 'ಜಾತ್ಯಾತೀತತೆ, ಸಮಾಜವಾದ ಹಾಗೂ ಪ್ರಜಾಪ್ರಭುತ್ವಗಳ ಬೋಧಕರ ಮೊಟ್ಟಮೊದಲ ಅಖಿಲಭಾರತ ಸಮ್ಮೇಳನ' ಎಂದು ಕರೆಯಲಾದ ಕಾರ್ಯಕ್ರಮವೊಂದರ ವರದಿಗಳನ್ನು ಪ್ರಕಟಿಸಿವೆ. ಶ್ರೀಮತಿ ಸುಭದ್ರಾ ಜೋಶಿ(ಈ ಬೋಧಕರ ಖಜಾಂಜಿ), ಡಾ. ಕೆ.ಎಲ್. ಶ್ರೀಮಾಲಿ(ಅಧ್ಯಕ್ಷರು), ಪ್ರೊ.

---

39. ಜೆ.ಪಿ.ಯವರನ್ನು ಸ್ಥಾನಬದ್ಧತೆಯಲ್ಲಿಡಲಾಗಿದ್ದ ಚಂಡೀಘಡದಲ್ಲಿರುವ ವೈದ್ಯಕೀಯ ಶಿಕ್ಷಣ ಹಾಗೂ ಸಂಶೋಧನೆಯ ಸ್ನಾತಕೋತ್ತರ ಕೇಂದ್ರ.
40. ಪಿ.ಜಿ.ಐ.ನ ನಿರ್ದೇಶಕ ಪಿ.ಎನ್. ಚುಟ್ಟಾಣಿ.

ರಷೀದುದ್ದೀನ್ ಖಾನ್ ಇನ್ನೂ ಮುಂತಾದ ಗಣ್ಯ ಉಪಕುಲಪತಿಗಳು, ಪ್ರೊಫೆಸರರು ಹಾಗೂ ಜ್ಞಾನಿಗಳಿಂದ ಕೂಡಿದ ಈ ಶಿಕ್ಷಣತಜ್ಞರ ಸಂಸ್ಥೆಯ 'ಕುಲಪತಿ' ಸ್ಥಾನವನ್ನು ಶ್ರೀಮತಿ ಗಾಂಧಿಯೇ ಅಲಂಕರಿಸಿದ್ದಾಳೆ.

ಅಂತೂ ಈಗ ಭಾರತೀಯರಿಗೆ, ಜಾತ್ಯಾತೀತತೆ, ಸಮಾಜವಾದ ಹಾಗೂ ಪ್ರಜಾಪ್ರಭುತ್ವಗಳ ಬಗ್ಗೆ ಮರುಶಿಕ್ಷಣ ನೀಡಬೇಕಾಗಿದೆ. ಹಳೆಯ ಬೋಧಕರೆಲ್ಲಾ - ಗಾಂಧಿ, ನೆಹ್ರೂ, ಪಟೇಲ್, ಪ್ರಸಾದ್, ಆಜಾದ್, ಸಿ. ರಾಜಗೋಪಾಲಾಚಾರಿ ಹಾಗೂ ಇತರ ಪಿತೃಗಳು - ಅಪ್ರಸ್ತುತವಾಗಿಬಿಟ್ಟಿದ್ದಾರೆ. ಈಗ ನೋಡಿ, ಶ್ರೀಮತಿ ಗಾಂಧಿ ಮತ್ತು ಮೇಲೆ ಹೆಸರಿಸಲಾದ ಇತರರು, ಇನ್ನೂ ಹಲವಾರು ಹೊಗಳುಭಟರು, ಹೌದಪ್ಪಗಳು ಹಾಗೂ ವಿದೂಷಕರೊಂದಿಗೆ ಈ ಎಲ್ಲ ಆದರ್ಶಗಳ ನಿಜವಾದ ಅರ್ಥವೇನು ಎಂಬುದನ್ನು ನಮಗೆ ಬೋಧಿಸುತ್ತಾರೆ. ಮೊದಲ ಪಾಠ ಎಂದರೆ, ವಿರೋಧಪಕ್ಷಗಳು ಬಹಳ ಬಲಿಷ್ಠವಾಗಲು ಅವಕಾಶ ಕೊಡಬೇಡಿ (ಕೊಟ್ಟರೆ, ದಿಟ್ಟ ಮಹಿಳೆ - ಶ್ರೀಮತಿ ಗಾಂಧಿಯನ್ನು ನಿರ್ಮೂಲ ಮಾಡಿಬಿಡಬಹುದು). ಎರಡನೇ ಪಾಠವೆಂದರೆ, ವಿರೋಧಪಕ್ಷಗಳ ನಾಯಕರನ್ನು ಬಂಧಿಸಿರಿ (ಅಥವಾ ಸ್ಥಾನಬದ್ಧತೆಯಲ್ಲಿರಿಸಿರಿ), ನಾಗರಿಕ ಹಕ್ಕುಗಳು, ಪತ್ರಿಕಾ ಸ್ವಾತಂತ್ರ್ಯವನ್ನು ದಮನಮಾಡಿ. ಮೂರನೆಯ ಪಾಠ, ಭಿನ್ನಾಭಿಪ್ರಾಯ ಹಾಗೂ ಪ್ರತಿಭಟನೆ ತಲೆ ಎತ್ತದಂತೆ ಮಾಡಿದ ನಂತರ ಜನತೆಯ ತಲೆತುಂಬಾ ಸುಳ್ಳುಗಳನ್ನು ತುಂಬಿರಿ ಮತ್ತು ಎಲ್ಲ ಮಿದುಳುಗಳೂ ಚೊಕ್ಕಟವಾಗುವವರೆಗೆ ಇದನ್ನು ಮುಂದುವರಿಸಿ.

(ನನಗೆ ಸುಸ್ತಾದಂತೆನಿಸುತ್ತಿದೆ - ಈ ಟೀಕೆ - ಟಿಪ್ಪಣಿಗಳನ್ನು ನಾಳೆ ಮುಂದುವರೆಸುವೆ)

ತಾರ್ಕುಂಡೆ ಇಂದು ಬಂದಿದ್ದರು. ಗಮನಿಸಬೇಕಾದ ಅಂಶಗಳು ಹಾಗೂ ಮಂಡಿಸಬಯಸುವ ಅಭಿಪ್ರಾಯಗಳು ನಾಳೆ.

ಸೆಪ್ಟೆಂಬರ್ 21

ಅಂತೂ, ಹೊಸದೆಹಲಿಯ ಆ ಭಯಭೀತ ಹೆಂಗಸಿನ ಪ್ರಕಾರ ನಾವೆಲ್ಲಾ - ಶ್ರೀ ಮೊರಾರ್ಜಿ ದೇಸಾಯಿ, ಅಶೋಕ ಮೆಹ್ತಾ, ಶ್ರೀ ಅಟಲಬಿಹಾರಿ ವಾಜಪೇಯಿ, ಶ್ರೀ ಚಂದ್ರಶೇಖರ್, ಶ್ರೀ ರಾಮಧನ್ ಹಾಗೂ ಇನ್ನೂ ಹಲವಾರು ಮಂದಿ - ಶ್ರೀಮತಿ ಗಾಂಧಿ, ಆಕೆಯ ಕುಟುಂಬ, ಮುಖ್ಯಮಂತ್ರಿಗಳು ಹಾಗೂ ಆಕೆಯ ಇತರ ಬೆಂಬಲಿಗರನ್ನು ಮುಗಿಸಿಬಿಡಲು ಯೋಜನೆ ಮಾಡಿಕೊಂಡಿದ್ದೆವು. ಇದನ್ನು ಹೇಗೆ ಮಾಡಲಾಗುತ್ತಿತ್ತು ಮತ್ತು ಮುಗಿಸಿಬಿಡುವುದು ಎಂಬುದರ ನಿಖರ ಅರ್ಥ ಏನು ಎಂಬುದನ್ನು ಮಾತ್ರ ಆಕೆ ಸ್ಪಷ್ಟವಾಗಿ ಹೇಳುವುದಿಲ್ಲ. ಶ್ರೀಮತಿ ಗಾಂಧಿಯನ್ನು

ನಾನು 'ಹೊಸದೆಹಲಿಯ ಭಯಭೀತ ಹೆಂಗಸು' ಎಂದು ಕರೆದಿದ್ದೇನೆ. ಹೌದು, ಆಕೆ - ತನ್ನ ಕುಯುಕ್ತಿಗಳ ಫಲವಾಗಿಯೇ - ತನ್ನ ವಿರುದ್ಧ ಬಲಗೊಳ್ಳುತ್ತಿದ್ದ ಸಾರ್ವಜನಿಕ ಅಭಿಪ್ರಾಯಗಳನ್ನು ಕುರಿತು ಭಯಭೀತಳೇ ಆಗಿದ್ದಾಳೆ. ಮುಂದಿನ ಚುನಾವಣೆಗಳಲ್ಲಿ ಸೋಲುವ ಸಂದೇಹ ಆಕೆಗುಂಟಾಯಿತು; ಆದುದರಿಂದಲೇ ಆಕೆಗಾಗಿ ಮಾರ್ಗೋಪಾಯವೊಂದನ್ನು ರೂಪಿಸಲಾಯಿತು - ರೂಪಿಸಿದವರಾರು ಎಂಬುದು ಇನ್ನೂ ರಹಸ್ಯವಾಗಿಯೇ ಉಳಿದಿದೆ. ಇರಲಿ, ಈ ಬಗ್ಗೆ ಮುಂದೆ ವಿವರವಾಗಿ ಯೋಚಿಸುವಾ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ತನ್ನ ಹಾಗೂ ತನ್ನ ಕುಟುಂಬವನ್ನು ಮುಗಿಸಿಬಿಡುವ ವಿರೋಧ ಪಕ್ಷಗಳ ನೀಚ ಯೋಚನೆಯ ಬಗ್ಗೆ ಜಾತ್ಯಾತೀತತೆ, ಸಮಾಜವಾದ ಹಾಗೂ ಪ್ರಜಾಪ್ರಭುತ್ವ ಬೋಧಕರಿಗೆ ಶ್ರೀಮತಿ ಗಾಂಧಿ ಹೇಳಿದ್ದು ಭಯದಿಂದಲ್ಲ; ಅದು, ಭಾರತದ ಜನತೆಯನ್ನು ಮತ್ತು ಸುಳ್ಳು ಸುದ್ದಿಗಳನ್ನೇ ತಿಳಿದಿರುವ ವಿಶ್ವದ ಜನತೆಯನ್ನು ತಪ್ಪು ಹಾದಿಗೆ ಎಳೆಯುವ ಉದ್ದೇಶವುಳ್ಳ ಆಕೆಯ ಯೋಜನೆಯ ಒಂದು ಭಾಗವಷ್ಟೆ. ಪ್ರಜಾಪ್ರಭುತ್ವದ ನಿಗ್ರಹವನ್ನು ಸಮರ್ಥಿಸಲು ಉದ್ದೇಶಪೂರ್ವಕವಾಗಿಯೇ ಈ ಸುಳ್ಳನ್ನು ಹೇಳಲಾಯಿತು. ಕಾಲಕಳೆದಂತೆ ಆಕೆ ಇನ್ನೂ ದೊಡ್ಡ ದೊಡ್ಡ ಸುಳ್ಳುಗಳನ್ನೇ ಹೇಳುವ ಧೈರ್ಯ ಮಾಡಬಹುದು. ಮೊದಲಾಗಿ, ಆಕೆಗೆ ಪ್ರತ್ಯುತ್ತರ ಕೊಡುವವರೇ ಇಲ್ಲವಲ್ಲ ; ಇದ್ದರೂ, ಗುಪ್ತವಾಗಿ ಪ್ರಕಟಿಸಬಹುದಾದ, ಆದರೆ ಹೆಚ್ಚು ಜನರನ್ನು ತಲುಪದ ಕರಪತ್ರಗಳ ಹೊರತಾಗಿ, ಅದನ್ನು ಪ್ರಕಟಪಡಿಸುವ ಮತ್ತಾವ ದಾರಿಯೂ ಇಲ್ಲದಾಗಿದೆ.

ಶ್ರೀಮತಿ ಗಾಂಧಿಯ ಏಕಪಕ್ಷೀಯ ಪ್ರಚಾರ, ಈಗಾಗಲೇ ಹೇಗೆ ತನ್ನ ಪರಿಣಾಮ ಉಂಟುಮಾಡುತ್ತಿದೆ ಎಂಬುದನ್ನು ತಾರ್ಕುಂಡೆಯವರು ನಿನ್ನೆ ನನಗೆ ತಿಳಿಸಿದರು. ಮುಂಬೈನ 'ಬುದ್ಧಿಜೀವಿಗಳು' ಈಗಾಗಲೇ ತಲೆಯಾಡಿಸುತ್ತಾ 'ಏನಾದರೂ ಹೇಳಿ, ಈಗ ಹೆಚ್ಚಿನ ಶಿಸ್ತು ಕಾಣಬರುತ್ತಿದೆ ; ವಿರೋಧ ಪಕ್ಷಗಳು ಖಂಡಿತವಾಗಿಯೂ ಮಿತಿಮೀರಿ ಹೋಗಿದ್ದವು' ಎಂದು ಹೇಳಲಾರಂಭಿಸಿದ್ದಾರಂತೆ. ಹೀಗೆ, ಬುದ್ಧಿಜೀವಿಗಳ ವಿಶ್ವಾಸದ್ರೋಹ ಆರಂಭವಾದಂತಾಗಿದೆ. ಮುಳುಗುವ ಹಡಗಿನಿಂದ ಹೆಗ್ಗಣಗಳು ಹೊರಹಾರಲಾರಂಭಿಸಿವೆ!

ಇನ್ನು 'ಬೋಧಕರ' ಸಮ್ಮೇಳನದಲ್ಲಿ ಶ್ರೀಮತಿ ಗಾಂಧಿ ವಹಿಸಿದ ಪಾತ್ರದ ಕಡೆ ತಿರುಗೋಣ. 'ಹಿಂದೂಸ್ತಾನ್ ಟೈಮ್ಸ್'ನಲ್ಲಿ (ಸೆಪ್ಟೆಂಬರ್ 20) ವರದಿಯಾಗಿರುವ ಆಕೆಯ ಭಾಷಣದ ಕೆಲವು ಭಾಗಗಳನ್ನು ನೋಡೋಣ.

ತುರ್ತುಪರಿಸ್ಥಿತಿಯನ್ನು ಘೋಷಿಸಿದ ಶ್ರೀಮತಿ ಗಾಂಧಿಯ ಕ್ರಮವು, ಅಲಹಾಬಾದ್ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟಿನಲ್ಲಿ ಸಲ್ಲಿಸಲಾಗಿದ್ದ ಮನವಿಯ ತೀರ್ಮಾನವಾಗುವವರೆಗೂ, ಆಕೆ ಪ್ರಧಾನಮಂತ್ರಿ ಸ್ಥಾನದಿಂದ

ಕೆಳಗಿಳಿಯಬೇಕು ಮತ್ತು ಆಕೆ ಹಾಗೆ ಮಾಡುವಂತೆ ಒತ್ತಾಯಿಸಲು ಆಕೆಯ ಮನೆಗೆ (ಅಥವಾ ಅವಕಾಶವಿರುವಷ್ಟು ಹತ್ತಿರಕ್ಕೆ) ಪ್ರದರ್ಶನ ಹೋಗಲು - ಆ ಮೂಲಕ ನಾಗರಿಕ ಅಸಹಕಾರ ಘೋಷಿಸಲು - ಕೆಲವು ಸತ್ಯಾಗ್ರಹಿಗಳನ್ನು ಸಿದ್ಧಪಡಿಸುವ ಜೂನ್ 25ರ ನಿರ್ಧಾರಕ್ಕೆ ತತ್‌ಕ್ಷಣದ ಪ್ರತಿಕ್ರಿಯೆಯಾಗಿ ಮಾತ್ರ ಬರಲಿಲ್ಲ ಎಂಬುದೇ ನನ್ನ ಊಹೆಯಾಗಿದೆ.* ಅದನ್ನು ಈ ಮುನ್ನ ವ್ಯಕ್ತಪಡಿಸಿಯೂ ಇದ್ದೇನೆ. ಇಡೀ ಯೋಜನೆಯನ್ನು - ನಾನು ಈ ಹಿಂದೆ ಶಂಕಿಸದಂತೆ - ಬಹಳ ಮುಂಚೆಯೇ ಯೋಚಿಸಿ, ವಿವರವಾಗಿ ಸಿದ್ಧಪಡಿಸಲಾಗಿತ್ತು. ಜೂನ್ 25ರ ನಿರ್ಣಯ, ಒಂದೇ ಬೀಸಿಗೆ ಭಾರತೀಯ ಪ್ರಜಾಪ್ರಭುತ್ವದ ನೆತ್ತಿಯ ಮೇಲೆ ಬಿದ್ದ ಪ್ರಹಾರಕ್ಕೆ ಕಾಲ ಕೂಡಿಸಿಕೊಟ್ಟಿರಬಹುದಷ್ಟೆ. ಜನತೆ ಅಥವಾ ಮತದಾರರು ಏನಾದರೂ ಅಂದುಕೊಂಡಿರಲಿ ಅಥವಾ ಬಯಸಲಿ, ಶ್ರೀಮತಿ ಗಾಂಧಿ ಹಾಗೂ ಕಾಂಗ್ರೆಸ್ ಮತ್ತು ಭಾರತೀಯ ಕಮ್ಯೂನಿಸ್ಟ್ ಪಕ್ಷದೊಳಗಿನ ಆಕೆಯ ಬೆಂಬಲಿಗರು ಅಧಿಕಾರ ಕಳಕೊಳ್ಳದಂತೆ ಖಚಿತಪಡಿಸಿಕೊಳ್ಳಲೆಂದೇ ಯೋಜನೆಯನ್ನು ರೂಪಿಸಲಾಗಿತ್ತು ಎಂಬುದಂತೂ ನಿಸ್ಸಂದೇಹ. ಇದನ್ನು ಗುರಿಯಾಗಿಟ್ಟುಕೊಂಡು, ಆ ಗುರಿ ತಲುಪಲು ಅನುಸರಿಸಬೇಕಾದ ವಿಧಿ ವಿಧಾನಗಳನ್ನು ಎಚ್ಚರಿಕೆಯಿಂದ ಬಹಳ ಮುಂಚೆಯೇ ಸಿದ್ಧಪಡಿಸಲಾಗಿತ್ತು. ಬಿಹಾರ ಆಂದೋಲನ ಹಾಗೂ 25ರಂದು ಸಾರ್ವಜನಿಕ ಸಭೆಯಲ್ಲಿ ಪ್ರಕಟಿಸಲಾದ ಒಂದು ವಾರದ ದೆಹಲಿ ಸತ್ಯಾಗ್ರಹ, ಆಕೆಯ ಕ್ರಮಕ್ಕೆ ಕೇವಲ ನೆಪಗಳಾದವಷ್ಟೆ. ಆಕೆ ಹೇಳಿದಳೆಂದು ವರದಿಯಾಗಿರುವುದು ಹೀಗಿದೆ :

'ನಾವು ದಾರಿ ತಪ್ಪಿಲ್ಲ' ಎಂದು ಸ್ಪಷ್ಟಪಡಿಸಿದ ಅವರು, ತೀವ್ರ ಆಲೋಚನೆ ಹಾಗೂ ಸಮಾಲೋಚನೆ ನಡೆಸಿದ ನಂತರವೇ ಮತ್ತು ಇತರ ಯಾವುದೇ ಸಾಧ್ಯ ಕ್ರಮವನ್ನು ಪರಿಶೀಲಿಸಿದ ನಂತರವೇ ನಾವು ಆ ಹಾದಿಯನ್ನು ಅನುಸರಿಸಬೇಕಾಯಿತು - ಎಂದು ತಿಳಿಸಿದರು. ('ಹಿಂದೂಸ್ತಾನ್ ಟೈಮ್ಸ್', ಸೆಪ್ಟೆಂಬರ್ 20)

ಪ್ರಶ್ನೆ ಎಂದರೆ ಈ ಯೋಜನೆಯನ್ನು ಎಲ್ಲಿ ರೂಪಿಸಲಾಯಿತು? ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಂತೂ ಅಲ್ಲ, ಹಾಗಿದ್ದರೆ ಅದು ಗೊತ್ತಾಗಿರುತ್ತಿತ್ತು. ಹೋಗಲಿ, ನಂತರವಾದರೂ ಕಾರ್ಯಕಾರಿ ಸಮಿತಿ ಅದನ್ನು ಅಂಗೀಕರಿಸಿತೆ? ಹಾಗೇನೂ ಕಾಣುವುದಿಲ್ಲ, ಅಥವಾ ಸಚಿವ ಸಂಪುಟದ ರಾಜಕೀಯ ವ್ಯವಹಾರಗಳ ಸಮಿತಿಯಲ್ಲಿ ಇಲ್ಲವೇ 'ಆಂತರಿಕ ಸಚಿವ ಸಂಪುಟ'ದಲ್ಲಿ (ಇದರಲ್ಲಿ ಯಾರಿದ್ದಾರೆ ಎಂಬುದು ಯಾರಿಗೂ ಗೊತ್ತಿಲ್ಲ) ರೂಪಿಸಲಾಯಿತೆ? ಇಲ್ಲ ಎನಿಸುತ್ತದೆ. ಈಯೋಜನೆಯ ತೀವ್ರತೆ, ವ್ಯಾಪ್ತಿ ಮತ್ತು ಉದ್ದೇಶಗಳ ಬಗ್ಗೆ ಗೃಹಮಂತ್ರಿಗೇನಾದರೂ ಗೊತ್ತಿತ್ತೇ? ಇದಕ್ಕೆ ಕೂಡಾ ಉತ್ತರ 'ಇಲ್ಲ' ಎಂದೇ ಕಾಣುತ್ತದೆ. ಸಹಜವಾಗಿ, ಇದನ್ನು -

---

*** ಈ ಊಹೆ ನಿಜವಾದದ್ದು ಎಂಬುದು ಇತ್ತೀಚೆಗೆ ಬಹಿರಂಗವಾಗಿರುವ ಇಂದಿರಾಗಾಂಧಿ-ಸಿದ್ಧಾರ್ಥ ಶಂಕರ ರೇ ನಡುವಣ ಪತ್ರವ್ಯವಹಾರದಿಂದ ಸಾಬೀತಾಗಿದೆ -ಅನುವಾದಕ**

ಖಂಡಿತ ಎಂದೇ ಹೇಳಬಹುದಾದ - ಸೋವಿಯತ್ ಪರ ಸದಸ್ಯರಿಂದ ಕೂಡಿದ ಪ್ರಧಾನಮಂತ್ರಿಯ ನಿಕಟವರ್ತಿಗಳ ರಹಸ್ಯ ಸಭೆಯೊಂದರಲ್ಲೇ ರೂಪಿಸಬಹುದು. ಇವರಲ್ಲಿ ಒಬ್ಬರಿಬ್ಬರು ಸೋವಿಯತ್ ರಾಯಭಾರಿ ಕಚೇರಿಯಲ್ಲಿನ ಭಾರತೀಯ ವಿಭಾಗದೊಂದಿಗೆ ಒಂದು ರೀತಿಯ ನಿಕಟ ಸಂಬಂಧ ಮತ್ತು ನಿರಂತರ ಸಂಪರ್ಕ ಹೊಂದಿದವರಿರಬೇಕು. ಒಂದಲ್ಲ ಒಂದು ದಿನ ಈ ಗುಟ್ಟು ಹೊರಬೀಳುವುದು ಖಂಡಿತ ; ಆದರೆ ಎಂದು ಎಂಬುದು ಈ ನನ್ನ ಊಹೆಯಷ್ಟೆ ಅಸ್ಪಷ್ಟ.

ವರದಿಯ ಮತ್ತೊಂದು ಭಾಗ ಹೀಗಿದೆ : 'ಪ್ರಜಾಪ್ರಭುತ್ವ ಅಂತಿಮವಾಗಿ ಜನತೆಯ ಧ್ವನಿಯಾಗಿರುತ್ತದೆ. ನಾವು ಜನತೆಯ ಬಾಯಿ ಮುಚ್ಚಿಲ್ಲ. ಕೆಲವೇ ಜನ ಮಾತ್ರ ಬಂಧನದಲ್ಲಿದ್ದಾರೆ. ಈಗಲೂ ಕೂಡಾ ಕೆಲವು ವಿರೋಧಪಕ್ಷಗಳ ಸದಸ್ಯರು ಸತ್ಯಾಗ್ರಹ ಮುಂತಾದ್ದನ್ನು ನಡೆಸಿದ್ದಾರೆ' ಎಂದು ಶ್ರೀಮತಿ ಗಾಂಧಿ ತಿಳಿಸಿದರು.

ತಾವು ವಿರೋಧ'ಪಕ್ಷ, ಸತ್ಯಾಗ್ರಹ ಅಥವಾ ಟೀಕೆಗಳನ್ನು ವಿರೋಧಿಸುವುದಿಲ್ಲವೆಂದು ಶ್ರೀಮತಿ ಗಾಂಧಿ ಹೇಳಿದರು. ಆದರೆ ಕೆಲವೇ ಅಲ್ಪಸಂಖ್ಯಾತ ಜನರು ಬಹುಸಂಖ್ಯಾತ ಜನರ ಬಾಯಿ ಮುಚ್ಚಿಸಲು ನಡೆಸುತ್ತಿರುವ ಯತ್ನವನ್ನು ವಿರೋಧಿಸುವುದಾಗಿ ಅವರು ತಿಳಿಸಿದರು.

ಕೆಲವೇ ಅಲ್ಪಸಂಖ್ಯಾತ ಜನರು ಹೇಗೆ ಬಹುಸಂಖ್ಯಾತರ ಬಾಯಿ ಮುಚ್ಚಲು ಪ್ರಯತ್ನಿಸುತ್ತಿದ್ದಾರೆ ಎಂಬುದನ್ನು ಆಕೆ ಸ್ಪಷ್ಟಪಡಿಸಿಲ್ಲ. ಈ ತರಹದ ಕೆಲಸವನ್ನು ಎಲ್ಲಿ ಮತ್ತು ಹೇಗೆ ಮಾಡಲಾಗಿದೆ? ಶಸ್ತ್ರ ಸಜ್ಜಿತವಾದ ಕೆಲವೇ ಅಲ್ಪಸಂಖ್ಯಾತ ಜನರು ಹೀಗೆ ಮಾಡಬಲ್ಲರು. ಅಥವಾ ಅಧಿಕಾರದಲ್ಲಿರುವ ಕೆಲವೇ ಅಲ್ಪಸಂಖ್ಯಾತರು ಹೀಗೆ ಮಾಡಬಲ್ಲರು. ಆದರೆ ಶಾಂತಿಯುತ ಆಂದೋಲನವೊಂದು ಹೇಗೆ ಈ ಕೆಲಸ ಮಾಡಬಲ್ಲದು? ಬಾಯಿ ಮುಚ್ಚಿಸುವುದು ಎಂದರೇನು? 1974ರ ನವೆಂಬರ್ 16ರಂದು ಪಟ್ನಾದಲ್ಲಿ ಕಾಂಗ್ರೆಸ್ ಪ್ರದರ್ಶನ ಹೇಗೆ ವಿಫಲಗೊಂಡಿತು - ಬಸ್ಸು, ರೈಲು, ಲಾರಿ ಹಾಗೂ ದೋಣಿಗಳಲ್ಲಿ ಮುಕ್ಕಟೆ ಪ್ರಯಾಣ ಒದಗಿಸಿದರೂ ಕೂಡಾ; ದಾರಿಯಲ್ಲಿ ಮುಕ್ಕಟೆ ಆಹಾರ, ಹೊಸ ಬಟ್ಟೆಗಳನ್ನು ಒದಗಿಸಿದರೂ ಕೂಡಾ! ಕಾಂಗ್ರೆಸ್ ಅಧಿಕಾರದ ಈ ರಾಜ್ಯದ ಇಡೀ ಆಡಳಿತ ವರ್ಗ, ಪ್ರದರ್ಶನವನ್ನು ಯಶಸ್ವಿಯಾಗಿಸಲು ತನ್ನೆಲ್ಲಾ ಪ್ರಯತ್ನಗಳನ್ನು ಮಾಡಿತು. ತಮ್ಮ ಪ್ರಚಂಡ ಮಿದುಳಿನ ಪ್ರಯೋಜನಗಳನ್ನು ಒದಗಿಸಲು ಮತ್ತು ಇಡೀ ಕಾರ್ಯಾಚರಣೆಯನ್ನು ಪರಿಶೀಲಿಸಲು ಶ್ರೀಮತಿ ಗಾಂಧಿಯ 'ಆಶ್ಚರ್ಯದ ಹುಡುಗ' ಶ್ರೀ ಬರೂವಾ ಅವರು ಪಟ್ನಾಕ್ಕೆ ಆಗಮಿಸಿದ್ದರು. ಅಂದು ಯಾರೊಬ್ಬರ 'ಬಾಯಿ ಮುಚ್ಚಿಸುವ' ಒಂದು ಘಟನೆಯಾದರೂ ವರದಿಯಾಯಿತೆ? ಪಟ್ನಾಕ್ಕೆ ಹೋಗಬಯಸಿದ ಯಾರೊಬ್ಬರನ್ನಾದರೂ ತಡೆದು ಪ್ರಕರಣ ಒಂದಾದರೂ ಇದೆಯೇ? ನವೆಂಬರ್ 18ರಂದು ನಡೆದ ಸಾರ್ವಜನಿಕ ಸಭೆಯು ಮುನ್ನ ಏನಾಯಿತು? ಅದು, ಕೆಲವೇ ಅಲ್ಪಸಂಖ್ಯಾತರು ಬಹುಸಂಖ್ಯಾತರ ಬಾಯಿ ಮುಚ್ಚಿಸಲೆತ್ನಿಸಿದ ಘಟನೆಯಲ್ಲವೆ?

ವಿರೋಧ ಪಕ್ಷಗಳು ಈಗ ಕೂಡಾ ವ್ಯವಸ್ಥೆ ಮಾಡುತ್ತಿರುವ ಸತ್ಯಾಗ್ರಹಗಳ ಬಗ್ಗೆ ಶ್ರೀಮತಿ ಗಾಂಧಿ ಪ್ರಸ್ತಾಪ ಮಾಡಿರುವುದಾಗಿ ವರದಿಯಾಗಿದೆ. ಸರ್ವಾಧಿಕಾರೀ ಕ್ರೂರ ಆಡಳಿತದ ನಡುವೆಯೂ ಸತ್ಯಾಗ್ರಹ ನಡೆಯುತ್ತಿರುವ ಬಗ್ಗೆ ನಾನು ಇದೇ ಮೊದಲ ಬಾರಿಗೆ ಕೇಳಿರುವುದು. ಪತ್ರಿಕೆಗಳಲ್ಲಿ ಈ ಬಗ್ಗೆ ನಾನು ಏನೂ ಕಂಡಿಲ್ಲ. ಶ್ರೀಮತಿ ಗಾಂಧಿ ಈಗಲೂ ಸುಳ್ಳು ಹೇಳುತ್ತಿಲ್ಲವಾದರೆ, ಇದು ನಡೆಯುತ್ತಿರುವ ಬಗ್ಗೆ ನನಗಂತೂ ಬಹಳ ಸಂತೋಷವಾಗಿದೆ. ಇದರ ಅರ್ಥ ಬೆಂಕಿ ಇನ್ನೂ ಇದೆ, ಅದರ ಕಿಡಿಗಳು ಆಗೀಗ ಅಲ್ಲಿ ಇಲ್ಲಿ ಕಾಣಿಸಿಕೊಳ್ಳುತ್ತವೆ. ಗಾಂಧೀಜಿ ಸತ್ಯಾಗ್ರಹ ಚಳವಳಿಯಲ್ಲಿ ಆಗುತ್ತಿದ್ದುದ್ದೂ ಹೀಗೆಯೇ.

ಶ್ರೀಮತಿ ಗಾಂಧಿ ಹೇಳುತ್ತಾಳೆ: 'ನಾವು ಜನತೆಯ ಬಾಯಿ ಮುಚ್ಚಿಸಿಲ್ಲ, ಒಳ್ಳೆಯದು. ಊಟದ ರುಚಿ ಊಟಮಾಡಿದಾಗಲೇ ಗೊತ್ತಾಗುವುದು. 'ಪ್ರಜಾಪ್ರಭುತ್ವ ಅಂತಿಮವಾಗಿ, ಜನತೆಯ ಧ್ವನಿ' ಎಂದು ಆಕೆ ಹೇಳುತ್ತಿದ್ದಾಳೆ!

ಸರಿ, ಅತ್ಯಂತ ಸ್ಪಷ್ಟವಾಗಿಯೇ ವ್ಯಕ್ತವಾದ ಬಿಹಾರ ಜನತೆಯ ಧ್ವನಿಯನ್ನು ಆಕೆ ಕೇಳಲೇ ಇಲ್ಲ, ವಿಷಯವನ್ನು ಮುಂದಿನ ಚುನಾವಣೆಗಳಲ್ಲಿ ನಿರ್ಧರಿಸಬೇಕಾಗುತ್ತದೆ ಎಂದಾಕೆ ಹೇಳಿದಳು. ನಾನು ಈ ಸವಾಲನ್ನು ಒಪ್ಪಿಕೊಂಡೆ.

ಊಟದ ರುಚಿ ಗೊತ್ತಾಗಬೇಕಾದರೆ ಊಟವನ್ನೇಕೆ ಮಾಡಬೇಕು ಎಂದು ಕೇಳುವವರಿಗೆ ಉತ್ತರ ಸಿದ್ಧವಾಗುತ್ತಿದೆ. ಶ್ರೀಮತಿ ಗಾಂಧಿಯ ಸಿದ್ಧಾಂತದ ಪ್ರಕಾರ ಜನತೆಯ ಧ್ವನಿ ಚುನಾವಣೆಗಳಲ್ಲಿ ಮಾತ್ರ ವ್ಯಕ್ತವಾಗಬೇಕು ಮತ್ತು ವ್ಯಕ್ತವಾಗಬಲ್ಲದು. ಬೇರಾವ ಸಂದರ್ಭಗಳಲ್ಲೂ ಜನತೆಯ ಧ್ವನಿಗೆ ಬೆಲೆಯಿಲ್ಲ ಹಾಗೂ ಅವರಿಗೆ ದನಿ ಎತ್ತುವ ಹಕ್ಕೂ ಇಲ್ಲ. ಆದರೆ ಆಕೆಯ ಮನೆಗೆ ಸ್ವಪ್ರೇರಣೆಯಿಂದ ಗುಂಪು ಗುಂಪಾಗಿ ಬಂದು ಆಕೆ ರಾಜೀನಾಮೆ ಕೊಡಕೂಡದೆಂದೂ, ತಮ್ಮನ್ನು ಅನಾಥರನ್ನಾಗಿ ಬಿಟ್ಟು ಹೋಗಕೂಡದೆಂದೂ ಬೇಡಿಕೊಳ್ಳುವ 'ಜನತೆ'ಯ ಧ್ವನಿಗೆ ಮಾತ್ರ ಇದೆಲ್ಲಾ ಅನ್ವಯಿಸುವುದಿಲ್ಲ. ಅಂತಹ ಸಂದರ್ಭದಲ್ಲಿ ಜನತೆಯ ಧ್ವನಿಗೆ ಅತಿ ಹೆಚ್ಚಿನ ಬೆಲೆಯಿದೆ ಮತ್ತು ಆ ಧ್ವನಿಯನ್ನು ಕೇಳಿಸಿಕೊಳ್ಳಬೇಕು ಮತ್ತು ಅದನ್ನು ಪಾಲಿಸಬೇಕು! ಓ ಎಂತಹ ಕಪಟ, ಎಂತಹ ಬೂಟಾಟಿಕೆ!

ಲೋಕಸಭಾ ಚುನಾವಣೆಗಳು ಮುಂದಿನ ವರ್ಷದ ಮೊದಲ ಭಾಗದಲ್ಲಿ ನಡೆಯಬೇಕಾಗಿವೆ. ಜನತೆಯ ಧ್ವನಿಯನ್ನು ಅವರ ಒಳಿತಿಗಾಗಿಯೇ ಚಿವುಟಿ ಹಾಕಲಾಗುವುದೋ ಅಥವಾ ಮತದಾನದ ಮೂಲಕ ವ್ಯಕ್ತಪಡಿಸಲು ಅವಕಾಶಮಾಡಿಕೊಡಲಾಗುವುದೋ ನೋಡೋಣ.

'ಟ್ರಿಬ್ಯೂನ್'ನ ಮುಖಪುಟದಲ್ಲಿ '...ಬೋಧಕರ ಮೊಟ್ಟಮೊದಲ ಸಮ್ಮೇಳನ'ದ ಆರಂಭಿಕ ಸಮಾವೇಶದ ಚಿತ್ರವೊಂದು ಪ್ರಕಟವಾಗಿದೆ. ನನ್ನ ಗೆಳೆಯ ಡಾ. ಕೆ.ಎಲ್.

ಶ್ರೀಮಾಲಿ ಶ್ರೀಮತಿ ಗಾಂಧಿಯ ಪಕ್ಕದಲ್ಲಿ ಕುಳಿತಿದ್ದಾರೆ. ಶ್ರೀಮಾಲಿಯವರ ಮುಖದ ಮೇಲೆ ಉನ್ನತ ಸ್ಥಾನಕ್ಕೆ ಮತ್ತೆ ಖಚಿತವಾಗಿ 'ಬಂದ' ಹೆಮ್ಮೆಯ ಛಾಯೆ ಮೂಡಿದೆ. ಆ ಕ್ಷಣದಲ್ಲಿ ನನಗೆ ಕಾಮರಾಜ್ ಯೋಜನೆಯ ಪ್ರಕಾರ ಇವರನ್ನು ನೆಹರೂ ತಮ್ಮ ಸಚಿವ ಸಂಪುಟದಿಂದ ಕೈಬಿಡಬೇಕಾಗಿ ಬಂದಾಗ (ಆಗ ಇವರು ಶಿಕ್ಷಣ ಖಾತೆಯ ಸಹಾಯಕ ಸಚಿವರಾಗಿದ್ದರು) ಇವರ ಮುಖದಲ್ಲಿ ಮೂಡಿದ್ದ ನಿರಾಸೆ, ಹತಾಶೆಯ ಛಾಯೆ ನೆನಪಿಗೆ ಬಂದಿತು. ಶ್ರೀಮಾಲಿಯವರ ಪ್ರಕಾರ ಇದಕ್ಕೆ (ಸಚಿವ ಸಂಪುಟದಿಂದ ತಮ್ಮನ್ನು ಕೈಬಿಟ್ಟದ್ದಕ್ಕೆ) ಕಾರಣ, ಆಗ ಶ್ರೀಮತಿ ಗಾಂಧಿ ವೈಯಕ್ತಿಕ ಆಸಕ್ತಿ ಇರಿಸಿದ್ದ ಧೀರೇಂದ್ರ ಬ್ರಹ್ಮಾಚಾರಿ ಹಾಗೂ ಆತನ ಯೋಗಾಶ್ರಮಕ್ಕೆ ಸಂಬಂಧಿಸಿದ್ದು. ಈ ಆಶ್ರಮಕ್ಕೆ ನೀಡಲು ನಿರೀಕ್ಷಿಸಲಾಗಿದ್ದ ಧನಸಹಾಯವನ್ನು ತಾವು ನೀಡಲು ನಿರಾಕರಿಸಿದ್ದರಿಂದ ಶ್ರೀಮತಿ ಗಾಂಧಿ ಕೋಪಗೊಂಡು ಈ ಬಗ್ಗೆ ನೆಹರೂ ಅವರಿಗೆ ತಿಳಿಸಿ ಸಂಪುಟ ಪುನಾರಚನೆಯ ಸಮಯದಲ್ಲಿ ತಮ್ಮನ್ನು ಕೈಬಿಡುವಂತೆ ಮಾಡಿದಳು ಎಂದು ಶ್ರೀಮಾಲಿ ಆಗ ತಿಳಿಸಿದ್ದರು. ಶ್ರೀಮಾಲಿಯವರೇ ಹೇಳಿದಂತೆ, ನೆಹರೂ ಸ್ವತಃ ಡಾ. ಕೆ.ಜಿ. ಸೈಯದ್ಯಾನ್[41] ಅವರನ್ನು, ಆಶ್ರಮಕ್ಕೆ ನೀಡುವ ಧನಸಹಾಯದ ಬಗ್ಗೆ ಮನವೊಲಿಸಲು ಶ್ರೀಮಾಲಿಯವರ ಬಳಿಗೆ ಕಳಿಸಿದ್ದರು. ಆದರೆ ಆ ಆಶ್ರಮಕ್ಕೆ ಆ ಮುನ್ನ ನೀಡಿದ್ದ ಹಣಕ್ಕೆ ಸರಿಯಾದ ಲೆಕ್ಕ ಇಟ್ಟಿಲ್ಲವಾದ್ದರಿಂದ ಅದು ಸಹಾಯಕ್ಕೆ ಅನರ್ಹ ಎಂಬ ತಮ್ಮ ನಿಲುವಿಗೇ ಶ್ರೀಮಾಲಿ ಅಂಟಿಕೊಂಡರಂತೆ. ಆಗ ಅವರು ಶಿಕ್ಷಣ ರಂಗದ ಆರೋಗ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನೂ ಎತ್ತಿದ್ದರು. ಒಟ್ಟಿನಲ್ಲಿ ಇದು ಶಿಕ್ಷಣಮಂತ್ರಿಯವರ ಪದಚ್ಯುತಿಯಲ್ಲಿ ಕೊನೆಗೊಂಡಿತ್ತು. ಆಗ ಅವರೆಷ್ಟು ಸಿಟ್ಟಿಗೆದ್ದಿದ್ದರು ಮತ್ತು ಎಂತಹ ಟೀಕೆಗಳ ಸುರಿಮಳೆಯನ್ನೇ ಸುರಿಸಿದ್ದರು! ಈಗ ಇದೇ ಉಪಕುಲಪತಿಯ ಮುಖದ ಮೇಲೆ ತಾಂಡವಾಡುತ್ತಿರುವ ಚಿದಾನಂದವನ್ನು ನೋಡಿ! ಮನುಷ್ಯರು ಹೇಗೆ ಬದಲಾಗುತ್ತಾರೆ!

ಸೆಪ್ಟೆಂಬರ್ 24

ಬರ್ಟ್ರಾಂಡ್ ರಸೆಲ್ಲರ ಆತ್ಮಚರಿತ್ರೆಯ ಮೂರನೇ ಸಂಪುಟವನ್ನು ಓದಿ ಮುಗಿಸಿದ್ದೇನೆ. ಈ ಸಂಪುಟದಲ್ಲಿ ಮೂಡಿಬಂದಿರುವ ಮನುಷ್ಯನ ಚಿತ್ರ ಬಹಳ ಆಕರ್ಷಕ, ಪ್ರೀತಿಪಾತ್ರ ಹಾಗೂ ಘನವಾಗಿದೆ. ಯಾರೋ ಒಬ್ಬರು ಈತನನ್ನು 'ನಾಗರಿಕತೆಯ ಒಂದು ಆಭರಣ' ಎಂದು ವರ್ಣಿಸಿದ್ದಾರೆ. ಇದೊಂದು ಸುಂದರ ವರ್ಣನೆ. ನನಗೆ ಬರ್ಟ್ರಾಂಡ್ ರಸೆಲ್ ಮಾನವೀಯತೆಯ ಆಭರಣವಾಗಿ ಕಾಣುತ್ತಾನೆ.

---

41. ಆಗ ಭಾರತ ಸರ್ಕಾರಕ್ಕೆ ಶೈಕ್ಷಣಿಕ ಸಲಹಾಕಾರರಾಗಿದ್ದರು. ಶಿಕ್ಷಣ ಆಯೋಗದ ಸದಸ್ಯರೂ ಆಗಿದ್ದರು.

ಇಂತಹ ಬರ್ಟ್ರಾಂಡ್ ರಸೆಲ್‌ಗಳಿಗೆ ಆಗಾಗ್ಗೆ - ಶತಮಾನಗಳಿಗೊಮ್ಮೆಯಾದರೂ - ಜನ್ಮ ನೀಡುವ ಈ ಜನಾಂಗಕ್ಕೆ ಭವಿಷ್ಯವಿದ್ದೇ ಇದೆ.

ಈ ಸಂಪುಟದ ಕೊನೆಯಲ್ಲಿರುವ ಟಿಪ್ಪಣಿ ನಿಜವಾಗಿಯೂ ಹೃದಯಸ್ಪರ್ಶಿಯಾಗಿದೆ. ಕೊನೆಯ ಮಾತುಗಳು ಪ್ರಬುದ್ಧಮಯ ರಸೆಲ್‌ರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ:

'ಜೀವನದಲ್ಲಿ ನಾವು ತಾಳಬಹುದಾದ ಎರಡು ದೃಷ್ಟಿಗಳಿವೆ ಎಂದು ನನಗನ್ನಿಸುತ್ತದೆ. ಒಂದು ವೈಯಕ್ತಿಕ: ಉತ್ತಮ ಆದರ್ಶಗಳಿಗೆ, ಸೌಂದರ್ಯಕ್ಕೆ, ಸೌಜನ್ಯತೆಗೆ ಬೆಲೆಕೊಡುವುದು; ನಿರ್ಣಾಯಕ ಸಮಯದಲ್ಲಿ ವಿವೇಕ ಪಡೆಯಲು, ಆಲೋಚನೆ ಮಾಡುವ ತಾಳ್ಮೆವಹಿಸುವುದು. ಎರಡನೆಯದು, ಸಾಮಾಜಿಕ : ವ್ಯಕ್ತಿ ಮುಕ್ತ ವಾತಾವರಣದಲ್ಲಿ ಬೆಳೆಯಬಲ್ಲ ದ್ವೇಷ, ದುರಾಶೆ ಹಾಗೂ ಈರ್ಷ್ಯೆಗಳು ಪೂರಕ ಶಕ್ತಿಗಳಿಲ್ಲದೆ ನಶಿಸಬಲ್ಲ ಸಮಾಜ ನಿರ್ಮಾಣವನ್ನು ಕಲ್ಪಿಸಿಕೊಳ್ಳುವುದು. ಪ್ರಪಂಚ ಭಯಾನಕವಾಗಿ ಕಂಡರೂ, ಭರವಸೆ ಕಳೆದುಕೊಂಡಿಲ್ಲ.

ಭವಿಷ್ಯದ ಬಗ್ಗೆ ಎಂತಹ ಕಲ್ಪನೆ, ಎಂತಹ ವಿಶ್ವಾಸ!

ಸೆಪ್ಟೆಂಬರ್ 25

ಇದು ಅತ್ಯಂತ ಹರ್ಷದ ದಿನವಾಗಿತ್ತು. ಸಂತೋಷಜನಕ ಆಶ್ಚರ್ಯದ ಅಪೂರ್ವ ದಿನ ಇಂದು. ಸುಗತಾ[42] ಇದ್ದಕ್ಕಿದ್ದಂತೆ ಬಾಗಿಲ ಬಳಿ ಪ್ರತ್ಯಕ್ಷರಾಗಿದ್ದರು. ಅವರ ಹಿಂದೆ ಡೆಪ್ಯುಟಿ ಕಮೀಷನರೂ ಬಂದಿದ್ದರು. ನಾನು ಸುಗತಾರನ್ನು ತಬ್ಬಿಕೊಂಡು 'ಹೇಗೆ ಬಂದಿರಿ?' ಎಂದು ಕೇಳಿದೆ. ಅವರು ದೆಹಲಿಯಲ್ಲಿ ನಡೆದ ಯು.ಜಿ.ಸಿ.[43] ಸಭೆಯಲ್ಲಿ ಪಿ.ಎನ್. ಧರ್ ಅವರನ್ನು ಭೇಟಿಯಾಗಿದ್ದರಂತೆ. ಪರಸ್ಪರ ಸಂಭಾಷಣೆಯ ನಡುವೆ, ನನ್ನನ್ನು ಕಾಣಲು ತಾವು ಆತುರದಿಂದಿರುವುದಾಗಿ ತಿಳಿಸಿದರಂತೆ. ಧರ್ ಅವರು, 'ಅದಕ್ಕೇನಂತೆ ಹೋಗಿ ನೋಡಿ' ಎಂದರಂತೆ. ಅದಕ್ಕೇನಾದರೂ ಕಾಲಾವಧಿಯ ನಿರ್ಬಂಧವಿದೆಯೇ ಎಂದು ಸುಗತಾ ಕೇಳಿದರು. ಇಷ್ಟಬಂದಷ್ಟು ಕಾಲ ಮಾತನಾಡಬಹುದೆಂದು ಧರ್ ತಿಳಿಸಿದರು. ಧರ್ ಕೃಪೆ ಮಾಡಿದರು. ನಾನು ಕೃತಜ್ಞತೆ ಸೂಚಿಸಿದ್ದಾಗಿ ಧರ್‌ಗೆ ತಿಳಿಸುವಂತೆ ಸುಗತಾರಿಗೆ ಹೇಳಿದೆ. ಆದರೆ ಅಯ್ಯೋ! ನನ್ನ ದೃಷ್ಟಿಯಲ್ಲಿ ಧರ್ ದುಷ್ಟರ ಗುಂಪಿಗೆ ಸೇರಿದವರಾದ್ದಾರೆ! ಸುಗತಾ ಸಂಜೆ ಎರಡನೇ ಬಾರಿ ಬಂದಿದ್ದರು. ನಮ್ಮ ಭೇಟಿಯುದ್ದಕ್ಕೂ ಡೆಪ್ಯೂಟಿ ಕಮಿಷನರ್ ಹಾಜರಿದ್ದರು.

---

42. ಶ್ರೀ ಸುಗತ ದಾಸ್‌ಗುಪ್ತ ಅವರು ವಾರಾಣಸಿಯಲ್ಲಿ ಜೆ.ಪಿ. ಸ್ಥಾಪಿಸಿದ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕರು.
43. ವಿಶ್ವವಿದ್ಯಾಲಯ ಧನಸಹಾಯ ಮಂಡಳಿ.

ಸೆಪ್ಟೆಂಬರ್ 26

ಇಂದು ನನ್ನ ಸ್ಥಾನಬದ್ಧತೆಯ ಮೂರು ತಿಂಗಳುಗಳು ಮುಗಿದವು. ಈಗ ದಿನಗಳು ಸುಮಾರಾಗಿ ಬೇಗ ಕಳೆದಂತೆ ಕಾಣುತ್ತಿದೆ. ಆದರೂ ಜತೆಯಲ್ಲಿ ಯಾರೂ ಇರದೆ, ಕೆಲವೊಮ್ಮೆ ಕಾಲ ಅಚಲವಾದಂತೆನಿಸುತ್ತದೆ. ಇರಲಿ, ಸರ್ವಾಧಿಕಾರದ ಪೂರ್ಣ ಹಿಡಿತವನ್ನು ತಡೆಯಲಾಗಿದೆ ಎಂದೆನಿಸುತ್ತಿದೆ. ಇದು ತಾತ್ಕಾಲಿಕವಾದದ್ದೋ ಶಾಶ್ವತವಾದದ್ದೋ ಈಗಲೇ ಹೇಳಲಾಗುವುದಿಲ್ಲ. ತಾವು ಹೋದ ಕಡೆಗಳೆಲ್ಲೆಲ್ಲಾ, ಮುಂದಿನ ವರ್ಷ ಸಂಸದೀಯ ಚುನಾವಣೆಗಳನ್ನು ನಡೆಸಲಾಗುವುದು ಎಂಬ ಸಾಮಾನ್ಯ ನಿರೀಕ್ಷೆ ವ್ಯಕ್ತವಾಗುತ್ತಿತ್ತೆಂದು ನಿನ್ನೆ ಸುಗತಾ ತಿಳಿಸಿದರು. ಅವು ನಡೆದರೆ, ಪ್ರಜಾಪ್ರಭುತ್ವ ಮರಳುವುದಂತೂ ಖಂಡಿತ. ತುರ್ತುಪರಿಸ್ಥಿತಿಯನ್ನು ರದ್ದುಮಾಡದಿದ್ದರೂ, ಪತ್ರಿಕಾ ಸ್ವಾತಂತ್ರ್ಯವನ್ನು ಪೂರ್ಣವಾಗಿ ಪುನರ್‌ಸ್ಥಾಪಿಸದಿದ್ದರೂ, ಬಂಧಿತರನ್ನು ಬಿಡುಗಡೆ ಮಾಡುವುದಂತೂ ಖಂಡಿತ. ಅಲ್ಲದೆ ಹೆಚ್ಚಿನ ಅಭಿವ್ಯಕ್ತಿ ಹಾಗೂ ಸಾಂಘಿಕ ಸ್ವಾತಂತ್ರ್ಯ ನೀಡಲಾಗುತ್ತದೆ.

ಸೆಪ್ಟೆಂಬರ್ 28

ನಿನ್ನೆ (ಸೆಪ್ಟೆಂಬರ್ 27, ಶನಿವಾರ) ನನಗೊಂದು ಕೆಟ್ಟದಿನವಾಗಿತ್ತು. ಬೆಳಿಗ್ಗೆ ನಾನು ಶೌಚಕ್ಕೆ ಹೋದಾಗ ವಿಪರೀತ ಹೊಟ್ಟೆನೋವು ಆರಂಭವಾಯಿತು. ಇದು ಹೊರಟುಹೋಗುತ್ತದೆಂದು ಮೊದಮೊದಲು ಭಾವಿಸಿದೆ. ಆದರೆ ಅದು ಮುಂದುವರಿದು, ವಿಪರೀತ ಹೆಚ್ಚಾಯಿತು. ಉಸಿರು ತೀವ್ರವಾಗಿ ಕಟ್ಟಿದಂತಾಗಿ ಪ್ರಜ್ಞೆ ತಪ್ಪುವಂತಾಯಿತು. ವಿಪರೀತ ಆಯಾಸ ಉಂಟಾಯಿತು. ಮೇಲೇಳಲು ಕಷ್ಟವಾಯಿತು. ಆದರೂ ಕೈಕಾಲು ತೊಳೆದುಕೊಂಡು ಹಾಸಿಗೆಗೆ ಬಂದು ಮಲಗಿದೆ. ಡಾ. ಕಲರಾರನ್ನು ಕರೆಯಲು ಹಾಗೂ ಡಾ. ಚುಟ್ಟಾಣಿ ಅವರಿಗೆ ವಿಷಯ ತಿಳಿಸಲು ಹೇಳಿದೆ. ನೋವು ತಾಸುಗಟ್ಟಲೆ ಮುಂದುವರಿಯಿತು. ಡಾಕ್ಟರ್‌ಗಳು ಔಷಧಿಗಳನ್ನು ಕೊಟ್ಟರು. ಇಡೀ ದಿನ ಹಾಸಿಗೆಯಲ್ಲೇ ಮಲಗಿದ್ದೆ. ದ್ರವರೂಪದ ಆಹಾರ ಮಾತ್ರ ತೆಗೆದುಕೊಂಡೆ; ರಾತ್ರಿ ಮಾತ್ರ ಅನ್ನ ಮೊಸರು ತೆಗೆದುಕೊಂಡೆ. ನೋವಿಗೆ ಕಾರಣ ಯಾವುದೋ ಸೋಂಕು ಎಂದು ಹೇಳಲಾಯಿತು. ಏನಾದರಾಗಲಿ, ಇದು ನನ್ನ ಬದುಕಿನಲ್ಲಿಯೇ ಈ ರೀತಿಯ ಮೊಟ್ಟಮೊದಲ ಅನುಭವ. ವಿಪರೀತ ಉಸಿರುಕಟ್ಟ, ನೋವು ಮತ್ತು ಆಯಾಸ ಉಂಟಾದ್ದರಿಂದ ನನಗೆ ಹೃದಯಾಘಾತ ಆಗಿದೆ ಎಂದುಕೊಂಡೆ - ಆದರೆ ನೋವಿದ್ದುದು ಕಿಬ್ಬೊಟ್ಟೆಯಲ್ಲಿ, ಹೃದಯದ ಬಡಿತ, ರಕ್ತದ ಒತ್ತಡ ಮುಂತಾದ್ದೆಲ್ಲಾ ಸರಿಯಾಗಿಯೇ ಇತ್ತು. ECG ತೆಗೆಯಲಾಯಿತಾದರೂ ಹೊಸದಾಗಿ ಏನೂ ಕಂಡುಬರಲಿಲ್ಲ.

ಇಂದು ಸ್ವಲ್ಪ ಸುಧಾರಿಸಿದಂತೆ ಅನಿಸಿದೆ. ಸಂಜೆ 6-30ರಲ್ಲಿ ಹುಲ್ಲು ಮೈದಾನದಲ್ಲಿ 20 ನಿಮಿಷಗಳ ಕಾಲ ಮಾತ್ರ ಓಡಾಡಿದೆ...

ಸೆಪ್ಟೆಂಬರ್ 29

'ಟ್ರಿಬ್ಯೂನ್' ಮೂರು ಅಂಕಣಗಳ ಶೀರ್ಷಿಕೆಯೊಂದರಲ್ಲಿ ಶ್ರೀ ಜಗಜೀವನರಾಮರ ಭಾಷಣವನ್ನು ವರದಿಮಾಡಿದೆ. ರಾಂ ಅವರು ಬಹಳ ಜೋರಾಗಿಯೇ ಹೇಳಿದ್ದಾರೆ : '20 ಅಂಶಗಳ ಕಾರ್ಯಕ್ರಮದ ಅನುಷ್ಠಾನಕ್ಕೆ ಪ್ರಧಾನಮಂತ್ರಿಯವರ ನಾಯಕತ್ವ ಅನಿವಾರ್ಯ.' ನಿಷ್ಠೆಯ ಈ ಪ್ರಬಲ ಘೋಷಣೆ ಏಕೆಂಬುದೇ ನನಗರ್ಥವಾಗುತ್ತಿಲ್ಲ. ಇದರ ಹಿಂದೆ ಯಾವುದಾದರೂ ರಹಸ್ಯ ಕಾರಣವಿರಬಹುದೇ ಅಥವಾ ಇದು ಕೇವಲ ಆಗಾಗ್ಗೆ ದೃಢಪಡಿಸಬೇಕಾದ ನಿಷ್ಠೆಯ ಪ್ರಕಟಣೆ ಮಾತ್ರವೆ? ಜಗಜೀವನ ಬಾಬೂರಂತಹ ವ್ಯಕ್ತಿಯೂ ಸಹ ಇಷ್ಟು ಜೋರಾಗಿ ಇಂತಹ ಭಟ್ಟಂಗಿತನವನ್ನು ವ್ಯಕ್ತಪಡಿಸುತ್ತಿರುವುದು ನಂಬಲಾಗದ ಸಂಗತಿ. ಇದೆಂತಹ ಅವನತಿಯೋ ನಾ ಕಾಣೆ.

ತಮ್ಮ ಪ್ರಿಯ ಪ್ರಧಾನಮಂತ್ರಿಯವರ ನಾಯಕತ್ವ 10 ಅಂಶಗಳ ವಿಷಯದಲ್ಲೇಕೆ ವಿಫಲಗೊಂಡಿತು ಎಂದು ಶ್ರೀ ರಾಂ ಅವರನ್ನು ಯಾರೂ ಕೇಳದಿದ್ದುದು ವಿಷಾದನೀಯ. ಬಹುಶಃ ವಿರೋಧ ಪಕ್ಷಗಳ ವಿಶ್ವಾಸಾಘಾತ, ಈ ವೈಫಲ್ಯಕ್ಕೆ ಕಾರಣವಿರಬೇಕು!

ಇಂದು ಬೆಳಗ್ಗಿನ 'ಟ್ರಿಬ್ಯೂನ್', ಸಂಪೂರ್ಣ ಪಾನನಿರೋಧದ ಸಂಭವವಿದೆ ಎಂದು ಸಹ ವರದಿ ಮಾಡಿದೆ. ಎಷ್ಟೊಂದು ಒಳ್ಳೆಯ ಸುದ್ದಿ! ಇದರಲ್ಲಿ ರಾಜಕೀಯ ತಂತ್ರವಿದ್ದರೂ ಕೂಡಾ, ಇದು ಸ್ವಾಗತಿಸಲೇಬೇಕಾದ ಅಂಶವಾಗಿದೆ. ರಾಜಕೀಯ ತಂತ್ರದ ಬಗ್ಗೆ ಹೇಳುವುದಾದರೆ, ವಿನೋಬಾ ಹಾಗೂ ಸರ್ವೋದಯ ಸಂಘಟನೆಯ ಮನಸ್ಸನ್ನು ಮೆಲ್ಲಗೆ ವಶಪಡಿಸಿಕೊಂಡು, ಶ್ರೀಮತಿ ಗಾಂಧಿಯಂತಹ ಮಹಾನ್ ಗಾಂಧಿವಾದಿಗೆ ವಿರುದ್ಧವಾಗಿರುವ ಜಯಪ್ರಕಾಶ್ ಹಾಗೂ ಆತನ ಸ್ನೇಹಿತರನ್ನು ಮತ್ತು ಕೆಟ್ಟ ಮನಸ್ಸಿನ ಮತ್ತು ಕುಚೇಷ್ಟೆಯ ವಿರೋಧ ಪಕ್ಷಗಳನ್ನು ಬಯಲಿಗೆಳೆದು ಅವರ ನಿಜವಾದ ಬಣ್ಣವನ್ನು ಹೊರ ತೋರಿಸುವುದೇ ಇದರ ಉದ್ದೇಶವಾಗಿದೆ. ಇದರಿಂದ ಮುಂಬರುವ ಚುನಾವಣೆಗಳಲ್ಲೂ ಪ್ರಯೋಜನವಾಗುತ್ತವೆ. ಸರಿ, ಇದೆಲ್ಲದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ; ಎಲ್ಲ ಹೊಗಳಿಕೆಯನ್ನೂ ಶ್ರೀಮತಿ ಗಾಂಧಿಯೇ ಪಡೆಯಲಿ, ಜಯಪ್ರಕಾಶ್ ಹಾಳಾಗಲಿ ಬಿಡಿ. ನನ್ನಮಟ್ಟಿಗೆ, ಪ್ರಜಾಪ್ರಭುತ್ವದ ಪರವಾದ ಮತ್ತು ಭ್ರಷ್ಟಾಚಾರ, ದುರಾಡಳಿತ ಮುಂತಾದವುಗಳ ವಿರುದ್ಧದ ಹೋರಾಟ ಮುಂದುವರಿಯುತ್ತದೆ. ಸಂಪೂರ್ಣ ಕ್ರಾಂತಿ ಈಗಲೂ ನನ್ನ ಧ್ಯೇಯವಾಗಿ ಉಳಿದಿದೆ.

ಸೆಪ್ಟೆಂಬರ್ 30

ಈಜಿಪ್ಟ್‌ನ ಅಧ್ಯಕ್ಷ ಸಾದಾತ್, ಬರೀ ಪಶ್ಚಿಮ ಏಷ್ಯಾದಲ್ಲಿ ಮಾತ್ರವಲ್ಲ ಇಡೀ ಆಫ್ರೋ - ಏಷ್ಯಾದಲ್ಲಿ ಕಳಶಪ್ರಾಯವಾದ ನಾಯಕರೆಂದು ಕಾಣುತ್ತದೆ. ಅಧ್ಯಕ್ಷ

ಮಾವ್ಹೋತ್ಸೆ ತುಂಗ್ ಅನನ್ಯ ರೀತಿಯ ನಾಯಕರಾಗಿದ್ದು, ಅವರು ಮೇರು ಪರ್ವತವಿದ್ದಂತೆ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಇವರನ್ನು ಬಿಟ್ಟರೆ, ಆಫ್ರೋ ಏಷ್ಯಾದಲ್ಲಿ ಇಂದು ಸಾದಾತರಿಗೆ ಹೋಲಿಸಬಹುದಾದ ಮತ್ತೊಬ್ಬ ನಾಯಕನಿಲ್ಲ. ಅಧ್ಯಕ್ಷ ನಾಸೆರರ ನಿಧನದ ಐದನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಅವರು ಕೈರೋದಲ್ಲಿ ಮಾಡಿದ ಭಾಷಣ ಈಗಲೂ ನನ್ನ ಮನಸ್ಸಿನಲ್ಲಿ ಉಳಿದಿದೆ. ಅಮೆರಿಕಾ ತನ್ನ ಯುದ್ಧ ಪರಿಣತರನ್ನು ಮತ್ತು ಮಾರಕ ಶಸ್ತ್ರಾಸ್ತ್ರಗಳನ್ನು ಇಸ್ರೇಲಿಗೆ ಕಳಿಸತೊಡಗಿದಾಗ, ಆತ ಎಷ್ಟು ದಿಟ್ಟತನದಿಂದ ಮತ್ತು ಬಿಚ್ಚು ಮನಸ್ಸಿನಿಂದ ರಷ್ಯ 'ನನ್ನ ಬೆನ್ನ ಹಿಂದೆ' ಇದೆ ಎಂದು ಹೇಳಿದ. ಈ ಅಪಾಯದ ಅರಿವಿನಿಂದಲೇ ಆತ 1973ರ ಅಕ್ಟೋಬರ್ 22ರಂದು ಕದನ ವಿರಾಮವನ್ನು ಒಪ್ಪಿಕೊಳ್ಳಬೇಕಾಗಿ ಬಂದದ್ದು. 'ಮಾಜಿ ಅಧ್ಯಕ್ಷ ರಿಚರ್ಡ್ ನಿಕ್ಸನ್ 1972ರಲ್ಲಿ ಮಾಸ್ಕೋಗೆ ಭೇಟಿ ನೀಡಿದ್ದೇ ಆತನ (ಸಾದಾತ್) ಹಾಗೂ ಸೋವಿಯತ್ ಒಕ್ಕೂಟದ ನಡುವಣ ಸಂಬಂಧಗಳು ಮಾರ್ಪಾಡಾಗಲು ಕಾರಣವಾಯಿತು.' 'ಈ ಭೇಟಿಯ ನಂತರ ಹೊರಡಿಸಲಾದ ಸಂಯುಕ್ತ ಹೇಳಿಕೆಯೊಂದರಲ್ಲಿ, "ನಾನು ಪೂರ್ಣ ಶಸ್ತ್ರಸಜ್ಜಿತನಾಗದೆ, ಇಸ್ರೇಲಿಗಳಿಗಿಂತ ಹತ್ತು ಹೆಜ್ಜೆ ಹಿಂದಿದ್ದಾಗ ಮತ್ತು ನನ್ನ ನೆಲ ಇನ್ನು ಅವರ ವಶದಲ್ಲಿದ್ದಾಗ" ಪಶ್ಚಿಮ ಏಷ್ಯಾದ ಮಿಲಿಟರಿ ವ್ಯವಸ್ಥೆಯನ್ನು ಸಡಿಲಗೊಳಿಸುವ ಕರೆ ನೀಡಲಾಯಿತು'. 'ಈ ಕರೆ, ನುಂಗಲಾಗದ ಕೊನೆಯ ತುತ್ತಾಗಿ ಪರಿಣಮಿಸಿತು ಎಂದು ಅಧ್ಯಕ್ಷರು ನುಡಿದರು'*(ಟ್ರಿಬ್ಯೂನ್, ಸೆಪ್ಟೆಂಬರ್, 30)*. ಸಾದಾತರ ಇಡೀ ಭಾಷಣ ಅದ್ಭುತವಾಗಿದ್ದು, ಅದರ ವರದಿಯನ್ನು ನಾನು ಇಟ್ಟುಕೊಂಡಿದ್ದೇನೆ.

ಇಷ್ಟು ಛಲ ಹಾಗೂ ದಿಟ್ಟತನದಿಂದ ಮಾತನಾಡಬಲ್ಲ ಯಾರಾದರೂ, ನಮ್ಮ ದೇಶದ ಆಡಳಿತ ವಲಯದಲ್ಲಿದ್ದಾರೆಯೇ? ಇದು ಅತ್ಯುನ್ನತ ಮಟ್ಟದ ದೇಶಪ್ರೇಮ. ನಮ್ಮ ನಿರ್ಧಾರ ನಿರ್ಮಾಣದಲ್ಲಿ ಹಾಗೂ ಸರ್ಕಾರ ಮತ್ತು ರಾಜಕಾರಣಗಳ ಮಹತ್ವದ ಅಂಗಗಳಲ್ಲಿ ರಷ್ಯನ್ನರು ಎಷ್ಟು ಆಳವನ್ನು ಹೊಕ್ಕಿದ್ದಾರೋ, ಆ ದೇವರಿಗೇ ಗೊತ್ತು.

ಅಕ್ಟೋಬರ್ 1

'ಹಿಂದೂಸ್ತಾನ್ ಟೈಮ್ಸ್'ನ ಶೀರ್ಷಿಕೆಯೊಂದು ಹೀಗಿದೆ: 'ವಿಶ್ವವಿದ್ಯಾಲಯ, ಕಾನೂನು ವ್ಯಾಪ್ತಿಯ ಹೊರಗಿಡಲಾಗದು - ಪ್ರಧಾನಿ' ತುಂಬಾ ಒಳ್ಳೆಯದು. ಆದರೆ ಮಂತ್ರಿಗಳನ್ನೂ, ಎಲ್ಲಕ್ಕಿಂತ ಮೊದಲು ಪ್ರಧಾನಮಂತ್ರಿಗಳನ್ನೂ ಸಹ ಕಾನೂನು ವ್ಯಾಪ್ತಿಯ ಹೊರಗಿಡಲಾಗದು. ಇದೇ 'ಆಂದೋಲನ'ದ ಮೂಲ ಕಾಳಜಿಯೂ ಆಗಿದ್ದುದು. ಅಧಿಕಾರಸ್ಥಾನಗಳಿಗೆ ಆಯ್ಕೆಯಾದವರು ಕಾನೂನು ಅನ್ವಯದಿಂದ ವಿನಾಯಿತಿ ಪಡೆಯಕೂಡದು. ಆದುದರಿಂದಲೇ, ಅಧಿಕಾರದಲ್ಲಿರುವವರು ಕಾನೂನು

ಮತ್ತು ಜನರಿಗೆ ಉತ್ತರ ಕೊಡುವಂತೆ ಮಾಡುವ ವಿಧ್ಯುಕ್ತ ಸಂಸ್ಥೆಯೊಂದನ್ನು - ಸ್ವೀಡನ್ನಿನ ಓಂಬುಡ್ಸಮನ್ ಇದ್ದಂತೆ - ರಚಿಸಬೇಕೆಂಬ ಬೇಡಿಕೆ ಇದ್ದದ್ದು. ಈ ಸಂಬಂಧವಾಗಿಯೇ, ಈ ಬಗ್ಗೆ ಚರ್ಚೆ ನಡೆಸಿ ಏಕಾಭಿಪ್ರಾಯದ ಮೂಲಕ ಒಂದು ತೀರ್ಮಾನಕ್ಕೆ ಬರಲು ಆಧಾರವಾಗಿ ಸಂತಾನಂ ವರದಿಯನ್ನು ಹಾಗೂ ಈ ಸಮಸ್ಯೆಯ ಬಗೆಗಿನ ತಜ್ಞರು (ಉದಾ: ಎ.ಜಿ. ನೂರಾಣಿ) ಮಾಡಿರುವ ಶಿಫಾರ್ಸುಗಳನ್ನು ಅಂಗೀಕರಿಸಬೇಕೆಂದು ಸಲಹೆ ಮಾಡಿದ್ದು. ಆದರೆ ಗಣ್ಯರಾದ ಪ್ರಧಾನಮಂತ್ರಿಯವರು, ಮುಂದಿನ ಸಾರ್ವತ್ರಿಕ ಚುನಾವಣೆಗಳು ಆಡಳಿತಾಧಿಕಾರ ಯಾರಿಗೆ ಸೇರಬೇಕು ಎಂಬುದನ್ನು ತೀರ್ಮಾನಿಸುವವರೆಗೂ, ತಾವು ಮತ್ತು ರಾಜ್ಯಗಳ ಹಾಗೂ ಕೇಂದ್ರದಲ್ಲಿನ ತಮ್ಮ ಸಹೋದ್ಯೋಗಿಗಳು ಯಾರಿಗೂ ಉತ್ತರ ಹೇಳಬೇಕಾದ ಪ್ರಮೇಯವಿಲ್ಲ ಎಂದು ವಾದಿಸಿದರು. ಇದು ಅಧಿಕಾರದಲ್ಲಿರುವ ಜನರ ಸ್ವೇಚ್ಛಾಪ್ರವೃತ್ತಿಯನ್ನು ಉತ್ತೇಜಿಸಿದ್ದು ಮಾತ್ರವಲ್ಲದೆ, ಹಣದ ಬಲ ಮತ್ತು ಚುನಾವಣಾ ಭ್ರಷ್ಟಾಚಾರದ ಮೂಲಕ (ಇದು ವಿರೋಧ ಪಕ್ಷಗಳಿಗಿಂತ, ಅಧಿಕಾರದಲ್ಲಿರುವವರಿಗೇ ಹೆಚ್ಚು ಸುಲಭ) ಅಧಿಕಾರದಲ್ಲಿರುವವರು ಮತ್ತೆ ಅಧಿಕಾರಕ್ಕೆ ಬರುವುದನ್ನು ಮತ್ತು ದುರಾಡಳಿತ, ಭ್ರಷ್ಟಾಚಾರ ಹಾಗೂ ಪಕ್ಷದೊಳಗಿನ ಗುಪ್ತಕೂಟದ ಆಳ್ವಿಕೆ ಶಾಶ್ವತವಾಗುವುದನ್ನು ಖಚಿತಗೊಳಿಸಿತು.

ಇವತ್ತಿನವರೆಗೂ, ಪ್ರಧಾನಮಂತ್ರಿಯವರು ಆಂದೋಲನ ಎತ್ತಿದ ಅಂಶಗಳ ಕಡೆ ಗಮನ ಕೊಡುವಂತಹ ಕೆಲವು ಕ್ರಮಗಳನ್ನು ಕೈಗೊಂಡಿರುವರಾದರೂ, ಓಂಬುಡ್ಸ್‌ಮನ್‌ವೊಂದನ್ನು (ನಾನಿದನ್ನು ಒಂದು ರೀತಿಯ ಸಾಂಕೇತಿಕ ಶಬ್ದವನ್ನಾಗಿ ಉಪಯೋಗಿಸುತ್ತಿರುವೆ) ಅಥವಾ ಜನತೆಯು ಅಭ್ಯರ್ಥಿಗಳ ಆಯ್ಕೆಯಲ್ಲಿ ಇನ್ನೂ ಹೆಚ್ಚಿನ ಪಾತ್ರವಹಿಸಲು, ಚುನಾಯಿತ ಪ್ರತಿನಿಧಿಗಳ ಮೇಲೆ ಸ್ವಲ್ಪ ಹತೋಟಿ ಇಡಲು ಮತ್ತು ಅವರು ತಮ್ಮೆಲ್ಲಾ ಚಟುವಟಿಕೆಗಳ ಬಗ್ಗೆ ಜನತೆಗೆ ಸದಾ ವಿವರಣೆ ನೀಡಲು ಒತ್ತಾಯಿಸುವಂತಹ ಯಾವುದೇ ವ್ಯವಸ್ಥೆ ಅಥವಾ ವಿಧಾನವೊಂದನ್ನು ರೂಪಿಸುವ ದಿಸೆಯಲ್ಲಿ ಯಾವುದೇ ಪ್ರಯತ್ನ ಕೈಗೊಂಡಿಲ್ಲ.

ಶ್ರೀಮತಿ ಗಾಂಧಿ ಈ ನಡುವೆ 'ಶಿಸ್ತಿ'ನ ಬಗ್ಗೆ ದೊಡ್ಡದಾಗಿ ಭಾಷಣ ಬಿಗಿಯುತ್ತಿದ್ದಾಳಲ್ಲದೆ, ತುರ್ತುಪರಿಸ್ಥಿತಿ ಘೋಷಣೆಯಿಂದಾಗಿ ದೇಶದಲ್ಲಿ ಉಂಟಾಗಿರುವ ಶಿಸ್ತಿನ ಹೊಸ ವಾತಾವರಣಕ್ಕಾಗಿ ಹಲವಾರು ಬಾರಿ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಿದ್ದಾಳೆ. ಆದರೆ ದೇಶದಲ್ಲಿ ಅಶಿಸ್ತು ನಿರ್ಮಾಣವಾದದ್ದು ಆಡಳಿತ ಪಕ್ಷದ ಮತ್ತು ಅದರೊಳಗಿನ ಗುಪ್ತಕೂಟದ ದುರಹಂಕಾರ, ಅದಕ್ಷತೆ, ಭ್ರಷ್ಟಾಚಾರ ಹಾಗೂ ಒಳಜಗಳಗಳಿಂದಲೇ ಎಂಬುದನ್ನು ಆಕೆ ಇನ್ನೂ ಮನವರಿಕೆ ಮಾಡಿಕೊಳ್ಳಬೇಕಾಗಿದೆ - ಆಕೆ ಎಂದೂ ಮನವರಿಕೆ ಮಾಡಿಕೊಳ್ಳಲಾರಳೇನೋ ಎಂಬ ಸಂದೇಹವೂ ನನಗಿದೆ. ರಾಷ್ಟ್ರಪತಿ ಸ್ಥಾನಕ್ಕಾಗಿ ಶ್ರೀ ಸಂಜೀವರೆಡ್ಡಿಯವರ

ಪರವಾಗಿ ನಾಮಪತ್ರ ಸಲ್ಲಿಸಿಯೂ, ಶ್ರೀ ಗಿರಿಯವರ ಪರ ಕೆಲಸ ಮಾಡುವ ಮೂಲಕ ಪಕ್ಷದ ಶಿಸ್ತನ್ನು ಗಾಳಿಗೆ ತೂರಿ (ಕಾಂಗ್ರೆಸ್ಸಿಗಳಾಗಿ) ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ ಪ್ರಚಾರ ಕೈಗೊಂಡ ಶ್ರೀಮತಿ ಗಾಂಧಿ ಸ್ವತಃ ತಾನೇ ಶಿಸ್ತಿನ ಅಮೋಘ ಉದಾಹರಣೆಯಾಗಿದ್ದಾಳೆ! ಇಂತಹ ಗಂಭೀರ ರಾಜಕೀಯ ಅಶಿಸ್ತು, ಮತ್ತು ವಿಶ್ವಾಸದ್ರೋಹವನ್ನು, ರಾಜಕೀಯ ಅಂದರೆ ಇದೆಲ್ಲ ಇದ್ದದ್ದೇ ಎಂಬ 'ಸಿದ್ಧಾಂತ'ದ ಆಧಾರದ ಮೇಲೆ ಕ್ಷಮಿಸಲಾಗುತ್ತಿದೆ. ಅಂದರೆ, ರಾಜಕೀಯ ವರ್ತನೆಯ ನೀತಿಸಂಹಿತೆಗೆ ಹೆಚ್ಚಿನ ಬೆಲೆಯನ್ನೇನೂ ಕೊಡಬೇಕಾಗಿಲ್ಲ ಎಂದರ್ಥ. ಶ್ರೀಮತಿ ಗಾಂಧಿಯೇನೋ ಅನುಕೂಲಕರವಾದ 'ಆತ್ಮಸಾಕ್ಷಿ'ಯ ಕಲ್ಪನೆಯೊಂದನ್ನು ಉದ್ದೀಪಿಸಿ, ತನ್ನ ರಾಜಕೀಯ ಅನೀತಿಯನ್ನು ಮುಚ್ಚಿಕೊಳ್ಳಲೆತ್ನಿಸಿದಳು.

ಶಿಸ್ತಿನ ಪಾಠ ಕಲಿಸುವುದಕ್ಕಾಗಿ ಭಾರತ ಮತ್ತು ಭಾರತದ ಜನತೆಯನ್ನು ಸರ್ವಾಧಿಕಾರದ ಕಪಿಮುಷ್ಟಿಗೆ ಒಳಪಡಿಸುವುದು ಅಗತ್ಯವಾದರೆ, ಆ ಪಾಠ ಆಳ ಹೊಕ್ಕೇ ಇಲ್ಲ ಎಂಬುದು ಮೊದಲ ಪರೀಕ್ಷೆಗೆ ಗೊತ್ತಾಗಿಬಿಡುತ್ತದೆ. ಶಿಸ್ತು ಎಂಬುದು ವ್ಯಕ್ತಿಗತವಾದ ಗುಣವಾಗಿದ್ದು ಮತ್ತು ಸಾಮಾಜಿಕ ವರ್ತನೆಗೆ ಸಂಬಂಧಿಸಿದ್ದು ಅದನ್ನು ಮುಕ್ತ ಅಂದರೆ ವಿಮರ್ಶೆಗೆ ಅವಕಾಶವಿರುವ ವಾತಾವರಣದಲ್ಲಿ ಬೋಧಿಸಬೇಕು, ಪೋಷಿಸಬೇಕು. ಈ ವಿಧಾನದಲ್ಲಿ, ಅದರಲ್ಲೂ ರಾಜಕೀಯ ಅಧಿಕಾರ ಹಾಗೂ ರಾಜಕಾರಣ ಇಷ್ಟೊಂದು ನಿರ್ಣಾಯಕವಾದ ಸ್ಥಾನವನ್ನು ಆಕ್ರಮಿಸಿರುವ ನಮ್ಮ ಸಮಾಜದಲ್ಲಿ (ಇದೊಂದು ವಿಷಾದನೀಯ ಅಂಶ) ಶಿಸ್ತಿನ ಪ್ರತಿಪಾದನೆಯು ಎಲ್ಲಕ್ಕಿಂತ ಹೆಚ್ಚಾಗಿ ಅಧಿಕಾರದಲ್ಲಿರುವ, ಸರ್ಕಾರ ನಡೆಸುವ ಜನರ ವರ್ತನೆಯನ್ನು ಅವಲಂಬಿಸಿದೆ. 1974-75ನೇ ವರ್ಷದಲ್ಲಿ ಭಾರತದ ರಾಜಕೀಯ ಪಕ್ಷಗಳ ನೀತಿ ನಿಷ್ಠೆಯನ್ನು ಕುರಿತ ಯಾವುದೇ ವಸ್ತುನಿಷ್ಠ ವಿಮರ್ಶೆಯು, ಎಲ್ಲ ಪಕ್ಷಗಳಿಗಿಂತ ಆಡಳಿತ ಕಾಂಗ್ರೆಸ್ಸೇ ಅತಿ ಭ್ರಷ್ಟ ಹಾಗೂ ರಾಜಕೀಯ ಅನೀತಿ ತುಂಬಿದ ಪಕ್ಷವೆಂದು ಸುಲಭವಾಗಿ ತೋರಿಸುತ್ತಿತ್ತು. ಕಾಂಗ್ರೆಸ್ಸಿನಲ್ಲಿ ಪ್ರಾಮಾಣಿಕರು ಹಿಂದೆಯೂ ಇದ್ದರು, ಇಂದೂ ಇದ್ದಾರೆ; ಆದರೆ ಪಿತೂರಿ, ಲಂಚಕೋರನತನ, ಲೋಭ, ಭಟ್ಟಂಗಿತನ ಹಾಗೂ ಇಂತಹ ಇತರ ಪ್ರವೃತ್ತಿಗಳು ಇಷ್ಟೊಂದು ಮುಂದೆ ಬಂದಿರುವಾಗ ಅಂತಹವರೆಲ್ಲಾ ಹಿಂದಿನ ಸಾಲು ಸೇರಿರುತ್ತಾರೆ. ಮೊದಲಾಗಿ ಶ್ರೀಮತಿ ಗಾಂಧಿಯೇ ತನ್ನ ಬಗ್ಗೆ ಒಳ್ಳೆಯ ಚಿತ್ರ ಕೊಡಲಿಲ್ಲ. ರಾಷ್ಟ್ರಪತಿ ಚುನಾವಣೆಯಿಂದ ಆರಂಭವಾದಂತೆ ಹಲವಾರು ಅನುಮಾನಾಸ್ಪದ ಸಂಗತಿಗಳು ನಡೆದಿದ್ದು; ಇವುಗಳ ಬಗ್ಗೆ ಸಾರ್ವಜನಿಕರು ಚರ್ಚಿಸಿದರಾದರೂ, ಇವಾವುಗಳ ಬಗ್ಗೆ ವಿಚಾರಣೆ ನಡೆಸಲು ಆಕೆ ನಿರಾಕರಿಸಿದ್ದರಿಂದ, ಅವಿನ್ನೂ ಮುಚ್ಚಿದ ಪುಸ್ತಕಗಳಲ್ಲೇ ಉಳಿದಿವೆ. ನಗರವಾಲಾ-60 ಲಕ್ಷ ರೂಪಾಯಿಗಳ ಪ್ರಕರಣ ಇನ್ನೂ ನಿಗೂಢ ರಹಸ್ಯವಾಗಿದ್ದು ವಿದೇಶೀ ವ್ಯಾಪಾರ ಲೈಸೆನ್ಸ್ ಪ್ರಕರಣ ಇಂದಿಗೂ ಸಾರ್ವಜನಿಕರ ಮುಂದೆಯಾಗಲೀ ಅಥವಾ ನ್ಯಾಯಾಂಗದ ಮುಂದೆಯಾಗಲೀ ಬಂದಿಲ್ಲ. ಇವುಗಳ ಬಗ್ಗೆ ಸಂಸತ್ತಿನಲ್ಲಿ ನಡೆದ ಚರ್ಚೆಗೆ, ಅಡ್ಡಿ ಆತಂಕಗಳನ್ನು ಉಂಟುಮಾಡಲಾಯಿತಲ್ಲದೆ, ನಿರ್ಲಕ್ಷಿಸಲಾಯಿತು.

ಎಲ್.ಎನ್. ಮಿಶ್ರಾ ಕೊಲೆ ಬಗ್ಗೆ (ಇದಕ್ಕೂ ಲೈಸೆನ್ಸ್ ಪ್ರಕರಣಕ್ಕೂ ಸಂಬಂಧವಿದೆ ಎಂಬುದು ನಿಸ್ಸಂದೇಹ) ಸೂಕ್ತ ವಿಚಾರಣೆ ನಡೆಸಿ ವಿಷಯುವನ್ನು ಬಹಿರಂಗಗೊಳಿಸುವುದಕ್ಕೆ ಇನ್ನೂ ಕಾಲ ಒದಗಿಲ್ಲ. 'ಮಾರುತಿ'ಗೆ ಸಂಬಂಧಿಸಿದ ಹಲವಾರು ಅಂಶಗಳು ತನಿಖೆಗೇ ಒಳಪಡಲಿಲ್ಲ. ಪ್ರಧಾನಮಂತ್ರಿ ತನ್ನ ಆತ್ಮಸಾಕ್ಷಿಯಷ್ಟಕ್ಕೇ ಉತ್ತರ ಹೇಳಿ, ತನ್ನ ಮಗನಿಗೆ ನಿರ್ದೋಷಿತನದ ಅರ್ಹತಾಪತ್ರ ನೀಡಿ, ಸಾರ್ವಜನಿಕರ ಸಂದೇಹಗಳನ್ನು ತಳ್ಳಿಹಾಕಲು ಯತ್ನಿಸಿದರು. ಮಾರುತಿ ವ್ಯವಹಾರಗಳಲ್ಲಿ ಅಂತಹುದೇನೂ ನಡೆಯದೆ ಇರುವ ಸಾಧ್ಯತೆಗಳಿರಬಹುದು. ಆದರೆ ಈ ಅಂಶ ನಿಷ್ಪಕ್ಷಪಾತ ವಿಚಾರಣೆಯೊಂದರಿಂದ ರುಜುವಾತಾಗಬೇಕು. ಆದರೆ ಇದನ್ನು ನಿರಾಕರಿಸಲಾಗುತ್ತಲೇ ಇದೆ. ರಾಜಕೀಯ ವ್ಯವಸ್ಥೆಯೊಳಗೆ, ಚುನಾವಣಾನಿಧಿಯೆಂದು ಭಾರೀ ಹಣ ಸಂಗ್ರಹ, ಚುನಾವಣೆಗಳಲ್ಲಿ ಎಗ್ಗಿಲ್ಲದೆ ಬಳಸುವ ಹಣ, ಅಧಿಕಾರ; ಹಣ ಅಥವಾ ಸ್ಥಾನದ ಆಸೆ ತೋರಿಸಿ ವಿರೋಧೀ ಎಂ.ಪಿ. ಅಥವಾ ಎಂ.ಎಲ್.ಎ. ಗಳನ್ನು ಸೆಳೆಯುವುದು ಹಾಗೂ ಇತರ ಹಲವಾರು ಅನೈತಿಕ ಕೃತ್ಯಗಳನ್ನು ನಿಶ್ಚಿಂತೆಯಿಂದ ಮಾಡಲು ಅವಕಾಶ ಕೊಡಲಾಯಿತು. ರಾಜ್ಯ ಕಾಂಗ್ರೆಸ್ ಸರ್ಕಾರಗಳು ಸಹ ಭ್ರಷ್ಟಾಚಾರ ಹಾಗೂ ಸ್ವಜನ ಪಕ್ಷಪಾತಕ್ಕೆ ಸಂಬಂಧಿಸಿದಂತೆ ಇಂತಹದೇ 'ಹೆಸರು'ಗಳನ್ನು ಗಳಿಸಿವೆ. ಇವುಗಳಲ್ಲಿ ಅತ್ಯಂತ ಕುಪ್ರಸಿದ್ಧವಾದದ್ದೆಂದರೆ ಬಿಹಾರ. ಇಂತಹ 'ಆಧುನಿಕ ರಾಜಕಾರಣ'ದ ವಾತಾವರಣದಲ್ಲಿ – ಹಕ್ಕುಗಳ ಬಗ್ಗೆ ಗಂಭೀರ ಕಳಕಳಿ ಇಲ್ಲದವರು – ಇದನ್ನು ಹೀಗೆಂದು ಕರೆಯುತ್ತಾರೆ- ಇವತ್ತು ಶ್ರೀಮತಿ ಗಾಂಧಿ, 'ಸ್ವಯಂ ನಿಯಂತ್ರಣ' ಹಾಗೂ 'ಸ್ವಯಂ ನಿಯಮಪಾಲನೆ' ಎಂದು ವ್ಯಾಖ್ಯಾನಿಸಿರುವ ಶಿಸ್ತು ಎಂಬುದು 'ಹಿಂದೂಸ್ಥಾನ್ ಟೈಮ್ಸ್' ಕೇವಲ ದೂರದ ಆಸೆಯಾಗಿ ಮಾತ್ರ ಉಳಿಯಬೇಕಾಗಿದೆ.

ಶ್ರೀಮತಿ ಗಾಂಧಿ, ಪ್ರಜಾಪ್ರಭುತ್ವದ ಈ ಕಪ್ಪುರಾತ್ರಿಯಲ್ಲಿ ಎಲ್ಲರಿಗೂ ಸ್ವಲ್ಪ 'ಪುನರಾಲೋಚನೆ' ಮಾಡುವಂತೆ ಉಪದೇಶಿಸುತ್ತಿದ್ದಾಳೆ. ಈ ಕೆಲಸವನ್ನು ಶ್ರೀಮತಿ ಗಾಂಧಿಯ ಉಪದೇಶವಿಲ್ಲದೆಯೇ ಸಹ ಎಲ್ಲರೂ ಮಾಡುತ್ತಿದ್ದಾರೆಂಬುದು ಖಂಡಿತ. ಆದರೆ ಸ್ವತಃ ಆಕೆಯೇ ಯಾವುದೇ ರೀತಿಯ ಪುನರಾಲೋಚನೆ ಮಾಡುತ್ತಿದ್ದಂತೆ ಕಂಡುಬರುತ್ತಿಲ್ಲ ಅಥವಾ ಆಕೆ ಅದನ್ನು ಮಾಡುತಿದ್ದರೂ ಅದು ರಾಜಕೀಯ ರಂಗಕ್ಕೆ ಆರೋಗ್ಯವನ್ನು ಮತ್ತೆ ಒದಗಿಸುವ ದಿಸೆಯಲ್ಲಿರದೆ, ತನ್ನ ಅಧಿಕಾರವನ್ನು ಶಾಶ್ವತಗೊಳಿಸಿಕೊಳ್ಳುವ ಉದ್ದೇಶದಿಂದ ಮಾತ್ರ ಕೂಡಿದೆ. ಈವರೆಗೆ ಆಕೆ ಮಾಡಿರುವ ಎಲ್ಲ ಕೃತ್ಯಗಳ ಪರಮಗುರಿ ಇದೇ ಆಗಿದೆ. ಈ ತುರ್ತುಪರಿಸ್ಥಿತಿಯನ್ನೇ ತೆಗೆದುಕೊಳ್ಳಿ. ಎಲ್ಲ ರೀತಿಗಳಿಂದಲೂ ಈಗ ಇಡೀ ದೇಶದಲ್ಲಿ ಮೌನ ಮತ್ತು ನೀರವತೆ ನೆಲಸಿದೆ ಎಂಬುದು ನಿಸ್ಸಂದೇಹ. ಇದನ್ನು ಕೆಲವೇಳೆ ಆಕೆ ಮತ್ತು ಆಕೆಯ ಸಹೋದ್ಯೋಗಿಗಳೇ ಹೆಮ್ಮೆಯಿಂದ ಸಾರಿದ್ದಾರೆ - ಅಶಾಂತಿ ಮತ್ತು ವಿರೋಧವನ್ನು ಮೆಟ್ಟಿಹಾಕುವಲ್ಲಿ ದೊರಕಿದ ಯಶಸ್ಸಿನ ಪ್ರತೀಕ ಇದೆಂದು. ಆದುದರಿಂದ, ತುರ್ತುಪರಿಸ್ಥಿತಿಯನ್ನು

ಮುಂದುವರಿಸುವುದಕ್ಕೆ, ಶ್ರೀಮತಿ ಗಾಂಧಿ ಅಧಿಕಾರಕ್ಕೆ ಅಂಟಿ ಕೂರಲು ಸಾಧ್ಯಮಾಡುವುದನ್ನುಳಿದು ಇನ್ನಾವ ಸಮರ್ಥನೆಯೂ ಇರಲಾರದು. ಈಗಾಗಲೇ ಅಕ್ಟೋಬರ್ ಆದರೂ, ಶ್ರೀಮತಿ ಗಾಂಧಿ ಪಾರ್ಲಿಮೆಂಟರಿ ಚುನಾವಣೆಗಳ ಬಗ್ಗೆ ಇನ್ನೂ ಅಸ್ಪಷ್ಟ ಹೇಳಿಕೆಗಳನ್ನು ನೀಡುತ್ತಾ, ನಿರಾಸಕ್ತಿಯನ್ನು ಪ್ರದರ್ಶಿಸುತ್ತಿದ್ದಾಳೆ. ಬಹುಶಃ ತನ್ನ ಆಪರೇಷನ್ ಬ್ರೈನ್‌ವಾಷ್ ಸಾಕಷ್ಟು ಯಶಸ್ವಿಯಾಗಿದೆ, ವಿರೋಧ ಪಕ್ಷಗಳನ್ನು ಸಾಕಷ್ಟು ಎದೆಗುಂದಿಸಿ ನಿರ್ವೀರ್ಯಗೊಳಿಸಲಾಗಿದೆ ಎಂದು ಆಕೆಗೆ ಅನಿಸುವವರೆಗೂ ಚುನಾವಣೆಗಳನ್ನು ನಡೆಸಲಾಗುವುದಿಲ್ಲ ಎಂದು ಕಾಣುತ್ತದೆ. ಆಕೆ ಹೀಗೆ ಯೋಚಿಸಿದ್ದರೆ, ಅಂತಹ ಸಂದರ್ಭಕ್ಕಾಗಿ ಬಹಳ ದಿನಗಳವರೆಗೂ ಕಾಯಬೇಕಾಗುತ್ತದೇನೋ ಮತ್ತು ದೇಶವನ್ನು ಆವರಿಸಿರುವ ಈ ಕಪ್ಪುರಾತ್ರಿ ಎಂದಿಗೂ ಕೊನೆಗೊಳ್ಳಲಾರದೇನೋ ಎಂಬ ಆತಂಕ ನನಗಿದೆ. ಏಕೆಂದರೆ, ಈ ಗುರಿಗಳನ್ನು ಹೇಗೆ ಆಕೆ ಸಾಧಿಸಬಲ್ಲಳೋ ನನಗೆ ತೋಚದಾಗಿದೆ. ಬುದ್ಧಿಜೀವಿವರ್ಗದ ವಿಶ್ವಾಸದ್ರೋಹ ಯಾವ ಮಟ್ಟವನ್ನೇ ಮುಟ್ಟಲಿ, ತುರ್ತುಪರಿಸ್ಥಿತಿಯ ಮುಂದುವರಿಕೆ ಮತ್ತು ಅದರೊಡನೆಯ ದಮನಕಾರೀ ನೀತಿಗಳು ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ನಿರಾಕರಣೆ-ಇವೆಲ್ಲಾ ಆಕೆ ನಿರೀಕ್ಷಿಸುವುದಕ್ಕೆ ತದ್ವಿರುದ್ಧವಾದ ಪರಿಣಾಮ ಉಂಟುಮಾಡುವ ಸಂಭವವಿದೆ. ನಾನೂ ಜನರಲ್ಲಿ ಮತ್ತು ಈ ದೇಶದ ಯುವಜನ ಹಾಗೂ ವಿದ್ಯಾರ್ಥಿಗಳಲ್ಲಿ ಅಚಲ ವಿಶ್ವಾಸವಿಟ್ಟಿದ್ದೇನೆ. ಈ ಬಗ್ಗೆ ಈ ಹಿಂದೆಯೇ ನಾನು ಬರೆದಿರುವುದರಿಂದ, ಇಲ್ಲಿ ಈ ಬಗ್ಗೆ ಹೆಚ್ಚು ಹೇಳಬಯಸುವುದಿಲ್ಲ.

ಅಲ್ಲಿ, ಜಗಜೀವನ ಬಾಬು ಇಷ್ಟು ಪೂರ್ತಿಯಾಗಿ ಸಿಕ್ಕಿಹಾಕಿಕೊಂಡಿರುವಂತಿರುವುದನ್ನು ನೋಡಿದರೆ ಕೆಟ್ಟದೆನಿಸುತ್ತದೆ. ಅವರೂ ಕೂಡಾ ಶ್ರೀಮತಿ ಗಾಂಧಿ ಮತ್ತು ಬರೂವಾ ಅವರೊಂದಿಗೆ 'ಪ್ರಜಾಪ್ರಭುತ್ವವನ್ನು ಉಳಿಸುವ' ಪಲ್ಲವಿ ಹಾಡತೊಡಗಿದ್ದಾರೆ. ಇದು ದಕ್ಷಿಣ ವಿಯಟ್ನಾಮೀಯರನ್ನು, ಅವರನ್ನು ನಾಶ ಮಾಡುವ ಮೂಲಕ 'ಉಳಿಸಲು' ಅಮೇರಿಕನ್ನರು ಮಾಡುತ್ತಿರುವ ಪ್ರಯತ್ನದಂತಿದೆ. ಬೆಳೆಯುತ್ತಿರುವ ಸಸಿಯನ್ನು ಉಳಿಸಬೇಕಾದರೆ ಹೇಗೆ ಅದರ ಸುತ್ತ ಬೇಲಿ ಹಾಕಬೇಕು ಮತ್ತು ಮಗು ಬೆಳೆಯಬೇಕಾದರೆ ಹೇಗದನ್ನು ರಕ್ಷಿಸಬೇಕು ಮುಂತಾದುದನ್ನು ವಿಷದೀಕರಿಸಲು, ಓಹ್ ನನಗೆ ಗೊತ್ತು, ಬಹಳ ಮಂದಿ 'ಬುದ್ಧಿಜೀವಿಗಳು' ಮುನ್ನುಗ್ಗಿ ಬರುತ್ತಾರೆ. ಆದರೆ ಈ ಎಲ್ಲ ವಾದ-ವಿವರಣೆಗಳ ನಂತರವೂ ತುರ್ತುಪರಿಸ್ಥಿತಿ, ನಡುರಾತ್ರಿಯ ರಾಕ್ಷಸೀ ಬಂಧನಗಳು, ಪತ್ರಿಕಾ ಸ್ವಾತಂತ್ರ್ಯದ ದಮನ ಮತ್ತು ಕಳೆದ ಜೂನ್‌ನಿಂದೀಚೆಗೆ ಕೈಗೊಂಡ ಇತರ ಕ್ರಮಗಳು ಭಾರತೀಯ ಪ್ರಜಾಪ್ರಭುತ್ವವನ್ನು ಉಳಿಸಬಲ್ಲವು ಎಂಬುದಂತೂ ಸಂದೇಹಾಸ್ಪದವೇ. ಈ ಕ್ರಮಗಳು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಗೆ ಚೇತರಿಸಿಕೊಳ್ಳಲು ಬಹಳಕಾಲ ಹಿಡಿಯುವಂತಹ ಸಖತ್ ಪೆಟ್ಟನ್ನೇ ಕೊಟ್ಟಿವೆ ಎಂದು ನನಗೆ ಪದೇ ಪದೇ ಅನ್ನಿಸುತ್ತಿದೆ. ಒಂದು ಪಕ್ಷ ಶ್ರೀಮತಿ ಗಾಂಧಿ ಹಾಗೂ ಆಕೆಯ ಗುಪ್ತಕೂಟ ಒಂದಲ್ಲ ಒಂದು ಅಪ್ರಜಾಸತ್ತಾತ್ಮಕ ಕುಯುಕ್ತಿಯ ಮೂಲಕ ತಮ್ಮ ಅಧಿಕಾರವನ್ನು ಭದ್ರಮಾಡಿಕೊಂಡಲ್ಲಿ, ಈ

ದುರಾಕ್ರಮಣೆಗಳನ್ನು ರಂಗದಿಂದ ಹೊರತಳ್ಳಿ, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಪುನರ್ ನೆಲೆಗೊಳಿಸುವಂತಹ ಕ್ರಾಂತಿಯೊಂದು ಉಂಟಾಗುವವರೆಗೂ-ಇದು ಶಾಂತಿಯುತವಾಗಿಯೇ ಇರುತ್ತದೆಂದು ಈಗಲೂ ನಂಬಿರುವ-ದೇಶ ಚೇತರಿಸಿಕೊಳ್ಳಲಾರದೇನೋ. ಹಿಂಸಾತ್ಮಕ ಕ್ರಾಂತಿ ಅಥವಾ ಆ ದಿಸೆಯಲ್ಲಿನ ಪ್ರಯತ್ನ ಈ ದುರಾಕ್ರಮಣೆಗಳನ್ನು ಬಲಿಷ್ಠಗೊಳಿಸುತ್ತದೆ ಇಲ್ಲವೇ ಬೇರೊಂದು ದುರಾಕ್ರಮಣೆಗಳ ಕೂಟವನ್ನು ಸ್ಥಾಪಿಸುತ್ತದಷ್ಟೆ. ಆಗ ಈ ಪಾಪಿ ದೇಶ, ಆಫ್ರೋ ಏಷ್ಯಾದ ಇತರ ಹಲವು ದೇಶಗಳಂತೆಯೇ ಸಂಕಷ್ಟ, ಸರ್ವಾಧಿಕಾರ ಹಾಗೂ ಅವಸಾನದ ಅದೇ ದಾರಿಯನ್ನು ಹಿಡಿಯುತ್ತದಷ್ಟೆ. ಭಾರತವನ್ನು ಈ ದುರ್ಗತಿಯಿಂದ ದೈವವೇ ಪಾರುಮಾಡಬೇಕು!

ಅಕ್ಟೋಬರ್ 2

'ಕಲೆ ಅಮರತ್ವದ ಕಡೆ ನೋಡುತ್ತದೆಯೇ ಹೊರತು ಸಮಾಧಿಯ ಕಡೆಗಲ್ಲ. ಎಲ್ಲ ಶ್ರೇಷ್ಠ ಕಲಾ ಪ್ರಕಾರವೂ ಸಾವನ್ನು ವಿರೋಧಿಸುತ್ತದೆ, ಏಕೆಂದರೆ ಅದು ತಾನು ಪ್ರತಿನಿಧಿಸುವ ನಾಗರಿಕತೆಯ ವೈಭವದ ಪ್ರತಿಬಿಂಬವಾಗಿರದೆ, ಅದರ ಅತ್ಯುನ್ನತ ಮೌಲ್ಯಗಳ ಅಭಿವ್ಯಕ್ತಿಯಾಗಿರುತ್ತದೆ'.

- Andre Malraux, Anti memories, P.32

ಅಕ್ಟೋಬರ್ 2

(ಹಿಂದಿಯಿಂದ ಅನುವಾದಿಸಿದ್ದು)

ಬಾಪೂ, ಇದೋ ನಿಮ್ಮ ಪದತಲದಲ್ಲಿ ನನ್ನ ಸಾಷ್ಟಾಂಗ ನಮಸ್ಕಾರಗಳು. ಮಹಾತ್ಮ ಗಾಂಧಿಗೆ ಜಯವಾಗಲಿ! ಮಹಾತ್ಮ ಗಾಂಧಿ ಚಿರಾಯುವಾಗಿರಲಿ!

ಇವತ್ತು ಬಾಪುವಿನ 106ನೇ ಹುಟ್ಟುಹಬ್ಬ. ಬಾಪು ನಮ್ಮನ್ನಗಲಿ ಸುಮಾರು 28 ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ ಎಲ್ಲರೂ ಅವರ ಹೆಸರನ್ನು ಬಳಸಿದರೇ ಹೊರತು ಅವರ ಕನಸನ್ನು ನನಸುಮಾಡುವ ಪ್ರಯತ್ನ ಮಾಡಿದ್ದು ಮಾತ್ರ ಅಲ್ಪವೇ. ಬಾಪು ತೋರಿಸಿದ ಹಾದಿಯಿಂದ ನಾವು ದೂರ ಸರಿದು ದೊಡ್ಡ ತಪ್ಪು ಮಾಡಿದೆವು ಎಂದು ಇತ್ತೀಚಿನ ಕೆಲವು ವರ್ಷಗಳಲ್ಲಿ ಬುದ್ಧಿಜೀವಿಗಳು ಹೇಳತೊಡಗಿದ್ದಾರೆ. ಆದರೆ ಜವಾಹರಲಾಲ್‌ರ ಕಾಲದಲ್ಲಿ ಇದೇ ಬುದ್ಧಿಜೀವಿಗಳು ಅಥವಾ ಇಂತಹವರು, ಗಾಂಧೀಜಿಯನ್ನು ಸಂಪ್ರದಾಯವಾದಿ ಎಂದು ಗುರುತಿಸಿ ನೆಹ್ರೂ ಅವರ 'ಆಧುನಿಕ' ದೃಷ್ಟಿಕೋನವನ್ನು ಪ್ರಶಂಸಿಸಿದರು. ತಲೆ ಸವರುವ ಕಲೆಯನ್ನು ಕರಗತ ಮಾಡಿಕೊಂಡಿರುವ ಶ್ರೀಮತಿ ಗಾಂಧಿ, ಬಹಳಷ್ಟು ಸಾರಿ ತಾನು ಗಾಂಧೀಜಿಯ

ಹಾದಿಯಲ್ಲೇ ನಡೆಯುತ್ತಿರುವುದಾಗಿ ಹೇಳಿಕೊಂಡಿದ್ದಾಳೆ. ಬಹುಶಃ ಇಂದೂ ಸಹ, ಅವರ ಹುಟ್ಟುಹಬ್ಬದಾಚರಣೆಯ ಸಂದರ್ಭದಲ್ಲಿ ಇಂತಹದೇ ನುಡಿಮುತ್ತುಗಳನ್ನು ಉದುರಿಸುತ್ತಾಳೆ. ಆದರೆ ಇದೆಲ್ಲಾ ಬರೀ ಮೋಸ.

ವಿನೋಬಾಜಿ ಕೆಲವು ವರ್ಷಗಳ ಕಾಲ ಪವಾಡ ಸದೃಶವೆನ್ನಬಹುದಾದ ಕೆಲಸ ಮಾಡಿದರು. ಸಾಮಾಜಿಕ ಬದಲಾವಣೆ ಹಾಗೂ ಪುನರ್ನಿರ್ಮಾಣದ ಹೊಸದೊಂದು ಗಾಂಧೀಮಾರ್ಗ ಸೃಷ್ಟಿಯಾಗಿದೆಯೇನೋ ಎಂದು ತೋರಿತು. ಆದರೆ ಅವರ ಚಂಡಮಾರುತದಂತಹ **ಭೂದಾನ** ಪ್ರಯೋಗದ ನಂತರ, ಒಂದು ಸಣ್ಣ ತೆಳುಗಾಳಿಯೂ ಇಲ್ಲವಾಗಿದೆ; ಇನ್ನು **ಗ್ರಾಮದಾನ, ಗ್ರಾಮಸ್ವರಾಜ್ಯ** ಅಥವಾ ಇನ್ನಾವುದೇ ರಚನಾತ್ಮಕ ಕಾರ್ಯಕ್ರಮದ ಪ್ರಬಲ 'ಚಂಡಮಾರುತ'ದ ಬಗ್ಗೆ ಹೇಳುವುದೇ ಬೇಡ. ನಂತರ ಅವರು ಅಂತರ್ಮುಖಿಯಾಗಿ, 'ನಿಷ್ಕ್ರಿಯೆ' ರೂಪದಲ್ಲಿನ 'ಕ್ರಿಯೆ'ಯ ಪ್ರಯೋಗವನ್ನು ಆರಂಭಿಸಿದರು. ಇಂದಿನವರೆಗೆ ಇದು ಯಶಸ್ವಿಯಾದಂತೆ ಕಾಣುವುದಿಲ್ಲ, ಆದರೆ ಚರಿತ್ರೆಯಲ್ಲಿ 10 ಅಥವಾ 20 ವರ್ಷಗಳು ಸಾಮಾನ್ಯ ಅವಧಿಯೇ? ಈ ಮಧ್ಯೆ ದೇಶ ಅವನತಿಯತ್ತ ಸಾಗುತ್ತಿದೆ, ನೈತಿಕವಾಗಿ ಮಾತ್ರವಲ್ಲ - ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ, ಬಡತನ ರೇಖೆಯ ಕೆಳಗೆ ಜೀವಿಸುವ ಶೇಕಡಾ 40ರಷ್ಟು ಭಾರತೀಯರು ಅತಿ ದಾರಿದ್ರ್ಯದೆಡೆಗೆ ಸಾಗಿದ್ದಾರೆ. ಈ ಸಂದರ್ಭದಲ್ಲಿ, ಪ್ರಜಾಪ್ರಭುತ್ವ ಎಂದರೇನು ಎಂಬುದನ್ನು ಬಾಪು ವಿವರಿಸಿದ ರೀತಿ ನೆನಪಿಗೆ ಬರುತ್ತಿದೆ. ಪ್ರಜಾಪ್ರಭುತ್ವ ಎಂದರೆ ಜನತೆ ಸ್ಥಾಪಿಸಿದ ಸರ್ಕಾರ ಎಂದಷ್ಟೇ ಆಗಿರದೆ, ಅದರಲ್ಲಿ ತಮ್ಮ ಆಳ್ವಿಕೆದಾರರು, ಆಳಲು ಅನರ್ಹರೆನಿದಲ್ಲಿ, ಅವರನ್ನು ಕೆಳಗಿಳಿಸುವ ಅಧಿಕಾರವೂ ಅಡಗಿದೆ ಎಂದು ಬಾಪು ಹೇಳಿದ್ದರು. ಪ್ರಜಾಪ್ರಭುತ್ವ ಈಗ ಭಾರತದಲ್ಲಿ ಹೆಚ್ಚು ಕಡಿಮೆ ಕಾಣದಂತೆಯೇ ಆಗಿದೆ. ರಾಜಕೀಯ ರಚನೆಯ ಪಿರಮಿಡ್ ಇನ್ನೂ ತನ್ನ ಶೃಂಗದ ಮೇಲೇ ನಿಂತಿದೆ. ಇದೇ ಮಾತು ಶಿಕ್ಷಣ ಮತ್ತು ಸಾರ್ವಜನಿಕ ಚಟುವಟಿಕೆಗಳ, ಹೆಚ್ಚು ಕಡಿಮೆ ಇತರ ಎಲ್ಲ ವಲಯಗಳಗೂ ಅನ್ವಯಿಸುತ್ತದೆ. ಇದು ವಿವರಣೆಯನ್ನು ಬೇಡುವ ದುರಂತ ಕಥೆಯಷ್ಟೆ.

ಅಕ್ಟೋಬರ್ 3

ಕಾಮರಾಜ್* ನಿನ್ನೆ ಮದ್ರಾಸ್‌ನಲ್ಲಿ ಭಾರಿ ಹೃದಯಘಾತದಿಂದಾಗಿ ನಿಧನ ಹೊಂದಿದ್ದಾರೆ. ಭಾರತೀಯ ರಾಜಕಾರಣದ ಒಬ್ಬ ಅಪೂರ್ವ, ಭವ್ಯ ಎಂದು ಕೂಡಾ ಹೇಳಬಹುದಾದ ನಾಯಕ ಇನ್ನಿಲ್ಲ. ಅವರ ಜೀವನದಲ್ಲಿ ಸಾಧಿಸಬೇಕೆಂದಿದ್ದ ಕಾರ್ಯ ಇನ್ನೂ ಪೂರ್ಣಗೊಂಡಿರಲಿಲ್ಲ. ನನ್ನನ್ನು ಕಳೆದ ಬಾರಿ ದೆಹಲಿಯಲ್ಲಿ

* **ಸಂಸ್ಥಾ ಕಾಂಗ್ರೆಸ್ ನಾಯಕ**

ಭೇಟಿಯಾಗಿದ್ದಾಗ ಅವರು ಸರಿಸುಮಾರಾಗಿ ಹೀಗೆ ಹೇಳಿದ್ದರು: 'ಈಗ ನೀವೇನು ಮಾಡುತ್ತಿದ್ದೀರೋ ಅದೊಂದೇ ದೇಶಕ್ಕೆ ಉಳಿದಿರುವ ಆಶಾಕಿರಣ.' ಆದರೆ ನಂತರ ನಾನು ತಮಿಳ್ನಾಡು ಪ್ರವಾಸದಲ್ಲಿ ಮಾಡಿದ ಭಾಷಣಗಳು ಅವರಿಗೆ ಹಿಡಿಸಲಿಲ್ಲ. ನನಗೆ ಡಿ.ಎಂ.ಕೆ.ಯನ್ನು ಖಂಡಿಸಲಾಗಲಿಲ್ಲ ಮತ್ತು ತಮಿಳ್ನಾಡು ಸರ್ಕಾರದ ವಿರುದ್ಧ ಹೋರಾಟಕ್ಕೆ ಕರೆಕೊಡಲಾಗಲಿಲ್ಲ. ಇದಕ್ಕೆ ಕಾರಣವೆಂದರೆ ಶ್ರೀ ಕರುಣಾನಿಧಿಯವರು ಕಾಂಗ್ರೆಸ್ ಮುಖ್ಯಮಂತ್ರಿಗಳಂತೆ ವರ್ತಿಸದೆ, ವಿರೋಧ ಪಕ್ಷದ ನಾಯಕರನ್ನು ಭೇಟಿಮಾಡಿ, ಅವರೊಂದಿಗೆ ಡಿ.ಎಂ.ಕೆ. ಆಳ್ವಿಕೆ ಬಗ್ಗೆ ಇರುವ ಅಸಮಾಧಾನಗಳನ್ನು ಕುರಿತು ಚರ್ಚಿಸಲು ಸಿದ್ಧರಿದ್ದರು. ತಮ್ಮ ತಪ್ಪುಗಳು, ಭ್ರಷ್ಟಾಚಾರ ಅಥವಾ ಇನ್ನಾವುದೇ ರೀತಿಯ ಆಪಾದನೆಗಳ ಬಗ್ಗೆ ನಿಷ್ಪಕ್ಷಪಾತ ವಿಚಾರಣೆಗೆ ಒಳಪಡಲು ಸಿದ್ಧವಿರುವುದಾಗಿ ಸಹ ಹೇಳಿದರು. ಹಾಗೆ ನೋಡಿದರೆ, ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ತಾವು ಹೈಕೋರ್ಟಿನ ನ್ಯಾಯಾಧೀಶರೊಬ್ಬರನ್ನು ವಿಚಾರಣಾ ಆಯೋಗಕ್ಕೆಂದು ನೇಮಿಸಿರುವುದಾಗಿ ಸಹ ತಿಳಿಸಿದರು. ತಾವು ಆಗ್ಗೆಯಾಗಲೇ ಜಾರಿಗೆ ತಂದಿದ್ದ ಸಾರ್ವಜನಿಕರಂಗದ ವ್ಯಕ್ತಿಗಳ ವರ್ತನೆಯನ್ನು ಕುರಿತ ವಿಚಾರಣೆಗೆ ಅವಕಾಶ ನೀಡುವ ಬಗ್ಗೆ ಕಾಯಿದೆಯ ಬಗ್ಗೆ ಸಹ ಅವರು ನನಗೆ ಹೇಳಿದರು. ಉದ್ದೇಶಪೂರ್ವಕವಾಗಿ ಮಾಡಿರಬಹುದಾದ ಆಪಾದನೆಗಳಿಗೆ ಬಲಿಯಾಗಿ, ನಿರಪರಾಧಿಗಳು ಶಿಕ್ಷೆಗೆ ಒಳಪಡುವಂತಹ ತಪ್ಪುಗಳೇನಾದರೂ ಪ್ರಸಕ್ತ ಕಾಯಿದೆಯಲ್ಲಿದ್ದರೆ, ಆ ಬಗ್ಗೆ ನನ್ನೊಂದಿಗೆ ಅಥವಾ ವಿರೋಧ ಪಕ್ಷಗಳ ನಾಯಕರೊಂದಿಗೆ ಚರ್ಚಿಸಲು ಸಿದ್ಧವಿರುವುದಾಗಿ ಕೂಡಾ ಅವರು ತಿಳಿಸಿದರು. ಇಂಥ ಪರಿಸ್ಥಿತಿಯಲ್ಲಿ ಜವಾಬ್ದಾರಿಯುತವಾದ ವಿರೋಧಪಕ್ಷವು ಡಿ.ಎಂ.ಕೆ. ಧುರೀಣರ ಮಾತನ್ನು ನಂಬಿ, ರಾಜಕೀಯ ಶುದ್ಧೀಕರಣದ ಸಹಜ ಕ್ರಮಗಳನ್ನು ಕೈಗೊಳ್ಳಲು ಗಂಭೀರ ಪ್ರಯತ್ನ ನಡೆಸಬೇಕಿತ್ತು. ವಾಸ್ತವವಾಗಿ, ತಮಿಳ್ನಾಡಿನಲ್ಲಿ ನಾನು ಮಾಡಿದ ಭಾಷಣವೊಂದರಲ್ಲಿ ಈ ಚಿಕಿತ್ಸಕ ಮಾರ್ಗದಲ್ಲಿ ನಡೆದು, ರಾಜ್ಯದಲ್ಲಿನ ಹದಗೆಟ್ಟ ರಾಜಕೀಯ ಪರಿಸ್ಥಿತಿಯನ್ನು ತಿಳಿಗೊಳಿಸಲು ಮುಂದಾಗಬೇಕೆಂದು ಕಾಮರಾಜರನ್ನು ಒತ್ತಾಯಿಸಿದೆ.

ಕರುಣಾನಿಧಿ, ರಾಜಾರಾಂ[44] ಅಥವಾ ಸೆಳಿಯನ್[45] ನನಗೆ ಮದ್ರಾಸ್‌ನಲ್ಲಿ ಏನೆಲ್ಲಾ ಹೇಳಿದರೋ ಅದನ್ನೆಲ್ಲಾ ಹಾಗೇ ನಂಬಬೇಕು ಎಂದು ನಾನು ಹೇಳುತ್ತಿಲ್ಲ ಅಥವಾ ನಾನು ಹಾಗೆ ಮಾಡಿದೆ ಎಂದಲ್ಲ. ಆದರೆ ಕಾಮರಾಜರಿಂದಾಗಲಿ ಅಥವಾ ವಿರೋಧ ಪಕ್ಷದ ಇನ್ನಾವ ನಾಯಕರಿಂದಾಗಲಿ ಡಿ.ಎಂ.ಕೆ. ನಾಯಕರ ಮಾತಿಗೆ ಪ್ರತಿಕ್ರಿಯೆಯೇ ಇಲ್ಲದಾಗಿ, ಆ ಸರ್ಕಾರವನ್ನು ಖಂಡಿಸುವುದು ಮತ್ತು ಅದರ ವಿರುದ್ಧ ಆಂದೋಲನವೊಂದಕ್ಕೆ ಕರೆಕೊಡುವುದು ಸರಿ ತೋರಲಿಲ್ಲ, ಕನಿಷ್ಠ ನನಗಾದರೂ. ಏಕೆಂದರೆ ಆ ಸರ್ಕಾರ ನನ್ನ ಆಂದೋಲನದೊಂದಿಗೆ ಪ್ರಾಮಾಣಿಕವಾಗಿ

44. ಕೆ. ರಾಜಾರಾಂ, ಆಗಿನ ಡಿ.ಎಂ.ಕೆ. ನಾಯಕ.
45. ಎರಾಸೆಳಿಯನ್, ಲೋಕಸಭೆಯಲ್ಲಿ ಆಗ ಡಿ.ಎಂ.ಕೆ. ಸದಸ್ಯರಾಗಿದ್ದವರು.

ಸಹಕರಿಸುವ ಸಾಧ್ಯತೆ ಇತ್ತು ; ಕಾರಣ : ಆಂದೋಲನದ ಗುರಿಗಳು ದೀರ್ಘಕಾಲಿಕವಾಗಿದ್ದವು - ಸಂಪೂರ್ಣ ಕ್ರಾಂತಿ ಅದರ ಪರಮ ಗುರಿಯಾಗಿತ್ತು. ಆದರೆ ಕಾಮರಾಜರೂ ಸೇರಿದಂತೆ, ತಮಿಳ್ನಾಡಿನ ವಿರೋಧ ಪಕ್ಷದ ಯಾವ ನಾಯಕರಿಗೂ ಆಂದೋಲನದಲ್ಲಿ ಆಸಕ್ತಿ ಇರಲಿಲ್ಲ. ಆಂದೋಲನದ ತತ್‌ಕ್ಷಣದ ರಾಜಕೀಯ ಉದ್ದೇಶ, ವಿರೋಧ ಪಕ್ಷದ ಉದ್ದೇಶದೊಂದಿಗೆ ಮಿಳಿತಗೊಳ್ಳುವುದು ಅವರಿಗೆ ಬೇಕಿತ್ತು. ಕಾಮರಾಜ್ ಅವರಿಗೆ, ಪರಿಸ್ಥಿತಿ - ಉದಾಹರಣೆಗೆ ಎಂ.ಜಿ.ಆರ್.[46]ಗೆ ಹೋಲಿಸಿದಂತೆ - ಹೆಚ್ಚು ಕಷ್ಟಕರವಾಗಿತ್ತು. ಏಕೆಂದರೆ (ದೆಹಲಿ ಸಭೆಯೊಂದರಲ್ಲಿ ಅವರು ನನಗೆ ಹೇಳಿದಂತೆ) ಅವರು ಡಿ.ಎಂ.ಕೆ. ಅನ್ನು ದುರ್ಬಲಗೊಳಿಸಲು ತಯಾರಿರಲಿಲ್ಲ; ಇದರಿಂದ ಎ.ಡಿ.ಎಂ.ಕೆ. ಬಲಿಷ್ಠವಾಗುತ್ತದೆಂದು ಅವರು ತಿಳಿದಿದ್ದರು. ಕಾಮರಾಜರಿಗೆ ಎ.ಡಿ.ಎಂ.ಕೆ., ಡಿ.ಎಂ.ಕೆ.ಗಿಂತ ಕೆಟ್ಟ ಪಕ್ಷವಾಗಿತ್ತು. ಆದರೂ, ಸಂಸ್ಥಾ ಕಾಂಗ್ರೆಸ್ಸಿನ ರಾಷ್ಟ್ರೀಯ ನೀತಿಗೆ ಅನುಗುಣವಾಗಿ, ಆಡಳಿತ ಪಕ್ಷದ ಮೈತ್ರಿಯನ್ನು ಬಯಸಲು ಅವರು ಸಿದ್ಧರಿರಲಿಲ್ಲ. ಆದುದರಿಂದ ಕಾಮರಾಜರ ಸ್ಥಾನ ಇತರ ರಾಜ್ಯಗಳ ಸಂಸ್ಥಾ ಕಾಂಗ್ರೆಸ್ ನಾಯಕರ ಸ್ಥಾನಗಳಂತಿಲ್ಲದೆ, ಅತ್ಯಂತ ಅನಾನುಕೂಲಕರವಾಗಿತ್ತು ಮತ್ತು ಬಹಳ ಸೂಕ್ಷ್ಮವೂ ಆಗಿತ್ತು. ಅವರು ನನ್ನಲ್ಲಿ ಒಮ್ಮೆ ಹೇಳಿದಂತೆ, ಅವರು ಶ್ರೀಮತಿ ಗಾಂಧಿಯನ್ನು ಕಿಂಚಿತ್ತೂ ನಂಬುತ್ತಿರಲಿಲ್ಲ. ಶ್ರೀಮತಿ ಗಾಂಧಿ ಸಹ ಕಾಮರಾಜರನ್ನು ಕಿಂಚಿತ್ತೂ ನಂಬುತ್ತಿರಲಿಲ್ಲ. ಆದರೆ, ತಮಿಳ್ನಾಡಿನಲ್ಲಿರುವಂತಹ ಚತುರ್ಮುಖ ರಾಜಕೀಯ ರಂಗದಲ್ಲಿ, ಡಿ.ಎಂ.ಕೆ. ಮತ್ತು ಎ.ಡಿ.ಎಂ.ಕೆ. ಎರಡನ್ನೂ ವಿರೋಧಿಸಿ, ತಮ್ಮ ರಾಜಕಾರಣವನ್ನು ಹೇಗೋ ತಳ್ಳಿಕೊಂಡು ಹೋಗುವುದಕ್ಕೆ ಅವಕಾಶ ಎಂಬುದೇ ಇರಲಿಲ್ಲ. ಶ್ರೀಮತಿ ಗಾಂಧಿಯಂತಹ ತತ್ವಹೀನ ರಾಜಕಾರಣಿಯು, ಎ.ಡಿ.ಎಂ.ಕೆ. ಜೊತೆ ಮೈತ್ರಿ ಬೆಳೆಸಲು ಯಾವ ಮುಜಗರವನ್ನೂ ಪಡುವುದಿಲ್ಲ ಎಂಬುದು ಅವರಿಗೆ ಗೊತ್ತಿತ್ತು; ಅದು ಹಾಗಾಗಬಹುದು ಎಂಬ ಆತಂಕವೂ ಅವರಲ್ಲಿತ್ತು. ಹೀಗಾಗಿ ಮುಂದಿನ ಚುನಾವಣೆಗಳಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುವುದೇ ಅವರ ಸದ್ಯದ ನಿರ್ಧಾರವಾಗಿತ್ತು. ಆದರೆ ಅದರಿಂದ ತಮ್ಮ ಪಕ್ಷ ವಿನಾಶದ ಹಾದಿ ಹಿಡಿಯುತ್ತದೆ ಎಂಬುದೂ ಅವರಿಗೆ ಮನವರಿಕೆಯಾಯಿತು. ಹೇಗೋ ಅಂತೂ ಅವರು, ಕಾದು ಪರಿಸ್ಥಿತಿಯನ್ನು ಪರಿಶೀಲಿಸುವ ನಿರ್ಧಾರ ಕೈಗೊಂಡರು. ತಮ್ಮ ಪಕ್ಷದ ರಾಷ್ಟ್ರೀಯ ನೀತಿ ಹಾಗೂ ಅದಕ್ಕೆ ಬಿಹಾರ ಆಂದೋಲನದಿಂದ ದೊರೆತ ಬೆಂಬಲ ಇಲ್ಲದಿದ್ದಲ್ಲಿ, ಅವರು ಶ್ರೀಮತಿ ಗಾಂಧಿ ಕಡೆ ಸರಿದುಬಿಡುತ್ತಿದ್ದರೋ ಏನೋ. ಅವರ ರಾಜಕೀಯ ಸ್ಥಾನ ಮತ್ತು ಅವರು ಬಳಸಿಕೊಳ್ಳಬಹುದಾಗಿದ್ದ ಅವಕಾಶಗಳು, ತುರ್ತುಪರಿಸ್ಥಿತಿ ಘೋಷಣೆ ಹಾಗೂ ಆ ನಂತರದ ಘಟನೆಗಳಿಂದಾಗಿ ಕ್ಷೀಣಗೊಂಡವು ಮತ್ತು ಹೆಚ್ಚು ಕಡಿಮೆ ಮುಚ್ಚಿಹೋದವು.

ಅಂತೂ ಈ ಸಾವು ಅವರ ಈ ಸಮಸ್ಯೆಗಳಿಗೆ ಕೊನೆ ತಂದಂತಾಗಿದೆ. ಅವರ

---

46. ಎಂ.ಜಿ. ರಾಮಚಂದ್ರನ್ - ಅಖಿಲಭಾರತ ಅಣ್ಣಾ ಡಿ.ಎಂ.ಕೆ.ಯ ಪ್ರಧಾನ ಕಾರ್ಯದರ್ಶಿ.

ಅನುಯಾಯಿಗಳು ಪರಸ್ಪರ ಭಿನ್ನಾಭಿಪ್ರಾಯಗಳಿಗೆ ಸಿಕ್ಕಿ, ದೂರ ದೂರ ಹೋಗುವವರೇನೋ ಎಂಬ ಸಂದೇಹ ನನಗಿದೆ. ಶ್ರೀಮತಿ ಗಾಂಧಿ, ತಮಿಳ್ನಾಡು ಸಂಸ್ಥಾ ಕಾಂಗ್ರೆಸ್ಸಿಗೆ ಈಗಾಗಲೇ ಭಾರಿ ಪೆಟ್ಟನ್ನೇ ಕೊಟ್ಟಿದ್ದಾಳೆ. ಮೊರಾರ್ಜಿ ಭಾಯಿ ಈಗ ಸ್ಥಾನಬದ್ಧತೆಯಲ್ಲಿದ್ದಾರೆ. ಪಕ್ಷದ ಅಧ್ಯಕ್ಷ ಶ್ರೀ ಅಶೋಕ ಮೆಹ್ತಾ ಕೂಡಾ. ಸಿ.ಬಿ. ಗುಪ್ತ ಅವರು ಅಲ್ಲಿಗೆ ಹೋಗುವಷ್ಟು ಆರೋಗ್ಯ ಹೊಂದಿದ್ದಾರೋ ಇಲ್ಲವೋ. ಆರೊಗ್ಯದಿಂದಿದ್ದರೂ ಸಹ ಅಲ್ಲಿಗೆ ಹೋಗಲು ಸಿದ್ಧವಿರುವರೋ ಇಲ್ಲವೋ. ಇಂತಹ ಸಂದರ್ಭದಲ್ಲಿ ಶ್ರೀಮತಿ ಗಾಂಧಿ ಪರಿಸ್ಥಿತಿಯ ಗರಿಷ್ಠ ಉಪಯೋಗ ಪಡೆಯುತ್ತಾಳೆ. ಏಕೊ ಏನೋ, ರಾಜನ್ ಬಾಬು (ರಾಜೇಂದ್ರ ಪ್ರಸಾದ್) ಅವರ ಅಂತಿಮಕ್ರಿಯೆಯಲ್ಲಿ ಭಾಗವಹಿಸುವುದು ಸಂಪ್ರದಾಯದ ದೃಷ್ಟಿಯಿಂದಾಗಲೀ ಅಥವಾ ಹಳೆಯ ನಿಕಟ ಸಹೋದ್ಯೋಗಿಯ ಬಗ್ಗೆ ಇರಬೇಕಾದ ನೈತಿಕ ಕರ್ತವ್ಯದ ದೃಷ್ಟಿಯಿಂದಾಗಲೀ ಅಗತ್ಯವೆಂದು ಶ್ರೀ ನೆಹ್ರು ಅವರು ಭಾವಿಸದೇ ಇದ್ದದ್ದು ಇಲ್ಲಿ ನೆನಪಿಗೆ ಬರುತ್ತಿದೆ. ಅಧಿಕಾರ, ವಿನಯ ಹಾಗೂ ಆ ವ್ಯಕ್ತಿಯ ಬಗ್ಗೆ ಇದ್ದ ಪಟ್ಟಾದ ಆತ್ಮೀಯತೆಯ ದ್ಯೋತಕವಾಗಿ ರಾಷ್ಟ್ರಪತಿ ರಾಧಾಕೃಷ್ಣನ್ ಬನ್ಸ್‌ಘಾಟ್‌ನಲ್ಲಿ ನಡೆದ ಅಂತಿಮ ಕ್ರಿಯೆಗೆ ಆಗಮಿಸಿದ್ದರು. ನೆಹ್ರೂ ವಂಶದವರಿಗೆ, ರಾಜಕಾರಣವೇ ಎಲ್ಲವನ್ನೂ ನಿರ್ಧರಿಸುತ್ತದೆ ಎಂದು ಕಾಣುತ್ತದೆ.

ಅಕ್ಟೋಬರ್ 4

ಕಾಮರಾಜರ ಅಂತಿಮ ಕ್ರಿಯೆ ನಿಜವಾಗಿಯೂ ಮಾನವ ಅಂತಃಕರಣವನ್ನು ಮಟ್ಟುವಂತಿತ್ತು ಎಂದು ಕಾಣುತ್ತದೆ, ಗಂಭೀರ, ಆರ್ದ್ರ, ಹೃದಯಸ್ಪರ್ಶಿ.

'ಟ್ರಿಬ್ಯೂನ್'ನಲ್ಲಿ 4 ಅಂಕಣಗಳ ಶೀರ್ಷಿಕೆಯೊಂದು ಹೀಗೆ ತಿಳಿಸುತ್ತದೆ : 'ಭಾರತದಲ್ಲಿ ಪರಿಪೂರ್ಣ ಶಾಂತಿ ಎಂದು ಪ್ರಧಾನಿ.' ಕೇಳಬೇಕೆ! ತುರ್ತುಪರಿಸ್ಥಿತಿಗಿಂತ ಮುಂಚೆ ದೇಶಾದ್ಯಂತ ಶಾಂತಿ ಎಂಬುದೇ ಇರಲಿಲ್ಲವೆಂಬಂತೆ! ಇರಲಿ, ಇದು ಶ್ರೀಮತಿ ಗಾಂಧಿ ಸುಮಾರು ಪ್ರತಿದಿನ ಹಾಡುವ ಪಲ್ಲವಿ.

ಮುಂದಿನ ಫೆಬ್ರುವರಿ - ಮಾರ್ಚಿನಲ್ಲಿ ನಡೆಯಬೇಕಾಗಿರುವ ಸಂಸತ್ ಚುನಾವಣೆಗಳ ಬಗ್ಗೆ ಶ್ರೀಮತಿ ಗಾಂಧಿ 'ನಾನೀಗಲೇ ಏನೂ ಹೇಳಲಾರೆ. ಅದಕ್ಕಿನ್ನೂ ಬಹಳ ಕಾಲವಿದೆ. ಅಗತ್ಯಕ್ಕಿಂತ ಮುಂಚೆಯೇ ನಾವದರ ಬಗ್ಗೆ ಯೋಚಿಸಲಾರೆವು' ಎಂದು ಹೇಳಿದ್ದಾಳೆ. ಹೌದು, ಅದಕ್ಕಿನ್ನೂ ಬಹಳ ಕಾಲವಿದೆ! ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ. ಇನ್ನು ನಾಲ್ಕು ತಿಂಗಳುಗಳು ಮಾತ್ರ ಉಳಿದಿವೆ. ವಿರೋಧೀ ನಾಯಕರು ಸೆರೆಮನೆಯಲ್ಲಿದ್ದಾರೆ, ಪತ್ರಿಕೆ ಹಾಗೂ ವಿಚಾರ ಸ್ವಾತಂತ್ರ್ಯವನ್ನು ಮೆಟ್ಟಿಹಾಕಲಾಗಿದೆ. ನಾಡಿನಾದ್ಯಂತ ಭೀತಿಯ ವಾತಾವರಣ ಆವರಿಸಿದೆ.

ಚುನಾವಣೆಗಳಿಗಿಂತ ಸ್ವಲ್ಪ ಮುಂಚೆ - ಡಿಸೆಂಬರ್ ಕೊನೆ ಅಥವಾ ಜನವರಿಯಲ್ಲಿ ಎಂದಿಟ್ಟುಕೊಳ್ಳೋಣ - ಬಂಧನದಿಂದ ಎಲ್ಲರನ್ನು ಬಿಡುಗಡೆ ಮಾಡಿ, ಅಭಿವ್ಯಕ್ತಿ ಸ್ವಾತಂತ್ರ್ಯ ಸಂಘ ಸ್ವಾತಂತ್ರ್ಯವನ್ನು ಮತ್ತೆ ಜಾರಿಗೆ ತಂದಲ್ಲಿ, ವಿರೋಧಪಕ್ಷಗಳು ಅಷ್ಟು ಅಲ್ಪಾವಧಿಯಲ್ಲಿ ತಂತಮ್ಮ ಸಂಸ್ಥೆಗಳನ್ನು ಪುನರ್‌ಸಂಘಟಿಸಿಕೊಂಡು, ಒಂದು ರೀತಿಯ ಚುನಾವಣಾ ಏಕತೆಯನ್ನು - ಪ್ರಮುಖ ವಿರೋಧ ಪಕ್ಷಗಳ ವಿಲೀನ ಅಸಾಧ್ಯವೇ ಆದರೆ, ಗುಜರಾತ್ ಜನತಾರಂಗದ ರೀತಿಯಲ್ಲಾದರೂ - ರೂಢಿಸಿಕೊಂಡು, ಅಗತ್ಯ ನಿಧಿ ಸಂಗ್ರಹಿಸಲು ಮತ್ತು ಇತರ ಏರ್ಪಾಡುಗಳನ್ನು ಮಾಡಿಕೊಳ್ಳಲು ಸಾಧ್ಯವಾಗುವುದೇ? ಶ್ರೀಮತಿ ಗಾಂಧಿಯ ಆಲೋಚನೆ ಈ ರೀತಿಯದೇ ಆಗಿರುವ ಸಾಧ್ಯತೆ ಇದೆ.

ಅಕ್ಟೋಬರ್ 5

ರಾಜು, ಲಾಲ್‌ಬಾಬು ಮತ್ತು ಅಬ್ರಹಾಂ[47] ಬಂದಿದ್ದರು. ಭೇಟಿ ಸಂತೋಷದಾಯಕವಾಗಿತ್ತಾದರೂ ಅವರೆಲ್ಲಾ ಅಷ್ಟೊಂದು ವಿಷಯವನ್ನು ನನಗೆ ತಿಳಿಸಿದರಾದರೂ ನನಗೆ ಭೇಟಿಯನ್ನು ಸದುಪಯೋಗಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನಾನು ಅವರಿಗೆ ಎಷ್ಟೊಂದು ವಿಷಯ ಹೇಳಬೇಕಿತ್ತು, ಎಷ್ಟೊಂದು ಪ್ರಶ್ನೆಗಳನ್ನು ಕೇಳಬೇಕಿತ್ತು, ಆದರೆ ಅವೆಲ್ಲಾ ನನ್ನ ಮನಸ್ಸಿನಲ್ಲಿಯೇ ಉಳಿದು ಹೋದವು. ಸಾಕಷ್ಟು ಕಾಲವಕಾಶವೇ ಇರಲಿಲ್ಲ. ಮುಂದೆ, ಅವರೆಲ್ಲಾ ಒಟ್ಟಿಗೆ ಬರಬಾರದೆಂದು ಸೂಚಿಸುವೆ. ಇದು ಇತರರಿಗೂ ಅನ್ವಯಿಸುತ್ತದೆ.

ಸುಧಾ[48] ಮತ್ತು ಉಮಾ[49]ರನ್ನು ಬಿಡುಗಡೆ ಮಾಡಲಾಗಿದೆ ಎಂದು ತಿಳಿದು ಬಹಳ ಸಂತಸವಾಯಿತು. ಜಾನಕಿ[50] ಮತ್ತು ಪ್ರಶಾಂತ[51]ನನ್ನು ಬಿಡುಗಡೆ ಮಾಡಿದ್ದಾರಂತೆ. ಅವರು ಜಾನಕಿಯಿಂದ ನನಗಾಗಿ ಪತ್ರವೊಂದನ್ನು ತಂದಿದ್ದಾರೆ. ಸೆನ್ಸಾರ್‌ನವರು ಅದನ್ನು ಪರಿಶೀಲಿಸಿದ ನಂತರ ಅದು ನನಗೆ ಇಂದು ಅಥವಾ ನಾಳೆ ತಲುಪಬಹುದು.

ರಾಜಾ, ನಯನತಾರಳನ್ನು[52] ದೆಹಲಿಯಲ್ಲಿ ಭೆಟ್ಟಿಮಾಡಿದ್ದನಂತೆ. ಇಲ್ಲಿಂದ

---

47. ಟಿ. ಅಬ್ರಾಹಂ, ಜೆ.ಪಿ.ಯವರ ಕಾರ್ಯದರ್ಶಿ.
48. ಜೆ.ಪಿ.ಯವರ ತಂಗಿಯ ಮಗಳು.
49. ಸುಧಾರ ಪತಿ.
50. ಕುಮಾರಿ ಜಾನಕಿ ಪಾಂಡೆ, ಸರ್ವೋದಯ ಯುವಕಾರ್ಯಕರ್ತೆ.
51. ಕುಮಾರ ಪ್ರಶಾಂತ್, ಬಿಹಾರದಲ್ಲಿ ಸರ್ವೋದಯ ಸಕ್ರಿಯ ಕಾರ್ಯಕರ್ತ.
52. ನಯನತಾರ ಸೆಹಗಲ್, ಜವಾಹರಲಾಲ್ ನೆಹ್ರೂರ ಸೋದರ ಸೊಸೆ, ಖ್ಯಾತ ಲೇಖಕಿ.

ಹಿಂದಿರುಗಿ ಹೋಗುವಾಗಲೂ ಮತ್ತೆ ಭೇಟಿಮಾಡಬಹುದು. ಬಾಬೂನಿ ಪಟ್ನಾದಲ್ಲಿಯೇ ಇದ್ದಾಳಂತೆ.

ನನ್ನ ಪತ್ರಗಳು ಯಾರಿಗೂ ತಲುಪಿಲ್ಲ. ಜುಲೈನಲ್ಲಿ ಗುಲಾಬ್[53] ಹಾಗೂ ಜೀವೇಶ್[54]ಗೆ ಪಟ್ನಾಕ್ಕೆ ಬರೆದ ಪತ್ರಗಳು ಮಾತ್ರ ಅವರಿಗೆ ತಲುಪಿವೆ. ಈ ಸರ್ಕಾರ ನಿರುಪದ್ರವಿಯಾದ ವೈಯಕ್ತಿಕ ಪತ್ರಗಳಿಗೂ ಹೆದರಿ ಸಾಯುತ್ತಿದೆ ಎಂದು ಕಾಣುತ್ತಿದೆ! ಅಥವಾ ಇದು ಬರೀ ಸಣ್ಣತನವೋ?

ಅಕ್ಟೋಬರ್ 6

ಸುಗತಾ ನನ್ನೊಂದಿಗೆ ನಡೆಸಿದ ಮಾತುಕತೆಗಳನ್ನೆಲ್ಲಾ ಸಂಪೂರ್ಣವಾಗಿ ಪ್ರೊಫೆಸರ್ (ಧರ್) ಅವರಿಗೆ ವರದಿ ಮಾಡಿದ್ದಾರೆ ಎಂದು ಇಂದು ತಿಳಿಯಿತು. ಇದು ಒಳ್ಳೆಯದೇ. ಅಂತೂ ಕೊನೆಗೆ ಏನೋ ಬದಲಾವಣೆ ಕಂಡು ಬರುವ ಸೂಚನೆ ಕಾಣುತ್ತಿದೆ. ಸುಗತಾ ಮತ್ತೆ ಇಲ್ಲಿಗೆ ಬರುವುದು ಸಂದೇಹಾಸ್ಪದ. ಬಹುಶಃ, ನಾನು ಶೇಕ್ ಸಾಹಿಬ್‌ಗೆ ಬರೆದ ಪತ್ರವನ್ನು ಅವರಿಗೆ ತಲುಪಿಸಿರಬಹುದು. ಅಥವಾ ಆ ಬಗ್ಗೆ ಅವರಿಗೆ ತಿಳಿಸಿರಬಹುದು. ಆ ಕೊನೆಯಿಂದಲೂ ಪ್ರಯತ್ನ ಶುರುವಾಗಬಹುದು.

ಅಕ್ಟೋಬರ್ 7

(ಹಿಂದಿಯಿಂದ ಅನುವಾದ ಮಾಡಿದ್ದು)

ಸಂಪೂರ್ಣ ಕ್ರಾಂತಿ

ಸಂಪೂರ್ಣ ಕ್ರಾಂತಿಯನ್ನು ಕುರಿತು ನಾನು ಬಹಳಷ್ಟು ಮಾತನಾಡಿದ್ದೇನೆ ಮತ್ತು ಬರೆದಿದ್ದೇನೆ. ಪ್ರಾಯಶಃ ಈ ವಿಷಯದ ಬಗ್ಗೆ. ಮಾತನಾಡಿದ್ದೇನೆಯೇ ಹೊರತು ಸಾಕಷ್ಟು ಬರೆದಿಲ್ಲವೇನೋ. ನನ್ನ ಭಾಷಣಗಳ ಕೆಲವು ಭಾಗಗಳನ್ನು ಸಂಗ್ರಹಿಸಲಾಗಿದೆಯಲ್ಲದೆ, ಹಿಂದಿ ಹಾಗೂ ಇಂಗ್ಲಿಷ್‌ನಲ್ಲಿ ಪ್ರಕಟಿಸಲಾಗಿದೆ. ಇಲ್ಲಿ ನನ್ನ ಆಲೋಚನೆಗಳನ್ನು ವ್ಯವಸ್ಥಿತವಾಗಿ ಪ್ರಯತ್ನ ಮಾಡುವೆ.

ಸಂಪೂರ್ಣ ಕ್ರಾಂತಿಯು, ಏಳು - ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ದಾರ್ಶನಿಕ ಅಥವಾ ಬೌದ್ಧಿಕ, ಶೈಕ್ಷಣಿಕ ಹಾಗೂ ಆಧ್ಯಾತ್ಮಿಕ - ಕ್ರಾಂತಿಗಳ ಸಂಗಮವೆಂದು ನಾನು ಹೇಳುತ್ತಲೇ ಬಂದಿರುವೆ. ಉದಾಹರಣೆಗೆ, ಸಾಂಸ್ಕೃತಿಕ ಕ್ರಾಂತಿ ಎಂಬುದು ಶೈಕ್ಷಣಿಕ ಮತ್ತು ದಾರ್ಶನಿಕ ಕ್ರಾಂತಿಗಳನ್ನೂ ಒಳಗೊಂಡಿರಬಹುದು. ಅಲ್ಲದೆ, ಸಂಸ್ಕೃತಿ ಶಬ್ದವನ್ನು ಮಾನವಶಾಸ್ತ್ರದ ಅರ್ಥದಲ್ಲಿ ಬಳಸಿದರೆ, ಅದು

---

53. ಜೆ.ಪಿ.ಯವರ ಆಪ್ತಸೇವಕ.
54. ಜೆ.ಪಿ.ಯವರ ಅಕ್ಕನ ಮೊಮ್ಮಗ.

ಇತರೆಲ್ಲಾ ಕ್ರಾಂತಿಗಳನ್ನೂ ಒಳಗೊಳ್ಳುತ್ತದೆ. ಆದರೆ ಪುರಾತನ ಆದಿ ಸಮಾಜದ ಸಂದರ್ಭದಲ್ಲಿ ಬಳಸುವ ಸಂಸ್ಕೃತಿ ಎಂಬ ಶಬ್ದದ ಅರ್ಥಕ್ಕಿಂತ ಭಿನ್ನವಾಗಿರುತ್ತದೆ. ಇದೇ ರೀತಿಯಲ್ಲೇ ಮಾರ್ಕ್ಸ್ ಸಿದ್ಧಾಂತದ ಸಾಮಾಜಿಕ ಕ್ರಾಂತಿ, ಆರ್ಥಿಕ ಹಾಗೂ ರಾಜಕೀಯ ಕ್ರಾಂತಿಗಳನ್ನಷ್ಟೇ ಅಲ್ಲದೆ ಇನ್ನೂ ಹೆಚ್ಚಿನದನ್ನು ಒಳಗೊಂಡಿರುತ್ತದೆ. ಹೀಗೆ ಈ ಸಂಖ್ಯೆಯನ್ನು ಏಳಕ್ಕಿಂತ ಕಡಿಮೆ ಮಾಡಬಹುದು. ಅಷ್ಟೇ ಅಲ್ಲ, ಪ್ರತಿಯೊಂದು ಕ್ರಾಂತಿಯನ್ನೂ ಆಂತರಿಕವಾಗಿ ವಿಭಜಿಸುವ ಮೂಲಕ ಈ ಸಂಖ್ಯೆಯನ್ನು ಹೆಚ್ಚಿಸಲೂಬಹುದು : ಆರ್ಥಿಕ ಕ್ರಾಂತಿಯನ್ನು ಕೈಗಾರಿಕಾ, ಕೃಷಿ, ತಾಂತ್ರಿಕ ಕ್ರಾಂತಿ ಮುಂತಾಗಿ ವಿಭಜಿಸಬಹುದು. ಬೌದ್ಧಿಕ ಕ್ರಾಂತಿಯನ್ನು ವೈಜ್ಞಾನಿಕ ಹಾಗೂ ದಾರ್ಶನಿಕ - ಎಂದು ಎರಡಾಗಿ ಒಡೆಯಬಹುದು. ಆಧ್ಯಾತ್ಮಿಕ ಕ್ರಾಂತಿಯನ್ನು ಸಹ ನೈತಿಕ ಹಾಗೂ ಆಧ್ಯಾತ್ಮಿಕ ಕಲ್ಪನೆಗಳ ಸಂಯೋಗ ಎಂದು ಅಥವಾ ಅದನ್ನು ಸಾಂಸ್ಕೃತಿಕ ಕ್ರಾಂತಿಯ ಒಂದು ಮುಖವೆಂದು ಪರಿಗಣಿಸಬಹುದು, ಹೀಗೇ. ಇಲ್ಲಿ ಮುಖ್ಯವಾದ ವಿಷಯವೆಂದರೆ, ನಾವು ಬಳಸುವ ಪಾರಿಭಾಷಿಕ ಶಬ್ದಗಳ ಅರ್ಥವನ್ನು ಸ್ಪಷ್ಟವಾಗಿ ವಿವರಿಸಬೇಕು. ನಮಗೆ ತಿಳಿದಿರುವಂತೆ, ಭಗವದ್ಗೀತೆಯನ್ನು ಅರ್ಥಮಾಡಿಕೊಳ್ಳಲು ಇರುವ ಮುಖ್ಯ ತೊಂದರೆ ಎಂದರೆ, ಶಬ್ದಾರ್ಥ ನಿರ್ದಿಷ್ಟತೆಯಲ್ಲಿನ ಸಂದಿಗ್ಧತೆ. ಗೀತೆ, ತನ್ನದೇ ಆದ ಅರ್ಥಗಳನ್ನು ನೀಡಿ ಕೆಲವು ಶಬ್ದಗಳನ್ನು ಉಪಯೋಗಿಸಿದೆ ; ಉದಾಹರಣೆಗೆ 'ಯಜ್ಞ' ಎಂಬ ಶಬ್ದ.

ಆದುದರಿಂದ, ಈ ಏಳು ಕ್ರಾಂತಿಗಳ ಅರ್ಥವೇನು ಎಂಬುದನ್ನು ಸ್ಪಷ್ಟವಾಗಿ ವಿವರಿಸಬೇಕು.

ಆರ್ಥಿಕ ಕ್ರಾಂತಿ

ಸಾಮಾಜಿಕ ಆರ್ಥಿಕ ಸ್ವರೂಪದಲ್ಲಿ ಮತ್ತು ಅದರ ಆರ್ಥಿಕ ಸಂಸ್ಥೆಗಳಲ್ಲಿ (institutions)-ಇವುಗಳ ಹೊಸ ಕ್ರಾಂತಿಕಾರೀ ರೂಪಗಳಲ್ಲಿ ಸಹ- ಉಂಟುಮಾಡಬೇಕಾದ ಕ್ರಾಂತಿಯನ್ನೇ ನಾನು ಆರ್ಥಿಕ ಕ್ರಾಂತಿ ಎಂದು ಕರೆಯುವುದು. ಆರ್ಥಿಕ ಕ್ರಾಂತಿಯಲ್ಲಿ ಬದಲಾವಣೆ ಹಾಗೂ ನವ ನಿರ್ಮಾಣದ ಅರ್ಥಗಳೂ ಅಡಗಿವೆ.

ಈ ಪ್ರಪಂಚದಲ್ಲಿ ಎಲ್ಲವೂ ಬದಲಾವಣೆಗೆ ಬದ್ಧವಾಗಿದೆ. ಪ್ರಪಂಚ ಏಕಪ್ರಕಾರವಾಗಿ ಎಲ್ಲವೂ ಬದಲಾಗುತ್ತಿದೆಯಲ್ಲದೆ, ಹೊಸತಾಗುತ್ತಿದೆ. ಹೀಗಿರುವಾಗ ಈ ಕ್ರಾಂತಿ ಅಥವಾ ಕ್ರಾಂತೀಕಾರೀ ಬದಲಾವಣೆಗೆ ಪ್ರತ್ಯೇಕ ಅರ್ಥವೇನಾದರೂ ಇದೆಯೇ? ಒಂದು ಅರ್ಥವೆಂದರೆ, ಕ್ರಾಂತಿಯ ಪ್ರಕ್ರಿಯೆ ಅಥವಾ ಕ್ರಾಂತಿಕಾರಿ ಬದಲಾವಣೆಯು ತ್ವರಿತವಾಗಿರುತ್ತದೆ, ಬಹು ಆಳಕ್ಕೆ ತಲುಪುವ ಸಾಧ್ಯತೆ ಇರುತ್ತದೆ. ಮತ್ತು ತೀವ್ರವಾಗಿರುತ್ತದೆ ಸಹ. ಕೆಲವೇಳೆ, ಬದಲಾವಣೆಯ ವಸ್ತುವಿನಲ್ಲಿ, ನಿರ್ಣಾಯಾತ್ಮಕ ಬದಲಾವಣೆಯೇ ಆಗಿಬಿಡುತ್ತದೆ. ಉದಾಹರಣೆಗೆ, ನೀರು ಕಾಯಿಸಿದಾಗ ಹಬೆಯಾಗಿ ಪರಿವರ್ತನೆಯಾಗುವಂತೆ.

ಅಕ್ಟೋಬರ್ 10

ಸುಗತಾ ಮತ್ತೆ ಬಂದಿದ್ದರು (ಅಕ್ಟೋಬರ್ 8). ಈ ಸಲ ಪ್ರೊಫೆಸರ್ ಧರ್ ಅವರೇ ಪ್ರಯತ್ನದಲ್ಲಿ ಮುಂದಾದರು. ಅವರು, ವಾರಾಣಸಿಯಲ್ಲಿದ್ದ ಸುಗತಾಗೆ ಫೋನ್ ಮಾಡಿ, ದೆಹಲಿಗೆ ಬಂದು ತಮ್ಮನ್ನು ಭೇಟಿಮಾಡುವಂತೆ ತಿಳಿಸಿದರು. ಅದರಂತೆ ಸುಗತಾ ದೆಹಲಿಗೆ ಹೋಗಿ ಧರ್ ಅವರೊಂದಿಗೆ ದೀರ್ಘ ಮಾತುಕತೆ ನಡೆಸಿದರು. ಧರ್, ಚಂಡೀಘಡಕ್ಕೆ ಹೋಗಿ ನನ್ನೊಂದಿಗೆ ಚರ್ಚೆ ನಡೆಸಲು ಅವರಿಗೆ ಸೂಚಿಸಿದರು. ಈ ಇಡೀ ವ್ಯವಹಾರವನ್ನು ಕಟ್ಟುನಿಟ್ಟಾಗಿ, ರಹಸ್ಯವಾಗಿರಿಸಬೇಕೆಂದು ಸಹ ಧರ್ ಹೇಳಿದ್ದರು. ಸುಗತಾ ಅವರೊಂದಿಗೆ ಡೆಪ್ಯೂಟಿ ಕಮೀಷನರ್ ಸಹ ಬಂದರಾದರೂ ನಮ್ಮ ಮಾತುಕತೆಗಳ ಸಮಯದಲ್ಲಿ ಅವರು ಪಕ್ಕದ ಕೊಠಡಿಯಲ್ಲಿ ಕುಳಿತಿದ್ದರು. ನಾವಿಬ್ಬರೂ ಸುಮಾರು ಎರಡು ತಾಸುಗಲ ಕಾಲ ಮಾತನಾಡಿದೆವು. ಧರ್ ಅವರು ನನ್ನಿಂದ, ಯಾವ ಪ್ರಶ್ನೆಗಳಿಗೂ ಉತ್ತರ ಬಯಸಿರಲಿಲ್ಲ. ನನ್ನ ಬಿಡುಗಡೆಯ ನಂತರ ನಾನೇನು ಮಾಡುವೆ ಎಂಬುದು ಮಾತ್ರ ನನ್ನೊಂದಿಗೆ ಚರ್ಚಿಸಬೇಕಾದ ಸಮಸ್ಯೆಯಾಗಿತ್ತು, ಆಗಬೇಕಾದ್ದೆಲ್ಲಾ ಆಗಿಹೋಗಿರುವ ಈ ಸಂದರ್ಭದಲ್ಲಿ ನಾನು ಶ್ರೀಮತಿ ಗಾಂಧಿಗೆ ಬೆಂಬಲ ನೀಡುವ ಅಥವಾ ಆಕೆಯೊಂದಿಗೆ ಸಹಕರಿಸುವೆ ಎಂದು ಧರ್ ಅವರು ಸಹಜವಾಗಿಯೇ ನಿರೀಕ್ಷಿಸಲಾಗದು ಎಂದು ನಾನು ಸುಗತಾಗೆ ತಿಳಿಸಿದೆ. ಉಳಿದಂತೆ ನನ್ನ ಮುಂದಿನ ಚಟುವಟಿಕೆಗಳು, ಹೊರಗೆ ಪರಿಸ್ಥಿತಿ ಹೇಗಿದೆ ಎಂಬುದನ್ನು ಅವಲಂಬಿಸಿರುತ್ತದೆ. ಅಲ್ಲದೆ, ನಾನು ಸಹಜವಾಗಿ ನನ್ನ ಸರ್ವೋದಯ ಸಹಕಾರ್ಯಕರ್ತರೊಂದಿಗೆ ಮತ್ತು ವಿರೋಧ ಪಕ್ಷಗಳ ನಾಯಕರೊಂದಿಗೆ ಸಮಾಲೋಚನೆ ಮಾಡಬಯಸುವೆ. ಅವರನ್ನು ನನ್ನೊಂದಿಗೆ ಬಿಡುಗಡೆ ಮಾಡದಿದ್ದಲ್ಲಿ, ಅವರೊಂದಿಗೆ ನಾನು ಸಮಾಲೋಚನೆ ನಡೆಸುವುದು ಅಸಾಧ್ಯ. ಅವರಿನ್ನೂ ಸ್ಥಾನಬದ್ಧತೆಯಲ್ಲಿದ್ದಾಗಲೇ ಅವರ ಬಳಿ ಹೋಗಿ ಸಮಾಲೋಚನೆ ನಡೆಸಲು ನಾನು ಬಯಸುವುದಿಲ್ಲ ಎಂಬುದನ್ನೂ ತಿಳಿಸಿದೆ. ಆದರೆ ನಿಯಮಿತ ಕಾಲದಲ್ಲಿ ನಡೆಯಬೇಕಾಗಿರುವ ಸಂಸತ್ತಿನ ಚುನಾವಣೆಗಳನ್ನು ಪ್ರಕಟಿಸಿದ್ದಲ್ಲಿ, ನಾನು ಸರ್ಕಾರದೊಡನೆ ಘರ್ಷಣೆಯನ್ನು ನಿಲ್ಲಸಬೇಕೆಂದು ಪ್ರತಿಪಾದಿಸುವೆ ಮತ್ತು ಚುನಾವಣೆಗಳಲ್ಲಿ ಗೆಲ್ಲಲು ಸರ್ವಪ್ರಯತ್ನವನ್ನೂ ಮಾಡಲು ಕರೆಕೊಡುವೆ ಎಂಬುದಂತೂ ನನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿತ್ತು. ಆದರೂ, ಇದಕ್ಕೆ ಮೊದಲಾಗಿ ತುರ್ತುಪರಿಸ್ಥಿತಿಯನ್ನು ರದ್ದುಪಡಿಸಬೇಕು, ಪತ್ರಿಕಾ ಸ್ವಾತಂತ್ರ್ಯವೂ ಸೇರಿದಂತೆ ಎಲ್ಲ ಪ್ರಜಾಸತ್ತಾತ್ಮಕ ಹಕ್ಕುಗಳನ್ನೂ ಪುನರ್‌ಸ್ಥಾಪಿಸಬೇಕು ಮತ್ತು ಸೆರೆಮನೆ ಅಥವಾ ಸ್ಥಾನಬದ್ಧತೆಯಲ್ಲಿರುವ ಎಲ್ಲ ಮುಖಂಡರನ್ನೂ ಮತ್ತು ಕಾರ್ಯಕರ್ತರನ್ನೂ ಸಕಾಲದಲ್ಲಿ ಬಿಡುಗಡೆ ಮಾಡಬೇಕು. ಇವೆಲ್ಲಾ ಆಗದೆ, ತುರ್ತುಪರಿಸ್ಥಿತಿಯ ನೆಪದಲ್ಲಿ ಚುನಾವಣೆಗಳನ್ನು ಮುಂದೂಡಿ, ಜನತೆ, ಪತ್ರಿಕೆಗಳು ಹಾಗೂ ಪಕ್ಷಗಳ ಪ್ರಜಾಸತ್ತಾತ್ಮಕ

ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ನಿರಾಕರಿಸುವುದು ಮುಂದುವರಿದಲ್ಲಿ ಸಹಜವಾಗಿಯೋ ಸರ್ಕಾರದೊಂದಿಗೆ ಘರ್ಷಣೆಯು ಮುಂದುವರಿಯುವುದು ಖಂಡಿತ. ಆಗ ನಾನು, ನನ್ನನ್ನು ಬಿಡುಗಡೆ ಮಾಡಿದ್ದಲ್ಲಿ, ಕ್ರಾಂತಿಕಾರಿ ಶಕ್ತಿಗಳನ್ನು ಪುನರ್‌ಸಂಘಟಿಸುವ ಮತ್ತು ಅಗತ್ಯವೆನಿಸಿದರೆ, ಈಗ ಜಾರಿಯಲ್ಲಿರುವ ಸಾಮಾಜಿಕ-ಆರ್ಥಿಕ ಕಾರ್ಯಕ್ರಮಗಳನ್ನು ಸುಧಾರಿಸುವ ಪ್ರಯತ್ನ ಮಾಡುತ್ತೇನೆ.

ಮಾತುಕತೆಯ ಮಧ್ಯೆ ಧರ್ ಅವರು, ನಾನು ಶೇಕ್‌ಸಾಹಿಬ್‌ಗೆ ಬರೆದ ಪತ್ರವನ್ನು ಸುಗತಾಗೆ ಹಿಂದಿರುಗಿಸಿದ್ದಾರೆ. ಏಕೆಂದರೆ ಆಕೆಗೆ (ಶ್ರೀಮತಿ ಗಾಂಧಿಗೆ) ಶೇಕ್, ಮಧ್ಯವರ್ತಿ ಅಥವಾ ಸಂಧಾನಕಾರರ ಪಾತ್ರವಹಿಸುವುದು ಇಷ್ಟವಿಲ್ಲವಂತೆ. ನಾನು ಸುಗತಾಗೆ ಆ ಪತ್ರವನ್ನು ಹಿಂದಿರುಗಿಸಿ, ತೋಚಿದಂತೆ ಅದನ್ನು ಬಳಸಿಕೊಳ್ಳಲು ಹೇಳಿದೆ. ನಾನು ಪ್ರಧಾನಮಂತ್ರಿಗೆ ಬರೆದ ಮೊದಲ ಪತ್ರದ (ಜುಲೈ 21) ಪ್ರತಿಯೊಂದನ್ನೂ ಸುಗತಾಗೆ ಕೊಟ್ಟೆ. ಸುಗತಾ ಕೂಡಾ ನನಗೆ ಪತ್ರಿಕೆಗಳು ಪ್ರಕಟಿಸಿದ ಬಹಳಷ್ಟು ವದಂತಿಗಳನ್ನು ಹಾಗೂ ಸುದ್ದಿಗಳನ್ನು ತಿಳಿಸಿದರು.

ಸುಗತಾ ಮತ್ತೊಂದು ದಿನ ಅಲ್ಲಿ ತಂಗಿರಬೇಕಾದುದರಿಂದ, ಅವರು ೯ರಂದು ಮತ್ತೆ ನನ್ನನ್ನು ಭೇಟಿಮಾಡಿದರು. ಅಂದು ಸಹ ನಾವು ದೀರ್ಘ ಮಾತುಕತೆ ನಡೆಸಿದವು. ಧರ್‌ಗೆ ವರದಿ ಮಾಡುವಾಗ ತಾವೇನೂ ತಪ್ಪುಮಾಡದಂತೆ ಖಚಿತಗೊಳಿಸಿಕೊಳ್ಳಲು, ನನ್ನ ಅಭಿಪ್ರಾಯಗಳನ್ನು ನನ್ನಿಂದ ಮತ್ತೆ ಕೇಳಲು ಸುಗತಾ ಬಯಸಿದರು.

ಮತ್ತೊಂದು ವಿಷಯವೆಂದರೆ, ಪ್ರಧಾನಮಂತ್ರಿಯ ಸೂಚನೆಯ ಮೇರೆಗೇ ತಾವು ಈ ಪ್ರಯತ್ನ ಮಾಡುತ್ತಿರುವುದಾಗಿ ಧರ್ ಅವರು ಸುಗತಾಗೆ ತಿಳಿಸಿದರಂತೆ.

ಈಗಂತೂ ನನಗೆ ಇದೆಲ್ಲ ಏಕೆ, ಇದೆಲ್ಲದರ ಪರಿಣಾಮ ಏನಾಗಬಹುದು ಎಂಬುದು ಗೊತ್ತಿಲ್ಲ.

ಆರೋಗ್ಯದ ದೃಷ್ಟಿಯಿಂದ ಎಂಟನೇ ದಿನಾಂಕ, ನನಗೆ ಕೆಟ್ಟ ದಿನವೇ ಆಗಿತ್ತು. ಕರುಳು ನೋವು ಹೆಚ್ಚಾಯಿತು. ಹೊಟ್ಟೆಯಂತೂ, ಮೇಲೆ ಮುಟ್ಟಿದರೆ ಮೆತ್ತಗಿದ್ದಂತೆ ಕಂಡರೂ, ಒಳಗಿಂದ ಸ್ಫೋಟಗೊಳ್ಳುವುದೇನೋ ಅನಿಸುತ್ತಿತ್ತು. ಹಸಿವೆಂಬುದೇ ಇರಲಿಲ್ಲ, ಮಲಬದ್ಧತೆ - ವಾಯು ಕೂಡಾ ಹೊರಹೋಗದು. ಸಂಜೆ 99.2 ಡಿಗ್ರಿಗಳಷ್ಟು ಜ್ವರ ಬಂದಿತ್ತು. ಕರುಳಿನಲ್ಲಿ ಏನೋ ಸೋಂಕು ಉಂಟಾಗಿರುವಂತೆ, ಏನೋ ಉರಿಯುತ್ತಿರುವಂತೆ ಅನಿಸುತ್ತದೆ. ಡಾ. ಚುಟ್ಟಾಣಿಯವರು ಸ್ಟೆಮಿಡಿಲ್ ಮತ್ತು ನೆವಾಕ್ಟಿನ್ ಮಾತ್ರೆಗಳನ್ನು ತೆಗೆದುಕೊಳ್ಳುವಂತೆ ಹೇಳಿದರು. ಯೂನಿ ಎನ್ ಜೈಮ್ ಅನ್ನು ಮತ್ತೆ ತೆಗೆದುಕೊಳ್ಳಬೇಕೆಂದು ಸೂಚಿಸಲಾಯಿತು. ಆಕ್ಟಿವೇಟೆಡ್ ಚಾರ್‌ಕೋಲ್ ಗುಳಿಗೆಗಳನ್ನು ಸಹ ತೆಗೆದುಕೊಳ್ಳುತ್ತಿರುವೆ. ದುರ್ಬಲವಾಗಿರುವಂತೆ, ಪೂರ್ತಿ ಆಯಾಸಗೊಂಡಂತೆ ಅನಿಸುತ್ತಿದ್ದರೂ, ಇವತ್ತು (ಅಕ್ಟೋಬರ್ 10) ಸ್ವಲ್ಪ ಮೇಲು.

ಅಕ್ಟೋಬರ್ 11

ಇಂದು ನಾನು ನನ್ನ ಜೀವನದ 73 ವರ್ಷಗಳನ್ನು ಮುಗಿಸಿದ್ದೇನೆ. ಏನು ಹೇಳಲಿ! ಬಹಳ ಕಾಲದಿಂದ ಅಂಟಿರುವ ದೀರ್ಘಕಾಲಿಕ ರೋಗಗಳ ನಡುವೆಯೂ, ನಾನಿನ್ನೂ ಬದುಕಿರುವುದು ದೇವರ ದಯೆಯಿಂದಲೇ. ನನ್ನ ಉಳಿದಿರುವ ಬದುಕನ್ನು ದೇಶ ಹಾಗೂ ಜನತೆಯ ಸೇವೆಗಾಗಿ ಮುಡಿಪಾಗಿಡುವಂತಹ ಬುದ್ಧಿ ಹಾಗೂ ಛಲವನ್ನು ದೇವರು ನನಗೆ ದಯಪಾಲಿಸಲಿ. ದೇವರ ಸೇವೆ ಮಾಡುವ ಮಾರ್ಗಗಳಲ್ಲಿ ನನಗೆ ಇಂದೊಂದೇ ತಿಳಿದಿರುವುದು. ಅವನು ನನ್ನ ಹೃದಯ ಹಾಗೂ ಮನಸ್ಸನ್ನು ಪರಿಶುದ್ಧಗೊಳಿಸಲಿ.

ಇಲ್ಲಿ ನಾನು ಯಾರಿಗೂ ಈ ವಿಷಯವನ್ನು ತಿಳಿಸಿರಲಿಲ್ಲವಾದರೂ (ಸಂಭಾಷಣೆಯ ನಡುವೆ ಪೋಲೀಸ್ ಅಧಿಕಾರಿಯೊಬ್ಬರಿಗೆ ಹೇಳಿದ್ದನ್ನು ಉಳಿದು) ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟ್‌ರೂ, ಸೆರೆಮನೆಯ ಸೂಪರಿಟೆಂಡೆಂಟರೂ ಆದ ಸರ್ದಾರ್ ಮೊಹಿಂದರ್ ಸಿಂಗ್ ಅವರು ದೊಡ್ಡ ಹೂಗೊಂಚಲೊಂದಿಗೆ ಬಂದು, ಹುಟ್ಟುಹಬ್ಬದ ಶುಭಾಶಯ ಕೋರಿದಾಗ ನನಗೆ ಆಶ್ಚರ್ಯಕರ ಸಂತೋಷವಾಯಿತು. ಅವರ ಆತ್ಮೀಯತೆಗೆ ಕೃತಜ್ಞ.

"ರಾಜ್ಯ ಊದುತ್ತಾ ಹೋಗುತ್ತದೆ, ಜನತೆ ಕುಗ್ಗುತ್ತಾ ಹೋಗುತ್ತದೆ" - ಝೂರರ ರಾಜ್ಯದ ಬಗ್ಗೆ ಕ್ರಾಂತಿಪೂರ್ವ ಇತಿಹಾಸಕಾರ ಕ್ಲೆಶ್‌ವೆಸ್ಕಿ ಹೇಳಿರುವುದು ಬೆಲ್ಟ್ರಾಮ್ ವೊಲ್ಫ್ ಅವರು ತಮ್ಮ *Krushchev and Stalin's Ghost* ಎಂಬ ಪುಸ್ತಕದಲ್ಲಿ ಉಲ್ಲೇಖಿಸಿರುವುದು. ಪುಟ.149

ಅಕ್ಟೋಬರ್ 13

ಕಳೆದ ಒಂದು ವಾರದಿಂದ ಯಾರ ಭೇಟಿಯೂ ಇಲ್ಲ. ಭಾರತದ ಪ್ರಜಾಪ್ರಭುತ್ವಕ್ಕೆ ಹಿಡಿದಿರುವ ಸದ್ಯದ ಗ್ರಹಣದ ಬಗ್ಗೆ ಪಾಶ್ಚಾತ್ಯ ಪತ್ರಿಕೆ ಹಾಗೂ ಪಾಶ್ಚಾತ್ಯ ದೇಶಗಳ ಮುಖಂಡರು ವ್ಯಕ್ತಪಡಿಸುತ್ತಿರುವ ಆತಂಕ, ಶ್ರೀಮತಿ ಗಾಂಧಿಗೆ ಸಹಿಸಲಸಾಧ್ಯವಾಗಿದೆ. ವಾರ್ತಾಸಂಸ್ಥೆಗಳು ಅಥವಾ ಪತ್ರಿಕೆಗಳಿಗೆ ನೀಡುವ ಪ್ರತಿಸಂದರ್ಶನದಲ್ಲೂ ಶ್ರೀಮತಿ ಗಾಂಧಿಯದು ಒಂದೇ ಗೋಳಾಗಿದೆ : ಭಾರತದ ಪ್ರಜಾಸತ್ತೆಯ ಭವಿಷ್ಯದ ಬಗ್ಗೆ ಪಾಶ್ಚಾತ್ಯ ಪತ್ರಿಕೆಗಳಿಗೆ ಹಾಗೂ ಮುಖಂಡರಿಗೆ ಇರುವಂತೆ ಕಾಣುವ ಆತಂಕವು, ಪಾಕಿಸ್ತಾನ, ಚೀನಾ ಮುಂತಾದ ಅಪ್ರಜಾಸತ್ತಾತ್ಮಕ ದೇಶಗಳ ಬಗ್ಗೆ ವ್ಯಕ್ತವಾಗುವುದಿಲ್ಲ. ಆದರೆ ಇಲ್ಲಿ ಸರಳ ಸಂಗತಿ ಎಂದರೆ, ಚೀನಾ ಮತ್ತು ಪಾಕಿಸ್ತಾನದಂತಹ ದೇಶಗಳು ಎಂದೂ ಪ್ರಜಾಸತ್ತಾತ್ಮಕವಾಗಿರಲಿಲ್ಲ (ನಾವು ಈ ಶಬ್ದಕ್ಕೆ ನೀಡುವ ಸಾಮಾನ್ಯ ಅರ್ಥಕ್ಕನುಸಾರವಾಗಿ); ಆದರೆ ಭಾರತ

ಸ್ವತಂತ್ರವಾದಾಗಿನಿಂದಲೂ ಜೂನ್ 26 ರವರೆಗೆ ಸಕ್ರಿಯ ಪ್ರಜಾಸತ್ತೆಯನ್ನು ಅನುಭವಿಸುತ್ತಿತ್ತು. ಇದು ನಮಗೊಂದು ಹೆಮ್ಮೆಯಾಗಿತ್ತು ಮತ್ತು ಅಂತಾರಾಷ್ಟ್ರೀಯ ವ್ಯವಹಾರಗಳಲ್ಲಿ ಮತ್ತು ಪ್ರಚಾರದಲ್ಲಿ ಈ ಅಂಶವನ್ನು ಒತ್ತಿ ಹೇಳುವ ಯಾವ ಅವಕಾಶವನ್ನೂ ನಾವು ಕೈ ಬಿಡಲಿಲ್ಲ. ಕೆಲವೇ ತಿಂಗಳುಗಳ ಹಿಂದಿನವರೆಗೂ ಪ್ರಜಾಸತ್ತೆಯಾಗಿದ್ದ ಇಂತಹ ದೇಶ, ಇದ್ದಕ್ಕಿದ್ದಂತೆ ಸರ್ವಾಧಿಕಾರದ ಹಿಡಿತಕ್ಕೆ ಸಿಕ್ಕರೆ, ಅದು ಪ್ರಜಾಪ್ರಭುತ್ವವಾದೀ ಪಶ್ಚಿಮ ದೇಶಗಳ ಕಾತರಪೂರ್ಣ ಗಮನವನ್ನು ಸೆಳೆಯುವುದು, ಆತಂಕ ಉಂಟುಮಾಡುವುದು ಸ್ವಾಭಾವಿಕವೇ. ಅವುಗಳಿಗೆ ಗಾಬರಿ ಸಹ ಆಗಬಹುದು. ತುರ್ತುಪರಿಸ್ಥಿತಿ ಘೋಷಣೆ, ಚುನಾವಣಾ ಕಾನೂನುಗಳ ತಿದ್ದುಪಡಿ, ರಾಜ್ಯಾಂಗದ ತಿದ್ದುಪಡಿ, ರಾಜಕೀಯ ಪಕ್ಷಗಳ ಹಿರಿಯ ನಾಯಕರನ್ನು ಬಂಧಿಸಿ ವಿಚಾರಣೆ ಇಲ್ಲದೆಯೇ ತಿಂಗಳುಗಟ್ಟಲೆ ಸ್ಥಾನಬದ್ಧತೆಯಲ್ಲಿಡುವುದು - ಈ ಎಲ್ಲದಕ್ಕೆ ಶ್ರೀಮತಿ ಗಾಂಧಿ ನೀಡುವ ಕಾರಣಗಳು ಅತ್ಯಂತ ಕ್ಷುದ್ರವಾದವು ಎಂದು ಪಶ್ಚಿಮ ದೇಶಗಳಿಗೂ ಸಹ ಅನಿಸಿದ್ದಲ್ಲಿ, ಆ ದೇಶಗಳ ಪತ್ರಿಕೆಗಳ ಹಾಗೂ ಮುಖಂಡರ ಆತಂಕ ಇನ್ನಷ್ಟು ಆಳವನ್ನು ಪಡೆಯುತ್ತದೆ. ಜೂನ್ 26ರಿಂದ ಶ್ರೀಮತಿ ಗಾಂಧಿ ಹವ್ಯಾಸ ಮಾಡಿಕೊಂಡಿರುವ ಸುಳ್ಳುಗಳು, ಬೊಗಳೆ ಹಾಗೂ ಉದ್ದೇಶಪೂರ್ವಕ ಅಪಾರ್ಥಕಲ್ಪನೆ ಮುಂತಾದ ತಂತ್ರಗಳು, ಪಾಶ್ಚಾತ್ಯರನ್ನು ಮೋಸಗೊಳಿಸಲಾರವು. ಏಕೆಂದರೆ ನಿಜವಾದ ಸ್ಥಿತಿಯ ಅರಿವು ಅವರಿಗಿದೆ. ಪ್ರಜಾಪ್ರಭುತ್ವದ ಶತ್ರುಗಳ ಹೊರತಾಗಿ, ಇನ್ನಾರೂ ಶ್ರೀಮತಿ ಗಾಂಧಿಯ ದುರುದ್ದೇಶಪೂರ್ವಕ ಪ್ರಚಾರವನ್ನು ನಂಬುವುದಿಲ್ಲ!

ಇದೆಲ್ಲಾ ಶ್ರೀಮತಿ ಗಾಂಧಿಗೂ ಚೆನ್ನಾಗಿ ಗೊತ್ತು. ಆದರೂ ತನ್ನ ಕ್ರಮವನ್ನು ಟೀಕಿಸುವ, ಭಾರತದ ಹೊರಗಿನ ಯಾರನ್ನೇ ಆಗಲಿ ಆಕೆ ಖಂಡಿಸಬೇಕು. ಇಂದು ಆಕೆ ಬಿ.ಬಿ.ಸಿ.ಯನ್ನು ಭಾರತ ವಿರೋಧಿ ಎಂದು ಕರೆದಿದ್ದಾಳೆ. ಅಂದರೆ, ಶ್ರೀಮತಿ ಗಾಂಧಿ ಸ್ವತಃ ತನ್ನನ್ನು, ಭಾರತದ ಕಲ್ಪನೆಯಿಂದ ಬೇರ್ಪಡಿಸಿಕೊಳ್ಳಲಾರಳು: ಆಕೆಗೆ, ಇಂಡಿಯಾ ಅಂದರೆ ಇಂದಿರಾ. ಆದುದರಿಂದ ಶ್ರೀಮತಿ ಗಾಂಧಿ ವಿರೋಧಿಯಾದವರೆಲ್ಲರೂ ಇಂಡಿಯಾ ವಿರೋಧಿಯಾಗಿರುತ್ತಾರೆ!

ಶ್ರೀಮತಿ ಗಾಂಧಿ ಪದೇ ಪದೇ, 'ನಾನೆಂದೂ ತಾಳ್ಮೆ ಕಳೆದುಕೊಂಡಿದ್ದೇ ಇಲ್ಲ' ಎಂದು ಹೇಳುತ್ತಿರುವಳು. ಆಕೆ ತಾಳ್ಮೆ ಕಳೆದುಕೊಂಡಿದ್ದಾಳೋ ಇಲ್ಲವೊ, ಧೈರ್ಯವನ್ನಂತೂ ಖಂಡಿತ ಕಳೆದುಕೊಂಡಿದ್ದಾಳೆ.

ಮೇಲೆ ಉಲ್ಲೇಖಿಸಿದ ಕ್ಲೆಶ್‌ವೆಸ್ಕಿಯ ಹೇಳಿಕೆ, ಶ್ರೀಮತಿ ಗಾಂಧಿಯ ಆಳ್ವಿಕೆಗೆ ಪೂರ್ಣವಾಗಿ ಅನ್ವಯಿಸುತ್ತದೆ : ಇದಕ್ಕೆ ನಾನು ಸೂಚಿಸ ಬಯಸುವ ಒಂದೇ ಒಂದು ತಿದ್ದುಪಡಿ ಎಂದರೆ, 'ರಾಜ್ಯ' ಎನ್ನುವ ಕಡೆ 'ಶ್ರೀಮತಿ ಗಾಂಧಿ' ಎಂದು ಆದೇಶಿಸಬೇಕಷ್ಟೆ. ಇತ್ತೀಚೆಗೆ ಆಕೆ ಮಾತನಾಡುತ್ತಿರುವ ರೀತಿ ನೋಡಿದರೆ, ಆಕೆಯ ತಲೆ ತಿರುಗಿರುವುದು ಸ್ಪಷ್ಟವಾಗಿ ಕಾಣುತ್ತದೆ. ಅಂದರೆ, ತುರ್ತು ಪರಿಸ್ಥಿತಿಯನ್ನು

ಘೋಷಿಸಿ, ಜನತೆ ಹಾಗೂ ಪತ್ರಿಕೆಗಳ ಸ್ವಾತಂತ್ರ್ಯವನ್ನು ದಮನಮಾಡಿ ತಾನೇನೋ ಬಹುಘನವಾದ ಕಾರ್ಯ ಮಾಡಿದ್ದೇನೆ ಎಂದು ಆಕೆ ತಿಳಿದಿರುವಂತಿದೆ. ಆದರೆ ನಿಜವಾಗಿ, ಅಧಿಕಾರಕ್ಕೆ ಅಂಟಿಕೊಳ್ಳುವ ಏಕೈಕ ಉದ್ದೇಶದಿಂದ ಈ ಹೀನ ಹಾಗೂ ಪ್ರತಿಗಾಮೀ ಕ್ರಮಗಳನ್ನು ಕೈಗೊಂಡಿರುವುದಕ್ಕೆ, ಸ್ವತಃ ಆಕೆಗೇ ನಾಚಿಕೆಯಾಗಬೇಕು.

ಅಕ್ಟೋಬರ್ 16

ಸ್ನೇಹಿತರನ್ನು ಭೇಟಿಮಾಡುವುದನ್ನು ಕುರಿತು ಗೃಹಕಾರ್ಯದರ್ಶಿಯವರಿಗೆ ಬರೆದಿದ್ದೇನೆ (ಅದರ ಪ್ರತಿ ಇಲ್ಲಿದೆ) :

ಚಂಡೀಘಡ
16-10-75

ಗೆ,
ಗೃಹಕಾರ್ಯದರ್ಶಿ
ಭಾರತ ಸರ್ಕಾರ
ಹೊಸ ದೆಹಲಿ

ಮಾನ್ಯರೆ,

ಸ್ಥಾನಬದ್ಧರಿಗೆ ಈಗ ವಾರಕ್ಕೊಂದು ಸಲ ಸಂದರ್ಶನಕ್ಕೆ ಅವಕಾಶ ಮಾಡಿರುವುದು ಮತ್ತು ಕೆಲವು ವಿಶೇಷ ಸಂದರ್ಭಗಳಲ್ಲಿ ಆತನ ಸ್ನೇಹಿತರು ಸಹ ಆತನನ್ನು ಕಾಣಬಹುದು ಎಂಬ ಸಂಗತಿ ನನಗೆ ಸಂತೋಷವನ್ನುಂಟುಮಾಡಿದೆ.

ಈ ಮುಂಚೆಯೇ ನಾನು ನಿಮಗೆ ಬರೆದಿದ್ದಂತೆ ಈ ಸ್ಥಳ ನನ್ನ ರಾಜ್ಯದಿಂದ ಬಹಳ ದೂರವಿದ್ದು ನನ್ನ ಬಂಧುಗಳು ಪ್ರತಿವಾರ ನನ್ನನ್ನು ಕಾಣಲು ಬರುವುದು ಅಸಾಧ್ಯವಾಗಿದೆ. ಉದಾಹರಣೆಗೆ, ಹೋದವಾರ ನನ್ನನ್ನು ಕಾಣಲು ಯಾರಿಗೂ ಬರಲಾಗಲಿಲ್ಲ. ಆದುದರಿಂದ ಇಂತಹ ಸಂದರ್ಭಗಳಲ್ಲಿ (ನನ್ನ ಸಂದರ್ಶನದ ಹಕ್ಕು ನಿರಾಕರಣೆಯಾಗುವ ಸಂಭವವಿರುವ ನಿರ್ದಿಷ್ಟ ವಾರಗಳಲ್ಲಿ) ನನ್ನನ್ನು ಕಾಣಲು ಒಬ್ಬ ಸ್ನೇಹಿತನಿಗೆ ಅನುಮತಿ ನೀಡಿರೆಂದು ಕೋರುವೆ. ನಾನು ಈ ಕೆಳಗೆ, ಸಕ್ರಿಯ ರಾಜಕೀಯದಲ್ಲಿ ಇರುವವರನ್ನು ಬಿಟ್ಟು, ನನ್ನ ಇತರ ಸ್ನೇಹಿತರ ಪಟ್ಟಿಯನ್ನು ನೀಡಿರುವೆ :

1. ಗಂಗಾಶರಣಸಿಂಗ್, ಪಟ್ನಾ
2. ಎ.ಸಿ. ಸೇನ್, ಹೊಸ ದೆಹಲಿ
3. ಅಜಿತ್ ಭಟ್ಟಾಚಾರ್ಜಿ, ಹೊಸ ದೆಹಲಿ

4. ರಾಮೇಶ್ವರ ಠಾಕೂರ್, ಹೊಸ ದೆಹಲಿ
5. ಟಿ. ಅಬ್ರಹಾಂ, ಪಟ್ನಾ
6. ಜೈನಾರಾಯಣ ಸಹಾಯ್, ಪಟ್ನಾ
7. ಎಸ್. ದಾಸಗುಪ್ತ, ವಾರಾಣಸಿ
8. ಕೃಷ್ಣರಾಜ ಮೆಹ್ತಾ
9. ನರೋತ್ತಮ ಷಾಹಾ, ಮುಂಬೈ
10. ಕುಸುಮ್ ದೇಶಪಾಂಡೆ, ಪೌನಾರ್, ವಾರ್ಧಾ.

ನಾನು ಇವರಿಗೆ ವಿಚಾರ ತಿಳಿಸದೆಯೇ, ಈ ಹೆಸರುಗಳನ್ನು ನಿನಗೆ ನೀಡಿರುವೆ. ಆದುದರಿಂದ, ಇವರು ನನ್ನ ಸ್ನೇಹಿತರು ಎಂಬ ಕಾರಣದಿಂದ ಯಾವ ತೊಂದರೆಗೂ ಒಳಗಾಗುವುದಿಲ್ಲ ಎಂದು ನಾನು ಆಶಿಸುವೆ.

ನಿಮ್ಮವ
ಜಯಪ್ರಕಾಶ್ ನಾರಾಯಣ್

ಅಕ್ಟೋಬರ್ 18

ವೈಯಕ್ತಿಕ ಸರ್ವಾಧಿಕಾರದ ಕಡೆ ಶ್ರೀಮತಿ ಗಾಂಧಿಯ ಮುನ್ನಡೆ ಮತ್ತೊಂದು ನಿರ್ಣಾಯಕ ಘಟ್ಟವನ್ನು ತಲುಪಿದೆ. ಈಕೆ ಪ್ರಜಾಪ್ರಭುತ್ವ ರಕ್ಷಕಿಯೆ ಸೈ! ಮೀಸಾಗೆ ಮಾಡಲಾಗಿರುವ ಇತ್ತೀಚಿನ ತಿದ್ದುಪಡಿಯ ಪ್ರಕಾರ, ಬಂದಿಯು ತನ್ನನ್ನೇಕೆ ಬಂಧಿಸಲಾಗಿದೆ ಎಂದು ತಿಳಿಯುವ ಹಕ್ಕನ್ನು ಕಳೆದುಕೊಳ್ಳುತ್ತಾನೆ; ಅಲ್ಲದೆ, ಇನ್ನೂ ಕ್ರೂರವಾದ ಅಂಶವೆಂದರೆ, ನ್ಯಾಯಾಲಯ ಸಹ ಬಂಧನದ ಕಾರಣಗಳನ್ನು ನೀಡುವಂತೆ ಸರ್ಕಾರವನ್ನು ಕೇಳುವ ಹಕ್ಕನ್ನು ಕಳೆದುಕೊಂಡಿದೆ. ಸಂವಿಧಾನದ 'ಮೂಲಭೂತ ಸ್ವರೂಪ'ದ ಬಗ್ಗೆ ವಕೀಲರು ಚರ್ಚಿಸತೊಡಗಿದ್ದಾರೆ; ಕೇಶವಾನಂದಭಾರತಿ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿದ ತೀರ್ಪಿನ ಪ್ರಕಾರ, ಪಾರ್ಲಿಮೆಂಟ್ ಅಂಗೀಕರಿಸುವ ಯಾವುದೇ ಸಂವಿಧಾನ ತಿದ್ದುಪಡಿ ಈ 'ಮೂಲಭೂತ ಸ್ವರೂಪ'ವನ್ನು ಮೊಟಕುಗೊಳಸಕೂಡದು ಮತ್ತು ಅದಕ್ಕೆ ಯಾವುದೇ ರೀತಿಯ ಧಕ್ಕೆ ಮಾಡಬಾರದು. ತನ್ನ ಸ್ವಾತಂತ್ರ್ಯವನ್ನು ನಿರಾಕರಿಸಲಾಗಿರುವುದು ಕಾನೂನಿನ ಪ್ರಕಾರವೋ ಅಥವಾ ಸರ್ಕಾರದ ತೀಟೆ ಪರಿಹಾರಕ್ಕಾಗಿಯೋ ಎಂಬುದನ್ನು ನಿರ್ಧರಿಸಬೇಕೆಂದು, ನ್ಯಾಯಾಲಯಕ್ಕೆ ಮನವಿ ಮಾಡುವ ಪ್ರಜೆಯ ಹಕ್ಕಿಗಿಂತ 'ಮೂಲಭೂತ'ವಾದದ್ದು ಮತ್ತೇನಿದೆ? ಪ್ರಜೆಯ ಮೂಲಭೂತ ಹಕ್ಕುಗಳಲ್ಲಿ ಉಳಿದಿದ್ದ ಒಂದಿಷ್ಟನ್ನೂ ಇತ್ತೀಚಿನ ತಿದ್ದುಪಡಿಗಳ ಮೂಲಕ ನಾಶ ಮಾಡಲಾಗಿದೆ. ಇದಕ್ಕೆ ಕಾರಣವೆಂದರೆ ಮೀಸಾ ಪ್ರಕಾರ ಬಂಧನದಲ್ಲಿರುವ ವ್ಯಕ್ತಿಯೊಬ್ಬನಿಗೆ ಸಂಬಂಧಿಸಿದ ಮೊಕದ್ದಮೆಯಲ್ಲಿ, ನ್ಯಾಯಾಲಯವು ಬಂಧನಕ್ಕೆ ಕಾರಣಗಳನ್ನು ನೀಡುವಂತೆ ಸರ್ಕಾರಕ್ಕೆ ಆದೇಶ ನೀಡಿದೆ.

ಸಹಜವಾಗಿ, ಈಗ ಬಂಧನದಲ್ಲಿರುವ ಹಲವಾರು ಜನರ - ಬಹುಶಃ ಬಹಳಷ್ಟು ಜನರ ಬಂಧನಕ್ಕೆ - ಸರ್ಕಾರದ ಬಳಿ ಯಾವುದೇ ಸೂಕ್ತ ಅಥವಾ ಸಮರ್ಪಕ ಕಾರಣಗಳಿಲ್ಲ. ಆದುದರಿಂದ, ಈ ಪೀಕಲಾಟದಿಂದ ತಪ್ಪಿಸಿಕೊಳ್ಳಲು ಸರ್ಕಾರವು ಬಂಧನದ ಕಾರಣಗಳನ್ನು ಕೇಳುವ ನ್ಯಾಯಾಲಯದ ಅಧಿಕಾರವನ್ನೇ ರದ್ದುಗೊಳಿಸಿದೆ. ಸರ್ಕಾರಕ್ಕೆ ಇದೆಲ್ಲ ಎಷ್ಟು ಸುಲಭ! ಶ್ರೀಮತಿ ಗಾಂಧಿಯಂತೂ, ಪ್ರಜಾಸತ್ತೆಯಲ್ಲಿ ತನಗಿರುವ ನಿಶ್ಚಲ ನಂಬಿಕೆಯನ್ನು ಮತ್ತು 'ಪರಿಸ್ಥಿತಿ ಉತ್ತಮಗೊಂಡೊಡನೆ' ಮತ್ತು 'ಕೆಲವು ಕೃತ್ಯ'ಗಳನ್ನು ಮಾಡೇ ತೀರ ಬಯಸುವ 'ಕೆಲವು ವ್ಯಕ್ತಿಗಳು' ಬದಲಾವಣೆಯಾದೊಡನೆಯೇ ತುರ್ತು ಪರಿಸ್ಥಿತಿಯನ್ನು ರದ್ದುಗೊಳಿಸುವ ತನ್ನ ಇಚ್ಛೆಯನ್ನು, ಪಾಶ್ಚಾತ್ಯ ವಾರ್ತಾ ಪ್ರತಿನಿಧಿಗಳ ಮುಂದೆ ಒತ್ತಿ ಹೇಳುತ್ತಲೇ ಇರುವುದನ್ನು ಮುಂದುವರಿಸುವುದಂತೂ ನಿಸ್ಸಂದೇಹ.

ಅನಿಲ್[55] ನಿನ್ನೆ ಬಂದಿದ್ದ. ಈ ಸರ್ತಿ ಒಬ್ಬನೇ ಬಂದಿದ್ದ. ರಾಜಾ ನವೆಂಬರ್ ಮೊದಲವಾರದಲ್ಲಿ ಬರಬಹುದು. ಪ್ರತಿ ತಿಂಗಳ ಮೊದಲ ವಾರವನ್ನು ತಮಗಾಗಿ ಮೀಸಲಿರಿಸಬೇಕೆಂದೂ ಉಳಿದ ಮೂರು ವಾರಗಳನ್ನು ಕಲ್ಕತ್ತಾ ಹಾಗೂ ಪಟ್ನಾ ನಡುವೆ ಅನುಕೂಲಕ್ಕೆ ತಕ್ಕಂತೆ ಹಂಚಬೇಕೆಂದೂ ಅವರು ಲಾಲ್‌ಬಾಬೂಗೆ ತಿಳಿಸಿರುವುದಾಗಿ ಅನಿಲ್ ಹೇಳಿದ. ಇದು ಸಮ್ಮತಾರ್ಹ ಏರ್ಪಾಡು*

ಅಕ್ಟೋಬರ್ 19

ತಾರ್ಕುಂಡೆ ಇಂದು ಬಂದಿದ್ದರು. ನನಗೆ ಸಂಬಂಧಿಸಿದ ಮೊಕದ್ದಮೆ ಇನ್ನೂ ತೀರ್ಮಾನವಾಗಿಲ್ಲ.

ಮೀಸಾಗೆ** ಇತ್ತೀಚೆಗೆ ಮಾಡಲಾದ ತಿದ್ದುಪಡಿ ಸುಪ್ರೀಂಕೋರ್ಟಿನ ಕೆಲಸವನ್ನು ಮತ್ತಷ್ಟು ಕ್ಲಿಷ್ಟಗೊಳಿಸಿದೆ ಎಂದು ಅವರು ಅಭಿಪ್ರಾಯಪಟ್ಟರು. ಶ್ರೀಮತಿ ಗಾಂಧಿಯ ಮನವಿ ಮತ್ತು ಶ್ರೀ ರಾಜನಾರಾಯಣರ ಪ್ರತಿ ಮನವಿಯ ಬಗ್ಗೆ (ನ್ಯಾಯಾಂಗ ಪೀಠ) ವಿಭಿನ್ನ ತೀರ್ಪುಗಳನ್ನು ಕೊಡುವ ಸಾಧ್ಯತೆ ಇದೆಯೇ ಎಂದೂ ನಾನು ಕೇಳಿದೆ. ಮುಖ್ಯ ನ್ಯಾಯಾಧೀಶರು ಸರ್ವಾನುಮತದ ತೀರ್ಪಿಗಾಗಿ ಸರ್ವ ಪ್ರಯತ್ನ ಮಾಡುವರು ಎಂದು ಅವರು ತಿಳಿಸಿದರು. ಆದರೆ, ಚುನಾವಣಾ ಕಾನೂನು ತಿದ್ದುಪಡಿಯ (ಈ ಮುನ್ನ ಪಾರ್ಲಿಮೆಂಟ್ ಅಂಗೀಕರಿಸಿದ್ದು) ಕೆಲವು ಪರಿಚ್ಛೇದಗಳನ್ನು ತೀರ್ಪು ರದ್ದು ಮಾಡಬಹುದಾದರೂ ಶ್ರೀಮತಿ ಗಾಂಧಿಯ ಆಯ್ಕೆಗೆ ಯಾವುದೇ ಬಾಧಕ ಉಂಟುಮಾಡುವುದಿಲ್ಲ ಎಂದು ಅವರು ಅಭಿಪ್ರಾಯಪಟ್ಟರು. ಇದಕ್ಕೆ

55. ಜೆ.ಪಿ.ಯವರ ಸೋದರ ಸಂಬಂಧಿ.

* ಜೆ.ಪಿ. ವಾರಕ್ಕೊಮ್ಮೆ ಒಬ್ಬರನ್ನು ಭೇಟಿ ಮಾಡಬಹುದಿತ್ತು.

** ಆಂತರಿಕ ಭದ್ರತಾ ಸಂರಕ್ಷಣಾ ಕಾಯ್ದೆ (MISA)

ಅವರು ಕೊಟ್ಟ ಪ್ರಮುಖ ಕಾರಣವೆಂದರೆ, ಮಂತ್ರಿ ಅಥವಾ ಉಪಮಂತ್ರಿಯ ಚುನಾವಣೆಯಲ್ಲಿ ಕೆಲಸ ಮಾಡಲು ಸರ್ಕಾರಿ ನೌಕಕರಿಗೆ ಒಂದಿಷ್ಟು ಅವಕಾಶವಿರುವ ರೀತಿಯಲ್ಲಿ ಚುನಾವಣಾ ಕಾನೂನನ್ನು ಶ್ರೀಮತಿ ಗಾಂಧಿ ತಿದ್ದುಪಡಿ ಮಾಡಿಸಿಬಿಟ್ಟಿದ್ದಾಳೆ. ಶ್ರೀಮತಿ ಗಾಂಧಿ ತನ್ನ ವೈಯಕ್ತಿಕ ಹಿತಾಸಕ್ತಿಗಳಿಗಾಗಿ ಈ ದೇಶದ ಕಾನೂನುಗಳನ್ನು ಎಷ್ಟೊಂದು ಕುರೂಪಗೊಳಿಸಿದ್ದಾಳೆ ಎಂಬುದು ಎಂತಹ ದಿಗ್ಭ್ರಮೆಯ ಮತ್ತು ನಾಚಿಕೆಗೇಡಿನ ಸಂಗತಿಯಾಗಿದೆ!

ಅಕ್ಟೋಬರ್ 20

ನ್ಯಾಷನಲ್ ಕಾನ್‌ಫೆರೆನ್ಸ್ ಪಕ್ಷಕ್ಕೆ ತಾವು ಹಿಂದಿರುಗುವುದಾಗಿ ಘೋಷಿಸಿದ ಸಂದರ್ಭದಲ್ಲಿ ಷೇಕ್ ಅಬ್ದುಲ್ಲಾ ಮಾಡಿದ ಬಿಚ್ಚುಮನಸ್ಸಿನ ಮತ್ತು ದಿಟ್ಟ ಭಾಷಣವನ್ನು ಓದಿ('ಟ್ರಿಬ್ಯೂನ್', ಅಕ್ಟೋಬರ್ 20) ಮನಸ್ಸಿಗೆ ಸಂತೋಷವೆನಿಸಿತು. ಪ್ರಧಾನಮಂತ್ರಿಯ ಮುಖಕ್ಕೇ ಮಾತನಾಡಬಲ್ಲ ಒಬ್ಬ ವ್ಯಕ್ತಿಯಾದರೂ ಈ ದೇಶ ದಲ್ಲಿದ್ದಾರೆ. ಇತರರಿದ್ದರೂ ಇರಬಹುದು. ಅವರೂ ಹೀಗೆ ಮಾತನಾಡುತ್ತಿರಬಹುದು. ಆದರೆ ಅವು ಪತ್ರಿಕೆಗಳಲ್ಲಿ ಪ್ರಕಟವಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವಂತೆ ಕಾಣುತ್ತದೆ. ಬಹುಶಃ ಸಂಸತ್ ಸಮಾವೇಶಗೊಂಡು, ಪತ್ರಕರ್ತರು ಹಾಜರಿರಲು ಮತ್ತು ಸಮಾವೇಶದ ಕಾರ್ಯಕಲಾಪಗಳನ್ನು ವರದಿಮಾಡಲು ಅವಕಾಶ ನೀಡಿದಾಗ ಇಂತಹ ಧ್ವನಿಗಳು ಹೆಚ್ಚಾಗಿ ಕೇಳಿಬರಬಹುದು. ಸದ್ಯಕ್ಕಂತೂ, ಇಡೀ ದೇಶದಲ್ಲಿ ಸ್ಮಶಾನ ಮೌನ ಆವರಿಸಿದೆ.

ಅಕ್ಟೋಬರ್ 20

(ಹಿಂದಿಯಿಂದ ಅನುವಾದಿಸಿದ್ದು)

ಆರ್ಥಿಕ ಕ್ರಾಂತಿಯಲ್ಲಿಯೇ ತಾಂತ್ರಿಕ, ಕೈಗಾರಿಕಾ ಹಾಗೂ ಕೃಷಿ ಕ್ರಾಂತಿಗಳೂ ಸೇರಿವೆ. ಮಾಲೀಕತ್ವ ಹಾಗೂ ವ್ಯವಸ್ಥಾಪಕತ್ವದಲ್ಲಿನ ಮೂಲಭೂತ ಬದಲಾವಣೆಗಳ ರೀತಿ ನೀತಿಗಳೂ ಇದರಲ್ಲೇ ಸೇರಿಕೊಂಡಿರುತ್ತವೆ. ಮಾಲೀಕತ್ವ ಮತ್ತು ವ್ಯವಸ್ಥಾಪಕತ್ವ ಎಂದರೆ ಎಲ್ಲ ಸಂದರ್ಭಗಳಲ್ಲೂ ಸರ್ಕಾರೀ ಮಾಲೀಕತ್ವ ಮತ್ತು ಸರ್ಕಾರಿ ವ್ಯವಸ್ಥಾಪಕತ್ವ ಎಂದು ತಿಳಿಯಬೇಕಿಲ್ಲ. ಮಾಲೀಕ, ಸರ್ಕಾರವಾಗಿರಬಹುದು, ಒಬ್ಬ ವ್ಯಕ್ತಿಯಾಗಿರಬಹುದು, ವ್ಯಕ್ತಿಗಳ ಕಂಪನಿಯಾಗರಬಹುದು, ರಿಜಿಸ್ಟರ್ಡ್ ಸಹಕಾರೀ ಸಂಘವಾಗಿರಬಹುದು ಅಥವಾ ಈ ಎಲ್ಲವುಗಳ ಸಂಯುಕ್ತ ಸ್ವರೂಪವಾಗಿರಬಹುದು. ಅಲ್ಲದೆ ಮಾಲೀಕತ್ವ ಗ್ರಾಮಸಭೆ, ಜಿಲ್ಲಾಪರಿಷತ್ ಮುಂತಾದ ಸ್ಥಳೀಯ ಸಮುದಾಯದ ವಶದಲ್ಲಿರಬಹುದು ಅಥವಾ ಸ್ಥಳೀಯ ಸಮುದಾಯ ಮತ್ತು ಈ ಮೇಲೆ ವಿವರಿಸಿದ ರೀತಿಗಳ ಸಂಯುಕ್ತ ಸ್ವರೂಪದ ಮಾಲೀಕತ್ವ ಇರಬಹುದು. ಗ್ರಾಹಕರ ಅಥವಾ ಮಾಲೀಕರ ಮತ್ತು ಈ ಎರಡರ ಹಾಗೂ ಮೇಲೆ ತಿಳಿಸಿದ ವಿಭಿನ್ನ ರೀತಿಯ ಸಂಯುಕ್ತ ಮಾಲೀಕತ್ವವೂ ಇರಬಹುದು.

ಅಕ್ಟೋಬರ್ 26

ವಕೀಲರುಗಳಾದ ಪ್ರಣವ ಚಟರ್ಜಿ[56] (ಪಟ್ನಾ) ಮತ್ತು ಗೋಯೆಲ್[57] (ದೆಹಲಿ) ನನ್ನನ್ನು ಕಾಣಲು ಬಂದಿದ್ದರು. ಇಂದು ಅತ್ಯಂತ ಸಂತೋಷದ ದಿನವಾಗಿತ್ತು. ಇಂದಿಗೆ ನನ್ನ ಸ್ಥಾನಬದ್ಧತೆಯ ನಾಲ್ಕು ತಿಂಗಳುಗಳು ಮುಗಿದಿವೆ.

ಅಕ್ಟೋಬರ್ 29

ಈ ಎಲ್ಲ ದಿನಗಳಲ್ಲೂ ನರಕ ಮಾತನೆ ಅನುಭವಿಸಿದ್ದೇನೆ - ಕಿಬ್ಬೊಟ್ಟೆಯ ಬಳಿ ನಿರಂತರ ನೋವು. ಘೋರ ಅನುಭವ. ಎಲ್ಲ ರೀತಿಯ ಪರೀಕ್ಷೆಗಳನ್ನು ಮಾಡಲಾಯಿತಾದರೂ ಏನೂ ಗೊತ್ತಾಗಲಿಲ್ಲ. ಆದರೂ ನೋವು - ಮೊದಲಿನಷ್ಟಿಲ್ಲದಿದ್ದರೂ ಸಹ - ಇದ್ದೇ ಇದೆ. ಮಲಬದ್ಧತೆ - ತ್ರಿಫಲ ಚೂರ್ಣ ಈಗ ಕೆಲಸ ಮಾಡುವುದೇ ಇಲ್ಲ. ನಿನ್ನೆ ರಾತ್ರಿ ವಾಂತಿಯಾಯಿತು. ಇಂದು ಬೆಳಿಗ್ಗೆ ಸಹ. ಹಸಿವೇ ಇಲ್ಲ, ಆಹಾರವನ್ನು ನೆನಸಿಕೊಂಡರೇ ಅಸಹ್ಯವಾಗುತ್ತದೆ.

ನವೆಂಬರ್ 2

ಇವತ್ತಿನವರೆಗೂ ಹೊಟ್ಟೆನೋವು ಇದ್ದೇ ಇದೆ. ಹಸಿವಿಲ್ಲ, ಆಹಾರ ಕಂಡರೇ ಬೇಸರ, ಮಲವಿಸರ್ಜನೆ ಕೂಡಾ ಇಲ್ಲ. ಅಕ್ಟೋಬರ್ 31ರ ರಾತ್ರಿ ಆಸ್ಪತ್ರೆಗೆ ತರಲಾಯಿತು (ನಾನು ಮೊದಲಿದ್ದ ಕೊಠಡಿಗೇ) ತೀವ್ರ ನೋವು. ನಿರಂತರ ನೋವಿನಿಂದ ಸೊರಗಿಹೋಗಿರುವೆ. 3-4 ದಿನಗಳ ಹಿಂದೆ (ನಾನಿನ್ನೂ ಅತಿಥಿಗೃಹದಲ್ಲೇ ಇದ್ದಾಗ) ದೊಡ್ಡ ಕರುಳಿನ ಎಕ್ಸ್-ರೇ ತೆಗೆದರು. Barium meal anema ಕೊಡಲಾಗಿತ್ತು. ಇಂದು ಬಹುಶಃ ಚಿಕ್ಕ ಕರುಳಿನ ಎಕ್ಸ್-ರೇ ತೆಗೆಯಬಹುದು (ಬಾಯಿಯ ಮೂಲಕ Barium meal).

ನವೆಂಬರ್ 4

ಇವತ್ತು ಸ್ವಲ್ಪ ಮೇಲು. ಹೊಟ್ಟೆನೋವು ಸ್ವಲ್ಪ ಕಡಿಮೆಯಾಗಿದೆ. ನಿನ್ನೆ ದೀಪಾವಳಿ. ತಾರ್ಕುಂಡೆ ಬಂದಿದ್ದರು. ನನ್ನ ಅರ್ಜಿಯ ಬಗ್ಗೆ ಮಾತನಾಡಿದರು. ಮೊರಾರ್ಜಿ ಭಾಯಿಯ ಸ್ನೇಹಿತರು ಸಹ ಅವರನ್ನು ಕಾಣಲು ಅನುಮತಿ ನೀಡಬೇಕೆಂಬ

---

56. ಸಮಾಜವಾದೀ ಮುಖಂಡ ಹಾಗೂ ಅಡ್ವೋಕೇಟ್.
57. ಡಿ.ಆರ್. ಗೋಯಲ್. ಪ್ರಸಿದ್ಧ ಅಡ್ವೋಕೇಟ್.

ಶ್ರೀಮತಿ ಪದ್ಮಾ ದೇಸಾಯಿಯ[58] ಅರ್ಜಿಯನ್ನೇ ಬಹಳಷ್ಟು ಅವಲಂಬಿಸಿದೆ ಎಂದು ಕಾಣುತ್ತದೆ. ನ್ಯಾಯಾಲಯ ಆಕೆಯ ಪರವಾಗಿ ತೀರ್ಪು ಕೊಟ್ಟಿರುವಂತೆ ಕಾಣುತ್ತದೆ; ಸ್ನೇಹಿತರಿಗೆ ಪತ್ರಗಳನ್ನೂ ಬರೆಯಬಹುದಾಗಿದೆ. ಆರೋಗ್ಯ ಸ್ವಲ್ಪ ಉತ್ತಮಗೊಂಡಿದೆ, ನಾಳೆ ಆ ಕೆಲಸ ಮಾಡುವೆ.

ನವೆಂಬರ್ 5

(ಹಿಂದಿಯಿಂದ ಅನುವಾದಿಸಿದ್ದು)

ಗೀತೆಯ ಬಗ್ಗೆ ಸತ್ಯವ್ರತಜಿ ಬರೆದಿರುವ ವ್ಯಾಖ್ಯಾನವನ್ನು ನಿನ್ನೆ ಮುಗಿಸಿದೆ. ಸರಳವೂ, ವಿಚಾರಸಮ್ಮತವೂ ಆಗಿರುವ ಈ ವ್ಯಾಖ್ಯಾನ ನನಗೆ ಹಿಡಿಸಿತು. ಅವರು ಹಲವಾರು ಕಡೆ, ಶ್ರೀ ಅರವಿಂದ, ಲೋಕಮಾನ್ಯ ತಿಲಕ್, ವಿನೋಬಾ, ಡಾ. ರಾಧಾಕೃಷ್ಣನ್ ಮತ್ತಿತರ ವ್ಯಾಖ್ಯಾನಗಳನ್ನೂ ಉಲ್ಲೇಖಿಸಿದ್ದಾರೆ. ಬಹಳಷ್ಟು ಕಡೆ ಶ್ರೀ ಅರವಿಂದರ ವ್ಯಾಖ್ಯಾನ ನನಗೆ ಅತ್ಯುತ್ತಮವೆನಿಸಿತು. ಕೆಲವೆಡೆ ತಿಲಕ್, ವಿನೋಬಾ ಹಾಗೂ ಇತರರ ವ್ಯಾಖ್ಯಾನ ಅತ್ಯುತ್ತಮವೆನಿಸಿತು.

ಸತ್ಯವ್ರತಜಿ, **ಗೀತೆಯ** 18 ಅಧ್ಯಾಯಗಳನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿದ್ದಾರೆ. ಮೊದಲ ಭಾಗ **ಕರ್ಮ**ವನ್ನು ಕುರಿತ ಮೊದಲ ಆರು ಅಧ್ಯಾಯಗಳಿಗೆ ಸಂಬಂಧಿಸಿದೆ. ಎರಡನೆಯ ಭಾಗ **ಭಕ್ತಿ**ಯನ್ನು ಕುರಿತ ಮುಂದಿನ ಆರು ಅಧ್ಯಾಯಗಳಿಗೆ ಸಂಬಂಧಿಸಿದೆ. ಮೂರನೆಯ ಭಾಗ **ಜ್ಞಾನ**ಕ್ಕೆ ಸಂಬಂಧಿಸಿದ ಕೊನೆಯ ಆರು ಅಧ್ಯಾಯಗಳನ್ನು ಕುರಿತದ್ದಾಗಿದೆ. ಆದರೂ, ಈ ಯೋಗಗಳು ಅಥವಾ ಮಾರ್ಗಗಳು ಪರಸ್ಪರ ಬೇರೆಯಲ್ಲ ಎಂದು ಅವರು ತಿಳಿಸುತ್ತಾರೆ. ಪ್ರತಿ ಭಾಗದಲ್ಲೂ ಮೂರರಲ್ಲಿ ಒಂದರ ಬಗ್ಗೆ ಮಾತ್ರ ವಿಶೇಷ ಮಹತ್ವ ನೀಡಲಾಗಿದೆಯಾದರೂ ಉಳಿದೆರಡನ್ನೂ ಅದರಲ್ಲಿಯೇ ವಿವರಿಸಲಾಗಿದೆ.

---

58. ಮೊರಾರ್ಜಿ ದೇಸಾಯಿ ಅವರ ಸೊಸೆ.

ಅನುಬಂಧಗಳು

1. ಪ್ರಧಾನಮಂತ್ರಿಯವರನ್ನುದ್ದೇಶಿಸಿ ಬರೆದ ಪತ್ರ
   ದಿನಾಂಕ: ಜುಲೈ 21, 1975
2. ಪ್ರಧಾನಮಂತ್ರಿಯವರನ್ನುದ್ದೇಶಿಸಿ ಬರೆದ ಪತ್ರ
   ದಿನಾಂಕ: ಸೆಪ್ಟೆಂಬರ್ 2, 1975
3. ಪ್ರಧಾನಮಂತ್ರಿಯವರನ್ನುದ್ದೇಶಿಸಿ ಬರೆದ ಪತ್ರ
   ದಿನಾಂಕ: ಸೆಪ್ಟೆಂಬರ್ 17, 1975
4. ಷೇಕ್ ಮೊಹಮ್ಮದ್ ಅಬ್ದುಲ್ಲಾರವರನ್ನುದ್ದೇಶಿಸಿ ಬರೆದ ಪತ್ರ
   ದಿನಾಂಕ: ಸೆಪ್ಟೆಂಬರ್ 22, 1975
5. ರಾಜಕೀಯ ಇಷ್ಟ ಪತ್ರ
   ದಿನಾಂಕ: ಡಿಸೆಂಬರ್ 5, 1975
6. ಒಂದು ಸಂದರ್ಶನ
   ಸಂದರ್ಶಕರು: ಭೋಲಾ ಚಟರ್ಜಿ

ಅನುಬಂಧ 1

ಜುಲೈ 21, 1975
ಚಂಡೀಘಡ

ಪ್ರಿಯ ಪ್ರಧಾನಮಂತ್ರಿಯವರೆ,

ನಿಮ್ಮ ಭಾಷಣಗಳ ಹಾಗೂ ಸಂದರ್ಶನಗಳನ್ನು ಕುರಿತ ಪತ್ರಿಕಾ ವರದಿಗಳನ್ನು ಕಂಡು ನಾನು ವಿಚಲಿತಗೊಂಡಿದ್ದೇನೆ (ನೀವು ಕೈಗೊಂಡಿರುವ ಕ್ರಮವನ್ನು ಸಮರ್ಥಿಸಲು ಪ್ರತಿದಿನವೂ ನೀವು ಏನಾದರೊಂದು ಹೇಳುತ್ತಿರುವುದನ್ನು ನೋಡಿದರೇನೇ ನೀವು ಪಾಪ ಪ್ರಜ್ಞೆಯಿಂದ ನರಳುತ್ತಿದ್ದೀರಿ ಎಂಬುದು ಗೊತ್ತಾಗುತ್ತದೆ) ಪತ್ರಿಕೆಗಳ ಬಾಯಿ ಮುಚ್ಚಿಸಿ ಮತ್ತು ಎಲ್ಲ ರೀತಿಯ ಸಾರ್ವಜನಿಕ ಭಿನ್ನಾಭಿಪ್ರಾಯವನ್ನು ದಮನ ಮಾಡಿ, ಈಗ ಯಾವುದೇ ಟೀಕೆ ಅಥವಾ ನಿರಾಕರಣೆಯ ಭಯವಿಲ್ಲದೆ ನಿಮ್ಮ ಬೊಗಳೆ ಹಾಗೂ ಸುಳ್ಳುಗಳನ್ನು ಮುಂದುವರಿಸಿದ್ದೀರಿ. ಈ ಮೂಲಕ ನೀವು ಸಾರ್ವಜನಿಕರ ದೃಷ್ಟಿಯಲ್ಲಿ ನಿಮ್ಮನ್ನು ಸಮರ್ಥಿಸಿಕೊಳ್ಳಬಲ್ಲಿರಿ ಮತ್ತು ವಿರೋಧಪಕ್ಷಗಳನ್ನು ರಾಜಕೀಯ ಅಧಃಪತನದತ್ತ ತಳ್ಳಬಲ್ಲಿರಿ ಎಂದು ಭಾವಿಸಿದ್ದರೆ ಅದು ನಿಮ್ಮ ದೊಡ್ಡ ತಪ್ಪಾಗುತ್ತದೆ. ಈ ಬಗ್ಗೆ ನಿಮಗೆ ಸಂದೇಹವಿದ್ದರೆ, ತುರ್ತುಪರಿಸ್ಥಿತಿಯನ್ನು ರದ್ದುಮಾಡಿ, ಜನರಿಗೆ ಅವರ ಮೂಲಭೂತ ಹಕ್ಕುಗಳನ್ನು ಹಿಂತಿರುಗಿಸಿ, ಪತ್ರಿಕಾ ಸ್ವಾತಂತ್ರ್ಯವನ್ನು ಪುನರ್‌ಸ್ಥಾಪಿಸಿ, ತಮ್ಮ ದೇಶಾಭಿಮಾನೀ ಕರ್ತವ್ಯವನ್ನು ನಿರ್ವಹಿಸಿದ ಏಕಮಾತ್ರ ಅಪರಾಧಕ್ಕಾಗಿ ನಿಮ್ಮಿಂದ ಬಂಧನಕ್ಕೊಳಗಾಗಿರುವ ಅಥವಾ ಸ್ಥಾನಬದ್ಧತೆಯಲ್ಲಿರುವ ಎಲ್ಲರನ್ನೂ ಬಿಡುಗಡೆ ಮಾಡಿ ನನ್ನ ಈ ಮೇಲಿನ ಮಾತನ್ನು ಪರೀಕ್ಷಿಸಬಹುದು. ನಿಮ್ಮ ನಿಜ ಸ್ವರೂಪವನ್ನು ತಿಳಿದುಕೊಳ್ಳಬಲ್ಲ ಆರನೇ ಇಂದ್ರಿಯವನ್ನು ಪಡೆದಿರುವ ಜನತೆಗೆ, 9 ವರ್ಷಗಳು ಕಡಿಮೆಯೇನೂ ಅಲ್ಲ ತಾಯಿ.

ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಯೋಜನೆಯೊಂದನ್ನು ರೂಪಿಸಲಾಗಿತ್ತು ಮತ್ತು ನಾಗರಿಕ ಹಾಗೂ ಮಿಲಿಟರಿ ಪಡೆಗಳಲ್ಲಿ ಅವಿಧೇಯತೆಯನ್ನು

ಪ್ರಚೋದಿಸುವ ಪ್ರಯತ್ನವನ್ನು ಒಬ್ಬ ವ್ಯಕ್ತಿ ಮಾಡುತಿದ್ದನು ಎಂಬುದೇ. ನೀವು ಪದೇ ಪದೇ ಹಾಡುವ ಹಾಡಿನ ಸಾರಾಂಶ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಇವೇ ನಿಮ್ಮ ಪ್ರಮುಖ ಅಸ್ತ್ರಗಳೆಂಬುದನ್ನೂ ಬಲ್ಲೆ. ಆದರೆ ಇನ್ನೂ ಕೆಲವು ಸಣ್ಣಪುಟ್ಟ ಅಸ್ತ್ರಗಳೂ ಇವೆ. ನಿಮ್ಮ ಬಳಿ. ಪ್ರಜಾಪ್ರಭುತ್ವಕ್ಕಿಂತ ದೇಶವೇ ಮುಖ್ಯವಾದದ್ದು ಮತ್ತು ಭಾರತಕ್ಕೆ ಸಾಮಾಜಿಕ ಪ್ರಜಾಪ್ರಭುತ್ವ ಸೂಕ್ತ ಮುಂತಾದ ಇಂತಹುದೇ ತಮ್ಮದೇ ಆದ ನುಡಿಮುತ್ತುಗಳನ್ನು ಸಂದರ್ಭ ಸಿಕ್ಕಾಗಲೆಲ್ಲಾ ಉದುರಿಸುತ್ತಿದ್ದೀರಿ.

ಈ ಪ್ರಸಂಗದ ಖಳನಾಯಕ ನಾನೇ ಆಗಿರುವುದರಿಂದ ನಾನು ಹೇಳಬೇಕಾದ್ದನ್ನು ಹೇಳಬಯಸುವೆ. ಈ ಬಗ್ಗೆ ನಿಮಗೆ ಆಸಕ್ತಿ ಇಲ್ಲದಿರಬಹುದು - ಏಕೆಂದರೆ ನಿಮ್ಮೆಲ್ಲಾ ಬೊಗಳೆ ಹಾಗೂ ಸುಳ್ಳುಗಳು ಕ್ರೋಧಮಯ ಹಾಗೂ ಉದ್ದೇಶಪೂರ್ವಕವಾಗಿವೆ - ಆದರೆ ಕನಿಷ್ಟಪಕ್ಷ, ಇಲ್ಲಿ ಸತ್ಯವಾದರೂ ದಾಖಲಾದಂತಾಗುತ್ತದೆ.

ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಯೋಜನೆಯ ಬಗ್ಗೆ ಹೇಳುವುದಾದರೆ, ಅಂತಹ ಯೋಜನೆಯೇ ಇರಲಿಲ್ಲ. ಅದು ನಿಮಗೆ ಗೊತ್ತೂ ಹೌದು. ವಾಸ್ತವಾಂಶಗಳನ್ನಷ್ಟೇ ನಾನಿಲ್ಲಿ ಹೇಳಬಯಸುವೆ.

ಇಂಡಿಯಾದ ಎಲ್ಲ ರಾಜ್ಯಗಳ ಪೈಕಿ ಜನತಾ ಆಂದೋಲನ ಬಿಹಾರದಲ್ಲಿ ಮಾತ್ರ ನಡೆದಿತ್ತು. ಅದೂ ಕೂಡಾ. ರಾಜ್ಯದ ಮುಖ್ಯಮಂತ್ರಿಗಳ ಹಲವಾರು ಹೇಳಿಕೆಗಳ ಪ್ರಕಾರ, ಅಂತಹುದೇನಾದರೂ ಇದ್ದಿದ್ದಲ್ಲಿ, ಬಹಳ ಹಿಂದೆಯೇ ನಶಿಸಿ ಹೋಗಿತ್ತು. ಆದರೆ ನಿಜಸಂಗತಿ ಎಂದರೆ - ನಿಮ್ಮ ಸರ್ವವ್ಯಾಪೀ ಗೂಢಚರ್ಯೆ ವ್ಯವಸ್ಥೆ ನಿಮಗೆ ಸೂಕ್ತವಾಗಿ ಸೇವೆ ಸಲ್ಲಿಸಿದ್ದಲ್ಲಿ, ನಿಮಗೇ ಗೊತ್ತಿರುವಂತೆ - ಅದು ದೃಢಗತಿಯಲ್ಲಿ ವ್ಯಾಪಿಸುತ್ತಿತ್ತು ಮತ್ತು ಮೂಲೆಮೂಲೆಯ ಹಳ್ಳಿ ಪ್ರದೇಶಗಳಿಗೂ ಮುಟ್ಟುತ್ತಿತ್ತು. ನನ್ನನ್ನು ಬಂಧಿಸುವ ಹೊತ್ತಿಗೆ, ಹಳ್ಳಿ ಮಟ್ಟದಿಂದ ವಿಭಾಗಮಟ್ಟದವರೆಗೆ ಜನತಾ ಸರ್ಕಾರಗಳನ್ನು ಸ್ಥಾಪಿಸಲಾಗಿತ್ತು. ಈ ನಂತರ, ಇದನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದವರೆಗೂ ಮುಂದುವರಿಸುವ ಆಶಯವಿತ್ತು.

ಈ ಜನತಾ ಸರ್ಕಾರಗಳು ಹಾಕಿಕೊಂಡಿದ್ದ ಕಾರ್ಯಕ್ರಮಗಳ ಕಡೆ ಗಮನಕೊಡುವ ದಯೆಯನ್ನು ನೀವು ತೋರಿದ್ದರೆ, ಅವುಗಳಲ್ಲಿ ಹೆಚ್ಚಿನವು ರಚನಾತ್ಮಕವಾಗಿದ್ದವು ಎಂಬ ಅಂಶ ನಿಮಗೆ ಗೊತ್ತಾಗುತ್ತಿದ್ದಿತು : ನಾಗರಿಕ ಪೂರೈಕೆ ವ್ಯವಸ್ಥೆಯನ್ನು ವ್ಯವಸ್ಥಿತಗೊಳಿಸುವುದು, ಭೂಸುಧಾರಣಾ ಕಾನೂನುಗಳನ್ನು ಜಾರಿಗೆ ತರುವುದು, ವ್ಯಾಜ್ಯಗಳನ್ನು ಕಾಲಾನುಕಾಲದಿಂದ ರೂಢಿಯಲ್ಲಿರುವ ಚರ್ಚೆ ಹಾಗೂ ಮನವೊಲಿಸುವಿಕೆಯ ಮಾರ್ಗಗಳ ಮೂಲಕ ತೀರ್ಮಾನಿಸಿವುದು, ಹರಿಜನರಿಗೆ ನ್ಯಾಯ ಒದಗಿಸಿಕೊಡುವುದು, ವರೋಪಚಾರ ಮತ್ತು ವರದಕ್ಷಿಣೆಯಂತಹ ಸಾಮಾಜಿಕ

ಪಿಡುಗುಗಳನ್ನು ಹತ್ತಿಕ್ಕುವುದು - ಹೀಗೇ ಇನ್ನೂ ಅನೇಕ. ಎಷ್ಟು ಆಳವಾದ ಯೋಚನೆ ಮಾಡಿದರೂ ಇವಾವುಗಳಲ್ಲೂ 'ಬುಡಮೇಲು ಕೃತ್ಯ' ಎಂದು ಕರೆಯಬಹುದಾದ ಯಾವ ಅಂಶವೂ ಇರಲಿಲ್ಲ. ಜನತಾ ಸರ್ಕಾರಗಳು ಎಲ್ಲಿ ದೃಢವಾಗಿ ಸಂಘಟಿತಗೊಂಡಿದ್ದವೋ ಅಲ್ಲಿ ಮಾತ್ರ ತೆರಿಗೆ ಕೊಡದಿರುವಿಕೆಯಂತಹ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಪಟ್ಟಣ ಪ್ರದೇಶಗಳಲ್ಲಿ ಆಂದೋಲನ ತೀವ್ರಘಟ್ಟ ಮುಟ್ಟಿದ್ದಾಗ, ಕೆಲವು ದಿನ ಧರಣಿ ಹಾಗೂ ಮತಪ್ರದರ್ಶನಗಳ ಮೂಲಕ ಸರ್ಕಾರಿ ಕಚೇರಿಗಳು ಕೆಲಸ ಮಾಡದಂತೆ ತಡೆಯುವ ಪ್ರಯತ್ನಗಳನ್ನು ಮಾಡಲಾಯಿತು. ಪಟ್ನಾದಲ್ಲಿ, ವಿಧಾನಸಭೆಯ ಅಧಿವೇಶನ ಆರಂಭವಾದಾಗಲೆಲ್ಲಾ, ಸದಸ್ಯರು ರಾಜೀನಾಮೆ ಕೊಡುವಂತೆ ಅವರ ಮನವೊಲಿಸುವ ಮತ್ತು ಸಭೆಗೆ ಹೋಗದಂತೆ ಅವರನ್ನು ಶಾಂತಿಯುತ ರೀತಿಯಲ್ಲಿ ತಡೆಯುವ ಪ್ರಯತ್ನಗಳನ್ನು ಮಾಡಲಾಯಿತು. ಇವೆಲ್ಲಾ ನಾಗರಿಕ ಅಸಹಕಾರದ ನಿಯೋಜಿತ ಕಾರ್ಯಕ್ರಮಗಳಾಗಿದ್ದು, ಈ ಸಂಬಂಧ ರಾಜ್ಯಾದ್ಯಂತ ಸಾವಿರಾರು ಪುರುಷರು ಹಾಗೂ ಮಹಿಳೆಯರನ್ನು ಬಂಧಿಸಲಾಯಿತು ಕೂಡಾ.

ಇದೆಲ್ಲವೂ ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಪ್ರಯತ್ನವೇ ಎಂದು ನೀವು ಹೇಳುವುದಾದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷ್ ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಲು ಅಸಹಕಾರ ಮತ್ತು ಸತ್ಯಾಗ್ರಹಗಳ ಮೂಲಕ ಇಂತಹುದೇ ಪ್ರಯತ್ನಗಳನ್ನು ಮಾಡಲಾಗಿತ್ತು ಎಂಬುದನ್ನು ನಾನು ನೆನಪಿಸಬಯಸುವೆ. ಅದಾದರೋ ಬಲಾತ್ಕಾರದಿಂದ ಸ್ಥಾಪಿತವಾಗಿದ್ದ ಸರ್ಕಾರವಾಗಿದ್ದರೆ, ಬಿಹಾರ ಸರ್ಕಾರ ಹಾಗೂ ಶಾಸಕಾಂಗಗಳೆರಡೂ ಸಂವಿಧಾನ ರೀತ್ಯಾ ಸ್ಥಾಪಿತವಾದವುಗಳು. ಹೀಗಿರುವಾಗ, ಚುನಾಯಿತ ಸರ್ಕಾರ ಹಾಗೂ ಚುನಾಯಿತ ಶಾಸಕಾಂಗ ಹೋಗಬೇಕೆಂದು ಕೇಳುವ ಹಕ್ಕು ಯಾರಿಗಿದೆ? ನಿಮ್ಮ ಪ್ರಿಯ ಪ್ರಶ್ನೆಗಳಲ್ಲಿ ಇದೂ ಒಂದು. ಆದರೆ ಪ್ರಶ್ನೆಗೆ, ಸಂವಿಧಾನ ಪರಿಣತರಾದ ಸುಪ್ರಸಿದ್ಧ ವಕೀಲರೂ ಸೇರಿದಂತೆ ಹಲವಾರು ಸಮರ್ಥರು ಹತ್ತಾರು ಬಾರಿ ಉತ್ತರಿಸಿದ್ದಾರೆ. ಚುನಾಯಿತ ಸರ್ಕಾರವೊಂದು ಭ್ರಷ್ಟಾಚಾರದಲ್ಲಿ ಮುಳುಗಿ ದುರಾಡಳಿದಲ್ಲಿ ತೊಡಗಿದ್ದರೆ, ಅದರ ರಾಜೀನಾಮೆಯನ್ನು ಒತ್ತಾಯಿಸುವ ಹಕ್ಕು ಜನತೆಗಿದೆ ಎಂಬುದೇ ಈ ಪ್ರಶ್ನೆಗೆ ಉತ್ತರವಾಗಿದೆ. ಇಂತಹ ಸರ್ಕಾರವನ್ನು ಬೆಂಬಲಿಸುವುದನ್ನು ಮುಂದುವರಿಸುವ ಶಾಸಕಾಂಗವೊಂದಿದ್ದರೂ, ಅದೂ ಕೂಡಾ ಹೋಗಬೇಕು ಮತ್ತು ಆ ಮೂಲಕ ಜನತೆ ಇನ್ನೂ ಉತ್ತಮ ಪ್ರತಿನಿಧಿಗಳನ್ನು ಆಯ್ಕೆಮಾಡಲು ದಾರಿಯಾಗಬೇಕು.

ಆದರೆ ಇಂತಹ ಸಂದರ್ಭದಲ್ಲಿ ಜನ ಏನನ್ನು ಬಯಸುತ್ತಿದ್ದಾರೆ ಎಂಬುದನ್ನು ಹೇಗೆ ನಿರ್ಣಯಿಸುವುದು? ಬಿಹಾರದ ಬಗ್ಗೆ ಹೇಳುವುದಾದರೆ, ಪಟ್ನಾದಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಗಳು ಮತ್ತು ಪ್ರದರ್ಶನಗಳು, ರಾಜ್ಯಾದ್ಯಂತ

ಮತಕ್ಷೇತ್ರಗಳಲ್ಲಿ ನಡೆದ ಸಾವಿರಾರು ಸಭೆಗಳು, ಮೂರು ದಿನಗಳ ಬಿಹಾರ ಬಂದ್, ನವೆಂಬರ್ 4ರಂದು ನಡೆದ ಆ ಸ್ಮರಣಾರ್ಹ ಘಟನೆಗಳು ಮತ್ತು ನವೆಂಬರ್ 18ರಂದು ಗಾಂಧಿ ಮೈದಾನದಲ್ಲಿ ನಡೆದ 'ಅಭೂತಪೂರ್ವ' ಸಭೆ - ಇವೆಲ್ಲಾ ಜನತೆಯ ಛಲದ ಪ್ರತೀಕವಾಗಿದ್ದವು. ಆದರೆ ಬಿಹಾರ ಸರ್ಕಾರ ಮತ್ತು ಕಾಂಗ್ರೆಸ್ ಬಳಿ ಇದಕ್ಕೆ ಪ್ರತ್ಯುತ್ತರ ನೀಡಬಲ್ಲ ಯಾವ ಸಾಧನ ಸಂಪತ್ತಿತ್ತು? ಶ್ರೀ ಬರೂವಾ ಅವರ ಯೋಜನೆಯ ಪ್ರಕಾರ ನವೆಂಬರ್ 16ರಂದು ನಡೆಸಿದ ಆ ಅಸಹ್ಯಕರ ದೌರ್ಜನ್ಯವೇ ನಿಮ್ಮ ಉತ್ತರವಾಗಿತ್ತು ; ವಿಶ್ವಸನೀಯ ವರದಿಗಳ ಪ್ರಕಾರ ಇದಕ್ಕಾಗಿ 60 ಲಕ್ಷ ರೂಪಾಯಿಗಳಷ್ಟು ಭಾರೀ ಮೊತ್ತದ ಹಣವನ್ನು ಖರ್ಚುಮಾಡಲಾಯಿತು. ಹೋಗಲಿ, ಸಭೆ ಪ್ರದರ್ಶನಗಳೆಲ್ಲಾ ಜನತೆಯ ಆಶೋತ್ತರಗಳ ಸೂಕ್ತ ಪ್ರತೀಕಗಳಾಗದಿದ್ದಲ್ಲಿ, ಜನಮತ ಸಂಗ್ರಹಣೆ ನಡೆಯಲಿ ಎಂದು ನಾನು ಮತ್ತೆ ಮತ್ತೆ ಕೋರಿದೆ. ಆದರೆ ಜನತೆಯನ್ನೆದುರಿಸುವ ತಾಕತ್ತು ನಿಮಗಿರಲಿಲ್ಲ.

ಬಿಹಾರ ಆಂದೋಲನವನ್ನು ಪ್ರಸ್ತಾಪಿಸುತ್ತಿರುವ ಈ ಸಂದರ್ಭದಲ್ಲೇ, ಇಂತಹ ಆಂದೋಲನದ ರಾಜಕೀಯ ಗುಣದ ಬಗ್ಗೆ ಬೆಳಕು ಚೆಲ್ಲುವ ಮತ್ತೊಂದು ಮಹತ್ವದ ಅಂಶವನ್ನು ತಿಳಿಸಬಯಸುವೆ. ಬಿಹಾರದ ವಿದ್ಯಾರ್ಥಿಗಳೇನೂ ತಮ್ಮ ಆಂದೋಲನವನ್ನು ಇದ್ದಕ್ಕಿದ್ದಂತೆ, ಸುಮ್ಮಸುಮ್ಮನೆ ಆರಂಭಿಸಲಿಲ್ಲ. ಸಮ್ಮೇಳನವೊಂದರಲ್ಲಿ ತಮ್ಮ ಬೇಡಿಕೆಗಳನ್ನು ರೂಪಿಸಿದ ನಂತರ ಅವರು ಮುಖ್ಯಮಂತ್ರಿ ಹಾಗೂ ಶಿಕ್ಷಣಮಂತ್ರಿಯವರನ್ನು ಭೇಟಿಯಾಗಿದ್ದರು. ಅವರು ಹಲವಾರು ಸಭೆಗಳನ್ನು ನಡೆಸಿದರು. ಆದರೆ ದುರದೃಷ್ಟವಶಾತ್ ಆ ಕ್ಷುದ್ರ ಹಾಗೂ ಭ್ರಷ್ಟ ಬಿಹಾರ ಸರ್ಕಾರ, ವಿದ್ಯಾರ್ಥಿಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ನಂತರ ವಿದ್ಯಾರ್ಥಿಗಳು ವಿಧಾನಸಭೆಯನ್ನು ಘೇರಾವೊ ಮಾಡಿದರು. ಅಂದು ನಡೆದ ಘಟನೆಗಳೇ ಬಿಹಾರದ ಆಂದೋಲನಕ್ಕೆ ಆಸ್ತಿಭಾರ ಹಾಕಿದವು. ಆಗಲೂ ಕೂಡಾ ವಿದ್ಯಾರ್ಥಿಗಳೇನೂ ಮಂತ್ರಿಮಂಡಲದ ರಾಜೀನಾಮೆಯನ್ನಾಗಲೀ, ಅಥವಾ ವಿಧಾನಸಭೆಯ ವಿಸರ್ಜನೆಯನ್ನಾಗಲೀ ಒತ್ತಾಯಿಸಲಿಲ್ಲ. ಗೋಲೀಬಾರು, ಲಾಠಿ ಪ್ರಯೋಗ ನಡೆದು, ಗೊತ್ತುಗುರಿ ಇಲ್ಲದೆ ಯಾರೆಂದರವರನ್ನೇ ಬಂಧಿಸತೊಡಗಿದ ಹಲವಾರು ವಾರಗಳ ನಂತರವೇ, ಈ ಒತ್ತಾಯವನ್ನು ಮಂಡಿಸುವುದು ವಿದ್ಯಾರ್ಥಿ ಕ್ರಿಯಾಸಮಿತಿಗೆ ಅನಿವಾರ್ಯವಾಯಿತು. ಈ ಘಟ್ಟದಲ್ಲಿಯೇ ಆಂದೋಲನ ಹಿಂದಡಿ ಇಡಲಾಗದ ಪರಿಸ್ಥಿತಿಯನ್ನು ಪ್ರವೇಶಿಸಿದ್ದು.

ಹೀಗೆ, ಬಿಹಾರದಲ್ಲಿ ಮಾತುಕತೆಗಳ ಮೂಲಕ ವಿಷಯವನ್ನು ಇತ್ಯರ್ಥಪಡಿಸಲು ಸರ್ಕಾರಕ್ಕೆ ಅವಕಾಶ ಕೊಡಲಾಗಿತ್ತು. ವಿದ್ಯಾರ್ಥಿಗಳ ಯಾವುದೇ ಬೇಡಿಕೆ ವಿವೇಚನಾರಹಿತವಾಗಿರಲಿಲ್ಲ ಮತ್ತು ಸಂಧಾನಕ್ಕೆ ಅನರ್ಹವಾಗಿರಲಿಲ್ಲ. ಆದರೆ ಬಿಹಾರ ಸರ್ಕಾರ ಖಡಾಖಡಿ ಮಾರ್ಗವನ್ನು ಆಯ್ದುಕೊಂಡಿತು. ಅಂದರೆ ಯಾರೇ

ಆಗಲಿ ಕೈಗೊಳ್ಳಲು ಹೇಸುವಂತಹ ದಮನಕಾರಿ ನೀತಿಗೆ ಅಂಟಿಕೊಂಡಿತು. ಉತ್ತರ ಪ್ರದೇಶದಲ್ಲೂ ಹೀಗೇ ಆಯಿತು. ಎರಡೂ ರಾಜ್ಯಗಳು, ಮಾತುಕತೆಗಳ ಮೂಲಕ ಸಮಸ್ಯೆಯನ್ನು ಇತ್ಯರ್ಥಪಡಿಸುವ ಸಂಧಾನ ಮಾರ್ಗವನ್ನು ತಿರಸ್ಕರಿಸಿ, ಘರ್ಷಣೆಯ ಮಾರ್ಗವನ್ನು ಹಿಡಿದವು. ಇದು ಹೀಗಾಗದಿದ್ದರೆ, ಆಂದೋಲನವೆಂಬುದೇ ಇರುತ್ತಿರಲಿಲ್ಲ.

ಈ ಸರ್ಕಾರಗಳೇಕೆ ವಿವೇಚನೆಯಿಂದ ವರ್ತಿಸಲಿಲ್ಲ? ಈ ಒಗಟನ್ನು ಬಿಡಿಸಲು ಹಲವಾರು ಬಾರಿ ಯತ್ನಿಸಿದ್ದೇನೆ. ಭ್ರಷ್ಟಾಚಾರವೇ ಅವುಗಳನ್ನು ಹಾಗೆ ವರ್ತಿಸಲು ತಡೆದಿರುವ ಅಂಶ ಎಂಬುದೇ ನನಗೆ ದೊರೆತಿರುವ ಉತ್ತರವಾಗಿದೆ. ಏಕೋ ಏನೋ ಸರ್ಕಾರಗಳು ತಮ್ಮ ನೌಕರ ವರ್ಗದಲ್ಲಿರುವ, ಅದರಲ್ಲೂ ನಿರ್ದಿಷ್ಟವಾಗಿ ಉನ್ನತ ಹಂತ ಅಂದರೆ, ಸ್ವತಃ ಮಂತ್ರಿವರ್ಗದಲ್ಲಿರುವ ಭ್ರಷ್ಟಾಚಾರವನ್ನು ತೊಡೆದುಹಾಕಲು ಅಸಮರ್ಥವಾಗಿದ್ದವು. ಆದುದರಿಂದಲೇ ಭ್ರಷ್ಟಾಚಾರ, ಅದರಲ್ಲೂ ನಿರ್ದಿಷ್ಟವಾಗಿ, ಸರ್ಕಾರ ಹಾಗೂ ಆಡಳಿತದಲ್ಲಿನ ಭ್ರಷ್ಟಾಚಾರ, ಆಂದೋಲನದ ಕೇಂದ್ರಬಿಂದುವಾಯಿತು.

ಏನೇ ಹೇಳಿದರೂ, ಬಿಹಾರವೊಂದನ್ನುಳಿದರೆ, ಭಾರತದ ಮತ್ತಾವ ರಾಜ್ಯದಲ್ಲಿಯೂ ಅಂತಹ ಆಂದೋಲನವಿರಲಿಲ್ಲ. ಉತ್ತರ ಪ್ರದೇಶದಲ್ಲಿ ಏಪ್ರಿಲ್ ಹೊತ್ತಿಗೆ ಸತ್ಯಾಗ್ರಹ ಆರಂಭವಾಯಿತಾದರೂ, ಅದು ಜನತಾ ಆಂದೋಲನವಾಗಲು ಬಹಳ ಕಾಲ ಬೇಕಿತ್ತು. ಇನ್ನು ಕೆಲವು ರಾಜ್ಯಗಳಲ್ಲಿ ಹೋರಾಟ ಸಮಿತಿಗಳನ್ನು ರಚಿಸಲಾಗಿತ್ತಾದರೂ, ಯಾವುದೇ ಕಡೆ ಸಾಮೂಹಿಕ ಆಂದೋಲನ ಆರಂಭವಾಗುವ ಸಾಧ್ಯತೆಗಳಿರಲಿಲ್ಲ. ಅಲ್ಲದೆ, ಲೋಕಸಭಾ ಚುನಾವಣೆಗಳು ಆಗ್ಗೆ ಹತ್ತಿರ ಬರುತ್ತಿದ್ದುದರಿಂದ, ವಿರೋಧಪಕ್ಷಗಳ ಗಮನ ನಾಗರಿಕ ಅಸಹಕಾರವನ್ನೊಳಗೊಂಡ ಹೋರಾಟದ ಕಡೆಗಿಂತ ಬರಲಿದ್ದ ಚುನಾವಣಾ ಹೋರಾಟದ ಕಡೆಗೇ ಹೆಚ್ಚಿತು.

ಹೀಗೆ, ನೀವು ಹೇಳುವ ಯೋಜನೆ, ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಲು ರೂಪಿಸಲಾಗಿತ್ತೆಂದು ಹೇಳುವ ಯೋಜನೆ ಕೇವಲ, ನಿಮ್ಮ ಸರ್ವಾಧಿಕಾರೀ ಕ್ರಮಗಳನ್ನು ಸಮರ್ಥಿಸಲು ನೀವು ಮುಂದಿಟ್ಟ ಕಟ್ಟುಕಥೆ ಮಾತ್ರವಾಗಿದೆ.

ಒಂದು ವೇಳೆ ವಾದಕ್ಕಾಗಿಯಾದರೂ ಅಂತಹ ಯೋಜನೆಯೊಂದಿತ್ತು ಎಂದು, ಒಂದು ಕ್ಷಣ ನಾನು ಒಪ್ಪಿಕೊಂಡಲ್ಲಿ, ನಿಮ್ಮ ಹಿಂದಿನ ಸಹೋದ್ಯೋಗಿ, ಮಾಜಿ ಉಪಪ್ರಧಾನಮಂತ್ರಿ ಶ್ರೀ ಮೊರಾರ್ಜಿ ದೇಸಾಯಿ ಹಾಗೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯ ಶ್ರೀ ಚಂದ್ರಶೇಖರ್ - ಇವರೂ ಈ ಯೋಜನೆಯಲ್ಲಿ ಭಾಗಿಗಳಾಗಿದ್ದರು ಎಂದು ನಿಮಗೆ ಪ್ರಾಮಾಣಿಕವಾಗಿ ಅನ್ನಿಸುತ್ತಿದೆಯೇ? ಹಾಗಿದ್ದರೆ, ಅವರನ್ನೂ ಮತ್ತು ಅಂತಹ ಅನೇಕರನ್ನು ಬಂಧಿಸಿದ್ದಾದರೂ ಏಕೆ?

ಇಲ್ಲ ಪ್ರಿಯ ಪ್ರಧಾನಮಂತ್ರಿಯವರೇ, ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಯೋಜನೆಯೆಂಬುದೇ ಇರಲಿಲ್ಲ. ಯಾವುದೇ ಯೋಜನೆ ಇದ್ದಿದ್ದರೂ, ಅದು ಸರಳವಾದ, ನಿರಪಾಯಕಾರಿಯಾದ ಮತ್ತು ನಿಮ್ಮ ಮೇಲ್ಮನವಿ ಸುಪ್ರೀಂಕೋರ್ಟಿನಲ್ಲಿ ತೀರ್ಮಾನವಾಗುವವರೆಗೆ ಮುಂದುವರಿಯಲಿದ್ದ ಅಲ್ಪಾವಧೀ ಯೋಜನೆ ಮಾತ್ರ. ಇದೇ ಯೋಜನೆಯನ್ನೇ ಜೂನ್ 25ರಂದು ರಾಮಲೀಲಾ ಮೈದಾನದಲ್ಲಿ ನಾನಾಜಿ ದೇಶಮುಖ್ ಪ್ರಕಟಿಸಿದ್ದು. ಅಂದು ಸಂಜೆ ನಾನು ಮಾತಾಡಿದ್ದೂ ಈ ಯೋಜನೆಯನ್ನು ಕುರಿತೇ. ಸುಪ್ರೀಂಕೋರ್ಟು ತನ್ನ ತೀರ್ಮಾನ ಕೊಡುವವರೆಗೆ ನೀವು ಪ್ರಧಾನಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕೆಂಬ ಬೇಡಿಕೆಗೆ ಬೆಂಬಲವಾಗಿ ನಿಮ್ಮ ಮನೆಯ ಮುಂದೆ ಅಥವಾ ಬಳಿ ಆಯ್ದ ಕೆಲವರು ಸತ್ಯಾಗ್ರಹ ನಡೆಸಬೇಕೆಂಬುದೇ ಈ ಯೋಜನೆಯ ಕಾರ್ಯಕ್ರಮವಾಗಿತ್ತು. ಈ ಕಾರ್ಯಕ್ರಮವನ್ನು ದೆಹಲಿಯಲ್ಲಿ 7 ದಿನಗಳನ್ನು ನಡೆಸಿ, ನಂತರ ಅದನ್ನು ಎಲ್ಲ ರಾಜ್ಯಗಳಿಗೂ ವಿಸ್ತರಿಸಬೇಕೆಂದಿತ್ತು. ಅಲ್ಲದೆ, ಈ ಮೊದಲೇ ಹೇಳಿದಂತೆ ಇದು ಸುಪ್ರೀಂಕೋರ್ಟಿನ ತೀರ್ಪು ಹೊರಬೀಳುವವರೆಗೆ ಮಾತ್ರ ನಡೆಯುತ್ತಿತ್ತು. ಇದರಲ್ಲಿ ಎಂತಹ ಬುಡಮೇಲು ಅಥವಾ ಅಪಾಯದ ಅಂಶವಿತ್ತೋ ನಾ ಕಾಣೆ. ಪ್ರಜಾಪ್ರಭುತ್ವವೊಂದರಲ್ಲಿ ಪರಿಹಾರ ಅಥವಾ ಸುಧಾರಣೆಯ ಬೇರೆಲ್ಲಾ ಮಾರ್ಗಗಳೂ ನಿಷ್ಪ್ರಯೋಜಕ ಎಂದೆನಿಸಿದಾಗ, ನಾಗರಿಕ ಅಸಹಕಾರ ಮಾರ್ಗವನ್ನು ಆಯ್ದುಕೊಳ್ಳುವುದು ಪ್ರಜೆಯ ಆಜನ್ಮಸಿದ್ಧ ಹಕ್ಕಾಗಿರುತ್ತದೆ. ಇದಕ್ಕಾಗಿ ಕಾನೂನು ಪ್ರಕಾರದ ಶಿಕ್ಷೆಯನ್ನು ಸತ್ಯಾಗ್ರಹಿ, ಸ್ವಇಚ್ಛೆಯಿಂದಲೇ ಆಹ್ವಾನಿಸುತ್ತಾನೆ ಮತ್ತು ಒಪ್ಪಿಕೊಳ್ಳುತ್ತಾನೆ ಎಂಬುದನ್ನು ಹೇಳುವುದು ಅನಗತ್ಯ. ಇದು ಗಾಂಧೀಜಿ, ಪ್ರಜಾಪ್ರಭುತ್ವಕ್ಕೆ ಒದಗಿಸಿದ ಹೊಸ ಆಯಾಮ. ಆದರೆ ಗಾಂಧೀಜಿಯ ಭಾರತದಲ್ಲೇ ಇದನ್ನೂ ನಿರಾಕರಿಸುತ್ತಿರುವುದು ಎಂತಹ ವಿಪರ್ಯಾಸ!

ಗಮನಿಸಬೇಕಾದ ಮತ್ತು ಬಹಳ ಮುಖ್ಯವಾದ ಅಂಶವೆಂದರೆ, ನೀವು ಸುಮ್ಮನೆ ನಿಮ್ಮ ಅಧಿಕಾರಸ್ಥಾನಕ್ಕೆ ಭದ್ರವಾಗಿ ಅಂಟಿಕೊಂಡು ಕೂರುವುದರಲ್ಲೇ ತೃಪ್ತರಾಗಿದ್ದರೆ, ಈ ಸತ್ಯಾಗ್ರಹ ಕಾರ್ಯಕ್ರಮದ ಕಡೆ ವಿರೋಧ ಪಕ್ಷಗಳು ಕಣ್ಣು ಹಾಯಿಸುತ್ತಿರಲಿಲ್ಲ. ಆದರೆ ನೀವು ಹಾಗೆ ಮಾಡಲಿಲ್ಲ. ನಿಮ್ಮ ಬಲಗೈ ಬಂಟರ ಮೂಲಕ ನಿಮ್ಮ ಮನೆಯ ಮುಂದೆ ಜನರನ್ನು ಸೇರಿಸಿ, ನೀವು ರಾಜೀನಾಮೆ ಕೊಡಕೂಡದೆಂದು ಬೇಡಿಕೊಳ್ಳುವ ಸಭೆ - ಪ್ರದರ್ಶನಗಳನ್ನು ವ್ಯವಸ್ಥೆಗೊಳಿಸಿದಿರಿ. ಈ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ ನೀವು, ನಿಮ್ಮ ಉದ್ರಿಕ್ತ ವಾದಗಳನ್ನು ಮಂಡಿಸಿದಿರಿ ಮತ್ತು ವಿರೋಧ ಪಕ್ಷದ ಮುಖಂಡರನ್ನು ಅನಾಗರಿಕ ರೀತಿಯಲ್ಲಿ ನಿಂದಿಸಿದಿರಿ. ಹೈಕೋರ್ಟಿನ ನ್ಯಾಯಾಧೀಶರ* ಪ್ರತಿಕೃತಿಯೊಂದನ್ನು ನಿಮ್ಮ ಮನೆ ಮುಂದೆ

---

* ಚುನಾವಣೆಯಲ್ಲಿ ಭ್ರಷ್ಟಾಚಾರ ನಡೆಸಿ ಆಯ್ಕೆಯಾಗಿದ್ದಾರೆಂದು ಶ್ರೀಮತಿ ಗಾಂಧಿಯವರ ಪಾರ್ಲಿಮೆಂಟ್ ಸದಸ್ಯತ್ವವನ್ನು ರದ್ದುಗೊಳಿಸಿ ತೀರ್ಪು ನೀಡಿದ, ಅಲಹಾಬಾದ್ ಹೈಕೋರ್ಟಿನ ನ್ಯಾಯಾಧೀಶ ಶ್ರೀ ಜೆ.ಎಂ.ಎಲ್. ಸಿನ್ಹ.

ಸುಡಲಾಯಿತು ಮತ್ತು ನ್ಯಾಯಾಧೀಶರು ಹಾಗೂ ಸಿ.ಐ.ಎ. ನಡುವೆ ಒಂದು ರೀತಿಯ ಸಂಬಂಧವಿದೆ ಎಂದು ಪ್ರಚಾರ ಮಾಡುವ ಭಿತ್ತಿಪತ್ರಗಳನ್ನು ನಗರದಲ್ಲೆಲ್ಲಾ ಅಂಟಿಸಲಾಯಿತು. ಪ್ರತಿದಿನವೂ ಇಂತಹಜ ಹೇಯಕೃತ್ಯಗಳು ನಡೆಯುತ್ತಿದ್ದಾಗ, ಈ ಕುಚೇಷ್ಟೆಯನ್ನು ಪ್ರತಿರೋಧಿಸುವ ಪ್ರಯತ್ನ ಮಾಡದೆ ವಿರೋಧಪಕ್ಷಗಳಿಗೆ ಬೇರೆ ದಾರಿಯಿರಲಿಲ್ಲ. ಇದನ್ನು ಮಾಡುವ ಬಗೆಯನ್ನು ಅವು ನಿರ್ಧರಿಸಿದ್ದಾದರೂ ಹೇಗೆ? ರೌಡಿತನದ ಮೂಲಕ ಅಲ್ಲ, ವ್ಯವಸ್ಥಿತ ಸತ್ಯಾಗ್ರಹ, ಆತ್ಮತ್ಯಾಗದ ಮೂಲಕ.

ಜನತೆಯ ಸ್ವಾತಂತ್ರ್ಯಗಳನ್ನು ಅಪಹರಿಸಿ, ಪ್ರಜಾಪ್ರಭುತ್ವಕ್ಕೆ ಮರ್ಮಬೇಧಕ ಪ್ರಹಾರ ಮಾಡುವಷ್ಟು ನಿಮ್ಮನ್ನು ಸಿಟ್ಟಿಗೆಬ್ಬಿಸಿದ್ದು ಈ 'ಯೋಜನೆ'ಯೇ ಹೊರತು, ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ನಿಮ್ಮ ಕಾಲ್ಪನಿಕ ಯೋಜನೆಯಲ್ಲ.

ಪತ್ರಿಕಾ ಸ್ವಾತಂತ್ರ್ಯವನ್ನಾದರೂ ಏಕೆ ದಮನ ಮಾಡಲಾಗಿದೆ? ಭಾರತೀಯ ಪತ್ರಿಕಾರಂಗ ಬೇಜವಾಬ್ದಾರಿಯುತವಾಗಿತ್ತು, ಅಪ್ರಾಮಾಣಿಕವಾಗಿತ್ತು ಅಥವಾ ಸರ್ಕಾರ ವಿರೋಧಿಯಾಗಿತ್ತು ಎಂದಲ್ಲ. ವಾಸ್ತವವಾಗಿ, ಸ್ವತಂತ್ರ ವಾತಾವರಣದಲ್ಲಿ ಪತ್ರಿಕೆಗಳು, ಭಾರತದಲ್ಲಿದ್ದುದಕ್ಕಿಂತ ಹೆಚ್ಚು ಜವಾಬ್ದಾರಿಯುತವಾಗಿ, ವಿವೇಚನಾತ್ಮಕವಾಗಿ ಮತ್ತು ನ್ಯಾಯಯುತವಾಗಿ ಬೇರೆಲ್ಲೂ ವರ್ತಿಸಿಲ್ಲ. ನಿಜಸಂಗತಿ ಎಂದರೆ, ಇವುಗಳ ವಿರುದ್ಧ ನಿಮ್ಮ ಸಿಟ್ಟು ಮುಗಿಲೆದ್ದದ್ದು, ಹೈಕೋರ್ಟ್ ತೀರ್ಪಿನ ನಂತರ ಕೆಲವು ಪತ್ರಿಕೆಗಳು ನಿಮ್ಮ ರಾಜೀನಾಮೆ ಸಂಬಂಧವಾಗಿ ನಿಮಗೆ ತೀರಾ ಅಸಹನೀಯವಾದ ನಿಲುವು ತಳೆದಾಗ, ಸುಪ್ರೀಂಕೋರ್ಟು ಸಹ ತನ್ನ ತಡೆಯಾಜ್ಞೆಯಲ್ಲಿ ನಿಮ್ಮ ಲೋಕಸಭಾ ಸದಸ್ಯತ್ವವನ್ನು ತಾತ್ಕಾಲಿಕವಾಗಿ ರದ್ದು ಮಾಡಿದ ತೀರ್ಪು ನೀಡಿದ ಮಾರನೆಯ ದಿನ, ಅಡ್ಡಗೋಡೆಯ ಮೇಲೆ ದೀಪವಿಡುವ 'ಟೈಮ್ಸ್ ಆಫ್ ಇಂಡಿಯಾ' ಸಹ ಸೇರಿದಂತೆ ಎಲ್ಲ ಪ್ರಮುಖ ಪತ್ರಿಕೆಗಳೂ ನೀವು ರಾಜೀನಾಮೆ ನೀಡಬೇಕೆಂದು ಸಲಹೆ ಮಾಡಿ, ಸಕಾರಣವಾದ ಮತ್ತು ಪ್ರಬಲವಾದ ಸಂಪಾದಕೀಯಗಳನ್ನು ಬರೆದಾಗ ಪತ್ರಿಕಾ ಸ್ವಾತಂತ್ರ್ಯ ಎಂಬುದು ನಿಮಗೆ ಅರಗಿಸಿಕೊಳ್ಳಲು ತೀರಾ ಅಸಾಧ್ಯವಾದ ಅಂಶವಾಗಿ ಪರಿಣಮಿಸಿತು. ಆ ಕ್ಷಣದಲ್ಲೇ ಭಾರತೀಯ ಪತ್ರಿಕಾರಂಗದ ಸಮಾಧಿಯನ್ನು ತೋಡಲಾಯಿತು, ಮೃತ್ಯುಪ್ರಹಾರ ನಡೆಸಿದ್ದೂ ಆಯಿತು. ಪ್ರಜಾಪ್ರಭುತ್ವದ ಉಸಿರಾಗಿರುವ ಪತ್ರಿಕೆಗಳ ಅಮೂಲ್ಯ ಸ್ವಾತಂತ್ರ್ಯವನ್ನು ಕೇವಲ ಓರ್ವ ಪ್ರಧಾನಮಂತ್ರಿಯ ವೈಯುಕ್ತಿಕ ಅಧಿಕಾರದ ತೆವಲನ್ನು ತೀರಿಸುವುದಕ್ಕಾಗಿ ದಮನ ಮಾಡುವುದು ಯಾರನ್ನಾದರೂ ದಿಗ್ಭ್ರಾಂತರನ್ನಾಗಿಸುವ ಅಂಶವಾಗಿದೆ.

ದೇಶದ ಪ್ರಧಾನಮಂತ್ರಿಯ ಸ್ಥಾನದ ಘನತೆ ಗೌರವಗಳನ್ನು ಹಾಳುಮಾಡಲು ತೊಡಗಿದ್ದಾರೆಂದು ನೀವು ವಿರೋಧ ಪಕ್ಷಗಳವರನ್ನು ದೂಷಿಸುತ್ತಿರುವಿರಿ. ಅದರೆ ನಿಜಸಂಗತಿ ಇದಕ್ಕೆ ವಿರುದ್ಧವಾದದು. ಈ ಉನ್ನತಸ್ಥಾನದ ಘನತೆ ಗೌರವಗಳನ್ನು ಕೆಡಿಸುವಲ್ಲಿ ಸ್ವತಃ ನೀವು ಸಲ್ಲಿಸಿರುವಷ್ಟು ಕೊಡುಗೆಯನ್ನು ಇನ್ನಾರೂ ಸಲ್ಲಿಸಿಲ್ಲ.

ಚುನಾವಣೆಯಲ್ಲಿ ಭ್ರಷ್ಟಾಚಾರವೆಸಗಿದ ತಪ್ಪಿನಿಂದಾಗಿ ಪಾರ್ಲಿಮೆಂಟ್ ಸದಸ್ಯತ್ವವನ್ನು ಕಳೆದುಕೊಂಡ ವ್ಯಕ್ತಿ, ಪ್ರಜಾಪ್ರಭುತ್ವ ದೇಶವೊಂದರ ಪ್ರಧಾನಮಂತ್ರಿಯಾಗಿರುವುದನ್ನು ಯಾರಾದರೂ ಕಲ್ಪಿಸಿಕೊಳ್ಳಲು ಸಾಧ್ಯವೇ? (ಸುಪ್ರೀಂಕೋರ್ಟು, ಹೈಕೋರ್ಟಿನ ತೀರ್ಪನ್ನು ವಜಾ ಮಾಡಬಹುದು - ಈ ಭಯೋತ್ಪಾದನೆಯ ದಿನಗಳಲ್ಲಿ ಅಗುವುದೂ ಹಾಗೆಯೇ - ಆದರೆ ಆವರೆಗೆ ನಿಮ್ಮ ತಪ್ಪು, ಹಾಗೂ ಪಾರ್ಲಿಮೆಂಟಿನಲ್ಲಿ ಮತನೀಡುವ ಹಕ್ಕಿನ ರದ್ದತಿ ಮುಂದುವರಿಯುತ್ತದೆ).

ಸಶಸ್ತ್ರ ಹಾಗೂ ಪೊಲೀಸ್ ಪಡೆಗಳಲ್ಲಿ ಅವಿಧೇಯತೆಯನ್ನು ಬಿತ್ತಲು ಯತ್ನಿಸಿದನೆಂದು ಹೇಳಲಾದ 'ಒಬ್ಬ ವ್ಯಕ್ತಿ'ಯ ಬಗ್ಗೆ ಹೇಳುವುದಾದರೆ, ಆತ ಈ ಆಪಾದನೆಯನ್ನು ತಿರಸ್ಕರಿಸುತ್ತಾನೆ. ಆತ ಮಾಡಿದ್ದೆಲ್ಲಾ, ಪಡೆಗಳಲ್ಲಿನ ಸಿಪಾಯಿ ಹಾಗೂ ಅಧಿಕಾರಿಗಳಿಗೆ ಅವರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವಷ್ಟೆ. ಆತ ಈ ಸಂಬಂಧದಲ್ಲಿ ಹೇಳಿರುವುದೆಲ್ಲವೂ ಕಾನೂನುಬದ್ಧವಾಗಿಯೇ - ಸಂವಿಧಾನ, ಸೇನಾ ಕಾಯಿದೆ ಹಾಗೂ ಪೊಲೀಸ್ ಕಾಯಿದೆ - ಇದೆ.

ಇಷ್ಟೂ ನಿಮ್ಮ ಪ್ರಮುಖ ಆಪಾದನೆಗಳ ಬಗ್ಗೆ : ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಯೋಜನೆ ಮತ್ತು ಸಶಸ್ತ್ರ ಪಡೆ ಹಾಗೂ ಪೊಲೀಸ್ ದಳಗಳಲ್ಲಿ ಅವಿಧೇಯತೆಯನ್ನು ಬಿತ್ತುವ ಪ್ರಯತ್ನ. ಈಗ ನಿಮ್ಮ ಕೆಲವು ಸಣ್ಣಪುಟ್ಟ ಆಪಾದನೆಗಳು ಹಾಗೂ ಆಟಾಟೋಪಗಳ ಬಗ್ಗೆ.

ಪ್ರಜಾಪ್ರಭುತ್ವವೇನೂ ದೇಶಕ್ಕಿಂತ ದೊಡ್ಡದಲ್ಲ ಎಂದು ನೀವು ಹೇಳಿರುವುದಾಗಿ ವರದಿಯಾಗಿದೆ. ಮಾನ್ಯ ಪ್ರಧಾನಮಂತ್ರಿಯವರೇ ನೀವು ಹೇಳಬೇಕಾದುದರ ಇತಿಮಿತಿಗಳನ್ನು ಮೀರುತ್ತಿಲ್ಲವಷ್ಟೆ? ದೇಶದ ಬಗ್ಗೆ ಕಳಕಳಿ ಇರುವುದು ನಿಮ್ಮೊಬ್ಬರಿಗೇ ಅಲ್ಲ. ನೀವು ಸ್ಥಾನಬದ್ಧತೆ - ಇಲ್ಲವೇ ಸೆರೆಯಲ್ಲಿರಿಸಿರುವವರ ಪೈಕಿ ದೇಶಕ್ಕಾಗಿ ನಿಮಗಿಂತ ಹೆಚ್ಚು ದುಡಿದಿರುವವರು ಅನೇಕರಿದ್ದಾರೆ. ಅವರಲ್ಲಿ ಪ್ರತಿಯೊಬ್ಬರೂ ನಿಮ್ಮಷ್ಟೇ ದೇಶಪ್ರೇಮಿಗಳಾಗಿದ್ದಾರೆ. ಆದುದರಿಂದ ದಯವಿಟ್ಟು, ದೇಶದ ಬಗ್ಗೆ ನಮಗೆ ಭಾಷಣ ಬಿಗಿದು ನಮ್ಮ ಗಾಯಗಳಿಗೆ ಉಪ್ಪು ಹಚ್ಚಬೇಡಿ.

ಇದಲ್ಲದೆ, ನೀವು ಪ್ರತಿಪಾದಿಸುವ ಆಯ್ಕೆಯೂ ಅಸಂಬದ್ಧವಾಗಿದೆ. ಪ್ರಜಾಪ್ರಭುತ್ವ ಮತ್ತು ರಾಷ್ಟ್ರದ ನಡುವೆ ಯಾವುದಾದರೊಂದನ್ನು ಆಯ್ಕೆ ಮಾಡಬೇಕೆನ್ನುವುದೇ ಅರ್ಥಹೀನವಾಗಿದೆ. ದೇಶದ ಒಳಿತಿನ ದೃಷ್ಟಿಯಿಂದಲೇ ಭಾರತದ ಜನತೆ, 1949ರ ನವೆಂಬರ್ 26ರಂದು 'ಭಾರತದ ಜನತೆಯಾದ ನಾವು, ಭಾರತವನ್ನು ಪರಮಾಧಿಕಾರವುಳ್ಳ ಪ್ರಜಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸಲು ವಿಧಿಯುಕ್ತವಾಗಿ ನಿರ್ಧರಿಸಿ... ಈ ಸಂವಿಧಾನವನ್ನು ನಾವಾಗಿ ಪಡೆದಿರುತ್ತೇವೆ' ಎಂದು ಘೋಷಿಸಿದ್ದು

ಇಂತಹ ಪ್ರಜಾಸತ್ತಾತ್ಮಕ ಸಂವಿಧಾನವನ್ನು ಕೇವಲ ಒಂದು ವಿಶೇಷಾಜ್ಞೆ ಅಥವಾ ಪಾರ್ಲಿಮೆಂಟಿನ ಒಂದು ಕಾನೂನಿನ ಮೂಲಕ ಸರ್ವಾಧಿಕಾರರೂಪವನ್ನಾಗಿ ಮಾಡಲಾಗದು. ಇದೇ ವಿಶಿಷ್ಟ ಉದೇಶಕ್ಕಾಗಿ ವಿಶೇಷವಾಗಿ ಚುನಾಯಿತವಾದ ಹೊಸ ಸಂವಿಧಾನ ಸಭೆಯ ಮೂಲಕ ಮಾತ್ರ ಜನತೆ ಇದನ್ನು ಮಾಡಬಲ್ಲುದು. ಆ ಸಂವಿಧಾನಕ್ಕೆ ಸಹಿ ಹಾಕಿದ ಕಾಲು ಶತಮಾನದ ನಂತರವೂ 'ಎಲ್ಲ ಪ್ರಜೆಗಳಿಗೆ' ನ್ಯಾಯ, ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಪರಿಚಯವಾಗಿರದಿದ್ದರೆ, ತಪ್ಪು ಸಂವಿಧಾನ ಅಥವಾ ಪ್ರಜಾಪ್ರಭುತ್ವದ್ದಲ್ಲ ; ತಪ್ಪಿರುವುದು, ಇಷ್ಟು ವರ್ಷಗಳವರೆಗೂ ದೆಹಲಿಯಲ್ಲಿ ಅಧಿಕಾರದ ಲಗಾಮು ಹಿಡಿದು ಕೂತ ಕಾಂಗ್ರೆಸ್ ಪಕ್ಷದಲ್ಲಿ, ಕಾಂಗ್ರೆಸ್ ಪಕ್ಷದ ಈ ವೈಫಲ್ಯದಿಂದಾಗಿಯೇ ಜನತೆ ಹಾಗೂ ಯುವಜನರಲ್ಲಿ ಇಷ್ಟೊಂದು ಅಶಾಂತಿ ತಲೆದೋರಿರುವುದು. ಆದರೆ ದಮನ ಇದಕ್ಕೆ ಪರಿಹಾರವಲ್ಲ, ಬದಲಾಗಿ ಅದು ವೈಫಲ್ಯವನ್ನು ಎತ್ತಿತೋರಿಸುತ್ತದಷ್ಟೆ.

ಈಚೆಗೆ ಪತ್ರಿಕೆಗಳ ತುಂಬಾ ಹೊಸ ನೀತಿಗಳ, ಹೊಸ ಕಾರ್ಯಾಚರಣೆಗಳ ಮತ್ತು ಹೊಸ ಉತ್ಸಾಹ ಮೂಡಿಕೆಯ ವರದಿಗಳೇ ತುಂಬಿಹೋಗಿರುವುದನ್ನು ನಾನು ನೋಡಿರುವುದು ನಿಜ. ಇದೆಲ್ಲದರ ಅರ್ಥ: ವ್ಯರ್ಥವಾದ ದಿನಗಳನ್ನು ಮರೆಮಾಚಲು, ಅಂದರೆ ಒಂಭತ್ತು ವರ್ಷಗಳ ನಿಮ್ಮ ವೈಫಲ್ಯವನ್ನು, ಅಲ್ಲಲ್ಲಿ ಒಂದಿಷ್ಟು ಕೆಲಸ ಮಾಡಿದಂತೆ ತೋರಿಸಿ ಮುಚ್ಚಿಡುವ ಪ್ರಯತ್ನವನ್ನು ನೀವು ಮಾಡಿದ್ದೀರಷ್ಟೆ. ಆದರೆ ನಿಮ್ಮ 20 ಅಂಶಗಳು, ನಿಮ್ಮ 10 ಅಂಶಗಳು ಹಾಗೂ ನಿಮ್ಮ "ಇದ್ದಕ್ಕಿದ್ದಂತೆ ಹೊಳೆದ ಆಲೋಚನೆಗಳು" (Stray thoughts)* ಹಿಡಿದ ಹಾದಿಯನ್ನೇ ಹಿಡಿಯುತ್ತವೆ. ನಿಮಗೆ ಖಚಿತವಾಗಿ ಹೇಳುತ್ತಿದ್ದೇನೆ : ಜನ ಈ ಸಲ ಮೋಸಹೋಗುವುದಿಲ್ಲ. ನಾನು ಇನ್ನೊಂದು ವಿಷಯವನ್ನೂ ಖಚಿತವಾಗಿ ಹೇಳುವೆ: ಸ್ವಾರ್ಥಿಗಳು, ಬೆನ್ನೆಲುಬಿಲ್ಲದ ಸಮಯಸಾಧಕರು ಮತ್ತು ಹೌದಪ್ಪಗಳಿಂದ ತಂಬಿರುವ-ಓ, ಇದು ಹೀಗಾಗಬಾರದಿತ್ತು-ಕಾಂಗ್ರೆಸ್ಸಿನಂತಹ ಪಕ್ಷ ಮೌಲಿಕವಾದದ್ದೇನನ್ನೂ ಮಾಡಲಾರದು (ಎಲ್ಲ ಕಾಂಗ್ರೆಸ್ಸಿಗರೂ ಹೀಗಲ್ಲ. ಪಕ್ಷದ ಸದಸ್ಯತ್ವವನ್ನು ಮತ್ತು ಸ್ವಾತಂತ್ರ್ಯವನ್ನು ನಿರಾಕರಿಸಲಾಗಿರುವ ಕೆಲವರು ಇದಕ್ಕೆ ಅಪವಾದವಾಗಿದ್ದಾರೆ. ಸರ್ವಾಧಿಕಾರದ ಧರ್ಮದ ಪ್ರಕಾರ ಪಕ್ಷದೊಳಗೂ ಟೀಕೆ ಟಿಪ್ಪಣಿಗಳಿಗೆ ಅವಕಾಶವಿಲ್ಲ) ಕಾಗದದ ಮೇಲೆ ಬೇಕಾದಷ್ಟು ಪ್ರಚಾರ ಮತ್ತು ಸಾಧನೆಯ ದಾಖಲೆಗಳಿರುತ್ತವೆ ; ಆದರೆ ವಾಸ್ತವ ಹಂತದಲ್ಲಿ ಒಂದಿಷ್ಟೂ ಬದಲಾವಣೆಯ ಸೋಂಕಿರುವುದಿಲ್ಲ. ಬಡವರ ಸ್ಥಿತಿಗತಿಯಂತೂ - ದೇಶದ ಬಹುಭಾಗದಲ್ಲಿ ಬಹುಸಂಖ್ಯಾತರಾಗಿರುವವರು ಇವರೇ - ಕಳೆದ ಕೆಲವು ವರ್ಷಗಳಿಂದ ಹದಗೆಡುತ್ತಲೇ ಇದೆ. ಈ ಹದಗೆಡುತ್ತಿರುವ

*** ಇದು 1969ರಲ್ಲಿ ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಆರ್ಥಿಕ ನೀತಿಯ ಬಗ್ಗೆ ಶ್ರೀಮತಿ ಗಾಂಧಿ ಕಳಿಸಿದ ಟಿಪ್ಪಣಿಯ ಪ್ರಸ್ತಾಪ.**

ಪ್ರವೃತ್ತಿಯನ್ನಷ್ಟೆ ತಡೆದರೆ ಸಾಕಾಗಿದೆ. ಆದರೆ ಅದಕ್ಕೆ, ಇಡೀ ರಾಜಕೀಯ ಹಾಗೂ ಆರ್ಥಿಕ ಧೋರಣೆಗಳೇ ಬದಲಾಗಬೇಕಾಗಿವೆ.

ನಾನು ಇದನ್ನೆಲ್ಲಾ ಬಿಚ್ಚು ಮನಸ್ಸಿನಿಂದ ಮತ್ತು ಶಬ್ದಗಳಿಗೆ ತಡಕಾಡದೆಯೇ ಬರೆದಿರುವೆ. ಸಿಟ್ಟಿನಿಂದಾಗಲೀ ಅಥವಾ ಪದ ಪ್ರಯೋಗದಲ್ಲಿ ನಿಮ್ಮನ್ನು ಮೀರಿಸಲೆಂದಾಗಲೀ ನಾನು ಹೀಗೆ ಮಾಡಿಲ್ಲ. ಅದು ಕೇವಲ ನಪುಂಸಕ ದೋಷವಾಗುತ್ತದಷ್ಟೆ. ನನ್ನ ಆರೋಗ್ಯದ ಬಗ್ಗೆ ತೆಗೆದುಕೊಳ್ಳಲಾಗಿರುವ ಎಚ್ಚರಿಕೆಯ ಬಗ್ಗೆ ನಾನು ಕೃತಜ್ಞನಾಗಿಲ್ಲ ಎಂದೇನೂ ಇದರ ಅರ್ಥವಲ್ಲ. ನೀವು ಮುಚ್ಚಿಡಲು ಮತ್ತು ವಿರೂಪಗೊಳಿಸಲು ಯತ್ನಿಸುತ್ತಿದ್ದ ನಗ್ನ ಸತ್ಯವನ್ನು, ನಿಮ್ಮ ಮುಖದ ಮುಂದೆ ಹಿಡಿಯುವುದೇ ಇಲ್ಲಿ ನನ್ನ ಉದ್ದೇಶವಾಗಿದೆ.

ಈ ಅಸಂತೋಷಕರ ಕರ್ತವ್ಯವನ್ನು ನಿರ್ವಹಿಸಿದನಂತರ, ಕೆಲವು ಕೊನೆಯ ಬುದ್ಧಿಮಾತುಗಳನ್ನು ಹೇಳಿ ಇದನ್ನು ಮುಕ್ತಾಯಗೊಳಿಸಲೆ? ನಿಮಗೇ ತಿಳಿದಿರುವಂತೆ ನಾನೊಬ್ಬ ವಯಸ್ಸಾದ ಮನುಷ್ಯ. ನನ್ನ ಜೀವನದ ದುಡಿಮೆ ಮುಗಿದಿದೆ. ಪ್ರಭಾ ಅಗಲಿದ ನಂತರ ನಾನು ಇನ್ನಾರಿಗಾಗಿಯೂ ಬದುಕಬೇಕಾಗಿಲ್ಲ. ನನ್ನ ತಮ್ಮ ಹಾಗೂ ಸೋದರ ಸಂಬಂಧಿಗೆ ಅವರದೇ ಆದ ಕುಟುಂಬಗಳಿವೆ ಮತ್ತು ನನ್ನ ತಂಗಿಗೆ-ಅಕ್ಕ ಬಹಳ ವರ್ಷಗಳ ಹಿಂದೆಯೇ ಅಗಲಿದಳು-ಆಕೆಯ ಮಗ ಹಾಗೂ ಮಗಳಿದ್ದಾರೆ. ನಾನು ನನ್ನ ವಿದ್ಯಾಭ್ಯಾಸ ಮುಗಿಸಿದ ನಂತರ ನನ್ನ ಇಡೀ ಬದುಕನ್ನೇ ದೇಶಕ್ಕಾಗಿ ಅರ್ಪಿಸಿದ್ದೇನೆ ಮತ್ತು ಅದಕ್ಕೆ ಪ್ರತಿಫಲವನ್ನೆಂದೂ ನಾನು ಬೇಡಿಲ್ಲ. ಆದುದರಿಂದ ನಿಮ್ಮ ಅಧಿಪತ್ಯದಲ್ಲಿ ಬಂಧಿಯಾಗಿಯೇ ಸಾಯಲು ಸಿದ್ಧನಿರುವೆ.

ಇಂತಹ ಮನುಷ್ಯನ ಬುದ್ಧಿಮಾತುಗಳನ್ನು ಸ್ವಲ್ಪ ಕೇಳುವಿರಾ? ನಿಮ್ಮ ಮಾನ್ಯ ತಂದೆಯವರೂ ಸೇರಿದಂತೆ ರಾಷ್ಟ್ರಪಿತರು ಹಾಕಿದ ಅಡಿಪಾಯವನ್ನು ದಯವಿಟ್ಟು ಹಾಳುಗೆಡುಹಬೇಡಿರಿ. ನೀವು ಹಿಡಿದಿರುವ ಹಾದಿಯಲ್ಲಿ ಹೋರಾಟ ಮತ್ತು ನೋವನ್ನುಳಿದು ಮತ್ತೇನೂ ಇಲ್ಲ. ಒಂದು ಅಪೂರ್ವ ಪರಂಪರೆ, ಘನ ಮೌಲ್ಯಗಳು ಹಾಗೂ ಸಕ್ರಿಯ ಪ್ರಜಾಪ್ರಭುತ್ವ, ಪರಿಪಾಲನೆಗಾಗಿ ನಿಮ್ಮ ವಶವಾಗಿವೆ. ಮುಂದಿನ ಜನಾಂಗಕ್ಕೆ ಇವೆಲ್ಲದರ ಪಾಳನ್ನಷ್ಟೆ ಬಿಟ್ಟು ಹೋಗಬೇಡಿ. ಅದನ್ನೆಲ್ಲಾ ಮತ್ತೆ ಒಟ್ಟುಗೂಡಿಸುವುದಕ್ಕೆ ಬಹಳ ಕಾಲ ಬೇಕಾಗುತ್ತದೆ. ಇದನ್ನೆಲ್ಲಾ ಮತ್ತೆ ಒಟ್ಟುಗೂಡಿಸಲಾಗುವುದೆಂಬುರಲ್ಲಿ ನನಗೆ ಒಂದಿಷ್ಟೂ ಸಂದೇಹವಿಲ್ಲ. ಬ್ರಿಟಿಷ್ ಸಾಮ್ರಾಜ್ಯದವಾದದ ವಿರುದ್ಧ ಹೋರಾಡಿ ಅದರ ಸೊಕ್ಕಡಗಿಸಿದ ಜನಾಂಗವೊಂದು ಅನಿರ್ದಿಷ್ಟ ಕಾಲದವರೆಗೆ ಈ ಏಕಚಕ್ರಾಧಿಪತ್ಯದ ಅತ್ಯಾಚಾರ, ಹಾಗೂ ಅವಮಾನಗಳನ್ನು ಖಂಡಿತ ಸಹಿಸದು. ಮನುಷ್ಯ ಚೈತನ್ಯವನ್ನು - ಅದನ್ನೆಷ್ಟೇ ಆಳಕ್ಕೆ ತುಳಿದಿರಲಿ - ನಿರ್ಮೂಲ ಮಾಡಲು ಎಂದಿಗೂ ಸಾಧ್ಯವಿಲ್ಲ. ನಿಮ್ಮ

ವೈಯಕ್ತಿಕ ಸರ್ವಾಧಿಕಾರವನ್ನು ಸ್ಥಾಪಿಸುವುವಲ್ಲಿ ಅದನ್ನು ಆಳಕ್ಕೆ ಹೂತುಬಿಟ್ಟಿದ್ದೀರಿ. ಆದರದು ಸಮಾಧಿಯಿಂದ ಎದ್ದೇಳುತ್ತದೆ. ರಷ್ಯಾದಲ್ಲೂ ಕೂಡಾ ಅದು ಕ್ರಮೇಣ ಜಾಗೃತವಾಗುತ್ತಿದೆ.

ನೀವು ಸಮಾಜವಾದಿ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡಿದ್ದೀರಿ. ಈ ಮಾತುಗಳು ಮನಸ್ಸಿನಲ್ಲಿ - ಅದೆಂತಹ ಸುಂದರ ಚಿತ್ರವನ್ನು ಕಲ್ಪಿಸುತ್ತವೆ! ಆದರೆ ವಾಸ್ತವ ಸ್ಥಿತಿ ಎಷ್ಟು ಕುರೂಪವಾಗಿದೆ ಎಂಬುದನ್ನು ನೀವು ಪೂರ್ವ ಹಾಗೂ ಮಧ್ಯ ಯೂರೋಪ್‌ನಲ್ಲಿ ಕಂಡಿದ್ದೀರಿ : ನಗ್ನ ಸರ್ವಾಧಿಕಾರ ಮತ್ತು ಅಂತಿಮ ವಿಶ್ಲೇಷಣೆಯಲ್ಲಿ ರಷ್ಯಾದ ಹಿರಿಯಜಮಾನಿಕೆ, ದಯವಿಟ್ಟು, ದಯವಿಟ್ಟು ಭಾರತವನ್ನು ಅಂತಹ ದುರ್ಗತಿಗೆ ತಳ್ಳಬೇಡಿ.

ಯಾವ ಉದ್ದೇಶಕ್ಕೆಂದು ಈ ರೂಕ್ಷ ಕ್ರಮಗಳನ್ನು ಕೈಗೊಳ್ಳುತ್ತಿದ್ದೀರಿ ಎಂದು ನಾನು ಕೇಳಬಹುದೆ? ನಿಮ್ಮ ಇಪ್ಪತ್ತು ಅಂಶಗಳನ್ನು ಜಾರಿಗೆ ತರಲು ಸಾಧ್ಯವಾಗಲೆಂದೆ? ಆದರೆ ಆ ಹತ್ತು ಅಂಶಗಳನ್ನು ಜಾರಿಗೆ ತರುವಲ್ಲಿ ನಿಮ್ಮನ್ನು ಯಾರು ತಡೆದಿದ್ದರು? ಜನತೆ ಹಾಗೂ ಯುವಜನರು ನರಳುವಂತೆ ಮಾಡಿದ್ದ ಅವರ ಮೇಲಿನ ಹೊರೆಯನ್ನು ಸ್ವಲ್ಪವಾದರೂ ಕಡಿಮೆ ಮಾಡುವಂತಹ ನಿಮ್ಮ ಯಾವುದೇ ಕಾರ್ಯಕ್ರಮವನ್ನು - ಅದೆಷ್ಟೇ ಅಸಮರ್ಪಕವಾಗಿರಲಿ - ಜಾರಿಗೆ ತರಲು ನೀವು ಯಾವುದೇ ಪ್ರಯತ್ನ ಕೈಗೊಳ್ಳದಿದ್ದುದರಿಂದಲೇ ಈ ಎಲ್ಲ ಅತೃಪ್ತಿ, ಪ್ರತಿಭಟನೆ ಹಾಗೂ ಸತ್ಯಾಗ್ರಹಗಳು ಆರಂಭವಾದ್ದು. ಚಂದ್ರಶೇಖರ್, ಮೋಹನಧಾರಿಯಾ, ಕೃಷ್ಣಕಾಂತ್ ಹಾಗೂ ಅವರ ಸ್ನೇಹಿತರೆಲ್ಲಾ ಇದನ್ನೇ ಹೇಳುತ್ತಿದ್ದುದು; ಮತ್ತು ಇದಕ್ಕಂದೇ ಅವರು ಶಿಕ್ಷೆಗೆ ಒಳಗಾದದ್ದೂ ಕೂಡ.

ದೇಶದಲ್ಲಿ ಉಂಟಾಗಿರುವ 'ಸಂದಿಗ್ಧ ಪರಿಸ್ಥಿತಿ' ಬಗ್ಗೆ ನೀವು ಮಾತನಾಡಿದ್ದೀರಿ. ಆದರೆ ಇದಕ್ಕೆ ಕಾರಣ ವಿರೋಧ ಪಕ್ಷಗಳೇ ಅಥವಾ ನಾನೇ? ಈ ಸಂದಿಗ್ಧತೆಗೆ ಕಾರಣ ನಿಮ್ಮಲ್ಲಿನ ಸರಿಯಾದ ನಿರ್ಧಾರ, ದಿಕ್ಕು ಹಾಗೂ ಕಾರ್ಯಾಚರಣೆಗಳ ಅಭಾವ. ನಿಮ್ಮ ವೈಯಕ್ತಿಕ ಸ್ಥಾನ ಅಭದ್ರವಾದಾಗ ಮಾತ್ರ ನೀವು ತ್ವರಿತವಾಗಿ ಮತ್ತು ನಾಟಕೀಯ ರೀತಿಯಲ್ಲಿ ಕಾರ್ಯೋನ್ಮುಖರಾಗುತ್ತೀರಿ. ಒಮ್ಮೆ ಅದು ಖಚಿತವಾಯಿತೆಂದರೆ, ಮತ್ತೆ ಅನಿರ್ದಿಷ್ಟತೆ ಆರಂಭವಾಗುತ್ತದೆ. ಪ್ರಿಯ ಇಂದಿರಾಜಿ ದಯವಿಟ್ಟು ನಿಮ್ಮನ್ನು ದೇಶದೊಂದಿಗೆ ಗುರುತಿಸಿಕೊಳ್ಳಬೇಡಿ. ನೀವು ಅಮರರಲ್ಲ ; ಆದರೆ ಭಾರತ ಅಮರ.

ನೀವು ವಿರೋಧ ಪಕ್ಷಗಳನ್ನು ಮತ್ತು ನನ್ನನ್ನು ಎಲ್ಲ ರೀತಿಯ ದುಷ್ಟ ಶಕ್ತಿಗಳೊಂದಿಗೆ ಹೋಲಿಸಿ ತೆಗೆಳಿದ್ದೀರಿ. ಆದರೆ ನೀವು ಸರಿ ಕೆಲಸಗಳನ್ನು - ಉದಾಹರಣೆಗೆ 20 ಅಂಶಗಳ ಅನುಷ್ಠಾನ, ಮಂತ್ರಿಮಟ್ಟದಲ್ಲಿನ ಭ್ರಷ್ಟಾಚಾರದ

ನಿರ್ಮೂಲನೆ, ಚುನಾವಣಾ ಕಾನೂನುಗಳ ಸುಧಾರಣೆ ಮುಂತಾದ ಕ್ರಮಗಳನ್ನು - ಕೈಗೊಂಡರೆ, ಮತ್ತು ವಿರೋಧ ಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅವುಗಳ ಸಲಹೆಗಳನ್ನೂ ಕೇಳತೊಡಗಿದರೆ, ನಮ್ಮೆಲ್ಲರ ಉತ್ಸಾಹಪೂರ್ವ ಸಹಕಾರದ ಭರವಸೆಯನ್ನು ನಾನು ನೀಡುತ್ತೇನೆ. ಇದಕ್ಕಾಗಿ; ನೀವು ಪ್ರಜಾಪ್ರಭುತ್ವವನ್ನೇ ನಾಶಮಾಡಬೇಕಾಗಿಲ್ಲ. ಈಗ ಮೊದಲ ಪ್ರಯತ್ನ ನಿಮ್ಮದಾಗಿದೆ. ನಿರ್ಧಾರವನ್ನು ನೀವು ಕೈಗೊಳ್ಳಬೇಕಾಗಿದೆ.

ಈ ಕೊನೆಯ ಮಾತುಗಳೊಂದಿಗೆ ನಾನು ನಿಮಗೆ ವಿದಾಯ ಹೇಳುವೆ. ದೇವರು ನಿಮ್ಮೊಂದಿಗಿರಲಿ.

- ಜಯಪ್ರಕಾಶ್

ಅನುಬಂಧ 2

ಸೆಪ್ಟಂಬರ್ 2, 1975

(ಪ್ರಧಾನಮಂತ್ರಿಯನ್ನುದ್ದೇಶಿಸಿ ಬರೆದ ಪತ್ರ ; ಇದನ್ನು ಕಳಿಸಬೇಕೋ ಬೇಡವೋ - ನಂತರ ನಾನು ತೀರ್ಮಾನಿಸುವೆ)*

ಪ್ರಿಯ ಪ್ರಧಾನಮಂತ್ರಿಯವರೆ,

ಅದೆಷ್ಟೋ ತಾಳ್ಮೆವಹಿಸಿದ ನಂತರ, ನಾನು ಮತ್ತೆ ನಿಮಗೆ ಪತ್ರ ಬರೆಯುತ್ತಿರುವೆ. ನಮ್ಮ ದೇಶದ ಬಗ್ಗೆ ನನಗೆ ಬಹಳ ಆತಂಕವುಂಟಾಗಿರುವುದರಿಂದ, ನಾನು ಈ ಪ್ರಯತ್ನ ಮಾಡುತ್ತಿರುವೆ. ನಮ್ಮ ರಾಷ್ಟ್ರಪಿತೃಗಳು **ಪ್ರಜಾಸತ್ತಾತ್ಮಕ ಸಾರ್ವಭೌಮ ಗಣರಾಜ್ಯವೊಂದನ್ನು** ರೂಪಿಸಬಯಸಿದ್ದು ಅಪೂರ್ವ ವಿವೇಚನೆಯ ನಂತರವೇ. ಈ ಮೂರು ಶಬ್ದಗಳಲ್ಲಿ ಪ್ರಜಾಸತ್ತಾತ್ಮಕ ಎಂಬುದು ಬಹಳ ಮುಖ್ಯವಾದದ್ದು. ಯಾವುದೇ ಒಂದು ದೇಶ ತನ್ನ ಸ್ವಾತಂತ್ರ್ಯ ಪಡೆದ ಕ್ಷಣವೇ ಅದು ಸಾರ್ವಭೌಮ ರಾಷ್ಟ್ರವಾಗಿಬಿಟ್ಟಿರುವುದಿಲ್ಲ. ಅಲ್ಲದೆ ಆಗ ಯಾವುದೇ ರೀತಿಯ ರಾಜಪ್ರಭುತ್ವವನ್ನು ಸ್ಥಾಪಿಸುವ ಪ್ರಶ್ನೆಯೂ ಇರುವುದಿಲ್ಲ. ದೇಶ ಸಹಜವಾಗಿ ಸಾರ್ವಭೌಮವಾಗಬೇಕಾಗುತ್ತದೆ ಮತ್ತು ಸಹಜವಾಗಿ ಗಣರಾಜ್ಯವೂ ಆಗಬೇಕಾಗಿರುತ್ತದೆ. ಆದರೆ ಅದು ಪ್ರಜಾಸತ್ತಾತ್ಮಕ ಕೂಡ ಆಗಬೇಕೆಂಬುದಕ್ಕೆ ಯಾವುದೇ ಸಹಜ ಕಾರಣವಿರುವುದಿಲ್ಲ. ವಿಶ್ವದಲ್ಲಿ, **ಪ್ರಜಾಸತ್ತಾತ್ಮಕ**ವಲ್ಲದ ಅನೇಕ ಸಾರ್ವಭೌಮ ಗಣರಾಜ್ಯಗಳಿವೆ. ಸಾರ್ವಭೌಮತ್ವ ಅಥವಾ ಗಣರಾಜ್ಯತ್ವಗಳು ಆಯ್ಕೆಯ ವಿಷಯಗಳೇ ಅಲ್ಲ. ಅಂತಹ ಸಂದರ್ಭದಲ್ಲಿ ದೇಶ ಸಾರ್ವಭೌಮ ಗಣರಾಜ್ಯವಾಗದೆ ಬೇರೆ ದಾರಿಯೇ ಇರುವುದಿಲ್ಲ.

*** ಪತ್ರವನ್ನು ಪ್ರಧಾನಮಂತ್ರಿಗೆ ಕಳಿಸಲಿಲ್ಲ.**

ಆದರೆ ಸಾರ್ವಭೌಮ ಗಣರಾಜ್ಯ, ಸರ್ವಾಧಿಕಾರರೂಪದ್ದಾಗಿರಬಹುದು - ಅದು ಒಬ್ಬ ವ್ಯಕ್ತಿಯದಾಗಿರಬಹುದು, ಪಕ್ಷವೊಂದರ ಒಳಗುಂಪಿನದಾಗಿರಬಹುದು ಅಥವಾ ಮಿಲಿಟರಿ ಸೇನಾಧಿಕಾರಿಗಳದ್ದಾಗಿರಬಹುದು. ಅದು ಕೆಲವೇ ಕೆಲವರ ಸರ್ಕಾರವಾಗಿರಬಹುದು ಅಥವಾ ಸೀಮಿತ ಮತದಾರರು - ಉದಾಹರಣೆಗೆ, ವಿದ್ಯಾವಂತ (ವಿದ್ಯಾವಂತ ಎಂಬುದನ್ನು ವಿವಿಧ ರೀತಿಯಲ್ಲಿ ವಿವರಿಸಬಹುದು) ಮತದಾರರು - ಮಾತ್ರ ಚುನಾಯಿಸಿದ ಸರ್ಕಾರವಿರಬಹುದು. ಆದರೆ ನಮ್ಮ ರಾಷ್ಟ್ರಪಿತೃಗಳು ವಯಸ್ಕ ಮತದಾನದ ಆಧಾರದ ಮೇಲಿನ ಸಂಸದೀಯ (ಪಾರ್ಲಿಮೆಂಟರಿ) ಪ್ರಜಾಪ್ರಭುತ್ವವನ್ನು ಆಯ್ಕೆ ಮಾಡಿದರು. ಇದೊಂದು ದೊಡ್ಡ ಮುಂದಡಿಯೇ ಆಗಿತ್ತು. ಇದು ವಿಶ್ವದ ಮೆಚ್ಚುಗೆ ಹಾಗೂ ಮಾನ್ಯತೆಯನ್ನೂ ಗಳಿಸಿತು.

ನಾನು ಈಗಾಗಲೇ ಬೇರೆಡೆಯೆಲ್ಲೋ ಬರೆದಿರುವಂತೆ, ಮಹಾತ್ಮ ಗಾಂಧಿಯವರು ತಮ್ಮ ಅಪೂರ್ವ ವಿವೇಚನಾಶಕ್ತಿಯಿಂದಾಗಿ ದರಿದ್ರರೂ ಮತ್ತು ಮಕ್ಕಳೂ ಕೂಡಾ ಸೇರಿದಂತೆ, ಇಡೀ ಜನಸಮುದಾಯ ಪೂರ್ಣ ಪ್ರಮಾಣದಲ್ಲಿ ಭಾಗವಹಿಸುವಂತೆ ಸ್ವಾತಂತ್ರ್ಯ ಹೋರಾಟವನ್ನು ರೂಪಿಸಿದ್ದರಿಂದಲೇ, ವಯಸ್ಕ ಮತದಾನ ಮೂಲವಾದ ಸಂಸದೀಯ ಪ್ರಜಾಪ್ರಭುತ್ವದ ಸ್ಥಾಪನೆ ಸಹಜ ಸಾಧ್ಯವಾಯಿತು. ಕೋಟ್ಯಾಂತರ ಜನ ತಾವಾಗಿ ಮುಂದೆ ಬಂದು ಮೆರವಣಿಗೆಗಳು, ಸಭೆಗಳು, ಹರತಾಳಗಳು ಮತ್ತು ಪ್ರದರ್ಶನಗಳಲ್ಲಿ ಪಾಲ್ಗೊಂಡರು ; ಲಕ್ಷಾಂತರ ಜನರು ಸೆರೆಮನೆಗೆ ಹೋದರು. ಇಂತಹ ಸಾಮುದಾಯಿಕ ಆಧಾರ-ಸಾಮೂಹಿಕ ಜಾಗೃತಿ ಮತ್ತು ಸಾಮೂಹಿಕ ಭಾಗವಹಿಸುವಿಕೆ - ಒದಗಿದ್ದರಿಂದಲೇ ವಯಸ್ಕ ಮತದಾನವನ್ನು ಆಧರಿಸಿದ ಪ್ರಜಾಪ್ರಭುತ್ವ ಸಾಧ್ಯವಾಯಿತು, ನಂತರ ಅದು ವಾಸ್ತವಿಕವಾಗಿ ಪರಿಣಮಿಸಿತು. ಈ ಸಾಮೂಹಿಕ ಕ್ರಿಯಾಶೀಲತೆಯಿಂದಾಗಿಯೇ, ಯುದ್ಧಗಳು, ಕ್ಷಾಮಗಳು, ಪ್ರವಾಹಗಳು, ಹೆಚ್ಚುತ್ತಿರುವ ಮತ್ತು ವಿಸ್ತರಿಸುತ್ತಿರುವ ಬಡತನ, ನಿರುದ್ಯೋಗ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಕೆಟ್ಟ ಶಿಕ್ಷಣದ ನಡುವೆಯೂ ಭಾರತೀಯ ಪ್ರಜಾಪ್ರಭುತ್ವ ಇನ್ನೂ (1975ರ ಜೂನ್ 25ರವರೆಗೆ) ಉಳಿದಿದ್ದುದು.

ಅದು ಕೇವಲ ಒಂದು ರಾಜಕೀಯ ಪರಿಕಲ್ಪನೆ ಅಥವಾ ಒಂದು ರಾಜಕೀಯ ಆದರ್ಶ ಮಾತ್ರವಾಗಿರದೆ, ಒಂದು ನಿಜವಾಗಿ ಪರಿಣಮಿಸಿತು. ಭಾರತ ಈ ರೀತಿಯಲ್ಲಿ ಸ್ವಾತಂತ್ರ್ಯವನ್ನು ಗೆಲ್ಲದಿದ್ದಲ್ಲಿ, ಸಂಸದೀಯ ಪ್ರಜಾಪ್ರಭುತ್ವ ಸ್ಥಾಪನೆಯ ಸಾಧ್ಯತೆಗಳು ಅಷ್ಟೊಂದು ಉತ್ತಮವಾಗಿರುತ್ತಿರಲಿಲ್ಲ. ಬಹುಶಃ ಸರ್ವಾಧಿಕಾರ ಸ್ಥಾಪಿತವಾಗಿರುತ್ತಿತ್ತು.

ಪ್ರಜಾಸತ್ತಾತ್ಮಕ ಸಾರ್ವಭೌಮ ಗಣರಾಜ್ಯದ ಸಂವಿಧಾನವನ್ನು ಘೋಷಿಸಿದ 25 ವರ್ಷಗಳ ನಂತರ ಈಗ ಮೊದಲ ಬಾರಿಗೆ ದೇಶದ ಪ್ರಜಾಸತ್ತಾತ್ಮಕ ಸ್ವರೂಪಕ್ಕೆ

ತೀವ್ರವಾದ - ಕಂಟಕಪ್ರಾಯವಾದುದಲ್ಲ ಎಂದು ಆಶಿಸೋಣ - ಪೆಟ್ಟು ಬಿದ್ದಿದೆ. ಇದು ನನಗೆ ತೀರಾ ಆತಂಕದ ವಿಷಯವಾಗಿದೆ. ಬೆಳೆಯುತ್ತಿರುವ ಈ ಆತಂಕವೇ ಈ ಪತ್ರ ಬರೆಯಲು ನನ್ನನ್ನು ಪ್ರೇರೇಪಿಸಿರುವುದು.

ತುರ್ತುಪರಿಸ್ಥಿತಿ ಘೋಷಣೆ ಮತ್ತು ಅನಂತರ ಕೈಗೊಂಡ ಎಲ್ಲ ಕ್ರಮಗಳನ್ನೂ 'ಆಂತರಿಕ ಗಲಭೆಯ ಅಪಾಯ'ದ ಕಾರಣದ ಮೇಲೆ ಸಮರ್ಥಿಸಿಕೊಳ್ಳಲಾಗಿದೆ. (ಬಾಹ್ಯ ಬೆದರಿಕೆಯ ದೃಷ್ಟಿಯಿಂದ ಘೋಷಿಸಿದ ಮೊದಲ ತುರ್ತುಪರಿಸ್ಥಿತಿ ಈಗಲೂ ಮುಂದುವರಿದಿದೆ ಎಂಬುದನ್ನೂ ಇಲ್ಲಿ ಸೂಚಿಸಬಯಸುತ್ತೇನೆ. ಪಾಕಿಸ್ತಾನ, ಭಾರತ ವಿರೋಧಿ ಪ್ರಚಾರವನ್ನು ಮುಂದುವರಿಸಿದ್ದರೂ, ಇಂದು ಬಾಹ್ಯ ಬೆದರಿಕೆ ಎಂಬುದೇನೂ ಇಲ್ಲ. ಏಕೆಂದರೆ ಪಾಕಿಸ್ತಾನದ ಈ ಚಾಳಿ ಹೊಸದೇನಲ್ಲವಾಗಿದ್ದು, ಅದರಲ್ಲಿ ಮಿಲಿಟರಿ ಅಪಾಯವನ್ನು ಕಾಣುವುದು ಅಸಾಧ್ಯ) ಆಂತರಿಕ ಗಲಭೆಗಳ ಅಪಾಯದ ಬಗ್ಗೆ ಹೇಳುವುದಾದರೆ, ಮಾನ್ಯ ಪ್ರಧಾನಮಂತ್ರಿಯವರೆ, ಗಂಭೀರ ಮತ್ತು ವಸ್ತುನಿಷ್ಠ ಪರಿಶೀಲನೆಯ ದೃಷ್ಟಿಯಿಂದ ಹೇಳುವುದಾದರೆ, ರಾಜ್ಯವಾರು ಪರಿಶೀಲನೆ ಮಾಡೋಣ. - ಜಮ್ಮು ಮತ್ತು ಕಾಶ್ಮೀರದಲ್ಲಿ ಯಾವುದೇ ಆಂತರಿಕ ಗಲಭೆಯ ಅಪಾಯವಿರಲಿಲ್ಲ (ಇದ್ದರೂ ಅದು ಕೇವಲ ಕಾನೂನು ಮತ್ತು ಶಿಸ್ತಿನ ಸಮಸ್ಯೆಯಾಗಿದ್ದು ಷೇಕ್‌ಸಾಹೇಬರು ಚಾಲ್ತಿಯಲ್ಲಿದ್ದ ಕಾನೂನುಗಳು ಮತ್ತು ಮೀಸಾದ ನೆರವಿನೊಡನೆ, ಪರಿಸ್ಥಿತಿಯನ್ನು ಹತೋಟಿಗೆ ತರಲು ಸಮರ್ಥರಿದ್ದರು); ಪಂಜಾಬ್, ಹರ್ಯಾಣ, ಚಂಡೀಘಡ, ದೆಹಲಿ, ಉತ್ತರಪ್ರದೇಶ (ಇಲ್ಲಿ ಸೀಮಿತವಾದ ಸತ್ಯಾಗ್ರಹ ಮುಂದುವರಿದಿದ್ದರೂ), ಮಧ್ಯಪ್ರದೇಶ, ಗುಜರಾತ್, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಆಂಧ್ರಪ್ರದೇಶ, ಒರಿಸ್ಸಾ, ಕರ್ನಾಟಕ, ತಮಿಳುನಾಡು ಮತ್ತು ಕೇರಳಗಳಲ್ಲೂ ಸಹ ಅಂತಹ ಪರಿಸ್ಥಿತಿಯೇನೂ ಇರಲಿಲ್ಲ. ಅತಿ ಪೂರ್ವಪ್ರದೇಶಗಳಾದ ನಾಗಾಲ್ಯಾಂಡ್ ಮತ್ತು ಇತರೆಡೆಗಳಲ್ಲಿ ಗಲಭೆಗಳು ಹೊಸದೇನೂ ಆಗಿರದೆ, ಅಲ್ಲಿ ಕೂಡಾ ಪರಿಸ್ಥಿತಿ ಹತೋಟಿಗೆ ಬಂದಿದೆ ಎಂದು ಹೇಳಿಕೊಳ್ಳಲಾಗಿತ್ತು. ಏನೇ ಆದರೂ, ಅಲ್ಲಿನ ರಾಜ್ಯಪಾಲರಿಗೆ ವಿಶೇಷ ಅಧಿಕಾರಗಳಿದ್ದು ಸೇನೆ ನೆರವಿಗೆ ಸದಾ ಸಿದ್ಧವಾಗಿತ್ತು.

ಬಿಹಾರಕ್ಕೆ ಸಂಬಂಧಪಟ್ಟಂತೆ ಮಾತ್ರ ನೀವು ಗಲಭೆಯ ಅಪಾಯ ಮಾತ್ರವಲ್ಲದೆ, ವಾಸ್ತವವಾಗಿ ಗಲಭೆ ನಡೆದಿತ್ತು ಎಂದು ಹೇಳಿಕೊಳ್ಳಬಹುದಷ್ಟೆ. ಈ ಬಗ್ಗೆ ಕೂಡಾ ನಮ್ಮ ನಿಮ್ಮ ನಡುವೆ ಭಿನ್ನಾಭಿಪ್ರಾಯಗಳಿದ್ದು ಈ ಕುರಿತು ನಾನಿಲ್ಲಿ ವಾದಿಸಲು ಬಯಸುವುದಿಲ್ಲ. ಆದರೆ ನಿಮ್ಮ ಈ ಏಕಪಕ್ಷೀಯ ಅಭಿಪ್ರಾಯವನ್ನು ಒಪ್ಪಿಕೊಂಡರೂ ಸಹ, ಕೇವಲ ಒಂದು ರಾಜ್ಯದ ತಪ್ಪಿನಿಂದಾಗಿ ಇಡೀ ದೇಶ ಏಕೆ ಸಂಕಷ್ಟಕ್ಕೀಡಾಗಬೇಕು? ನಿಮಗದು ಪ್ರಿಯವಾಗಿದ್ದರೆ, ತುರ್ತುಪರಿಸ್ಥಿತಿಯನ್ನು ಬಿಹಾರಕ್ಕಷ್ಟೇ ಘೋಷಿಸಬಹುದಿತ್ತು. ಬ್ರಿಟಿಷರು ಕೂಡಾ ಹೀಗೇ ಮಾಡುತ್ತಿದ್ದರು : ಅಸಹಕಾರ ಚಳವಳಿ ತೀವ್ರವಾಗಿದ್ದ ರಾಜ್ಯಕ್ಕೆ ಮಾತ್ರ ಕಠಿಣ ಕ್ರಮಗಳನ್ನು ಅನ್ವಯಿಸಿ, ಅಗತ್ಯ ಬಿದ್ದಾಗ ಮಾತ್ರ ಅವನ್ನು ಬೇರೆ ರಾಜ್ಯಗಳಿಗೆ ವಿಸ್ತರಿಸಲಾಗುತ್ತಿತ್ತು.

ಏನಾದರಾಗಲಿ, ಇದೆಲ್ಲಾ ಕಳೆದುಹೋದ ಕಾಲದ್ದು. ತಪ್ಪೋ ನೆಪ್ಪೋ ಅಂತೂ ಇಡೀ ದೇಶಕ್ಕೆಂದು ತುರ್ತುಪರಿಸ್ಥಿತಿಯನ್ನು ಘೋಷಿಸಲಾಯಿತು. ಆದರೆ ಈಗಿನ ಪರಿಸ್ಥಿತಿಯಾದರೂ ಏನು? ಸ್ವತಃ ನೀವೇ ಹಲವಾರು ಬಾರಿ - ನಿಮ್ಮ ಸಹೋದ್ಯೋಗಿಗಳು ಕೂಡಾ - ಈಗ ಎಲ್ಲವೂ ಶಾಂತವಾಗಿದೆ, ಎಲ್ಲೂ ಯಾವುದೇ ಚಳವಳಿ ಅಥವಾ ಆಂದೋಲನದ ಸೂಚನೆಗಳೆಂಬುವೇ ಇಲ್ಲ ಎಂದು ಹೇಳಿಕೊಂಡಿರುವಿರಿ. ಪತ್ರಿಕೆ ಹಾಗೂ ಇತರ ವರದಿಗಳಿಂದ ಸಹ ಇದು ನಿಜ ಪರಿಸ್ಥಿತಿ ಎಂದು ಕಂಡುಬರುತ್ತಿದೆ. ಹಾಗಿದ್ದರೆ, ಸಾವಿರಾರು ಪುರುಷರು ಹಾಗೂ ಮಹಿಳೆಯರನ್ನು ವಿಚಾರಣೆಯಿಲ್ಲದೆಯೇ ಏಕೆ ಬಂಧಿಸಿಟ್ಟಿದ್ದೀರಿ? ಯಾವ ತಪ್ಪಿಗಾಗಿ, ಯಾವ ಅಪರಾಧಕ್ಕಾಗಿ? ಮೊರಾರ್ಜಿಭಾಯಿಯವರನ್ನೇಕೆ ಇನ್ನೂ ಬಂಧಿಸಿಟ್ಟಿದ್ದೀರಿ? ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯ ಚಂದ್ರಶೇಖರ್ ಮತ್ತು ಕಾಂಗ್ರೆಸ್ ಸಂಸದೀಯ ಪಕ್ಷದ ಕಾರ್ಯದರ್ಶಿ ರಾಮಧನ್‌ರನ್ನೇಕೆ ಹಾಗೆ ಹಿಡಿದಿಟ್ಟಿದ್ದೀರಿ? ತುರ್ತುಪರಿಸ್ಥಿತಿಯನ್ನೊಮ್ಮೆ ರದ್ದು ಮಾಡಲಾಯಿತೆಂದರೆ, ಒತ್ತಿಹಿಡಿದಿದ್ದ ಮುಚ್ಚಳವನ್ನು ತೆರೆದಂತೆ ಮತ್ತೆ ಗಲಭೆಗಳು ತಲೆದೋರುತ್ತವೆ ಎಂಬ ಭಯವೇ ನಿಮಗೆ? ಈ ಭಯ ನಿಜವಾಗಿದ್ದರೆ, ನೀವು ನೆರಳುಗಳಿಗೇ ಹೆದರುತ್ತೀರಿ ಎಂದಷ್ಟೇ ನಾನು ಹೇಳಬಯಸುವೆ. ಈ ಘೋರ ಅಕೃತ್ಯದ ಹೊರೆಯನ್ನು ನೀವು ಮತ್ತು ನಿಮ್ಮ ಪಕ್ಷವೇ ಸ್ವತಃ ಏಕೆ ಹೊತ್ತುಕೊಳ್ಳಬೇಕೋ ನನಗೆ ಗೊತ್ತಾಗುತ್ತಿಲ್ಲ. ಇದರಿಂದ ನಿಮಗೆ ಅಥವಾ ನಿಮ್ಮ ಪಕ್ಷಕ್ಕೆ ಒಳ್ಳೆಯದಾಗುತ್ತದೆಂದು ತಿಳಿದಿರುವಿರಾ? ನೀವು ಜನತೆಯನ್ನು ಭಯಕ್ಕೊಳಪಡಿಸಲು, ಬಗ್ಗು ಬಡಿಯಲು, ಅವರಿಗೆ ಪಾಠ ಕಲಿಸಲು ಬಯಸಿರಬಹುದು. ಆದರೆ ಇದಾವುದೂ ನಡೆಯುವುದಿಲ್ಲವೆಂದು ಚರಿತ್ರೆ ಸಾರಿ ಹೇಳುತ್ತಿದೆ. ಕ್ರಿಯೆ ಮತ್ತು ಪ್ರತಿಕ್ರಿಯೆಗಳು ಸಮವಾಗಿರುತ್ತವಲ್ಲದೆ ಪರಸ್ಪರ ವಿರುದ್ಧವೂ ಆಗಿರುತ್ತವೆ ಎಂಬ ಸೂತ್ರ, ಭೌತಶಾಸ್ತ್ರದಲ್ಲಿ ಮಾತ್ರವಲ್ಲದೆ ರಾಜಕಾರಣದಲ್ಲೂ ನಿಜವಾಗಿರುತ್ತದೆ.

ನೀವು ಪತ್ರಕರ್ತರಿಗೆ, ಅದರಲ್ಲೂ ನಿರ್ದಿಷ್ಟವಾಗಿ ವಿದೇಶೀ ಪತ್ರಕರ್ತರು ಹಾಗೂ ಇತರ ಮಾಧ್ಯಮಗಳ ಪ್ರತಿನಿಧಿಗಳಿಗೆ ನೀಡಿರುವ ಸಂದರ್ಶನಗಳಲ್ಲಿ, ಚುನಾವಣೆಗಳನ್ನು ನಡೆಸುವ ನಿಮ್ಮ ದೃಢನಿಶ್ಚಯವನ್ನು ವ್ಯಕ್ತಪಡಿಸಿರುವಿರಾದರೂ, ಅವು ಎಂದು ನಡೆಯಲಿವೆ ಎಂಬುದನ್ನು ಹೇಳಲು ಮಾತ್ರ ನಿರಾಕರಿಸಿರುವಿರಿ. ನೀವು ಸಂದರ್ಶನವೊಂದರಲ್ಲಿ, ವಿರೋಧಪಕ್ಷಗಳ ನಾಯಕರನ್ನು ಗಮನಿಸುತ್ತಿರುವುದಾಗಿಯೂ, ಅವರಿನ್ನೂ 'ತಮ್ಮ ನಿಲುವನ್ನು' ಬದಲಾಯಿಸಿಕೊಂಡಂತೆ ಕಾಣುವುದಿಲ್ಲವೆಂದೂ ಹೇಳಿರುವುದಾಗಿ ವರದಿಯಾಗಿದೆ. ಅವರ ಯಾವ ನಿಲುವು ಬದಲಾಗಬೇಕೆಂದು ನಿಮ್ಮ ಇಚ್ಛೆ? ಅವು ವಿರೋಧ ಪಕ್ಷಗಳಾಗಿ ಕೆಲಸ ಮಾಡುವುದನ್ನು ನಿಲ್ಲಿಸಬೇಕೆಂದು ನೀವು ಬಯಸುವಿರಾ? ಇಷ್ಟು ಅಸಂಗತವಾಗಿರುವುದೇನೂ ನಿಮಗೆ ಬೇಕಿಲ್ಲ ಎಂಬುದು ಸಹಜವೇ ; ಏಕೆಂದರೆ ಇದೆಲ್ಲಾ ಹುಚ್ಚುತನವೆನಿಸಿಬಿಡುತ್ತದೆ.

ಮತ್ತೆ ನಿಮಗೇನು ಬೇಕು? ಬಹುಶಃ ಅವು ಸಮತುಲಿತವಾಗಿ ಕೆಲಸಮಾಡಬೇಕೆಂದು ನೀವು ಬಯಸಿರಬಹುದೇ? ಆದರೆ, ಇದಕ್ಕೆ ನೀವೇ ಸ್ವತಃ ಒಳ್ಳೆಯ ಉದಾಹರಣೆಯನ್ನು ನಿರ್ಮಿಸಿದ್ದೀರಾ ತಾಯಿ? ನೀವು ಅವರ ಮೇಲೆ ಯಾವ ತರದ ವಿಷವನ್ನು ಕಾರದೇ ಬಿಟ್ಟಿದ್ದೀರಿ? ಅವರೆಲ್ಲರ ವಿರುದ್ಧ - ನನ್ನನ್ನೂ ಬಿಡದಂತೆ ಸಹ - ನೀವು ಮಾಡುತ್ತಿರುವ ಅತಿ ಕ್ಷುದ್ರವಾದ ಮತ್ತು ನಿಷ್ಕಾರಣವಾದ ಆಪಾದನೆಯೆಂದರೆ, ನಿಮ್ಮ ವಿರುದ್ಧವಾಗಿರುವವರೆಲ್ಲರೂ ಒಂದಲ್ಲ ಒಂದು ವಿದೇಶೀ ಸಂಪರ್ಕಗಳನ್ನು ಹೊಂದಿದ್ದಾರೆ ಎಂಬುದು. ನಿಮ್ಮ ಈ ಆಪಾದನೆಯನ್ನು ರುಜುವಾತುಪಡಿಸಿ, ಇಲ್ಲವೇ ನಿಮ್ಮ ಈ ನಿಂದನೆಯನ್ನು ನಿಲ್ಲಿಸಿ ಎಂದು ನಿಮಗೆ ಹಲವಾರು ಬಾರಿ ಸವಾಲು ಹಾಕಲಾಗಿದೆ. ಆದರೆ ಈವರೆಗೂ ನೀವು ನಿಮ್ಮ ಆಪಾದನೆಗೆ ಯಾವ ಸಾಕ್ಷ್ಯವನ್ನೂ ಒದಗಿಸಿಲ್ಲ, ಆದರೂ ಸೂಕ್ತ ಸಂದರ್ಭಗಳಲೆಲ್ಲಾ ಈ ನಿಂದನೆಗಳನ್ನು ಎಗ್ಗಿಲ್ಲದೆ ನೀವು ಮುಂದುವರಿಸಿದ್ದೀರಿ. ನೀವು ಯಾರಿಗೆ ಮಂಕುಬೂದಿ ಎರಚಲು ಪ್ರಯತ್ನಿಸುತ್ತಿದ್ದೀರಿ ಎಂಬುದು ದೇವರಿಗೇ ಗೊತ್ತು. ಇಲ್ಲಿ ದೊಡ್ಡ ತಮಾಷೆ ಎಂದರೆ ಸ್ವತಃ ನೀವು ಮತ್ತು ನಿಮ್ಮ ಪಕ್ಷ - ನಿಮ್ಮ ಪಕ್ಷದ ಹಿರಿಯ ಸದಸ್ಯರ ಜಿಗುಪ್ಸೆಯ ನಡುವೆಯೂ - ಸೋವಿಯತ್ ರಷ್ಯಾದ ಬಾಲಬಡುಕರಾಗಿರುವ ಬಲ ಕಮ್ಯೂನಿಷ್ಟರೊಂದಿಗೆ (ಸಿ.ಪಿ.ಐ)ಗಳಸ್ಯ ಕಂಠಸ್ಯ ಸಂಬಂಧವಿರಿಸಿಕೊಂಡಿದ್ದೀರಿ. ಸ್ವತಃ ನಿಮ್ಮ ಪಕ್ಷದ ನಾಯಕಗಣದಲ್ಲೇ, ಸೋವಿಯತ್‌ನವರ ಬಾಲಬಡುಕರಿಗಿಂತ ಒಂದಿಷ್ಟೂ ಉತ್ತಮರಲ್ಲದ ಗಾಂಪರಾಗಿದ್ದಾರೆ.

ಇದನ್ನೆಲ್ಲಾ ಉದ್ರೇಕದಿಂದ, ಸೋವಿಯತ್ ವಿರೋಧಿ ಬೊಗಳೆ ಎಂದು ತಳ್ಳಿಹಾಕಿ; ನಾನಿಲ್ಲಿ ಹೇಳಬಯಸಿರುವ ಪ್ರಮುಖ ಅಂಶವೇ ಗಮನಕ್ಕೆ ಬಾರದಂತೆ, ಇಡೀ ವಾದವನ್ನು ದಾರಿತಪ್ಪಿಸಲೆತ್ನಿಸುವಿರಿ ಎಂಬುದು ನನಗೆ ಗೊತ್ತು. ಈ ಬಗ್ಗೆ ಹೆಚ್ಚಿಗೆ ನಿಮಗೇ ಗೊತ್ತಿರಬೇಕು. ಸೋವಿಯತ್ ಒಕ್ಕೂಟದೊಂದಿಗೆ ಆದಷ್ಟು ಹೆಚ್ಚು ಪರಸ್ಪರ ಸ್ನೇಹಬಾಂಧವ್ಯಗಳನ್ನು ಹೊಂದಿರಬೇಕು ಎಂದು ಭಾವಿಸುವಲ್ಲಿ ಯಾವುದೇ ಭಾರತೀಯನಿಗೂ ನಾನು ಕಡಿಮೆ ಇಲ್ಲ. ಆದರೆ ಸ್ನೇಹ ಎಂದೂ ಗುಲಾಮಗಿರಿಯಾಗಕೂಡದು. ಭಾರತ ಎಂದೂ ಉಪರಾಷ್ಟ್ರವಾಗಬಾರದು. ನಮ್ಮ ರಾಷ್ಟ್ರದ ಹಿತದೃಷ್ಟಿಯಿಂದ ನಾವು ಸೋವಿಯತ್ ಒಕ್ಕೂಟದೊಂದಿಗೆ ಸ್ನೇಹದಿಂದಿರಬೇಕು. ಆದರೆ ನಾವು ರಷ್ಯಾದ 'ಪ್ರಭಾ ವಲಯ'ದೊಳಕ್ಕೆ ಜಾರದಂತೆ ನಾವು ಜಾಗೃತರಾಗಿರಬೇಕು. ನಾವು ಈಗಾಗಲೇ ಗೊತ್ತಿದ್ದೋ ಗೊತ್ತಿಲ್ಲದೆಯೋ ಈ ವಲಯದೊಳಕ್ಕೆ ಜಾರಿಹೋಗಿದ್ದೇವೆ ಎಂದು ಕೆಲವೇಳೆ ನನಗನ್ನಿಸುತ್ತದೆ. ಸರ್ವಾಧಿಕಾರದ ಹಾದಿಯಲ್ಲಿ ಮುಂದಡಿ ಇಡುವಂತೆ ನಿಮ್ಮನ್ನು ಪ್ರಚೋದಿಸುವಲ್ಲಿ ರಷ್ಯನ್ನರಿಗೆ ಖಂಡಿತ ತೀವ್ರ ಆಸಕ್ತಿ ಇದೆ ಎಂದು ಕಾಣುತ್ತಿದೆ. ನಿಮ್ಮ ಇತ್ತೀಚಿನ ಪ್ರಜಾಪ್ರಭುತ್ವ ವಿರೋಧೀ ಕ್ರಮಗಳಿಗೆ ಅವರು ಹೃತ್ಪೂರ್ವಕ ಬೆಂಬಲ ನೀಡಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ಪ್ರಿಯ ಪ್ರಧಾನಮಂತ್ರಿಯವರೇ, ಇಂದು ಎಲ್ಲೂ ಆಂತರಿಕ ಗಲಭೆಯ ಸುಳಿವಿಲ್ಲ ಮತ್ತು ಯಾವುದೇ ರಾಜ್ಯದಲ್ಲಿ ಯಾವುದೇ ರೀತಿಯ - ಇದು ಬಹಳ ಮುಖ್ಯ-ಆಂತರಿಕ ಗಲಭೆಯ ಅಪಾಯವಿಲ್ಲ ಎಂಬುದನ್ನು ನಾನು ಮತ್ತೆ ಹೇಳಬಯಸುತ್ತೇನೆ. ಬಿಹಾರದಲ್ಲೂ ಕೂಡಾ - ಈ ಮೊದಲು ಅಲ್ಲಿ ಗಲಭೆಯ ಅಪಾಯವಿತ್ತು ಎಂದು ವಾದಕ್ಕಾದರೂ ಒಪ್ಪಿಕೊಂಡಿದ್ದಲ್ಲಿಯೂ - ಈಗ ಗಲಭೆ ಎಂಬುದಿಲ್ಲ (ನಾಗರಿಕ ಅಸಹಕಾರ ಆಂದೋಲನವನ್ನು ನಾಗರಿಕ ಗಲಭೆ ಎಂದು ಕರೆಯಲಾಗದಾದರೂ, ನಿಮಗೆ ಆತ್ಮಸಾಕ್ಷಿ ಎಂಬುದೊಂದಿದೆ ಎಂದು ಭಾವಿಸಲು ನನಗೆ ಅಸಾಧ್ಯವಾಗಿರುವುದರಿಂದ, ಈ ಬಗ್ಗೆ ನಾನು ವಾದ ಮಾಡುವುದಿಲ್ಲ) ನಾನು ಹೇಳಬಯಸುವುದಿಷ್ಟೆ : ಪಟ್ನಾದಲ್ಲಿ ಮತ್ತು ಬಿಹಾರದ ಇತರ ಕೆಲವು ಭಾಗಗಳಲ್ಲಿ ಹಿಂದೆಂದೂ ಕಾಣದ ದುರಂತ ಸಂಭವಿಸಿದ್ದು ನನ್ನ ಆಂದೋಲನಕ್ಕೆ ('ನನ್ನ' ಆಂದೋಲನ ಎಂದಿರುವುದು ಅದನ್ನು ಎಲ್ಲರೂ ಹಾಗೇ ಗುರುತಿಸುತ್ತಿದ್ದರು ಎಂಬೊಂದೇ ಕಾರಣದಿಂದ) ಸಂಬಂಧಿಸಿದ ಯಾರೇ ಆಗಲಿ, ಈಗ ಈ ಆಂದೋಲನವನ್ನು ಪುನರಾರಂಭಿಸುವ ಯೋಚನೆ ಮಾಡಲಾರರು. ನೋವು ಮತ್ತು ನರಳುವಿಕೆಯ, ರೋಗ ಮತ್ತು ಸಾವಿನ, ಅಗಲಿಕೆ ಮತ್ತು ಹಸಿವಿನ ಈ ಕ್ಷಣದಲ್ಲಿ, ಯಾರು ತಾನೇ ಹೋರಾಟ ಅಥವಾ ಚಳವಳಿಯ ಯೋಚನೆ ಮಾಡುವರು? ನಮ್ಮ ಏಕೈಕ ಕರ್ತವ್ಯವೆಂದರೆ, ಜನತೆಯ ಸೇವೆ ಮಾಡುವುದು, ಅವರಿಗೆ ಸಹಾಯಹಸ್ತ ನೀಡುವುದು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ತಮಗೆ ತಾವೇ ನೆರವಾಗುವಂತೆ ಜನತೆಗೆ ನೆರವು ನೀಡುವುದು. ನಾನೇನಾದರೂ ಸ್ವತಂತ್ರ್ಯನಾಗಿದ್ದಲ್ಲಿ, ಇದೇ ರೀತಿಯ ಮಾರ್ಗದರ್ಶನವನ್ನು ನಾನು ಒದಗಿಸುತ್ತಿದ್ದುದು. ನಿಮ್ಮ ಪ್ರಸಕ್ತ ನೀತಿ-ಕಾರ್ಯಾಚರಣೆಯನ್ನು ಬದಲಿಸುವಂತೆ ನಿಮ್ಮನ್ನು ಕಾಡಲೆಂದೇ ನಾನು ಈ ಆಟ ಕಟ್ಟಿರುವೆ ಎಂದು ಬೇಕಾದರೆ ನೀವು ಅಂದುಕೊಳ್ಳಿ ; ಆದರೆ ಅದು ಹಾಗಲ್ಲ. 1966-67ರಲ್ಲಿನ ಬಿಹಾರ ಕ್ಷಾಮದಲ್ಲಿನ ಸಮಯದಲ್ಲಿಯೂ ನಾನು ಸರ್ವೋದಯ ಕಾರ್ಯವನ್ನು ನಿಲ್ಲಿಸಿ, ಮೇಲೆ ತಿಳಿಸಿದ ರೀತಿಯ ಪರಿಹಾರ ಕಾರ್ಯಾಚರಣೆಯ ಮುಂದಾಳುತ್ವ ವಹಿಸಿದೆ. ಮತ್ತೊಮ್ಮೆ (1967ರಲ್ಲಿ) ಹತ್ತಿರದ ಬೆಟ್ಟ ಪ್ರದೇಶಗಳಲ್ಲಿ ಹಿಂದೆಂದೂ ಕೇಳರಿಯದಂತಹ ಮಳೆ ಬಿದ್ದು ಪ್ರವಾಹವನ್ನೇ ಕಾಣದ ಮೊಂಘೇರ್ ಹಾಗೂ ನವಧಾ ಜಿಲ್ಲೆಗಳ ಕೆಲವು ಭಾಗಗಳು ಇದ್ದಕ್ಕಿದ್ದಂತೆ ನೀರಿನಲ್ಲಿ ಮುಳುಗತೊಡಗಿದಾಗ ಸಹ, ಸರ್ವೋದಯ ಕಾರ್ಯವನ್ನು ಕೈಬಿಟ್ಟು ಪರಿಹಾರ ಕಾರ್ಯಾಚರಣೆಗೆ ಧಾವಿಸಿದೆ. ಗದ್ದೆಗಳಲ್ಲಿ ಸತ್ತ ದೇಹಗಳು ತೇಲುತ್ತಿದ್ದುದನ್ನು ಮತ್ತು ಇಡೀ ವಾತಾವರಣ ಹೆಣ ಕೊಳೆತ ದುರ್ವಾಸನೆಯಿಂದ ತುಂಬಿದ್ದನ್ನು ನಾನು ಕಂಡದ್ದು ಆ ಸಂದರ್ಭದಲ್ಲೇ.

ವಿಚಾರ ಮಾಡಬೇಕಾದ ಮತ್ತೊಂದು ಮುಖ್ಯ ಅಂಶವೂ ಇದೆ. 1974ರ ಫೆಬ್ರವರಿ - ಮಾರ್ಚ್‌ನಲ್ಲಿ ಬಿಹಾರ ಆಂದೋಲನ ಆರಂಭವಾದಾಗ, ವಿಧಾನಸಭಾ ಚುನಾವಣೆಗಳು ಈಗ ಕಾಣುವಂತೆ ಇನ್ನೇನು ಬರಲಿವೆ ಎಂಬಂತಿರದೆ, ಇನ್ನೂ

ಮೂರು ವರ್ಷಗಳಿದ್ದವು (1977ರ ಫೆಬ್ರವರಿ, ಮಾರ್ಚ್). ಲೋಕಸಭಾ ಚುನಾವಣೆಗಳು ಸಹ ಇನ್ನೂ ಎರಡು ವರ್ಷಗಳ ನಂತರ ನಡೆಯಬೇಕಾಗಿದ್ದವು. ಈಗ ಲೋಕಸಭಾ ಚುನಾವಣೆಗಳಿಗೆ (ನೀವು ನಿರ್ಧರಿಸಿದರೆ ವಿಧಾನಸಭಾ ಚುನಾವಣೆಗಳೂ ಸಹ) ಇನ್ನು ಕೇವಲ ಆರು ತಿಂಗಳುಗಳಿವೆ. ವಿರೋಧಪಕ್ಷಗಳ ನಾಯಕರನ್ನು ಈಗ ಬಿಡುಗಡೆ ಮಾಡಿ ಅವರ ಪಕ್ಷಗಳು ಮತ್ತೆ ಕಾರ್ಯಾರಂಭ ಮಾಡಲು ಅವಕಾಶ ಕೊಟ್ಟರೆ, ಪ್ರವಾಹಪರಿಹಾರ ಕಾರ್ಯಾಚರಣೆಯಲ್ಲಿ ತೊಡಗುವ ತಕ್ಷಣದ ಕರ್ತವ್ಯವಲ್ಲದೆ, ಅವು ಚುನಾವಣೆಗಳಿಗಾಗಿ ತಯಾರಾಗುವ ಬಹು ಮುಖ್ಯ ಕಾರ್ಯದಲ್ಲಿ ತೊಡಗಲಿವೆ. ನಾನು ಅಥವಾ ಇನ್ನಾರೇ ನನ್ನಂತಹವರು, ಆಂದೋಲನವನ್ನು ಪುನಶ್ಚೇತನಗೊಳಿಸುವಂತೆ ಅವರನ್ನು ಪ್ರೇರೇಪಿಸುವ ಮೂರ್ಖತನಕ್ಕಿಳಿದರೂ, ಅವರಿಗೆ ಆಸಕ್ತಿ ಮೂಡಲಾರದು ; ಅವರಿಗೆ ಇದಾವುದರಲ್ಲೂ ಆಸಕ್ತಿ ಉಂಟಾಗಲಾರದು. ವಿದ್ಯಾರ್ಥಿಗಳ ಮನೋಭಾವ ಕೂಡಾ ಇದೇ ರೀತಿಯದಾಗಿರುತ್ತದೆ.

ಅಂತೂ ಒಟ್ಟಿನಲ್ಲಿ, ಪರಿಸ್ಥಿತಿ ಹತೋಟಿಯಲ್ಲಿರುವುದೆಂದೂ, ಯಾವುದೇ ರೀತಿಯ ಸರ್ಕಾರಿ ವಿರೋಧಿ ಚಳವಳಿ ಅಥವಾ ಆಂದೋಲನ ಇಲ್ಲವೆಂದೂ ಮತ್ತು ಈಗ ದೇಶಾದ್ಯಂತ ಶಾಂತಿ ಮತ್ತು ಶಿಸ್ತು ನೆಲೆಸಿದೆ ಎಂದೂ ಹೇಳಿರುವ ನೀವು, ಸಂಸದೀಯ ಪ್ರಜಾಪ್ರಭುತ್ವದಲ್ಲಿ ನಿಮ್ಮ ದೃಢ ನಂಬಿಕೆಯನ್ನು ವ್ಯಕ್ತಪಡಿಸಿದ್ದೀರಿ. ಆದ್ದರಿಂದ, ಸಂಸತ್ ಚುನಾವಣೆಗಳಿಗೆ ಇನ್ನು ಕೇವಲ ಆರು ತಿಂಗಳುಗಳು ಉಳಿದಿದ್ದು ನಿಮ್ಮ, ದೇಶದ ಮತ್ತು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ನೀವು, ರಾಜಕೀಯ ಕಾರಣಗಳ ಮೇಲೆ ಈಗ ಸ್ಥಾನಬದ್ಧತೆಯಲ್ಲಿರಿಸಿರುವ (ಕಳ್ಳ ಸಾಗಣೆದಾರರು ಹಾಗೂ ಇತರರ ಬಗ್ಗೆ ನನ್ನ ಆಸಕ್ತಿ ಇಲ್ಲ) ಎಲ್ಲರನ್ನೂ ಬಿಡುಗಡೆ ಮಾಡಬೇಕು ; ಪತ್ರಿಕೆಗಳ ಮೇಲೆ ವಿಧಿಸಲಾಗಿರುವ ಪೂರ್ವಪರೀಕ್ಷಾ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ಪತ್ರಿಕೆಗಳಿಗೆ ಪೂರ್ಣಸ್ವಾತಂತ್ರ್ಯವನ್ನು ಮತ್ತೆ ನೀಡಬೇಕು, ಜನರಿಗೆ ಪೂರ್ಣ ನಾಗರಿಕ ಹಕ್ಕುಗಳನ್ನು ಹಿಂತಿರುಗಿಸಬೇಕು ಮತ್ತು ಆದಷ್ಟು ಬೇಗ ಲೋಕಸಭಾ ಚುನಾವಣೆಗಳಿಗಾಗಿ ಸಂಭವನೀಯ ದಿನಾಂಕಗಳನ್ನು ಪ್ರಕಟಿಸಬೇಕು.

ತುರ್ತುಪರಿಸ್ಥಿತಿಯ ಸಂದರ್ಭ ನಿಮ್ಮ ವ್ಯಾಖ್ಯಾನದ ಪ್ರಕಾರವೇ ಕೊನೆಗೊಂಡಿದ್ದು ಸಂಬಂಧಪಟ್ಟ ಘೋಷಣೆಯನ್ನು ರದ್ದುಮಾಡಬೇಕು ಮತ್ತು ದೇಶದ ಎದೆ ಮೇಲೆ ಹೇರಿರುವ ರಾಕ್ಷಸ ಭಾರವನ್ನು ಎತ್ತಬೇಕು.

ಈ ನನ್ನ ಕೋರಿಕೆಯನ್ನು ಪರಿಶೀಲಿಸರೆಂದು ಮನಃಪೂರ್ವಕವಾಗಿ ಕೋರುವ,

ಶುಭಾಶಯಗಳೊಂದಿಗೆ

ನಿಮ್ಮವ

- ಜಯಪ್ರಕಾಶ್

ಅನುಬಂಧ 3

ಸೆಪ್ಟೆಂಬರ್ 17, 1975

ಪ್ರಿಯ ಪ್ರಧಾನಮಂತ್ರಿಯವರೇ,

ಆಗಸ್ಟ್ 27ರಂದು ನಾನು ವಾಗ್ದಾನದ ಮೇಲೆ ಒಂದು ತಿಂಗಳ ಕಾಲ ಸ್ಥಾನಬದ್ಧತೆಯಿಂದ ಬಿಡುಗಡೆಗಾಗಿ ಕೋರಿಕೆ ಸಲ್ಲಿಸಿದ್ದೆ. ಸೆಪ್ಟೆಂಬರ್ 4ರಂದು ಕೃಷಿ ಖಾತೆಯ ಶ್ರೀ ವೊಹ್ರಾ ಅವರು ನನ್ನಲ್ಲಿಗೆ ಬಂದು ಪಟ್ನಾದ ಜನರಿಗೆ ಒದಗಿಸಲಾಗುತ್ತಿರುವ ಪರಿಹಾರದ ವಿವರಗಳನ್ನು ನೀಡಿದರು (ಅವರು ಹಳ್ಳಿ ಪ್ರದೇಶಗಳ ಪಾಡೇನಾಗಿದೆ ಎಂಬುದನ್ನು ತಿಳಿಸಲಿಲ್ಲ). ನೀವು ಮತ್ತು ನಿಮ್ಮ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ನಾನು ಅವರಿಗೆ ನನ್ನ ತೃಪ್ತಿಯನ್ನು ಸೂಚಿಸಿದೆ. ನನ್ನ ಈ ಕೋರಿಕೆಯನ್ನು ಪ್ರೊ. ಪಿ.ಎನ್. ಧರ್ ಅವರಿಗೆ ತಿಳಿಸುವಂತೆ ಶ್ರೀ ವೊಹ್ರಾರಿಗೆ ಸೂಚಿಸಿದೆ ; ಶ್ರೀ ವೊಹ್ರಾ ನನ್ನಲ್ಲಿಗೆ ಬಂದದ್ದು ಶ್ರೀ ಧರ್ ಅವರ ಸಲಹೆಯ ಮೇರೆಗೇ.

ಈ ವೊಹ್ರಾರ ಭೇಟಿ, ಸಹಜವಾಗಿ ಹೀಗೆ ಭಾವಿಸಲು ಕಾರಣವಾಯಿತು : ವಾಗ್ದಾನದ ಮೇಲೆ ನನ್ನ ಬಿಡುಗಡೆಯ ಕೋರಿಕೆಯನ್ನು ಗಂಭೀರವಾಗಿ ವಿಚಾರ ಮಾಡಲಾಗುತ್ತದೆ ಮತ್ತು ಪ್ರವಾಹ ಪರಿಸ್ಥಿತಿ ಮುಟ್ಟಿರುವ ವಿಕೋಪ ಘಟ್ಟದ ದೃಷ್ಟಿಯಿಂದ ಈ ಬಗ್ಗೆ ಅತಿ ಶೀಘ್ರದಲ್ಲಿಯೇ ತೀರ್ಮಾನ ಕೈಗೊಳ್ಳಲಾಗುತ್ತದೆ. ಆದರೆ ಮೂರು ವಾರಗಳು ಕಳೆದು, ಬಿಹಾರದ ಹಲವು ಭಾಗಗಳಲ್ಲಿ ಅಲೆಗಳ ಮೇಲೆ ಅಲೆಗಳು ರಾಚಿ ಪ್ರವಾಹ ಉಕ್ಕೇರಿದ್ದರೂ, ನಿಮ್ಮಿಂದ ಉತ್ತರ ಬರದೆ ನಾನು ವ್ಯಾಕುಲಗೊಂಡಿದ್ದೇನೆ. ಉತ್ತರ ಪ್ರದೇಶದ ನನ್ನ ಭಾಗ ಕೂಡಾ ಮತ್ತೆ ಮತ್ತೆ ಪ್ರವಾಹಕ್ಕೊಳಗಾಗುತ್ತಿದ್ದು ನನ್ನ ಹಳ್ಳಿ ಹಾಗೂ ನನ್ನ ಮನೆಯ ಬಗ್ಗೆ ಯಾವುದೇ ಸುದ್ದಿ ಇಲ್ಲದಾಗಿದೆ. ನಿನ್ನೆಯ 'ಟ್ರಿಬ್ಯೂನ್'ನಲ್ಲಿ, 'ಬಿಹಾರದ ಪ್ರವಾಹ ಭೀಕರ ಘಟ್ಟಕ್ಕೆ' ಎಂಬ ಮೂರು ಅಂಕಣಗಳ ಶೀರ್ಷಿಕೆ ಇತ್ತು. ಮತ್ತೆ ಇಂದು ಬೆಳಿಗೆ (17-

9-75) ಪತ್ರಿಕೆ, 'ಬಿಹಾರದ ಪ್ರವಾಹ ಪರಿಸ್ಥಿತಿ ಹದಗೆಟ್ಟಿದೆ' ಎಂದು ವರದಿಮಾಡಿದೆ. ಪ್ರಮುಖ ಕೋಸಿ ಕಾಲುವೆಯ ಬಲದಂಡೆ ಬಿರುಕು ಬಿಟ್ಟಿರುವುದೇನೂ ಸಣ್ಣ ವಿಷಯವಲ್ಲ. ಇದರ ತಾಕ್ಷಣಿಕ ಮತ್ತು ವ್ಯಾಪಕ ವಿನಾಶದ ಹಳ್ಳಿಗಳು ನೀರಿನಲ್ಲಿ ಮುಳುಗಿವೆ. ಈ ವರ್ಷದ ಈ ಅನಾಹುತ ಆ ಭೀಕರ ಭೂಕಂಪವನ್ನೂ ಮೀರಿಸಿವೆ ಎಂದು ತೋರುತ್ತದೆ.

ಇಂತಹ ಸಂದರ್ಭದಲ್ಲಿ, ಜನರ ಸೇವೆ ಮಾಡಲು ಅವಕಾಶ ಕೊಡಿರೆಂದು ಮತ್ತೆ ಕೇಳದಿರಲಾರೆ. ದಯವಿಟ್ಟು ಇದರಲ್ಲಿ ರಾಜಕೀಯವನ್ನು ತರಬೇಡಿ. ಇಂತಹ ಅನಾಹುತಗಳ ಸಂದರ್ಭದಲ್ಲಿ ಬ್ರಿಟಿಷರಲ್ಲಿ ಕೂಡಾ, ತಮ್ಮ ಸಾಮ್ರಾಜ್ಯದ ವಿರುದ್ಧ ಹೋರಾಡುತ್ತಿರುವವರನ್ನು ಬಿಡುಗಡೆ ಮಾಡುವಷ್ಟು ಮಾನವೀಯತೆ ಇತ್ತು. ಇಂತಹ ಭಯಂಕರ ಮಾನವ ಸಂಕಷ್ಟದ ಸಂದರ್ಭದಲ್ಲಿ ರಾಜಕಾರಣಕ್ಕಾದರೂ ಎಂಥಹ ಸ್ಥಾನವಿರಲು ಸಾಧ್ಯ? ನನ್ನಮಟ್ಟಿಗೆ, ಈಗ, ನಾನು ಚಂಡೀಘಡದ ಡೆಪ್ಯುಟಿ ಕಮಿಷನರ್ ಅವರಿಗೆ ಬರೆದ ಪತ್ರದ (31-8-75) ಕೆಲವು ಭಾಗಗಳನ್ನು ಉಲ್ಲೇಖಿಸುವುದನ್ನು ಬಿಟ್ಟು ಮತ್ತೇನೂ ಮಾಡಲಾರೆ ; ಈ ವಿವಿರಗಳನ್ನು ದೆಹಲಿಯಲ್ಲಿರುವ ಸೂಕ್ತ ಅಧಿಕಾರವರ್ಗಕ್ಕೆ ಕಳಿಸಲಾಗುವುದೆಂದು ಭಾವಿಸಿದ್ದೆ. ನಾನು ಪತ್ರದಲ್ಲಿ ಹೀಗೆ ಬರೆದಿದ್ದೆ: 'ಈ ಸಂದರ್ಭದಲ್ಲಿ ನನಗೆ ಕೊಡಲಾಗುವ ಸ್ವಾತಂತ್ರ್ಯವನ್ನು ಯಾವುದೇ ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದನ್ನು ಅನೈತಿಕ ಮತ್ತು ಅವಿವೇಕದ ಕೃತ್ಯ ಎಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ರಾಜಕೀಯದ ಮಾತಾಡುವುದು ನಿಜವಾಗಿಯೂ, ಜನರ ನೋವು ಸಂಕಷ್ಟಗಳ ಬಗ್ಗೆ ವ್ಯಂಗ್ಯವಾಡಿದಂತೆ. ಸಾಸುವೆ ಕಾಳಿನಷ್ಟಾದರೂ ಮಾನವ ಅಂತಃಕರಣವುಳ್ಳ ಯಾವ ವ್ಯಕ್ತಿಯೂ ಹೀಗೆ ಮಾಡುವ ಯೋಚನೆ ಮಾಡಲಾರ.'

ಈಗ ಸ್ವಯಂಸೇವಾ ಪರಿಹಾರ ಕ್ರಮಗಳ ಅಗತ್ಯವಿಲ್ಲ ಎಂಬುದು ಸರ್ಕಾರದ ನಿಲುವಾಗಿರಲಾರದು. ಏಕೆಂದರೆ, ಸ್ವತಃ ನೀವು ಮತ್ತು ನಿಮ್ಮ ಸಹೋದ್ಯೋಗಿಗಳೇ ನೆರವಿಗಾಗಿ ಸ್ವಯಂಸೇವಾ ಸಂಸ್ಥೆಗಳಿಗೆ ಮನವಿಮಾಡಿದ್ದೀರಿ. ಪರಿಹಾರ ಕಾರ್ಯಾಚರಣೆಯನ್ನು ನಿರ್ವಹಿಸುವ ನನ್ನ ಸಾಮರ್ಥ್ಯದ ಬಗ್ಗೆ ಹೇಳುವುದಾದರೆ, ಈ ಬಗ್ಗೆ ಯೋಚಿಸಲು ನಿಮಗೇ ಸಾಕಷ್ಟು ಪರಿಜ್ಞಾನವಿದೆ.

ಪ್ರೊ. ಧರ್ ಅವರಿಗೆ ತಲುಪಿಸಬೇಕೆಂದು ಶ್ರೀ ವೊಹ್ರಾರಿಗೆ ಸೂಚಿಸಿದ ಮತ್ತೊಂದು ಸಂದೇಶವೂ ಇದೆ : ತುರ್ತುಪರಿಸ್ಥಿತಿಯನ್ನು ಘೋಷಿಸಿದಾಗಿನಿಂದ ಮತ್ತು ಅದಕ್ಕಿಂತ ಮುಂಚಿನಿಂದ ಸರ್ಕಾರ ಅನುಸರಿಸಿಕೊಂಡು ಬಂದ ಇಡೀ ರಾಜಕೀಯ ನೀತಿಯನ್ನು ವಿಮರ್ಶಿಸಲು ಮತ್ತು ಪರಿಷ್ಕರಿಸಲು, ಬಿಹಾರ್ ಪ್ರವಾಹ ಪರಿಸ್ಥಿತಿಯು ಒಳ್ಳೆಯ ಅವಕಾಶ ಒದಗಿಸಿದೆ. ನನ್ನ ಈ ಅಭಿಪ್ರಾಯ ಆಗಿನಿಂದೀಚೆಗೆ ಮತ್ತಷ್ಟು ಬಲಗೊಂಡಿದೆ. ಬಿಹಾರ್ ಪ್ರವಾಹ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆಯಲ್ಲದೆ,

ದೇಶದ ಇತರ ಹೆಚ್ಚಿನ ಭಾಗಗಳಲ್ಲೂ ಪ್ರವಾಹ ಉಂಟಾಗಿದೆ. ಇಂತಹ ಕಾಲದಲ್ಲಿ ಯಾರೇ ಆಗಲಿ, ಹೋರಾಟ ಅಥವಾ ಆಂದೋಲನವೊಂದನ್ನು ಆರಂಭಿಸುವ ಪ್ರಶ್ನೆಯೇ ಇಲ್ಲ. ರಾಜಕೀಯ ತುರ್ತುಪರಿಸ್ಥಿತಿ - ಅದು ಎಂದಾದರೂ ಇತ್ತು ಎಂಬುದನ್ನು ಒಪ್ಪಿಕೊಂಡರೂ - ಕೊನೆಗೊಂಡಿದ್ದು, ಅದರ ಸ್ಥಾನವನ್ನು ರಾಷ್ಟ್ರೀಯ ಪ್ರಯತ್ನವೊಂದರ ಅಗತ್ಯವನ್ನು ಆಗ್ರಹಿಸುವ, ಮಾನವ ಸಂಕಷ್ಟದ ತುರ್ತುಪರಿಸ್ಥಿತಿ ಆಕ್ರಮಿಸಿಕೊಂಡಿದೆ. ಮತ್ತ್ಯಾರೂ ಅಲ್ಲ, ಸ್ವತಃ ಕೇಂದ್ರ ಗೃಹಮಂತ್ರಿಯವರೇ ಹಿಂದೊಂದು ದಿನ ಮದ್ರಾಸಿನಲ್ಲಿ ದೇಶಾದ್ಯಂತ ಸಹಜ ಪರಿಸ್ಥಿತಿ ನೆಲೆಗೊಂಡಿದೆ ಎಂದು ಹೇಳಿದ್ದಾರೆ (ಅವರು ಹೇಳಿದ್ದು : ದೇಶಾದ್ಯಂತ ಸಹಜ ಪರಿಸ್ಥಿತಿ ನೆಲೆಸಿದ್ದು, ಬಂಧಿಸಲ್ಪಟ್ಟದ್ದವರಲ್ಲಿ ಶೇಕಡಾ 30ರಷ್ಟು ಜನರನ್ನು ಬಿಡುಗಡೆ ಮಾಡಲಾಗದೆ: ಪಿ.ಟಿ.ಐ. : 'ಟಿಬ್ಯೂನ್' : 14-9-75) ಹೀಗಿರುವಾಗ ಯಾವ ಆಧಾರದ ಮೇಲೆ ಈಗಲೂ ತುರ್ತುಪರಿಸ್ಥಿತಿಯನ್ನು ಮುಂದುವರಿಸಿದ್ದೀರಿ?

ತುರ್ತುಪರಿಸ್ಥಿತಿಯನ್ನು ಏಕೆ ಕೊನೆಗಾಣಿಸಬೇಕು ಎಂಬುದಕ್ಕೆ ಮತ್ತೊಂದು ಬಹು ಮುಖ್ಯವಾದ ಕಾರಣವಿದೆ. ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿವೆ ಎಂಬುದೇ ಈ ಕಾರಣವಾಗಿದೆ. ಸಂವಿಧಾನದ ಪ್ರಕಾರ, ಲೋಕಸಭಾ ಚುನಾವಣೆಗಳು ಮುಂದಿನ ವರ್ಷದ ಆದಿಭಾಗದಲ್ಲಿ ನಡೆಯಬೇಕು. ವಾಸ್ತವವಾಗಿ ಇಲ್ಲದೇ ಇರುವ ತುರ್ತುಪರಿಸ್ಥಿತಿಯನ್ನೇ ನೆಪ ಮಾಡಿಕೊಂಡು ಪ್ರಸಕ್ತ ಲೋಕಸಭೆಯ ಕಾಲಾವಧಿಯನ್ನು ವಿಸ್ತರಿಸಬಹುದು. ಆದರೆ ಇದೆಂತಹ ಕುಂಟುನೆಪವಾಗಿರುತ್ತದೆ ಎಂಬುದನ್ನು ನೀವೇ ತಿಳಿಯಬೇಕು. ಇದರಿಂದ ಯಾರೂ ಮೋಸಹೋಗಲಾರರು ಮತ್ತು ಇದರಿಂದ ಸಾರ್ವಜನಿಕರ ಮುಂದೆ ನೀವು ಪದೇ ಪದೇ ನಂಬಿಕೆಯನ್ನು ಪ್ರತಿಪಾದಿಸುವ ಸಂಸದೀಯ ಪ್ರಜಾಪ್ರಭುತ್ವಕ್ಕೆ ಶಾಶ್ವತವಾಗಿ ತಿಲಾಂಜಲಿ ನೀಡಿದಂತಾಗುತ್ತದೆ ; ಅಲ್ಲದೆ ಇದರಿಂದ ಎಲ್ಲರಿಗಿಂತ ಹೆಚ್ಚು ನಷ್ಟವಾಗುವುದು ನಿಮಗೇ. ಲೋಕಸಭೆಗೆ ತಮ್ಮ ಹೊಸ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಜನರ ಹಕ್ಕನ್ನು ನೀವು ಯಾವ ಆಧಾರದ ಮೇಲೆ ನಿರಾಕರಿಸುವಿರಿ? ದೇಶದಲ್ಲಿ ತುರ್ತುಪರಿಸ್ಥಿತಿ ಇರುವುದರಿಂದ ನೀವು ಈ ಕಠಿಣ ಕ್ರಮ ಕೈಗೊಳ್ಳುತ್ತಿರುವಿರಿ ಎಂದು ನಿಮ್ಮ ಹೊಗಳುಭಟ್ಟರನ್ನುಳಿದು ಇನ್ನಾರ ನಂಬಲಿದ್ದಾರೆ?

ಇದು ಸೆಪ್ಟೆಂಬರ್‌ನ ಮೂರನೇ ವಾರ. ಈ ತಿಂಗಳ ಕೊನೆಯೊಳಗಾಗಿ ಅಥವಾ ಮುಂದಿನ ತಿಂಗಳ ಮೊದಲಲ್ಲಿ ನೀವು, ಲೋಕಸಭಾ ಚುನಾವಣೆಗಳು 1976ರ ಆದಿಭಾಗದಲ್ಲಿ ನಡೆಯುತ್ತವೆ ಮತ್ತು ಇನ್ನು ಕೆಲವೇ ದಿನಗಳಲ್ಲಿ ಚುನಾವಣಾ ಆಯೋಗ ಚುನಾವಣೆಯ ನಿರ್ದಿಷ್ಟ ದಿನಾಂಕಗಳನ್ನು ನಿಗದಿಮಾಡಲಿದೆ ಎಂದು ಸ್ಪಷ್ಟವಾಗಿ ಪ್ರಕಟಿಸಬೇಕು. ಇಂತಹದೊಂದು ಪ್ರಕಟಣೆ ದೇಶದ ರಾಜಕೀಯ ವಾತಾವರಣದಲ್ಲಿ ಎಂತಹ ಪವಾಡಸದೃಶ ಬದಲಾವಣೆಯನ್ನುಂಟುಮಾಡುತ್ತದೆ ಎಂಬುದನ್ನು ನೀವು ಕಾಣುವಿರಿ. ಪ್ರಜಾಪ್ರಭುತ್ವವೊಂದರಲ್ಲಿ ಸಾರ್ವತ್ರಿಕ ಚುನಾವಣೆಗಳು

(ಅವು ಮುಕ್ತ ಹಾಗೂ ನ್ಯಾಯಯುತವಾಗಿ ನಡೆದಲ್ಲಿ), ಪ್ರಬಲ ವಿರೇಚಕವಿದ್ದಂತೆ : ಅದು ರಾಜಕೀಯ ವಾತಾವರಣವನ್ನು ಸ್ವಚ್ಛಗೊಳಿಸಿ, ಬಿಗುವುಗಳನ್ನು ಪರಿಹರಿಸಿ, ರಾಜಕೀಯ ವ್ಯವಸ್ಥೆಗೆ ಆರೋಗ್ಯ ಹಾಗೂ ಚೈತನ್ಯವನ್ನು ನೀಡುತ್ತದೆ.

ಈ ಮೇಲಿನ ನನ್ನ ಸಲಹೆಗಳನ್ನು ನಿರ್ವಿಕಾರ ಮನಃಸ್ಥಿತಿಯಲ್ಲಿ ಪರಿಶೀಲಿಸಿರೆಂದು ಪ್ರಾರ್ಥಿಸುವ,

ಶುಭಾಶಯಗಳೊಂದಿಗೆ

ನಿಮ್ಮವ

- ಜಯಪ್ರಕಾಶ್

ಅನುಬಂಧ 4

ಸೆಪ್ಟೆಂಬರ್ 22, 1975

ಪ್ರಿಯ ಷೇಕ್ ಸಾಹಿಬ್,

ಇಂದು ಮುಂಜಾನೆಯ 'ಟ್ರಿಬ್ಯೂನ್'ನಲ್ಲಿ (ಸೆಪ್ಟೆಂಬರ್ 22) ಪಿ.ಟಿ.ಐ. ವರದಿಯೊಂದರ ಶೀರ್ಷಿಕೆ ಹೀಗಿದೆ : 'ಅಖಿಲಭಾರತ ಮಟ್ಟದಲ್ಲಿ ರಾಜಕೀಯ ಪುನರಾಲೋಚನೆ - ಷೇಕ್ ಬಯಕೆ.' ಈ ಬಗ್ಗೆ ನನಗೆ ಸಹಜವಾಗಿ ಕುತೂಹಲ ಮೂಡಿ, ವರದಿಯನ್ನು ಎಚ್ಚರಿಕೆಯಿಂದ ಎರಡು ಬಾರಿ ಓದಿದೆ. ವರದಿಯಲ್ಲಿ ಇತರ ವಿಷಯಗಳ ನಡುವೆ ಈ ಉಲ್ಲೇಖಗಳಿವೆ (ಒಂದೇ ಒಂದು ಉಲ್ಲೇಖ ಚಿಹ್ನೆಯ ಅಡಿ ಇರುವುದೆಲ್ಲಾ ಸುದ್ದಿಗಾರನ ಮಾತುಗಳು ; ಎರಡು ಉಲ್ಲೇಖ ಚಿಹ್ನೆಗಳ ಅಡಿಯಲ್ಲಿರುವುದೆಲ್ಲಾ ನೀವು ಹೇಳಿದಿರೆಂದು ವರದಿಯಾಗಿರುವ ಮಾತುಗಳು):

'ಭಿನ್ನಾಭಿಪ್ರಾಯಗಳನ್ನು, ಪರಸ್ಪರ ಪುನರಾಲೋಚನೆಯ ಮೂಲಕ ಪರಿಹರಿಸಿಕೊಳ್ಳಬೇಕು ಎಂದು ಅವರು ಬಯಸಿದ್ದಾರೆ ಎಂಬುದಾಗಿ ವರದಿ ಮಾಡಿರುವ ಪಾಶ್ಚಿಮಾತ್ಯ ಪತ್ರಿಕೆಗಳು, ಅವರು ಮಧ್ಯಸ್ಥಿಕೆ ವಹಿಸುವ ಸಾಧ್ಯತೆಗಳನ್ನು ಸೂಚಿಸಿವೆ ಎಂಬ ಬಗ್ಗೆ ಯಾವುದೇ ನೇರ ಟೀಕೆ ಮಾಡಲು ಅವರು ನಿರಾಕರಿಸಿದರು.'

'ಅವರು ಮನಬಿಚ್ಚಿ ಮಾತನಾಡುವಂತೆ ಪ್ರತಿನಿಧಿಗಳು ತಮ್ಮ ಪ್ರಯತ್ನಗಳನ್ನು ಮುಂದುವರಿಸಿದಾಗ... ಪ್ರಧಾನಮಂತ್ರಿಯವರು ತಮ್ಮ ಸೇವೆಯನ್ನು ಯಾವಾಗ ಬೇಕಾದರೂ ಬಳಸಿಕೊಳ್ಳಬಹುದು ಎಂದು ಷೇಕ್ ನುಡಿದರು. "ಎಲ್ಲ ಪರಿಸ್ಥಿತಿಯನ್ನು ಅವಲಂಬಿಸಿದೆ... ಯಾರೇ ಆಗಲಿ ಸೂಕ್ತ ಕಾಲಕ್ಕಾಗಿ ಕಾಯಬೇಕು" ಎಂದವರ ಅಭಿಪ್ರಾಯಪಟ್ಟರು.'

ಮುಂದೆ, 'ವಿವರಣೆ ನೀಡಲು, ಇದೊಂದು "ಉಚಿತ ಕರ್ತವ್ಯ" ಮತ್ತು "ಸೂಕ್ಷ್ಮ ವಿಷಯ" ಎಂದು ಹೇಳಿದ ಅವರು, "ಸಹಜ ಪರಿಸ್ಥಿತಿ ಪುನರ್ ನೆಲಸಬೇಕೆಂಬುದು ಎಲ್ಲರ ಬಯಕೆಯಾಗಿದೆ" ಎಂಬುದನ್ನು ಒತ್ತಿ ಹೇಳಿದರು. ಪ್ರಧಾನಮಂತ್ರಿಯವರ ಇಚ್ಛೆ, ತಮಗೆ ತಿಳಿದಮಟ್ಟಿಗೆ, "ತುರ್ತುಪರಿಸ್ಥಿತಿಯನ್ನು ಕೊನೆಗಾಣಿಸುವ ಕಾತುರ ಆಕೆಗಿದೆ. ಆದರೆ ಅದು ಒಟ್ಟಾರೆ ಪರಿಸ್ಥಿತಿಯನ್ನು ಅವಲಂಬಿಸಿದೆ" ಎಂದು ಅವರು ನುಡಿದರು.'

ಎರಡೂ ಕಡೆ ಅಷ್ಟೊಂದು ಸೌಹಾರ್ದ ಗಳಿಸಿರುವ ಮತ್ತು ಅಷ್ಟೊಂದು ಮಹತ್ವದ ಸ್ಥಾನದಲ್ಲಿರುವ ನಿಮ್ಮಂತಹ ಗೆಳೆಯನಿಂದ ಬಂದಿರುವ ಈ ಮಾತುಗಳು, ನನಗೆ ಅತ್ಯಂತ ಗಮನಾರ್ಹವಾಗಿ ಮತ್ತು ಆಸಕ್ತಿಪೂರ್ಣವಾಗಿ ಕಂಡಿವೆ.

ಸರ್ಕಾರದೊಂದಿಗೆ ನಾವು ಹೊಂದಿರುವಂತಹ ಭಿನ್ನಾಭಿಪ್ರಾಯಗಳನ್ನು ಪರಸ್ಪರ ಪುನರಾಲೋಚನೆಯ ಮೂಲಕ ಪರಿಹರಿಸಿಕೊಳ್ಳಬೇಕೆನ್ನುವ ನಿಮ್ಮ ಅಭಿಪ್ರಾಯಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಆದರೆ ಷೇಕ್ ಸಾಹಿಬ್, ಆಂದೋಲನದ ಎತ್ತಿದ್ದ ಪ್ರಮುಖ ಅಂಶಗಳ ಬಗ್ಗೆ ಎಂದೂ ಚರ್ಚೆ ನಡೆಯಲಿಲ್ಲ. ಈ ಪ್ರಮುಖ ಅಂಶಗಳೆಂದರೆ: ರಾಜಕಾರಣ, ಸರ್ಕಾರ ಹಾಗೂ ಆಡಳಿತ ವ್ಯವಸ್ಥೆಯಲ್ಲಿನ ಭ್ರಷ್ಟಾಚಾರ ; ಚುನಾವಣೆಗಳು ಹೆಚ್ಚು ವೆಚ್ಚವಿಲ್ಲದೆ, ನ್ಯಾಯಸಮ್ಮತವಾಗಿ, ಮುಕ್ತವಾಗಿ ನಡೆಯುವಂತೆ ಮತ್ತು ಮತಪೆಟ್ಟಿಗೆಯ ಮೂಲಕ ವ್ಯಕ್ತವಾಗುವ ಜನತೆಯ ಆಯ್ಕೆ ಇನ್ನೂ ಹೆಚ್ಚು ಪ್ರಾತಿನಿಧಿಕವಾಗಿರುವಂತೆ ಚುನಾವಣಾ ಕಾನೂನುಗಳ ಸುಧಾರಣೆ ; ನಿರುದ್ಯೋಗ ಸಮಸ್ಯೆಯನ್ನು (ವಿದ್ಯಾವಂತ ಮತ್ತು ಅವಿದ್ಯಾವಂತರಿಬ್ಬರಿಗೂ ಸಂಬಂಧಿಸಿದಂತೆ) ಎದುರಿಸಲು ತುರ್ತು ಆರ್ಥಿಕ ಕ್ರಮಗಳು ಮುಂತಾದವು. ಈ ಎಲ್ಲ ಅಂಶಗಳನ್ನು ಕುರಿತಂತೆ ನಾವು ವಾಸ್ತವಿಕ ಸಲಹೆಗಳನ್ನು ಮಂಡಿಸಿದ್ದೆವು. ಆದರೆ ಪ್ರಧಾನಮಂತ್ರಿಯವರು ಪರಸ್ಪರ ತಿಳುವಳಿಕೆಯ ಅಗತ್ಯವನ್ನೇ ಮನಗಾಣದೆ ಈ ಬಗ್ಗೆ ಒಂದೆಡೆ ಕೂತು ಚರ್ಚಿಸುವ ಆಸಕ್ತಿಯನ್ನೇ ತೋರಿಸಲಿಲ್ಲ. ಚುನಾವಣಾ ಸುಧಾರಣೆಗಳನ್ನು ಕುರಿತ ತಾರ್ಕುಂಡೆ ಸಮಿತಿಯು ತನ್ನ ತಾತ್ಕಾಲಿಕ ವರದಿಯನ್ನು ಸಲ್ಲಿಸಿದಾಗ, ಈ ವರದಿಯ ಬಗ್ಗೆ ಚರ್ಚಿಸಲು ಮತ್ತು ಸಾಧ್ಯವಾದರೆ ಸರ್ವಸಮ್ಮತ ಸಲಹೆಗಳನ್ನು ಸಿದ್ಧಪಡಿಸಲು ಸಂಸತ್ತಿನಲ್ಲಿ ಪ್ರಾತಿನಿಧ್ಯ ಪಡೆದಿದ್ದ ಎಲ್ಲ ರಾಜಕೀಯ ಪಕ್ಷಗಳ ಸಾಂಸ್ಥಿಕ ಹಾಗೂ ಸಂಸದೀಯ ಅಂಗಗಳ ನಾಯಕರನ್ನು ನಾನು ಆಹ್ವಾನಿಸಿದೆ. ಕಾಂಗ್ರೆಸ್ ಮತ್ತು ಸಿ.ಪಿ.ಐ. ಈ ಸಭೆಗೆ ಬರಲು ನಿರಾಕರಿಸಿದವು. ಇಂತಹ ಪರಿಸ್ಥಿತಿಯಲ್ಲಿ ಪರಸ್ಪರ ಪುನರಾಲೋಚನೆಯ ಮೂಲಕ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಲು ಸಾಧ್ಯವೇ?

ಒಂದೇ ಒಂದು ಸಂದರ್ಭದಲ್ಲಿ ಮಾತ್ರ, 1974ರ ನವೆಂಬರ್ ಒಂದರಂದು, ಬಿಹಾರ ಆಂದೋಲನದ ಬಗ್ಗೆ ಚರ್ಚೆ ನಡೆಸಲು ನನ್ನನ್ನು ಆಹ್ವಾನಿಸಿದರು. ಬಿಹಾರ ವಿಧಾನಸಭೆಯನ್ನು ವಿಸರ್ಜಿಸುವ ವಿಷಯದಲ್ಲಿ ನಮ್ಮಿಬ್ಬರ ನಡುವೆ ಒಮ್ಮತವೇರ್ಪಡಲಿಲ್ಲ. ವಿಧಾನಸಭೆಯನ್ನು ರದ್ದುಮಾಡುವ ಆಕೆಯ ಸೂತ್ರವನ್ನು ಒಪ್ಪಿಕೊಂಡೆನಾದರೂ, ಮುಂದಿನ ಸಾರ್ವತ್ರಿಕ ಚುನಾವಣೆಗಳವರೆಗೆ ವಿಧಾನಸಭೆಯನ್ನು ಮತ್ತೆ ಚಾಲೂ ಮಾಡಬಾರದು ಮತ್ತು ಅಲ್ಲಿಯವರೆಗೆ ರಾಷ್ಟ್ರಪತಿ ಆಡಳಿತವನ್ನು ಮುಂದುವರಿಸಬೇಕು ಎಂಬುದು ನನ್ನ ಷರತ್ತಾಗಿತ್ತು. ನನ್ನ ಈ ಷರತ್ತು ಆಕೆಗೆ ಒಪ್ಪಿಗೆಯಾಗಲಿಲ್ಲ. ಅದೇ ದಿನ ಸಂಜೆ ಸಾರ್ವಜನಿಕ ಸಭೆಯೊಂದರಲ್ಲಿ ಆಕೆ ಈ ಪ್ರಶ್ನೆ ಮುಂದಿನ ಚುನಾವಣೆಗಳಲ್ಲಿ ಮಾತ್ರ ನಿರ್ಧಾರವಾಗಬಲ್ಲದು ಎಂದು ಸಾರಿದರು. ಆಕೆಯ ಈ ಸವಾಲನ್ನು ನಾನು ಸ್ವೀಕರಿಸಿದೆ ಮತ್ತು ಅಲ್ಲಿಗೆ ಆ ವಿಷಯ ನಿಂತಿತು. ಆದರೆ ಈ ಮಧ್ಯೆ ದಮನಕಾರೀ ಕ್ರಮಗಳು ಮುಂದುವರೆದವು. ಮೂರು ದಿನಗಳ ನಂತರ ನವೆಂಬರ್ 4ರಂದು, ನನ್ನ ಮೇಲೆ ಮತ್ತು ನನ್ನೊಂದಿಗಿನ ಇತರರ

ಮೇಲೆ ಅಶ್ರುವಾಯು ಹಾಗೂ ಲಾಠಿ ಪ್ರಯೋಗ ನಡೆಸಲಾಯಿತು. ಮುಂದೇನಾಯಿತು ಎಂಬುದು ನಿಮಗೇ ಗೊತ್ತಿದೆ.

ನಿಮಗೆ ನೆನಪಿದ್ದರೆ, ಚಂದ್ರಶೇಖರ್, ರಾಮಧನ್, ಮೋಹನಧಾರಿಯಾ, ಕೃಷ್ಣಕಾಂತ್ ಹಾಗೂ ಅವರ ಸ್ನೇಹಿತರೆಲ್ಲಾ ಹೇಳುತ್ತಿದ್ದುದು ನೀವು ಸಂದರ್ಶನದಲ್ಲಿ ಹೇಳಿರುವುದನ್ನೇ : (ಜೆ.ಪಿ.) ಆಂದೋಲನ ಎತ್ತಿರುವ ಅಂಶಗಳನ್ನು ಒಂದೆಡೆ ಕೂತು ಪರಸ್ಪರ ಚರ್ಚಿಸಿ ಇತ್ಯರ್ಥಪಡಿಸಬೇಕೇ ಹೊರತು, ದಮನಕಾರಿ ನೀತಿಗಳ ಮೂಲಕ ಅಲ್ಲ. ಇದಕ್ಕಾಗಿ, ಅವರಿಗೇನು ಶಿಕ್ಷೆ ವಿಧಿಸಲಾಗಿದೆ ಎಂಬುದು ನಿಮಗೇ ಗೊತ್ತು.

ನಮ್ಮ ಬಂಧನ ಹಾಗೂ ತುರ್ತುಪರಿಸ್ಥಿತಿ ಘೋಷಣೆಯ ನಂತರ ನಾವು ಎಲ್ಲ ರೀತಿಯ ಬೊಗಳೆ, ನಿಂದನೆ ಹಾಗೂ ಸಂಪೂರ್ಣ ಸುಳ್ಳುಗಳ ದಾಳಿಗೆ ಬಲಿಯಾಗಿದ್ದೇವೆ. ಇದಕ್ಕೆ ಒಂದು ಉದಾಹರಣೆ - ಇತ್ತೀಚಿನ ಮಾದರಿ - ಕೊಡುತ್ತೇನೆ. ಭಾರತೀಯ ಪ್ರಜಾಪ್ರಭುತ್ವಕ್ಕೆ ಹಿಡಿದಿರುವ ಗ್ರಹಣದ ಬಗ್ಗೆ ಪಾಶ್ಚಿಮಾತ್ಯ ಪತ್ರಿಕೆಗಳು ಮಾಡಿದ ಕಟು ಟೀಕೆಗಳಿಂದ ಉರಿದೆದ್ದು ಪ್ರಧಾನಮಂತ್ರಿಯವರು, ಜಾತ್ಯಾತೀತತೆ, ಸಮಾಜವಾದ, ಮತ್ತು ಪ್ರಜಾಪ್ರಭುತ್ವ ವಿಷಯಗಳ ಬೋಧಕರ ಮೊಟ್ಟಮೊದಲ ಸಮ್ಮೇಳನದಲ್ಲಿ ಭಾಷಣ ಬಿಗಿಯುತ್ತಾ, ಹೀಗೆ ಕಿರುಲಿದರು: ಜೂನ್ 29ರ ನಂತರ* ಅಸಂಖ್ಯಾತ ಜನರ ಕೊಲೆಯಾಗಿ, ನನ್ನನ್ನೂ, ನನ್ನ ಕುಟುಂಬವನ್ನು ಹಾಗೂ ಮುಖ್ಯಮಂತ್ರಿಗಳನ್ನು ಮತ್ತು ನನಗೆ ಬೆಂಬಲ ನೀಡುವ ಇತರರನ್ನೂ ಮುಗಿಸಿಬಿಟ್ಟಿದ್ದರೆ, ಈ ದೇಶವನ್ನು ಹೆಚ್ಚು ಪ್ರಜಾಸತ್ತಾತ್ಮಕವಾದ ದೇಶ ಎಂದು ಪರಿಗಣಿಸಲಾಗುತ್ತಿತ್ತೇನೋ?'

ಮಹಾನ್ ದೇಶವೊಂದರ ಪ್ರಧಾನಿಮಂತ್ರಿಯವರು ಈ ಕೀಳುಮಟ್ಟಕ್ಕಿಳಿದು, ತನ್ನ ರಾಜಕೀಯ ವಿರೋಧಿಗಳ ವಿರುದ್ಧ ದ್ವೇಷ ಹಾಗೂ ಅಸಹನೆಯನ್ನು ಹಬ್ಬಿಸಲು ಇಂತಹ ಸಿನಿಕ ಪ್ರಯತ್ನಕ್ಕೆ ಕೈ ಹಾಕುತ್ತಾರೆ ಎಂಬುದು ನಂಬಲಾಗದ ಸಂಗತಿ. ಆದರೆ ಅದು ಈಗಾಗಲೇ ದಾಖಲಾಗಿದೆ.

ಇಷ್ಟಾದರೂ, ಈವರೆಗೆ ನಡೆದ ಮತ್ತು ಈಗ ನಡೆಯುತ್ತಿರುವ ವಿದ್ಯಮಾನಗಳ ನಡುವೆಯೂ, ಪರಸ್ಪರ ಅರಿವು - ಪುನರಾಲೋಚನೆ ಮಾರ್ಗವನ್ನು ಅನುಸರಿಸಲು ನಾನು ಸಿದ್ಧನಿದ್ದೇನೆ. ಆದುದರಿಂದ, ಈ ವಿಷಯದ ಬಗ್ಗೆ ನಿಮ್ಮೊಂದಿಗೆ ಚರ್ಚಿಸಲು ಸಾಧ್ಯವಾಗುವಂತೆ, ಕೃಪೆಮಾಡಿ ಆದಷ್ಟು ಬೇಗ ನೀವು ನನ್ನ ಕಾಣಲು ಬಂದರೆ, ಉಪಕಾರವಾಗುತ್ತದೆ. ಪ್ರಸಕ್ತ ಕಥಾನಕದ ಖಳನಾಯಕ, ಪ್ರಮುಖ ಪಿತೂರಿಗಾರ, ಹಾಗೂ ನಂಬರ್ ಒನ್ ಅಪರಾಧಿ ನಾನಾಗಿರುವುದರಿಂದ, ನಿಜವಾದ ಸಹಜ ಸ್ಥಿತಿಯನ್ನು - ದಮನ ಹಾಗೂ ಭಯೋತ್ಪಾದನೆಯ ಮೂಲಕ ಸ್ಥಾಪಿಸಿದ ಸುಳ್ಳು

---

* ಜೂನ್ 29ರಂದು ಒಂದು ವಾರದ ಉಪವಾಸ ಸತ್ಯಾಗ್ರಹ ಆರಂಭವಾಗಬೇಕಿತ್ತು.

ಸಹಜ ಸ್ಥಿತಿಯನ್ನಲ್ಲ - ಪುನರ್‌ನೆಲೆಗೊಳಿಸುವುದು ನನ್ನ ಸಹಕಾರದಿಂದ ಮಾತ್ರ ಸಾಧ್ಯ. ಈ ಮೂಲಕ ನಾನು ನಿಮಗೆ ಸಂಪೂರ್ಣ ಸಹಕಾರ ನೀಡಲು ಮುಂದಾಗಿರುವೆ.

ಪ್ರಧಾನಿ, 'ತುರ್ತುಪರಿಸ್ಥಿತಿಯನ್ನು ಕೊನೆಗೊಳಿಸಲು ಅತಿ ಕಾತುರರಾಗಿದ್ದಾರೆ' ಎಂದು ನೀವು ತಿಳಿಸಿದ್ದೀರಿ. ಸರಿ, ಆಕೆಯ ಈ ಅತಿಕಾತುರತೆಯ ಮೊದಲ ಪರೀಕ್ಷೆ, ಈ ಪತ್ರವನ್ನು ನಿಮಗೆ ತಲುಪಿಸಲು ಅವಕಾಶ ನೀಡಲಾಗುವುದೋ ಇಲ್ಲವೋ ಮತ್ತು ನನ್ನನ್ನು ನೋಡಲು ನಿಮಗೆ ಅವಕಾಶ ಕೊಡಲಾಗುತ್ತದೋ ಇಲ್ಲವೋ ಎಂಬುದೇ ಆಗಿದೆ.*

ಆದಷ್ಟು ಬೇಗ ನಿಮ್ಮನ್ನು ಕಾಣಲು ಕಾತುರವಾಗಿರುವ,


ಆತ್ಮೀಯ ವಂದನೆಗಳೊಂದಿಗೆ,

ಎಂದೂ ನಿಮ್ಮವ

ಜಯಪ್ರಕಾಶ್

ಅನುಬಂಧ 5

ರಾಜಕೀಯ ಇಷ್ಟಪತ್ರ (1975)



---

* ಪತ್ರವನ್ನು ಷೇಕ್ ಅಬ್ದುಲ್ಲಾಗೆ ತಲುಪಿಸಲಿಲ್ಲ ಮತ್ತು ಜೆ.ಪಿ. ಅವರನ್ನು ಕಾಣಲು ಅವರಿಗೆ ಅವಕಾಶ ನೀಡಲಿಲ್ಲ.

ಅನುಬಂಧ 6

ಒಂದು ಸಂದರ್ಶನ

ಸಂದರ್ಶಕರು: ಭೋಲಾ ಚಟರ್ಜಿ

ಭೋಲಾ ಚಟರ್ಜಿ: ಜೆ.ಪಿ. 1977ರ ಮಾರ್ಚ್ ಚುನಾವಣೆಗಳ ನಂತರ ನಿಖರವಾಗಿ ಹೇಳಬಹುದಾದರೆ 22 ಅಕ್ಟೋಬರ್ 11ರಂದು, ನೀವು ನನ್ನ ಜೀವನದಲ್ಲಿ ಮಾಡಬೇಕಾದ್ದನ್ನು ಮಾಡಿಯಾಗಿದೆ ಎಂದು ಹೇಳಿದ್ದೀರಿ. ಇದನ್ನು ಸ್ವಲ್ಪ ವಿವರಿಸಬೇಕು. ನನ್ನ ಪ್ರಶ್ನೆ ಇನ್ನೊಂದು ರೂಪದಲ್ಲಿ, ನಿಮ್ಮ ತತ್ವ, ನಂಬಿಕೆ ಹಾಗೂ ಹಾಗೂ ರಾಜಕೀಯ-ಸಾಮಾಜಿಕ ಕಾರ್ಯಾಚರಣೆಗಳ ತಂತ್ರಗಳ ನೆಲೆಯಲ್ಲಿ ನಿಜವಾಗಿ ಜಯಪ್ರಕಾಶ್ ನಾರಾಯಣ್ ಎಂದರೆ ಸಾರತಃ ಏನು ಎಂಬುದೇ ಆಗಿದೆ.

ಜೆ.ಪಿ.: ಇದು ಬಹಳ ಕಷ್ಟದ ಪ್ರಶ್ನೆ. ಮೊದಲಾಗಿ ಅಂದು ನಾನು ಹೇಳಿದ್ದೆನೋ ಸರಿಯಾಗಿ ನೆನಪಿಲ್ಲ. ಆದರೆ ನಿಮ್ಮ ಈ ಪ್ರಶ್ನೆ ಬಗ್ಗೆ ಈಗ ಯೋಚಿಸಿದಾಗ ನನಗೆ ಅನ್ನಿಸುವುದು- ರಾಜಕೀಯ ನೆಲೆಯಲ್ಲಿ ಸ್ವಾತಂತ್ರ್ಯವನ್ನು ಮರಳಿ ಪಡೆಯಲಾಗಿದೆ, ಪ್ರಜಾಪ್ರಭುತ್ವವನ್ನು ಆಂತರಿಕ ಅಪಾಯದಿಂದ ರಕ್ಷಿಸಲಾಗಿದೆ ಮತ್ತು ಇದರಲ್ಲಿ ನನ್ನ ಪಾತ್ರವನ್ನು ನಾನು ನಿರ್ವಹಿಸಿದ್ದೇನೆ ಎಂಬರ್ಥದಲ್ಲಿ ಅಂದು ನಾನು ನನ್ನ ಜೀವನದಲ್ಲಿ ನಾನು ಮಾಡಬೇಕಾದ್ದನ್ನು ಮಾಡಿದ್ದೇನೆ ಎಂದು ಹೇಳಿದ್ದೇನೆ ಎಂದು. ನನಗೆ ಯಾವುದೇ ರಾಜಕೀಯ ಸ್ಥಾನಮಾನದ ಅಥವಾ ಪ್ರಭಾವ ಕೇಂದ್ರವಾಗುವ ಆಸೆ ಇಲ್ಲ ಎಂಬರ್ಥದಲ್ಲಿ. ನಾನು ರಾಜಕೀಯ ಪ್ರಾಣಿಯಲ್ಲವಾದರೂ, ಬಡತನ ನಿರ್ಮೂಲನವಾಗಬೇಕು. ಜಾತಿಪದ್ಧತಿ ನಿರ್ಮೂಲನವಾಗಬೇಕು. ಮನುಷ್ಯ-ಮನುಷ್ಯ ಸಮಾನರಾಗಿರುವಂತಹ -ಪ್ರತಿಯೊಬ್ಬರೂ ಸಮಾನ ಸಂಪತ್ತು ಹೊಂದಿರಲಾಗದಿದ್ದರೂ- ಪ್ರತಿಯೊಬ್ಬರೂ ಯಾವುದೇ ಅಡ್ಡಿಗಳಿಲ್ಲದೆ ಸಮಾನ ಅವಕಾಶ ವಿರುವಂತಹ ಹೊಸದೊಂದು ಸಮಾಜ ನಿರ್ಮಾಣದ ಆಶಯವನ್ನಾದರೂ ಬಿತ್ತಲಾಗಿದೆ ಎಂದು ನಂಬಿದ್ದೇನೆ. ಬಡತನ ಇನ್ನೂ ಇದೆ, ಬಹುಶಃ ಹೆಚ್ಚುತ್ತಿದೆ. ಜಾತಿ ತಾರತಮ್ಯ ಕಡಿಮೆಯಾಗುತ್ತಿದ್ದರೂ ರಾಜಕಾರಣದಲ್ಲಿ ಜಾತಿಯ ಹಿಡಿತ ಹಾಗೇ ಇದೆ. ಮತ ಪಡೆಯಲು ಜಾತಿ ಬಳಸುವ ಪ್ರವೃತ್ತಿ ಈ ಅಸಮಾನ- ಅನ್ಯಾಯಯುತ ಪದ್ಧತಿಗೆ ಹೊಸ ಜೀವ ನೀಡುತ್ತಿದೆ ಎಂದು ನಾನು ಭಾವಿಸಿದ್ದೇನೆ. ಈ ದಿಸೆಯಲ್ಲಿನ್ನೂ ಕೆಲಸ ಆಗಬೇಕಿದೆ. ನಿಜ. ಬಹುಶಃ ಆಗ, ಈಗಾಗಲೇ ಏನನ್ನೂ ಮಾಡಲಾಗಿದೆಯೋ ಅಥವಾ ನನಗೆ ಏನು ಮಾಡಲು ಸಾಧ್ಯವಾಗಿತ್ತೋ ಅದೇ ಹೆಚ್ಚೆಂದರೆ ನಾನು ಮಾಡಬಹುದಾಗಿದ್ದದು ಎಂದೆನ್ನಿಸಿದ್ದಿರಬಹುದು. ಆ ಅರ್ಥದಲ್ಲಿ ನನ್ನ ಬದುಕಿನಲ್ಲಿ ಮಾಡಬೇಕಾದ್ದನ್ನು ಮಾಡಿಯಾಗಿದೆ ಎಂದು ಹೇಳಿದ್ದು ನಿಜ. ಕವಿಭಾಷೆಯಲ್ಲಿ ಹೇಳುವುದಾದರೆ ಮಾಡದೆ ಉಳಿದಿರುವುದು ಅಷ್ಟು, ಮಾಡಿಯಾಗಿರುವುದು ಇಷ್ಟೆ. ಈ ದೃಷ್ಟಿ ಇಲ್ಲದೆ ಹೋದರೆ, ಮನುಷ್ಯ ಕ್ರಿಯಾಶೀಲನಾಗುವ, ತನ್ನನ್ನು ಉತ್ತಮಗೊಳಿಸಿಕೊಳ್ಳುವ, ಮುಂದಕ್ಕೆ ಹೆಜ್ಜೆ ಇಡುವ, ಉತ್ತಮ ಸಮಾಜ ನಿರ್ಮಿಸುವ ಅಭೀಪ್ಸೆಯನ್ನೇ ಕಳೆದುಕೊಳ್ಳುತ್ತಾನೆ. ನಾನು ಆ ಮಾತುಗಳನ್ನಾಡಿದಾಗ ಇದೆಲ್ಲವೂ ನನ್ನ ಮನಸ್ಸಿನಲ್ಲಿತ್ತು.

ಭೋಲಾ: ಆದರೂ ಒಂದು ವಿಷಯ ಸ್ಪಷ್ಟಗೊಳ್ಳದೆ ಹಾಗೇ ಉಳಿದಿದೆ. ಜೆ.ಪಿ. ಜಯಪ್ರಕಾಶ್ ನಾರಾಯಣ್ ಅಂದರೆ ಸಾರತಃ ಏನು, ನಿಮ್ಮ ಪ್ರಕಾರ?


ಜೆ.ಪಿ.: ಇದು ಇತರರು ಕಂಡುಕೊಳ್ಳಬೇಕಾದ ವಿಷಯ. ನಾನಂತೂ ಜಯಪ್ರಕಾಶ್ ನಾರಾಯಣ್ ಸಾರತಃ ಏನು ಎಂಬುದು ಗೊತ್ತಿದೆಯೆಂದು ನಟಿಸಲಾರೆ. ಹೆಚ್ಚೆಂದರೆ ನಾನು ಹೇಳಬಹುದಾದ್ದು ಇಷ್ಟೇ- ನನ್ನ ಮಟ್ಟಿಗೆ ನಾನು ಸತ್ಯವಂತನಾಗಿರಲು ಪ್ರಯತ್ನಿಸಿರುವೆ; ಯಾವುದೇ ಭ್ರಮೆಗೀಡಾಗದಂತೆ ಎಚ್ಚರಿಕೆ ವಹಿಸಿರುವೆ. ನನ್ನ ತಪ್ಪುಗಳು, ದೌರ್ಬಲ್ಯಗಳು ನನ್ನ ವೈಫಲ್ಯಗಳು ನನಗೆ ಗೊತ್ತಿದೆ. ನನ್ನ ಅಲ್ಪ ಯಶಸ್ಸಿಗೆ ಸುಮಾರು ಅನುಕೂಲಕರ ಸಂದರ್ಭ ಹಾಗೂ ಪರಿಸ್ಥಿತಿಗಳೇ ಕಾರಣವೇ ಹೊರತು, ನನ್ನದೇ ಕೊಡುಗೆ ಅತ್ಯಲ್ಪ. ಇದು ಹುಸಿ ವಿನಯದ ಮಾತಲ್ಲ, ನನಗೆ ನಿಜವಾಗಿಯೂ ಹಾಗೆನ್ನಿಸಿದ್ದರಿಂದಲೇ ಈ ಮಾತುಗಳನ್ನು ಹೇಳುತ್ತಿರುವುದು.

ಭೋಲಾ: ಜೆ.ಪಿ., ನಿಮ್ಮನ್ನು ತುಂಬಾ ವೈಯಕ್ತಿಕವೆನ್ನಿಸುವ ಪ್ರಶ್ನೆಯನ್ನು ಕೇಳುತ್ತಿದ್ದೇವೆ, ಕ್ಷಮಿಸಿ. ದಯವಿಟ್ಟು ನಿಮ್ಮ ಪತ್ನಿಯ ಬಗ್ಗೆ ಒಂದಿಷ್ಟು ಹೇಳುವಿರಾ? ನಿಮ್ಮ ಪತ್ನಿಯ ಸಾವಿನ ನಂತರ ನಿಮ್ಮ ಬದುಕಿನ ದಿಕ್ಕೇ-ಗತಿಗಳೇ ಬದಲಾಯಿತು ಎಂದು ಹೇಳಿದರೆ ತಪ್ಪಾದೀತೇ?

ಜೆ.ಪಿ.: ನಮ್ಮಿಬ್ಬರ ನಡುವೆ ಒಂದು ವಿಶಿಷ್ಟ ರೀತಿಯ ಸಂಬಂಧವಿತ್ತು. ಮದುವೆಯಾದ ಕೂಡಲೇ ನಾನು ಅಮೆರಿಕಾಗೆ ಹೋದೆ. ಕಟ್ಟಾ ಮಾರ್ಕ್ಸ್‌ವಾದಿಯಾಗಿ ಹಿಂತಿರುಗಿದೆ. ಆದರೆ ಆಕೆ ಸಾಬರ್ಮತಿ ಆಶ್ರಮಕ್ಕೆ ಹೋಗಿ ಗಾಂಧೀಜಿಯ ಸಾಕುಮಗಳೇ ಆಗಿಹೋದಳು ಮತ್ತು ಗಾಂಧೀಜಿ ಹಾಗೂ ಗಾಂಧಿಚಿಂತನೆಯ ಶಿಷ್ಯತ್ವ ಸ್ವೀಕರಿಸಿದಳು. ಸಹಜವಾಗಿಯೇ ನಮ್ಮಿಬ್ಬರ ನಡುವೆ ಅಭಿಪ್ರಾಯ ವ್ಯತ್ಯಾಸಗಳಿದ್ದವು. ಆದರೆ ಕೇವಲ ಗಂಡ-ಹೆಂಡತಿ ನಡುವಣ ಸಾಮಾನ್ಯ ಸಂಬಂಧಕ್ಕಿಂತಲೂ ಹೆಚ್ಚಿನದಾದ -ಆ ಸಂಬಂಧವನ್ನು ವರ್ಣಿಸುವುದು ಕಷ್ಟ-ಸಂಬಂಧ ನಮ್ಮ ನಡುವೆ ಇದ್ದುದರಿಂದ ನಾವಿಬ್ಬರು ಒಟ್ಟಿಗಿರಲು, ಎಲ್ಲ ರೀತಿಯ ಒಳ ಹಾಗೂ ಹೊರ ಹೋರಾಟಗಳನ್ನು ದಾಟಿ ಬರಲು ಸಾಧ್ಯವಾಯಿತು. ಉದಾಹರಣೆಗೆ, ನಾನು ಅಮೆರಿಕೆಯಲ್ಲಿದ್ದಾಗ ಆಕೆ ಕೈಗೊಂಡ ಬ್ರಹ್ಮಚರ್ಯೆಯ ಪ್ರತಿಜ್ಞೆಯನ್ನು ಒಪ್ಪಿಕೊಳ್ಳಲು ನನಗೆ ಬಹಳ ಕಷ್ಟವೇ ಆಯಿತು. ನನಗೂ ಹರೆಯ, ಆಕೆಗೂ ಹರೆಯ; ಅದು ಅಷ್ಟು ಸುಲಭವಾಗಿರಲಿಲ್ಲ. ಆಕೆ ತನ್ನ ಮಾತನ್ನು ಖಂಡಿತ ಉಳಿಸಿಕೊಂಡಾಳಾದರೂ, ನನ್ನ ವಿಷಯದಲ್ಲಿ ಹಾಗೆ ಹೇಳಲಾರೆ. ನೀವು ಅದನ್ನು ಪಾಪವೆಂದಾದರೂ ಸರಿಯೆ, ಆದರೆ ನಮ್ಮಿಬ್ಬರ ನಡುವಣ ಪ್ರೇಮಬಂಧನದಿಂದಾಗಿ ಹೇಗೋ ಆಕೆ ಕೊನೆಯಲ್ಲಿ ವಿಜಯಿಯಾಗಿ ಬಹಳ ದೀರ್ಘಕಾಲ ನನ್ನ ಮೇಲೆ ಪ್ರಭಾವ ಬೀರಿದಳು ಮತ್ತು ಈಗ ನಾನು ಏನಾಗಿದ್ದೇನೆಯೋ ಹಾಗಾಗಲು ನನಗೆ ನೆರವು ನೀಡಿದಳು. ನನ್ನನ್ನು 'ನಿರ್ಮಾಣ' ಮಾಡುವಲ್ಲಿನ ಅವಳ ಕೊಡುಗೆಯನ್ನು ನಾನು ಮರೆಯಲಾರೆ. ನಿಮಗೆ ಇನ್ನೇನು ತಿಳಿಸಬೇಕೋ ನಾನರಿಯೆ. ನನ್ನ ವೈಯಕ್ತಿಕ ವಿಷಯಗಳ ಬಗ್ಗೆ ಮಾತಾಡಲು ನಾನು ಯಾವಾಗಲೂ ಹಿಂಜರಿಯುತ್ತೇನಾದರೂ, ನಿಮ್ಮ ಪ್ರೀತಿ ವಿಶ್ವಾಸಗಳಿಂದಾಗಿ, ನನ್ನ ಸಧ್ಯದ ಮಿತಿಗಳ ಮಧ್ಯೆ ಕೆಲವು ವಿಷಯಗಳನ್ನು ಬಿಚ್ಚುಮನಸ್ಸಿನಿಂದ ಎಷ್ಟು ಸಾಧ್ಯವೋ ಅಷ್ಟನ್ನು ಹೇಳಿದ್ದೇನೆ.


●

ಜೆ.ಪಿ. ಚಿತ್ರ ಸಂಪುಟ




"...ಮನುಷ್ಯ ಮೂಲತಃ ಕುತೂಹಲಭರಿತ ಪ್ರಾಣಿ. ಅವನು ಸದಾ ಸತ್ಯದ ಅನ್ವೇಷಣೆಯಲ್ಲಿರುತ್ತಾನೆ. ಈ ಅನ್ವೇಷಣೆಯ ಹಾದಿಯಲ್ಲಿ ಅವನು ಧರ್ಮ, ವಿಜ್ಞಾನ, ತತ್ವಶಾಸ್ತ್ರ, ಕಲೆ ಇತ್ಯಾದಿಗಳನ್ನು ಆವಿಷ್ಕರಿಸಿಕೊಂಡಿದ್ದಾನೆ. ಕಮ್ಯೂನಿಸ್ಟರೋ ಅಥವಾ ಮತ್ತೊಬ್ಬರೋ ಮನುಷ್ಯನ ಮನಸ್ಸೊಳಕ್ಕೆ ಸುಳ್ಳುಗಳನ್ನು ತುಂಬಹೊರಟರೆ, ಅದು ಕೆಲಕಾಲ ಮಾತ್ರ ಯಶಸ್ವಿ ಆದೀತು; ಸತ್ಯ ಒಂದಲ್ಲ ಒಂದು ದಿನ ಹೊರಬರಲೇಬೇಕು. ಸಣ್ಣಪುಟ್ಟ ಹಿಂಸೆ ಮುಂದುವರೆದರೆ ದೊಡ್ಡ ಹಿಂಸೆಗಳು ಬರುವುದನ್ನು ತಡೆಯಲಾಗದು ಎಂಬ ಸತ್ಯವನ್ನು ಅರಿಯಲು ಮಾನವ ಮನಸ್ಸಿಗೆ ಅಷ್ಟೇನೂ ಕಷ್ಟವಾಗಲಾರದು..."

"....ಅಧಿಕಾರದ ಕೇಂದ್ರೀಕರಣ ಮತ್ತು ಆ ಮೂಲಕ ಉತ್ಪಾದನೆಯ ಕೇಂದ್ರೀಕರಣ ಒಂದು ದೊಡ್ಡ ಕೆಡುಕು. ವಿಜ್ಞಾನ ಮತ್ತು ತಂತ್ರಜ್ಞಾನವು ಉತ್ಪಾದಕತೆಯನ್ನು ಹೆಚ್ಚಿಸುವ ಆದರೆ ಮನುಷ್ಯನ ಹತೋಟಿಯಲ್ಲೇ ಇರಬಲ್ಲಂತಹ ಉತ್ಪಾದನಾ ಸಾಧನಗಳನ್ನು ಆವಿಷ್ಕರಿಸಲು ಸಾಧ್ಯವಾಗಬೇಕು. ಆದರೆ ವಿಜ್ಞಾನಿಗಳು ಈ ವಿಷಯದಲ್ಲಿ ತಮ್ಮ ಹೃದಯಗಳನ್ನು ಮುಚ್ಚಿಕೊಂಡು ಬಿಟ್ಟಿದ್ದಾರೆ. ಅವರು ಆಗಬೇಕಾದ್ದು ಆಗುತ್ತದೆ ಎಂಬ ನೀತಿಯನ್ನು ಪ್ರೋತ್ಸಾಹಿಸುತ್ತಿದ್ದಾರೆ. ಇದು ಬದಲಾಗಬೇಕು..."





ಪತ್ನಿ ಪ್ರಭಾವತಿ ಅವರೊಂದಿಗೆ




ಮೊರಾರ್ಜಿ ದೇಸಾಯಿ ಅವರೊಂದಿಗೆ



ಪಾಟ್ನಾದ ಪ್ರತಿಭಟನಾ ಸಭೆಯೊಂದರಲ್ಲಿ (ಜೂನ್ 5, 1974)






ಪಾಟ್ನಾದಲ್ಲಿ ವಿಧಾನಸಭೆ ಮುತ್ತಿಗೆ ಕಾರ್ಯಕ್ರಮದಲ್ಲಿ ಜೆ.ಪಿ ಮೇಲೆ ಹಲ್ಲೆ (ನವೆಂಬರ್ 4, 1974)




ರಾಜಘಾಟ್‌ನಲ್ಲಿ ಜನತಾ ಪಕ್ಷದ ನಾಯಕರಿಗೆ ಪ್ರತಿಜ್ಞಾವಿಧಿ (ಮಾರ್ಚ್ 24 1977)



ಸಮಾನ ಮನಸ್ಕ ರಾಜಕೀಯ ಚಿಂತಕರೊಂದಿಗೆ



ಬಂಧುವರ್ಗ ಹಾಗೂ ಗೆಳೆಯರೊಡನೆ ಜೆ.ಪಿ





ಇದೇ ಲೇಖಕರ ಇತರ ಕೃತಿಗಳು

ಗಮನ (ಸಾಹಿತ್ಯ ವಿಮರ್ಶೆ)
ಅನೇಕ (ಸಾಹಿತ್ಯ ವಿಮರ್ಶೆ)
ಈ ಭೂಮಿಯಿಂದ ಆಕಾಶದವರೆಗೆ (ಸಾಹಿತ್ಯ ವಿಮರ್ಶೆ)
ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ (ವ್ಯಕ್ತಿ ಹಾಗೂ ಸಾಹಿತ್ಯ ಪರಿಚಯ)
ಒಂದನೇ ತರಗತಿಯಿಂದ ಇಂಗ್ಲಿಷ್: ಏಕೆ ಬೇಡ (ಭಾಷಾ ನೀತಿ ಜಿಜ್ಞಾಸೆ)
ಲೋಹಿಯಾ ಸಮಾಜವಾದ ದರ್ಶನ (ಸಮಾಜವಾದ ಪರಿಚಯ, ವಿಶ್ಲೇಷಣೆ)
ಜಯಪ್ರಕಾಶ್ ನಾರಾಯಣ: ಒಂದು ಅಪೂರ್ಣ ಕ್ರಾಂತಿಯ ಕಥೆ (ಜೆ.ಪಿ. ಬದುಕು ಮತ್ತು ಹೋರಾಟ)
ಮರಳಿ ಬರಲಿದೆ ಸಮಾಜವಾದ (ಸಮಕಾಲೀನ ಸಮಾಜವಾದಿ ಚಿಂತನೆಗಳು)
ಬೇರು ಬಿಳಲು (ಸಮಾಜವಾದಿ ಸಂಕಥನಗಳು -2)
ಇದು ಭಾರತ! ಇದು ಭಾರತ!! (ಸಮಾಜವಾದಿ ಸಂಕಥನಗಳು -3)
ರೈತಭಾರತ: ಅವಸಾನದ ಅಂಚಿನಲ್ಲಿ (ರೈತರ ಆತ್ಮಹತ್ಯೆ ಕುರಿತ ಕಿರು ಅಧ್ಯಯನ)
ಕನ್ನಡ - ಕರ್ನಾಟಕ: ಸಂಕಥನಗಳು (ಭಾಷಾ-ರಾಜಕಾರಣದ ವಿಶ್ಲೇಷಣೆಗಳು)

ಸಂಪಾದನೆ:

ಕುವೆಂಪು: ಒಂದು ಪುನರನ್ವೇಷಣೆ (ಶತಮಾನೋತ್ಸವ ಸಂಪುಟ)
ಆ ಗಣರಾಜ್ಯ - ಈ ಕರ್ನಾಟಕ (ಸುವರ್ಣ ಕರ್ನಾಟಕದ ಸುವರ್ಣ ಪುಟಗಳು)
ಒಲವು (ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಪುಟ)
ಮಾನವ (ಸಮಾಜವಾದಿ ಚಿಂತನೆಯ ಮಾಸಿಕ)

ಸಹ ಸಂಪಾದನೆ:

ಕಾಡಿನ ಹುಡುಗ ಕೃಷ್ಣ (ಶ್ರೀ ಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)
ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಶತಮಾನೋತ್ಸವ ಸಂಪುಟ)
ಹಣತೆ (ಡಾ. ಜಿ.ಎಸ್. ಶಿವರುದ್ರಪ್ಪ ಅಭಿನಂದನ ಗ್ರಂಥ)
ಸಾಹಿತ್ಯ ಸಂವಾದ (ಸಾಹಿತ್ಯ ದ್ವೈಮಾಸಿಕ)

ಈ ಒಂಟಿ ಸೆರೆಮನೆವಾಸದ ಸಂದರ್ಭದಲ್ಲಿ ತಮ್ಮ ಹೋರಾಟದ ಜೊತೆಗೆ ಬದುಕನ್ನು ಒಮ್ಮೆ ಹಿನ್ನೋಡಿಕೊಂಡ ದಾಖಲೆಗಳಂತಿವೆ ಈ ಸೆರೆಮನೆಯ ದಿನಚರಿ. ಹಾಗೇ ಸ್ವಾತಂತ್ರ್ಯೋತ್ತರ ಭಾರತದ ಮೊದಲ ಮೂರು ದಶಕಗಳ ರಾಜಕಾರಣದ ಒಳ ಸುಳಿಗಳ ಮತ್ತು ಶೀತಲ ಸಮರಯುಗದ ಜಗತ್ತಿನ ಒಳರಾಜಕಾರಣದ ಪರಿಚಯವಾಗುವ ಸಂಗತಿಗಳೂ ಇಲ್ಲಿವೆ. ಯಾವ ಕಾರಣಕ್ಕಾಗಿ ಲೋಹಿಯಾರಿಂದ ಟೀಕೆಗೊಳಗಾಗಿ ಜೆ.ಪಿ. ರಾಜಕಾರಣವನ್ನು ತೊರೆದಿದ್ದರೋ, ಆ ಕಾರಣಗಳನ್ನು ಕುರಿತ ಒಂದು ರೀತಿಯ ಪಶ್ಚಾತ್ತಾಪದ-ಪುನರಾಲೋಚನೆಯ ಧ್ವನಿಗಳನ್ನು ಈ ದಾಖಲೆಗಳಲ್ಲಿ ಕಾಣಬಹುದು. ತಮ್ಮ ರಾಜಕೀಯ ಇಕ್ಕಟ್ಟುಗಳಿಗೆ, ಸಾರ್ವಜನಿಕ ಜೀವನದ ಕವಲುದಾರಿಗೆ ಕಾರಣವಾದ ನೆಹರೂ ಅವರೊಡನೆಯ ಸ್ನೇಹದ ಮೌಲ್ಯಮಾಪನವನ್ನು ಇಲ್ಲಿ ಜೆ.ಪಿ. ಪರೋಕ್ಷ ರೀತಿಯಲ್ಲಿ ಮಾಡಿದ್ದಾರೆನಿಸುತ್ತದೆ. ಮುಖ್ಯ ಸಂಗತಿ ಎಂದರೆ, ರಾಜಕೀಯವಾಗಿ ತೀವ್ರವಾದಿಯಾಗಿದ್ದರೂ, ವೈಯಕ್ತಿಕವಾಗಿ ಸಾರ್ವಜನಿಕ ಜೀವನದಲ್ಲಿ ಎಂದೂ ಕಟುವಾಗಿರದಿದ್ದ ಜೆ.ಪಿ., ಈ ದಾಖಲೆಗಳಲ್ಲಿ ನೆಹರೂ ಮಗಳಾದ ಇಂದಿರಾಗಾಂಧಿ ಬಗ್ಗೆ ವ್ಯಂಗ್ಯ-ಕಟಕಿ-ಜಿಗುಪ್ಸೆಗಳ ಸುರಿಮಳೆಯನ್ನೇ ಕರೆದಿದ್ದಾರೆ! ರಾಷ್ಟ್ರದ ಅತ್ಯುಚ್ಚ ಮತ್ತು ಹಿರಿಯ ನಾಯಕರೊಬ್ಬರನ್ನು ರಾಷ್ಟ್ರ- ಇಂದಿರಾ ಗಾಂಧಿಯೊಬ್ಬರಲ್ಲೇ ಅಲ್ಲ, ಆನಂತರದ 'ಜನತಾ' ನಾಯಕರೂ- ಅವರ ಕೊನೆಯ ದಿನಗಳಲ್ಲಿ ನಡೆಸಿಕೊಂಡ ರೀತಿಯ ಫಲವನ್ನು ನಾವಿಂದು ಜಾಗತೀಕರಣದ ಬಿಡಿಸಲಾಗದ ದ್ವಂದ್ವಗಳ ರೂಪದಲ್ಲಿ ಅನುಭವಿಸುತ್ತಿದ್ದೇವೆ ಎನಿಸುತ್ತದೆ.



ರೂಪ ಪ್ರಕಾಶನ

